ಮಂಗಳವಾರ, ಅಕ್ಟೋಬರ್ 7, 2025 | ₹ 7.00
prajavani.net prajavani
www.prajavani.net

ಪ್ರಜಾ ವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನ ಪತ್ರಿಕೆ

ರಣಜಿ ತಂಡದಲ್ಲಿ ಕರುಣ್

ಕರುಣ್ ನಾಯರ್ ಅವರು ಇದೇ 15ರಿಂದ 18ರವರೆಗೆ ರಾಜಕೋಟ್‌ನಲ್ಲಿ ಸೌರಾಷ್ಟ್ರ ವಿರುದ್ಧ ನಡೆಯಲಿರುವ ರಣಜಿ ಟ್ರೋಫಿ ಪಂದ್ಯಕ್ಕೆ ಕರ್ನಾಟಕ ತಂಡದಲ್ಲಿ ಸ್ಥಾನ ಪಡೆದಿದ್ದಾರೆ.



ಮಹರ್ಷಿ ವಾಲ್ಮೀಕಿ ಜಯಂತಿಯ ಶುಭಾಶಯಗಳು



ಪರಿಶಿಷ್ಟ ಪಂಗಡಗಳ ಕಲ್ಯಾಣ ಇಲಾಖೆ

ಶ್ರೀ ಮಹರ್ಷಿ ವಾಲ್ಮೀಕಿ ಜಯಂತಿ
ಹಾಗೂ
ಶ್ರೀ ಮಹರ್ಷಿ ವಾಲ್ಮೀಕಿ ಪ್ರಶಸ್ತಿ ಪ್ರದಾನ ಸಮಾರಂಭ

ದಿನಾಂಕ: 07-10-2025, ಮಂಗಳವಾರ

ಶ್ರೀ ಮಹರ್ಷಿ ವಾಲ್ಮೀಕಿ ಪ್ರತಿಮೆಗೆ ಮಾಲಾರ್ಪಣೆ

ಸಮಯ: ಬೆಳಿಗ್ಗೆ 10.00 ಗಂಟೆಗೆ
ಸ್ಥಳ: ಶ್ರೀ ಮಹರ್ಷಿ ವಾಲ್ಮೀಕಿ ತಪೋವನ, ಶಾಸಕರ ಭವನದ ಮುಂಭಾಗ

ವೇದಿಕೆ ಕಾರ್ಯಕ್ರಮ

ಸಮಯ: ಬೆಳಿಗ್ಗೆ 10.30 ಗಂಟೆಗೆ
ಸ್ಥಳ: ಬ್ಯಾಂಕ್ವೆಟ್ ಹಾಲ್, ವಿಧಾನಸೌಧ, ಬೆಂಗಳೂರು

ಸರ್ಕಾರದ ನಡೆ.. ಬುಡಕಟ್ಟು ಸಮುದಾಯಗಳ ಅಭಿವೃದ್ಧಿಯ ಕಡೆ...

ಶ್ರೀ ಸಿದ್ದರಾಮಯ್ಯ
ಮಾನ್ಯ ಮುಖ್ಯಮಂತ್ರಿಗಳು

ಶ್ರೀ ಡಿ.ಕೆ. ಶಿವಕುಮಾರ್
ಮಾನ್ಯ ಉಪ ಮುಖ್ಯಮಂತ್ರಿಗಳು

28 ತಿಂಗಳು

ಪರಿಶಿಷ್ಟ ಪಂಗಡಗಳ ಕಲ್ಯಾಣಕ್ಕಾಗಿ ಟಿಎಸ್‌ಪಿ ಯೋಜನೆಯಡಿ 33,372.33 ಕೋಟಿ ಹಂಚಿಕೆ

ಶೈಕ್ಷಣಿಕ ಅಭಿವೃದ್ಧಿ ಕಾರ್ಯಕ್ರಮಗಳು

- 8.66 ಲಕ್ಷ ವಿದ್ಯಾರ್ಥಿಗಳಿಗೆ ಒಟ್ಟು ರೂ. 410 ಕೋಟಿ ವಿದ್ಯಾರ್ಥಿ ವೇತನ
- 99,123 ಪ್ರತಿಭಾನ್ವಿತ ವಿದ್ಯಾರ್ಥಿಗಳಿಗೆ ಒಟ್ಟು ರೂ. 161.99 ಕೋಟಿ ಪ್ರೋತ್ಸಾಹ ಧನ
- 403 ಸಂಸ್ಥೆಗಳ ಮೂಲಕ 45,360 ವಿದ್ಯಾರ್ಥಿಗಳಿಗೆ ಗುಣಾತ್ಮಕ ಶಿಕ್ಷಣ
- ಪ್ರಬುದ್ಧ ಯೋಜನೆ (ವಿದೇಶಿ ವಿ.ವಿಗಳಲ್ಲಿ ಅಧ್ಯಯನ) - 109 ವಿದ್ಯಾರ್ಥಿಗಳಿಗೆ ರೂ. 39.00 ಕೋಟಿ ಸಹಾಯಧನ
- 34 ಹೊಸ ವಿದ್ಯಾರ್ಥಿ ನಿಲಯಗಳ ಸ್ಥಾಪನೆ
- 12ನೇ ತರಗತಿಯವರೆಗೆ 5 ಆಶ್ರಮ ಶಾಲೆಗಳ ಉನ್ನತೀಕರಣ
- ಖಾಸಗಿ ವಿದ್ಯಾಸಂಸ್ಥೆಗಳಲ್ಲಿ ಮ್ಯಾನೇಜ್‌ಮೆಂಟ್/ ಎನ್.ಆರ್.ಐ. ಕೋಟಾದಡಿ ವ್ಯಾಸಂಗ ಮಾಡುತ್ತಿರುವ ವಿದ್ಯಾರ್ಥಿಗಳಿಗೆ ಬೋಧನಾ ಶುಲ್ಕ ಮರುಪಾವತಿ

ಇಲಾಖೆಯ ಇತರೆ ಪ್ರಮುಖ ಕಾರ್ಯಕ್ರಮಗಳು

- ಪ್ರತ್ಯೇಕ ಪರಿಶಿಷ್ಟ ಪಂಗಡಗಳ ಕಲ್ಯಾಣ ಸಚಿವಾಲಯ ಸ್ಥಾಪನೆ
- 12 ಬುಡಕಟ್ಟು ಸಮುದಾಯಗಳ 47,981 ಕುಟುಂಬಗಳಿಗೆ ಪೌಷ್ಟಿಕ ಆಹಾರ: ರೂ. 261 ಕೋಟಿ ವಿನಿಯೋಗ
- ವಸತಿ ರಹಿತ 12,286 ಬುಡಕಟ್ಟು ಕುಟುಂಬಗಳಿಗೆ ಮನೆ ಮಂಜೂರು
- ಕಾಲೋನಿ/ ಹಾಡಿಗಳಲ್ಲಿ ಮೂಲಭೂತ ಸೌಕರ್ಯ ಒದಗಿಸಲು ರೂ. 231 ಕೋಟಿ ಹಂಚಿಕೆ
- ವಾಲ್ಮೀಕಿ ಭವನ/ ಸಮುದಾಯ ಭವನಗಳ ನಿರ್ಮಾಣಕ್ಕಾಗಿ ರೂ. 95 ಕೋಟಿ ಹಂಚಿಕೆ
- 5 ಜಿಲ್ಲೆಗಳಲ್ಲಿ ಟ್ರೈಬಲ್ ನ್ಯಾವಿಗೇಟರ್ ಕಾರ್ಯಕ್ರಮ ಜಾರಿ
- ಪರಿಶಿಷ್ಟ ಪಂಗಡದ 350 ಉದ್ಯಮಿಗಳಿಗೆ ರೂ. 34.50 ಕೋಟಿ ಬಡ್ಡಿ ಸಹಾಯಧನ
- ಎಸ್‌ಸಿಎಸ್‌ಪಿ/ ಟಿಎಸ್‌ಪಿ ಅಧಿನಿಯಮ 2013ರ ಸೆಕ್ಷನ್ 7(ಡಿ) ಅನ್ನು ಕೈಬಿಡಲಾಗಿದೆ
- ಗಂಗಾ ಕಲ್ಯಾಣ ಯೋಜನೆಯಡಿ 5,699 ಫಲಾನುಭವಿಗಳಿಗೆ ಕೊಳವೆಬಾವಿ ಸೌಲಭ್ಯ
- ಸ್ವಯಂ ಉದ್ಯೋಗಕ್ಕಾಗಿ ರೂ. 169.30 ಕೋಟಿ ಆರ್ಥಿಕ ನೆರವು
- ಮಹಿಳಾ ಸ್ವಸಹಾಯ ಸಂಘಗಳ 4,620 ಸದಸ್ಯರಿಗೆ ಕಿರುಸಾಲ ಸೌಲಭ್ಯ

ವೈಜ್ಞಾನಿಕ ಮನೋಧರ್ಮ ಬೆಳೆಸಿಕೊಳ್ಳುವುದು; ಪ್ರಶ್ನೆ ಮಾಡುವ ಮತ್ತು ಬದಲಾವಣೆಗೆ ಒಡ್ಡಿಕೊಳ್ಳುವ ಮನಃಸ್ಥಿತಿ ಬೆಳೆಸಿಕೊಳ್ಳುವುದು.– ಪ್ರತಿಯೊಬ್ಬ ಭಾರತೀಯನ ಸಂವಿಧಾನಬದ್ಧ ಮೂಲಭೂತ ಕರ್ತವ್ಯ

CMofKarnataka https://dipr.karnataka.gov.in/

ಸರ್ವರಿಗೂ ಸುಸ್ವಾಗತ

ಕರ್ನಾಟಕ ವಾರ್ತೆ



ರಾಜ್ಯ ಒಕ್ಕಲಿಗರ ಸಂಘ

ಕೃಷ್ಣರಾಜೇಂದ್ರ ರಸ್ತೆ, ವಿಶ್ವೇಶ್ವರಪುರ, ಬೆಂಗಳೂರು–560 004.

–: ಸಮಸ್ತ ಒಕ್ಕಲಿಗ ಕುಲಬಾಂಧವರಲ್ಲಿ ಆದರದ ಮನವಿ :–

ಕರ್ನಾಟಕ ಸರ್ಕಾರದ ಹಿಂದುಳಿದ ವರ್ಗಗಳ ಆಯೋಗದ ವತಿಯಿಂದ ದಿನಾಂಕ: 22–09–2025 ರಿಂದ 07–10–2025 ರವರೆಗೆ ನಡೆಸಲಿರುವ ಸಾಮಾಜಿಕ, ಶೈಕ್ಷಣಿಕ ಸಮೀಕ್ಷೆಯಲ್ಲಿ ಸಮಸ್ತ ಒಕ್ಕಲಿಗ ಕುಲಬಾಂಧವರು ಪಾಲ್ಗೊಳ್ಳಬೇಕು ಹಾಗೂ ಈ ಕೆಳಕಂಡ ದಾಖಲಾತಿಗಳನ್ನು ತಮ್ಮ ಬಳಿ ಇಟ್ಟುಕೊಂಡು ಸಮೀಕ್ಷೆ ಸಲುವಾಗಿ ಮನೆ ಮನೆಗೆ ಬರುವ ಸಮೀಕ್ಷಾ ಸಿಬ್ಬಂದಿಗಳಿಗೆ ಅವರು ಕೇಳುವ ಮಾಹಿತಿಯನ್ನು ಒದಗಿಸಿ, ಸಮೀಕ್ಷೆಯನ್ನು ಯಶಸ್ವಿಗೊಳಿಸುವಂತೆ ತಮ್ಮಲ್ಲಿ ಮನವಿ ಮಾಡಿದೆ.

'ಒಕ್ಕಲಿಗ [Vokkaliga]'

ಎಂದೇ ನಮೂದಿಸಲು ಮನವಿ

ಕೋಡ್/Code	ಧರ್ಮ/Religion	ಜಾತಿ/Caste	ಉಪ ಜಾತಿ/Sub Caste
A-1541	ಹಿಂದೂ	ಒಕ್ಕಲಿಗ	ಒಕ್ಕಲಿಗ

- ಗಂಡಾಗಲಿ, ಹೆಣ್ಣಾಗಲಿ 6 ವರ್ಷ ಮತ್ತು ಮೇಲ್ಪಟ್ಟ ಪ್ರತಿಯೊಬ್ಬರೂ ಆಧಾರ್ ಕಾರ್ಡ್ ಹೊಂದಿರಬೇಕು.
- ಆಧಾರ್ ಹೊಂದಿಲ್ಲದಿದ್ದಲ್ಲಿ ಕೂಡಲೇ ಆಧಾರ್ ಎನ್‌ರೋಲ್‌ಮೆಂಟ್ ಸೆಂಟರ್‌ಗೆ ಭೇಟಿ ನೀಡಿ, ಆಧಾರ್ ನೋಂದಣಿ ಮಾಡಿಸಿ, ನೋಂದಣಿ ಸಂಖ್ಯೆ ಹೊಂದಿರಲೇಬೇಕು.
- ಸಮೀಕ್ಷೆಗೆ ಬರುವ ಸಿಬ್ಬಂದಿಗಳು, ಆಧಾರ್ ಮತ್ತು ಜಿಯೋ ಟ್ಯಾಗಿಂಗ್ ಮಾಡುವುದರಿಂದ, ಕುಟುಂಬದ ಎಲ್ಲಾ ಸದಸ್ಯರು ಮನೆಯಲ್ಲಿ ಇರುವ ಪ್ರತಿ ಸದಸ್ಯರ ಆಧಾರ್ ಕಾರ್ಡ್ ಅಧಿಕೃತವಾಗಿ ಕುಟುಂಬದಲ್ಲಿ ಚಾಲನೆಯಲ್ಲಿರುವ ಮೊಬೈಲ್ ಸಂಖ್ಯೆಗೆ ಲಿಂಕ್ ಹೊಂದಿರಬೇಕು. ಲಿಂಕ್ ಹೊಂದಿರುವ ದೂರವಾಣಿ ಸಂಖ್ಯೆ ಕಾರ್ಯನಿರ್ವಹಿಸದಿದ್ದಲ್ಲಿ, ಕೂಡಲೇ ಚಾಲನೆಯಲ್ಲಿರುವ ಮೊಬೈಲ್ ಸಂಖ್ಯೆಗೆ ಆಧಾರ್ ಕಾರ್ಡನ್ನು ಲಿಂಕ್ ಮಾಡಿಸಿಕೊಂಡಿರಬೇಕು.
- ಸಮೀಕ್ಷೆ ಸಮಯದಲ್ಲಿ ಆಧಾರ್ ಸಂಖ್ಯೆ ಲಿಂಕ್ ಆಗಿರುವ ಮೊಬೈಲ್ ಸಂಖ್ಯೆಗೆ ಬರುವ ಓ.ಟಿ.ಪಿ. ಸಂಖ್ಯೆಯನ್ನು ಸಮೀಕ್ಷಾ ಸಿಬ್ಬಂದಿಗಳಿಗೆ ತಿಳಿಸಿ ಸಹಕರಿಸಬೇಕಾಗುತ್ತದೆ.
- ಸಮೀಕ್ಷಾ ಸಿಬ್ಬಂದಿಗಳಿಗೆ ಸಮೀಕ್ಷೆಯ ಸಂದರ್ಭದಲ್ಲಿ ಆಧಾರ್ ಕಾರ್ಡ್, ರೇಷನ್‌ಕಾರ್ಡ್, ಕಡ್ಡಾಯವಾಗಿ ಹಾಜರು ಪಡಿಸುವುದು ಹಾಗೂ ಮನೆಯಲ್ಲಿ ಅಂಗವಿಕಲರಿದ್ದಲ್ಲಿ ಸರ್ಕಾರದಿಂದ ವಿತರಿಸಿರುವ ಯು.ಡಿ.ಐ.ಡಿ (UDID) ಕಾರ್ಡನ್ನು ಹಾಜರುಪಡಿಸಬೇಕು. ಯು.ಡಿ.ಐ.ಡಿ ಕಾರ್ಡ್ ಇಲ್ಲದಿದ್ದಲ್ಲಿ ಸಂಬಂಧಪಟ್ಟ ವೈದ್ಯಾಧಿಕಾರಿಗಳು ನೀಡಿರುವ ಪ್ರಪತ್ರವನ್ನು ಹಾಜರುಪಡಿಸಬೇಕು.

- ಕುಟುಂಬದ ಎಲ್ಲಾ ಸದಸ್ಯರು ಬ್ಯಾಂಕ್ ಮತ್ತು ಇತರೆ ಹಣಕಾಸು ಸಂಸ್ಥೆಗಳಿಂದ ಪಡೆದುಕೊಂಡಿರುವ ಸಾಲಗಳ ಮಾಹಿತಿಯನ್ನು ಕಡ್ಡಾಯವಾಗಿ ದಾಖಲೆಗಳ ಸಮೇತ ಸಮೀಕ್ಷಾ ಸಿಬ್ಬಂದಿಗಳಿಗೆ ಒದಗಿಸಿ ಸಹಕರಿಸುವುದು.
- ಬ್ಯಾಂಕಿಂಗೇತರ ಮೂಲಗಳಿಂದ ಪಡೆದಿರುವ ಸಾಲಗಳ ಮಾಹಿತಿಯನ್ನು ನಿಖರವಾಗಿ ವಾಸ್ತವ ಅಂಶಗಳನ್ನು ಬರೆಸಬೇಕು.
- ಕುಟುಂಬದಲ್ಲಿ ಯಾರ ಹೆಸರಿಗೆ ಚರಾಸ್ತಿ ಮತ್ತು ಸ್ಥಿರಾಸ್ತಿ ದಾಖಲಾತಿಗಳು ಇವೆಯೋ ಅವರ ಹೆಸರಿಗೆ ಮಾತ್ರ ಬರೆಸಬೇಕು.
- ಒಟ್ಟು ಕುಟುಂಬದ ಆಸ್ತಿಯನ್ನು ಎಲ್ಲರೂ ಪದೇ ಪದೇ ಅದೇ ಆಸ್ತಿಯನ್ನು ಕುಟುಂಬದ ಎಲ್ಲಾ ಸದಸ್ಯರ ಹೆಸರಿಗೆ ಬರೆಸಬಾರದು.
- ಕುಟುಂಬದ ಸದಸ್ಯರು ಸರ್ಕಾರಿ/ಖಾಸಗಿ ಸಂಸ್ಥೆಗಳ ಮೂಲಕ ಕನ್ನಡ/ಆಂಗ್ಲ ಮಾಧ್ಯಮದಲ್ಲಿ ಉತ್ತೀರ್ಣವಾಗಿರುವ ವಿದ್ಯಾಭ್ಯಾಸದ ಬಗ್ಗೆ ಮಾತ್ರ ನಮೂದಿಸಬೇಕು ಹಾಗೂ ಮಾಹಿತಿಯನ್ನು ಸರಿಯಾಗಿ ನೀಡಲು ಕೋರಿದೆ.
- ಸಮೀಕ್ಷೆಯಲ್ಲಿ ಒಟ್ಟು 60 ಪ್ರಶ್ನಾವಳಿ ಇರಲಿದ್ದು, ಎಲ್ಲಾ ಪ್ರಶ್ನೆಗಳಿಗೂ ಕುಟುಂಬ ಸದಸ್ಯರು ಮಾಹಿತಿ ನೀಡುವುದು. ಪ್ರವರ್ಗ '3ಎ' ಅಡಿಯಲ್ಲಿ ಬರುವ ಎಲ್ಲಾ ಒಕ್ಕಲಿಗರು **'ಒಕ್ಕಲಿಗ'** ಎಂದೇ ನಮೂದಿಸಲು ಹಾಗೂ ಉಪಜಾತಿ ಸಹ ಒಕ್ಕಲಿಗ ಎಂದು ಬರೆಸಲು ಮನವಿ ಮಾಡಲಾಗಿದೆ.

ಶ್ರೀ ಬಿ.ಕೆಂಚಪ್ಪಗೌಡ
ಅಧ್ಯಕ್ಷರು

ಜಾಗೃತರಾಗಿ – ಜಾಗೃತಿ ಮೂಡಿಸಿ ಒಕ್ಕಲಿಗ ಎಂದು ಬರೆಸುವ ಮೂಲಕ ನಮ್ಮೆಲ್ಲರ ಒಗ್ಗಟ್ಟನ್ನು ಪ್ರದರ್ಶನ ಮಾಡುವ ಸಮಯ ಬಂದಿದೆ. ನಮ್ಮ ಸಮುದಾಯದ ಮಕ್ಕಳ ಶಿಕ್ಷಣ, ಉದ್ಯೋಗ ಹಾಗೂ ಸಮುದಾಯದ ರಾಜಕೀಯ ಮತ್ತಿತರೆ ಉಜ್ವಲ ಭವಿಷ್ಯಕ್ಕಾಗಿ ಯೋಚಿಸಿ.

ಒಂದಾಗಿ – ಒಗ್ಗಟ್ಟಾಗಿ – 'ಒಕ್ಕಲಿಗ' ಎಂದು ಸಮೀಕ್ಷೆಯಲ್ಲಿ ತಿಳಿಸಿ.

ಶ್ರೀ ಡಿ.ಹನುಮಂತಯ್ಯ · ಶ್ರೀ ಎಲುವಳ್ಳಿ ಎನ್. ರಮೇಶ್ · ಶ್ರೀ ಎಲ್.ಶ್ರೀನಿವಾಸ್ · ಡಾ|| ಕೆ.ವಿ.ರೇಣುಕಾಪ್ರಸಾದ್ · ಶ್ರೀ ಟಿ.ಕೋನಪ್ಪರೆಡ್ಡಿ · ಶ್ರೀ ಆರ್.ಹನುಮಂತರಾಯಪ್ಪ · ಶ್ರೀ ಎನ್.ಬಾಲಕೃಷ್ಣ (ನೆಲ್ಲಿಗೆರೆ ಬಾಲು) · ಶ್ರೀ ಬಿ.ಪಿ.ಮಂಜೇಗೌಡ · ಶ್ರೀ ಸಿ.ಜಿ.ಗಂಗಾಧರ್ · ಶ್ರೀ ವೆಂಕಟರಾಮೇಗೌಡ

ಶ್ರೀ ಅಶೋಕ್.ಎಸ್.ಡಿ ಜಯರಾಂ · ಶ್ರೀ ಅಶೋಕ.ಹೆಚ್.ಎನ್ (ತಮ್ಮಾಜಿ) · ಶ್ರೀ ಕೆ.ಎಸ್.ಸುರೇಶ್ · ಶ್ರೀ ಸಿ.ಎಂ.ಮಾರೇಗೌಡ · ಶ್ರೀ ಎಸ್.ಕೆ.ಧರ್ಮೇಶ್ ಸಿರಿಬೈಲ್ · ಡಾ|| ಟಿ.ಹೆಚ್.ಆಂಜನಪ್ಪ · ಶ್ರೀ ಬಿ.ವಿ.ರಾಜಶೇಖರಗೌಡ · ಡಾ|| ವಿ.ನಾರಾಯಣಸ್ವಾಮಿ · ಶ್ರೀ ಚಂದ್ರಶೇಖರ್ (ಮೂಡ್ಯ ಚಂದ್ರು) · ಶ್ರೀ ಎಂ.ಎಸ್.ಉಮಾಪತಿ · ಶ್ರೀ ಎ.ಪೂರ್ಣೇಶ್ · ಶ್ರೀ ಜೆ.ರಾಜು

ಶ್ರೀ ಸಿ.ಎನ್.ಬಾಲಕೃಷ್ಣ · ಶ್ರೀ ಹೆಚ್.ಸಿ.ಜಯಮುತ್ತು · ಶ್ರೀ ಆರ್.ಪ್ರಕಾಶ್ · ಶ್ರೀ ಸಿ.ದೇವರಾಜು (ಹಾಪ್‌ಕಾಮ್ಸ್) · ಶ್ರೀ ಎಂ.ಪುಟ್ಟಸ್ವಾಮಿ · ಶ್ರೀ ಕೆ.ವಿ.ಶ್ರೀಧರ್ · ಶ್ರೀ ರಾಘವೇಂದ್ರ · ಶ್ರೀ ರಘುಗೌಡ ಎಸ್.ಎಸ್ · ಶ್ರೀ ಲೋಕೇಶ್ ಬಿ. ನಾಗರಾಜಯ್ಯ · ಡಾ|| ಡಿ.ಕೆ.ರಮೇಶ್ · ಶ್ರೀ ರವೀಂದ್ರ ಹೆಚ್.ಎನ್ · ಡಾ. ಎಂ.ಬಿ.ಮಂಜೇಗೌಡ

ದಿನಾಂಕ: 04/10/2025ರಿಂದ ಬೆಂಗಳೂರಿನಲ್ಲಿ ಸಾಮಾಜಿಕ, ಶೈಕ್ಷಣಿಕ ಸಮೀಕ್ಷೆ ಆರಂಭವಾಗಿದ್ದು, ಬೆಂಗಳೂರಿನಲ್ಲಿ ನೆಲೆಸಿರುವ **ಒಕ್ಕಲಿಗ ಸಮುದಾಯದವರು** ಸಮೀಕ್ಷಾದಾರರಿಗೆ ಅಗತ್ಯ ಮಾಹಿತಿ ನೀಡಲು ವಿನಂತಿ

ಪ್ರಕಟಣೆ : ರಾಜ್ಯ ಒಕ್ಕಲಿಗರ ಸಂಘದ ಅಧ್ಯಕ್ಷರು, ಪದಾಧಿಕಾರಿಗಳು, ಕಾರ್ಯಕಾರಿ ಸಮಿತಿ ಸದಸ್ಯರುಗಳು ಮತ್ತು ಕುಲಬಾಂಧವರು

prajavani.net
prajavani
ಮಂಗಳವಾರ, ಅಕ್ಟೋಬರ್ 7, 2025 | ಬೆಂಗಳೂರು | ₹ 7.00 | ಸಂಪುಟ 78 | ಸಂಚಿಕೆ 277 | ಪುಟ 14
www.prajavani.net

ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನ ಪತ್ರಿಕೆ

ಸೆನ್ಸೆಕ್ಸ್ 81,790 | ನಿಫ್ಟಿ 25,077 | $/₹ 88.74

ಜಾತಿವಾರು ಸಮೀಕ್ಷೆ ಅವಧಿ ವಿಸ್ತರಣೆ

ಸಮೀಕ್ಷಕರಿಗೆ ಅನುಕೂಲ ಕಲ್ಪಿಸಲು ಶಾಲೆಗಳ ತರಗತಿ ಅವಧಿ ಬದಲು

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜ್ಯದಲ್ಲಿ ಹಿಂದುಳಿದ ವರ್ಗಗಳ ಆಯೋಗದ ವತಿಯಿಂದ ನಡೆಯುತ್ತಿರುವ ಸಾಮಾಜಿಕ ಮತ್ತು ಶೈಕ್ಷಣಿಕ ಸಮೀಕ್ಷೆಯ ಅವಧಿಯನ್ನು ಅ.12ರವರೆಗೆ ವಿಸ್ತರಿಸಲಾಗಿದೆ. ಗ್ರೇಟರ್ ಬೆಂಗಳೂರು ಪ್ರಾಧಿಕಾರದ ವ್ಯಾಪ್ತಿಯಲ್ಲಿ ಅ.24ರವರೆಗೂ ಸಮೀಕ್ಷೆ ನಡೆಯಲಿದೆ.

ಗ್ರೇಟರ್ ಬೆಂಗಳೂರು ಪ್ರಾಧಿಕಾರ (ಜಿಬಿಎ) ವ್ಯಾಪ್ತಿ ಬಿಟ್ಟು, ರಾಜ್ಯದಾದ್ಯಂತ ಸೆ. 22ರಿಂದ ಸಮೀಕ್ಷೆ ಆರಂಭಗೊಂಡಿದ್ದು, ಮಂಗಳವಾರ (ಅ.7) ಅಂತ್ಯ ಆಗಬೇಕಿತ್ತು. ಸೋಮವಾರದವರೆಗೆ (ಅ. 6) ಶೇಕಡಾ 80.39ರಷ್ಟು ಪೂರ್ಣಗೊಂಡಿದೆ. ಮಂಗಳವಾರ ಕೊನೆಯ ದಿನ ಆಗಿರುವ ಕಾರಣ, ಅವಧಿಯನ್ನು ವಿಸ್ತರಿಸಲಾಗಿದೆ.

ದಸರಾ ರಜೆಯ ಬಳಿಕ ಅ. 8ರಿಂದ ಶಾಲೆಗಳು ಪುನರಾರಂಭಗೊಳ್ಳಲಿವೆ. ಹೀಗಾಗಿ, ಸಮೀಕ್ಷೆಯಲ್ಲಿ ತೊಡಗಿಸಿಕೊಂಡಿರುವ ಶಿಕ್ಷಕರಿಗೆ ಅನುಕೂಲ ಕಲ್ಪಿಸಲು ಸರ್ಕಾರಿ ಮತ್ತು ಅನುದಾನಿತ ಶಾಲೆಗಳ ಸಮಯವನ್ನು ಮರು ನಿಗದಿಪಡಿಸಲಾಗಿದೆ ಎಂದು ಶಾಲಾ ಶಿಕ್ಷಣ ಇಲಾಖೆಯ ಆಯುಕ್ತ ಸುರಳ್ಕರ್ ವಿಕಾಸ್ ಕಿಶೋರ್ ಅವರು ರಾಜ್ಯದ ಎಲ್ಲ ಉಪ ನಿರ್ದೇಶಕರಿಗೆ ಸೂಚಿಸಿದ್ದಾರೆ.

‘ಜಿಬಿಎ ವ್ಯಾಪ್ತಿಯಲ್ಲಿ ಶನಿವಾರದಿಂದ (ಅ. 4) ಸಮೀಕ್ಷೆ ಶುರುವಾಗಿದೆ. ಎರಡು ದಿನಗಳ ಅವಧಿಯಲ್ಲಿ ಗುರಿ ನಿಗದಿಪಡಿಸಿರುವ ಒಟ್ಟು 39.82 ಲಕ್ಷ ಮನೆಗಳ ಪೈಕಿ, 2,60,900 ಮನೆಗಳಲ್ಲಿ ದತ್ತಾಂಶ ಸಂಗ್ರಹಿಸಲಾಗಿದೆ’ ಎಂದು ಹಿಂದುಳಿದ ವರ್ಗಗಳ ಆಯೋಗದ ಮೂಲಗಳು ತಿಳಿಸಿವೆ.

ರಾಜ್ಯದಾದ್ಯಂತ ಆರಂಭದ 3–4 ದಿನ ಮೊಬೈಲ್ ಆ್ಯಪ್‌ನಲ್ಲಿ ತಾಂತ್ರಿಕ ದೋಷ, ನೆಟ್‌ವರ್ಕ್ ಸಮಸ್ಯೆ ಹೀಗೆ ನಾನಾ ಕಾರಣಗಳಿಂದ ಆಮೆಗತಿಯಲ್ಲಿ ಸಮೀಕ್ಷೆ ಸಾಗಿತ್ತು. ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಈ ಸಂಬಂಧ ಜಿಲ್ಲಾಮಟ್ಟದ ಅಧಿಕಾರಿಗಳ ಸಭೆ ನಡೆಸಿ ತೀವ್ರ ಅಸಮಾಧಾನ ವ್ಯಕ್ತಪಡಿಸಿದ ನಂತರ ಈ ಕಾರ್ಯ ಚುರುಕು ಪಡೆದಿತ್ತು.

▸7

ಯಾವ ಜಾತಿಯವರನ್ನೂ ತುಳಿಯುವ ಉದ್ದೇಶದಿಂದ ಸಮೀಕ್ಷೆ ನಡೆಸುತ್ತಿಲ್ಲ. ಸಮಸಮಾಜ ನಿರ್ಮಾಣವನ್ನು ವಿರೋಧಿಸುವವರು ಜನರ ದಾರಿ ತಪ್ಪಿಸುತ್ತಿದ್ದಾರೆ

ಸಿದ್ದರಾಮಯ್ಯ, ಮುಖ್ಯಮಂತ್ರಿ

ಹಾವೇರಿಯಲ್ಲಿ ಅಂಗವಿಕಲರ ತ್ರಿಚಕ್ರ ವಾಹನದಲ್ಲಿ ಕುಳಿತು ಸಮೀಕ್ಷಕರೊಬ್ಬರು ಕುಟುಂಬದ ಮುಖ್ಯಸ್ಥರಿಂದ ಮಾಹಿತಿ ಪಡೆದರು – ಪ್ರಜಾವಾಣಿ ಚಿತ್ರ

ಗೊಂದಲ, ಸಮಸ್ಯೆ ಬಗೆಹರಿಸಿ: ಮನವಿ

ಬೆಂಗಳೂರು ನಗರ ವ್ಯಾಪ್ತಿಯಲ್ಲಿ ಸಮೀಕ್ಷೆಗೆ ನಿಯೋಜನೆಗೊಂಡಿರುವ ಸಚಿವಾಲಯದ ನೌಕರರು ಹಲವು ಸಮಸ್ಯೆಗಳನ್ನು ಎದುರಿಸುತ್ತಿದ್ದು, ಈ ಬಗ್ಗೆ ಕ್ರಮ ತೆಗೆದುಕೊಳ್ಳುವಂತೆ ಜಿಬಿಎ ಮುಖ್ಯ ಆಯುಕ್ತರಿಗೆ ಕರ್ನಾಟಕ ಸರ್ಕಾರ ಸಚಿವಾಲಯ ನೌಕರರ ಸಂಘ ಮನವಿ ಸಲ್ಲಿಸಿದೆ.

▸5

ಸಮೀಕ್ಷೆ– ವೇಳಾಪಟ್ಟಿ ಬದಲು

ರಾಜ್ಯದಲ್ಲಿ ಅ. 8ರಿಂದ 12ರವರೆಗೆ (ಜಿಬಿಎ ವ್ಯಾಪ್ತಿ ಬಿಟ್ಟು)	
ಶಾಲಾ ತರಗತಿ	ಬೆಳಿಗ್ಗೆ 8ರಿಂದ 1ರವರೆಗೆ
ಸಮೀಕ್ಷೆ ಅವಧಿ	1 ಗಂಟೆಯ ನಂತರ
ಸಮೀಕ್ಷೆ ಅಂತ್ಯ	ಅ. 12
ಗ್ರೇಟರ್ ಬೆಂಗಳೂರು ಪ್ರಾಧಿಕಾರ (ಜಿಬಿಎ) ವ್ಯಾಪ್ತಿ ಅ. 8ರಿಂದ 24ರವರೆಗೆ	
ಶಾಲಾ ತರಗತಿ	ಬೆಳಿಗ್ಗೆ 8ರಿಂದ 1ರವರೆಗೆ
ಸಮೀಕ್ಷೆ ಅವಧಿ	1 ಗಂಟೆಯ ನಂತರ
ಸಮೀಕ್ಷೆ ಅಂತ್ಯ	ಅ. 24

ಜಾತಿವಾರು ಸಮೀಕ್ಷೆಯ ಪ್ರಗತಿ (ಅ.6ರವರೆಗೆ)

ರಾಜ್ಯದಾದ್ಯಂತ	
ಒಟ್ಟು ಮನೆಗಳ ಗುರಿ	1,43,77,978
ಮನೆಗಳ ಸಮೀಕ್ಷೆ ಅ. 5ರವರೆಗೆ	1,10,04,345
ಮನೆಗಳ ಸಮೀಕ್ಷೆ ಅ. 6ರಂದು	5,52,407
ಈವರೆಗೆ ಒಟ್ಟು ಮನೆಗಳ ಸಮೀಕ್ಷೆ	1,15,56752
ಶೇಕಡಾವಾರು	80.39
ಸಮೀಕ್ಷೆಗೆ ಒಳಗಾದ ಒಟ್ಟು ಜನಸಂಖ್ಯೆ	4,32,74,823
ಗ್ರೇಟರ್ ಬೆಂಗಳೂರು (ಜಿಬಿಎ)	
ಒಟ್ಟು ಮನೆಗಳ ಗುರಿ	39,82,335
ಮನೆಗಳ ಸಮೀಕ್ಷೆ ಅ. 5ರವರೆಗೆ	1,24,623
ಮನೆಗಳ ಸಮೀಕ್ಷೆ ಅ. 6ರಂದು	1,36,277
ಈವರೆಗೆ ಒಟ್ಟು ಮನೆಗಳ ಸಮೀಕ್ಷೆ	2,60,900

ಬಿಹಾರ ‘ಮತ’ಕ್ಕೆ ಮುಹೂರ್ತ

ಎನ್‌ಡಿಎ – ‘ಇಂಡಿಯಾ’ ನಡುವೆ ನೇರ ಹಣಾಹಣಿ ನಿರೀಕ್ಷೆ

ಪ್ರಜಾವಾಣಿ ವಾರ್ತೆ

ನವದೆಹಲಿ: ಬಿಹಾರ ವಿಧಾನಸಭಾ ಚುನಾವಣೆಗೆ ಕೇಂದ್ರ ಚುನಾವಣಾ ಆಯೋಗ ಸೋಮವಾರ ಮುಹೂರ್ತ ನಿಗದಿಪಡಿಸಿದೆ. ಆ ರಾಜ್ಯದಲ್ಲಿ ನವೆಂಬರ್ 6 ಹಾಗೂ 11ರಂದು ಎರಡು ಹಂತಗಳಲ್ಲಿ ಮತದಾನ ನಡೆಯಲಿದೆ. ಎನ್‌ಡಿಎ ಹಾಗೂ ಇಂಡಿಯಾ ಮೈತ್ರಿಕೂಟದ ನಡುವೆ ನೇರ ಹಣಾಹಣಿಗೆ ಕಣ ಸಜ್ಜಾಗಿದೆ.

ನಿತೀಶ್ ಕುಮಾರ್ ನೇತೃತ್ವದ ಎನ್‌ಡಿಎ ಅಧಿಕಾರವನ್ನು ಉಳಿಸಿಕೊಳ್ಳುತ್ತದೆಯೇ ಅಥವಾ ಆರ್‌ಜೆಡಿ ತನ್ನ ಮಿತ್ರಪಕ್ಷಗಳೊಂದಿಗೆ 20 ವರ್ಷಗಳಲ್ಲಿ ಮೊದಲ ಬಾರಿಗೆ ಸರ್ಕಾರವನ್ನು ಮುನ್ನಡೆಸುತ್ತದೆಯೇ ಎಂಬುದನ್ನು ನಿರ್ಧರಿಸುವ ನಿರ್ಣಾಯಕ ವಿಧಾನಸಭಾ ಚುನಾವಣೆಯ ಮತ ಎಣಿಕೆ ನವೆಂಬರ್ 14ರಂದು ನಡೆಯಲಿದೆ.

ಜತೆಗೆ, ಜಮ್ಮು ಮತ್ತು ಕಾಶ್ಮೀರದ ಬುಡ್ಗಾಮ್ ಮತ್ತು ನಾಗ್ರೋಟಾ ಸೇರಿದಂತೆ ಎಂಟು ವಿಧಾನಸಭಾ ಸ್ಥಾನಗಳಿಗೆ ಉಪಚುನಾವಣೆ ನವೆಂಬರ್ 11ರಂದು ಜರುಗಲಿದೆ.

ಪತ್ರಿಕಾಗೋಷ್ಠಿಯಲ್ಲಿ ವೇಳಾಪಟ್ಟಿ ಪ್ರಕಟಿಸಿದ ಮುಖ್ಯ ಚುನಾವಣಾ ಆಯುಕ್ತ ಜ್ಞಾನೇಶ್ ಕುಮಾರ್, ‘ಬಿಹಾರ ಚುನಾವಣೆಯು ಎಲ್ಲ ಚುನಾವಣೆಗಳ ತಾಯಿ’ ಎಂದು ಹೇಳಿದರು. ರಾಜ್ಯದಲ್ಲಿ ಶಾಂತಿಯುತ ಮತ್ತು ಪಾರದರ್ಶಕ ಪ್ರಕ್ರಿಯೆ ನಡೆಸಲಾಗುವುದು ಎಂದು ಭರವಸೆ ನೀಡಿದರು.

▸11

243 ಒಟ್ಟು ಕ್ಷೇತ್ರಗಳು

ಮೀಸಲು ಕ್ಷೇತ್ರಗಳು: **38** ಎಸ್‌ಸಿ | **2** ಎಸ್‌ಟಿ

90,712 ಮತಗಟ್ಟೆಗಳು | **76,801** ಗ್ರಾಮೀಣ | **13,911** ನಗರ

ಕಣ ಚಿತ್ರಣ			
ಮತದಾನ ಹಂತ 1	ನವೆಂಬರ್ 6	ಮಹಿಳೆಯರು	3.5 ಕೋಟಿ
ಮತದಾನ ಹಂತ 2	ನವೆಂಬರ್ 11	ತೃತೀಯ ಲಿಂಗಿಗಳು	1,725
ಮತ ಎಣಿಕೆ	ನವೆಂಬರ್ 14	ಅಂಗವಿಕಲರು	7.2 ಲಕ್ಷ
ಮತದಾರರು	7.42 ಕೋಟಿ	ಮತದಾನ ಸಿಬ್ಬಂದಿ	4.53 ಲಕ್ಷ
ಪುರುಷರು	3.92 ಕೋಟಿ		

ಉತ್ತರ ನೀಡದ ಆಯುಕ್ತ

ಎಸ್‌ಐಆರ್ ನಂತರ ಮತದಾರರ ಪಟ್ಟಿಯಿಂದ ಕಿತ್ತು ಹಾಕಿದ ಅಕ್ರಮ ವಲಸಿಗರ ಸಂಖ್ಯೆಯನ್ನು ಜ್ಞಾನೇಶ್ ಕುಮಾರ್ ಸೋಮವಾರ ನೀಡಲಿಲ್ಲ. ‘ಇದನ್ನು ವಿಕೇಂದ್ರೀಕೃತ ರೀತಿಯಲ್ಲಿ ನಿರ್ವಹಿಸಲಾಗಿದೆ ಮತ್ತು ವಿಧಾನಸಭೆ, ಜಿಲ್ಲೆ ಮತ್ತು ರಾಜ್ಯ ಮಟ್ಟದಲ್ಲಿ ವಿವರ ಲಭ್ಯವಿದೆ’ ಎಂದು ಹೇಳಿದರು.

ಚುನಾವಣೆಯ ವೇಳಾಪಟ್ಟಿ ಘೋಷಿಸಲು ಕರೆದಿದ್ದ ಪತ್ರಿಕಾಗೋಷ್ಠಿಯಲ್ಲಿ ಮೂವರು ಪತ್ರಕರ್ತರು ಈ ಅಂಕಿಅಂಶಗಳನ್ನು ಕೋರಿದ್ದರು. ಆದರೆ, ಕುಮಾರ್ ಅದಕ್ಕೆ ನೇರವಾಗಿ ಪ್ರತಿಕ್ರಿಯಿಸಲಿಲ್ಲ. ಆಗಸ್ಟ್ 17ರಂದು ನಡೆದ ಪತ್ರಿಕಾಗೋಷ್ಠಿಯಲ್ಲೂ ಕುಮಾರ್ ಅವರು ಈ ಬಗ್ಗೆ ವಿವರ ನೀಡಿರಲಿಲ್ಲ.



ಸಿಜೆಐ ಮೇಲೆ ಶೂ ಎಸೆಯಲು ಯತ್ನ

ಪ್ರಜಾವಾಣಿ ವಾರ್ತೆ/ಪಿಟಿಐ

ನವದೆಹಲಿ: ಸುಪ್ರೀಂ ಕೋರ್ಟ್‌ನ ಮುಖ್ಯ ನ್ಯಾಯಮೂರ್ತಿ (ಸಿಜೆಐ) ಬಿ.ಆರ್. ಗವಾಯಿ ಅವರ ಮೇಲೆ 71 ವರ್ಷದ ರಾಕೇಶ್ ಕಿಶೋರ್ ಎಂಬ ವಕೀಲ ನ್ಯಾಯಾಲಯದ ಸಭಾಂಗಣದಲ್ಲಿ (ಕೋರ್ಟ್ ನಂ.1) ಸೋಮವಾರ ಬೆಳಿಗ್ಗೆ ಶೂ ಎಸೆಯಲು ಯತ್ನಿಸಿದ್ದಾರೆ.

ಇವರನ್ನು ನ್ಯಾಯಾಲಯದ ಭದ್ರತಾ ಸಿಬ್ಬಂದಿ ಸಭಾಂಗಣದಿಂದ ಹೊರಗೆ ಎಳೆದೊಯ್ಯುತ್ತಿದ್ದಾಗ ‘ಸನಾತನ ಧರ್ಮದ ಮೇಲಿನ ಅವಮಾನವನ್ನು ಹಿಂದೂಸ್ತಾನವು ಸಹಿಸುವುದಿಲ್ಲ’ ಎಂದು ರಾಕೇಶ್ ಕೂಗಾಡಿದರು. ಘಟನೆಯಿಂದ ವಿಚಲಿತರಾಗದ ಗವಾಯಿ ಅವರು ವಾದ–ಪ್ರತಿವಾದಗಳನ್ನು ಮುಂದುವರಿಸುವಂತೆ ವಕೀಲರಿಗೆ ಸೂಚಿಸಿದರು.

▸11

ವಿಚಲಿತರಾಗುವುದು ಬೇಡ. ನಾನೂ ವಿಚಲಿತನಾಗಿಲ್ಲ. ಇಂಥ ಘಟನೆಗಳು ನನ್ನ ಮೇಲೆ ಯಾವ ಪರಿಣಾಮವನ್ನೂ ಬೀರುವುದಿಲ್ಲ

ಬಿ.ಆರ್. ಗವಾಯಿ, ಸುಪ್ರೀಂ ಕೋರ್ಟ್ ಮುಖ್ಯನ್ಯಾಯಮೂರ್ತಿ

ಯಾರು ಏನೆಂದರು?

ಸಿಜೆಐ ಅವರೊಂದಿಗೆ ಮಾತನಾಡಿದೆ. ಅವರ ಮೇಲಿನ ದಾಳಿಯು ಪ್ರತಿಯೊಬ್ಬ ಭಾರತೀಯನಿಗೂ ಸಿಟ್ಟು ತರಿಸಿದೆ. ಇಂಥ ಬೇಜವಾಬ್ದಾರಿ ವರ್ತನೆಗೆ ಸಮಾಜದಲ್ಲಿ ಅವಕಾಶವಿಲ್ಲ

ನರೇಂದ್ರ ಮೋದಿ, ಪ್ರಧಾನಿ

ಎಲ್ಲ ಅಡೆತಡೆಗಳನ್ನು ದಾಟಿ, ಸಂವಿಧಾನವನ್ನು ಎತ್ತಿ ಹಿಡಿಯುವ ಕೆಲಸ ಮಾಡುತ್ತಿರುವ ವ್ಯಕ್ತಿಯನ್ನು ಹೆದರಿಸುವ, ಅವಮಾನಿಸುವ ಯತ್ನ ಇದಾಗಿದೆ. ಕಳೆದ ದಶಕದಿಂದ ದ್ವೇಷ ಮತ್ತು ಮತಾಂಧತೆ ನಮ್ಮ ಸಮಾಜದಲ್ಲಿ ಹೇಗೆ ಆವರಿಸಿದೆ ಎಂಬುದಕ್ಕೆ ಇದು ನಿದರ್ಶನ

ಮಲ್ಲಿಕಾರ್ಜುನ ಖರ್ಗೆ, ಕಾಂಗ್ರೆಸ್ ಅಧ್ಯಕ್ಷ

ಬೌದ್ಧಧರ್ಮ ಸೇರಿದ್ದರೆ ಎಸ್‌ಸಿ ಪ್ರಮಾಣಪತ್ರ

ಬೆಂಗಳೂರು: ರಾಜ್ಯದಲ್ಲಿ ಪರಿಶಿಷ್ಟ ಜಾತಿ ಪಟ್ಟಿಯಲ್ಲಿರುವ 101 ಪರಿಶಿಷ್ಟ ಜಾತಿಯವರ ಪೈಕಿ ಯಾರಾದರೂ ಬೌದ್ಧ ಧರ್ಮಕ್ಕೆ ಮತಾಂತರಗೊಂಡಿದ್ದರೆ, ಅಂಥವರಿಗೆ ಪರಿಶಿಷ್ಟ ಜಾತಿ ಪ್ರಮಾಣ ಪತ್ರ ನೀಡುವಂತೆ ರಾಜ್ಯ ಸರ್ಕಾರ ಮತ್ತೊಮ್ಮೆ ಆದೇಶ ಹೊರಡಿಸಿದೆ.

ಕೇಂದ್ರ ಸರ್ಕಾರ 1990ರ ನ. 20ರಂದು ಬರೆದ ಪತ್ರದಲ್ಲಿದ್ದ ಸೂಚನೆಯಂತೆ, ‘ಬೌದ್ಧ ಧರ್ಮಕ್ಕೆ ಮತಾಂತರಗೊಂಡಿರುವ ಪರಿಶಿಷ್ಟ ಜಾತಿಯವರಿಗೆ ಪರಿಶಿಷ್ಟ ಜಾತಿ ಪ್ರಮಾಣಪತ್ರ ನೀಡುವಂತೆ ಮತ್ತು ಧರ್ಮದ ಕಾಲಂನಲ್ಲಿ ಬೌದ್ಧ ಧರ್ಮ ಎಂದು ನಮೂದಿಸುವಂತೆ ಜಾತಿ ಪ್ರಮಾಣಪತ್ರ ನೀಡುವ ಪ್ರಾಧಿಕಾರಿಗಳಿಗೆ ರಾಜ್ಯ ಸರ್ಕಾರ 2013ರ ಡಿ. 9ರಂದೇ ಆದೇಶ ನೀಡಿತ್ತು.

▸7

₹40 ಕೋಟಿ ಆಸ್ತಿ ಇ.ಡಿ ವಶ

ಮುಡಾ ಪ್ರಕರಣ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರದ (ಮುಡಾ) ನಿವೇಶನ ಹಂಚಿಕೆ ಹಗರಣದ ತನಿಖೆ ನಡೆಸುತ್ತಿರುವ ಜಾರಿ ನಿರ್ದೇಶನಾಲಯವು (ಇ.ಡಿ.) ಹಣ ಅಕ್ರಮ ವರ್ಗಾವಣೆ ಸಂಬಂಧ ಸುಮಾರು ₹40.8 ಕೋಟಿ ಮೌಲ್ಯದ 34 ಸ್ಥಿರಾಸ್ತಿಗಳನ್ನು ಮತ್ತೆ ಮುಟ್ಟುಗೋಲು ಹಾಕಿಕೊಂಡಿದೆ.

ಈ ಪ್ರಕರಣದಲ್ಲಿ ಈವರೆಗೂ ಮುಡಾಕ್ಕೆ ಸೇರಿದ ಸುಮಾರು ₹440 ಕೋಟಿಗೂ ಹೆಚ್ಚು ಮೌಲ್ಯದ ಸ್ಥಿರಾಸ್ತಿಗಳನ್ನು ಮುಟ್ಟುಗೋಲು ಹಾಕಿಕೊಂಡಂತಾಗಿದೆ.

ಮುಡಾದ ಮಾಜಿ ಆಯುಕ್ತ ದಿನೇಶ್ ಕುಮಾರ್‌ಗೆ ಸೇರಿದ ₹40.8 ಕೋಟಿ ಮೌಲ್ಯದ 34 ನಿವೇಶನಗಳನ್ನು ವಶಕ್ಕೆ ಪಡೆದಿದೆ. ದಿನೇಶ್ ಕುಮಾರ್ ನಿವೇಶನ ಹಂಚಿಕೆ ವೇಳೆ ಅಕ್ರಮವಾಗಿ ಪಡೆದ ಹಣವನ್ನು ಸಂಬಂಧಿಕರು ಹಾಗೂ ಸಹಚರರ ಹೆಸರಿನಲ್ಲಿ ಸ್ಥಿರಾಸ್ತಿಗಳನ್ನು ಖರೀದಿಸಲು ಬಳಸಿದ್ದಾರೆ. ಜತೆಗೆ ಮುಡಾದ 31 ನಿವೇಶನಗಳನ್ನು ಅಕ್ರಮವಾಗಿ ಹಂಚಿಕೆ ಮಾಡಿರುವುದು ಹಾಗೂ ಮುಡಾ ಅಧಿಕಾರಿಗಳು ಮತ್ತು ರಿಯಲ್ ಎಸ್ಟೇಟ್ ಉದ್ಯಮಿಗಳ ನಡುವೆ ಸಂಬಂಧ ಇರುವುದು ಕೂಡ ತನಿಖೆ ವೇಳೆ ಪತ್ತೆಯಾಗಿದೆ ಎಂದು ಇ.ಡಿ ಮೂಲಗಳು ಹೇಳಿವೆ.

ಬಡಾವಣೆಗಳಿಗೆ ಅನುಮೋದನೆ ನೀಡಲು ಮತ್ತು ಪರಿಹಾರ ರೂಪದಲ್ಲಿ ನಿವೇಶನಗಳನ್ನು ಹಂಚಿಕೆ ಮಾಡುವಾಗ ಹಣ ಪಡೆದಿರುವುದಕ್ಕೆ ಸಾಕ್ಷ್ಯ ಸಂಗ್ರಹಿಸಿರುವುದಾಗಿ ಇ.ಡಿ. ಹೇಳಿದೆ.

ಈ ಪ್ರಕರಣಕ್ಕೆ ಸಂಬಂಧಿಸಿದಂತೆ ಮುಡಾದ ಮಾಜಿ ಆಯುಕ್ತ ಜಿ.ಟಿ. ದಿನೇಶ್ ಕುಮಾರ್ ಅವರನ್ನು ಕಳೆದ ಸೆಪ್ಟೆಂಬರ್‌ನಲ್ಲಿ ಬಂಧಿಸಿದ್ದ ಇ.ಡಿ., ಸುದೀರ್ಘ ವಿಚಾರಣೆ ನಡೆಸಿ ನ್ಯಾಯಾಂಗ ಬಂಧನಕ್ಕೆ ಒಪ್ಪಿಸಿದೆ.

▸7

ಚಿನಕುರುಳಿ – ಪ್ರಕಾಶ್ ಶೆಟ್ಟಿ



ಮಾರ್ಗಸೂಚಿ ಬಿಡುಗಡೆ ಮಾಡಿದ ಆರೋಗ್ಯ ಇಲಾಖೆ

ವೈದ್ಯರ ಸಲಹೆ ಇಲ್ಲದೇ ಸಿರಪ್ ಬೇಡ

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಕೆಮ್ಮಿನ ಸಿರಪ್’ ಬಳಕೆ ಬಗ್ಗೆ ಆರೋಗ್ಯ ಇಲಾಖೆ ಮಾರ್ಗಸೂಚಿ ಹೊರಡಿಸಿದ್ದು, ವೈದ್ಯರ ಸಲಹೆ ಇಲ್ಲದೇ ಮಕ್ಕಳಿಗೆ ‘ಕೆಮ್ಮಿನ ಸಿರಪ್’ ನೀಡಬಾರದು ಎಂದು ಸ್ಪಷ್ಟವಾಗಿ ಹೇಳಿದೆ.

ಕೆಮ್ಮಿನ ಸಿರಪ್‌ಗಳ ದುರುಪಯೋಗದಿಂದಾಗಿ ಮಕ್ಕಳಲ್ಲಿ ಆರೋಗ್ಯದ ಗಂಭೀರ ಸಮಸ್ಯೆಗಳು ಎದುರಾಗಿದ್ದು, ಸಾವುಗಳು ವರದಿಯಾಗಿವೆ. ಮಕ್ಕಳ ಸುರಕ್ಷತೆಯನ್ನು ಕಾಪಾಡಲು ಪೋಷಕರು, ಆರೈಕೆದಾರರು, ಸಾರ್ವಜನಿಕರು ಸರ್ಕಾರದ ಮಾರ್ಗಸೂಚಿಯನ್ನು ಪಾಲನೆ ಮಾಡಬೇಕು ಎಂದು ತಿಳಿಸಿದೆ.

2 ವರ್ಷಕ್ಕಿಂತ ಕಡಿಮೆ ವಯಸ್ಸಿನ ಮಕ್ಕಳಿಗೆ ಕೆಮ್ಮಿನ ಅಥವಾ ಶೀತದ ಸಿರಪ್ ನೀಡಬಾರದು. 2ರಿಂದ 5 ವರ್ಷಗಳ ವಯಸ್ಸಿನ ಮಕ್ಕಳಿಗೆ ಸರಿಯಾದ ವೈದ್ಯಕೀಯ ಪರೀಕ್ಷೆಯ ನಂತರ ತಜ್ಞ ವೈದ್ಯರ ನಿರ್ದಿಷ್ಟ ಸಲಹೆ ಮೇರೆಗೆ ಮಾತ್ರ ಈ ಔಷಧಗಳನ್ನು ನೀಡಬೇಕು. ಐದು ವರ್ಷ ದಾಟಿದ ಮಕ್ಕಳಿಗೆ ವೈದ್ಯರ ಸಲಹೆಯಂತೆ ಬಳಸಬೇಕು. ಸಾಧ್ಯವಾದಷ್ಟೂ ಕಡಿಮೆ ಅವಧಿಗೆ, ಕನಿಷ್ಠ ಡೋಸ್‌ಗಳನ್ನು ಬಳಸಬೇಕು. ಬಹು ಔಷಧಗಳ ಸಂಯೋಜನೆ ಇರುವ ಸಿರಪ್‌ಗಳನ್ನು ಉಪಯೋಗಿಸಬಾರದು ಎಂದು ಮಾರ್ಗಸೂಚಿಯಲ್ಲಿ ತಿಳಿಸಲಾಗಿದೆ.

ಬಹುತೇಕ ಸಂದರ್ಭಗಳಲ್ಲಿ ಮಕ್ಕಳಲ್ಲಿ ಕೆಮ್ಮು ಮತ್ತು ಶೀತವು ಸುರಕ್ಷಿತ ಕ್ರಮಗಳಿಂದ ನಿಧಾನವಾಗಿ ಕಡಿಮೆಯಾಗುತ್ತವೆ. ಮಕ್ಕಳಿಗೆ ಹೆಚ್ಚಿನ ಪ್ರಮಾಣದಲ್ಲಿ ದ್ರವ ಪದಾರ್ಥಗಳನ್ನು ನೀಡಬೇಕು. ಹೆಚ್ಚು ವಿಶ್ರಾಂತಿ, ನಿದ್ರೆಗೆ ಅವಕಾಶ ಮಾಡಿಕೊಡಬೇಕು. ಪೌಷ್ಟಿಕ ಆಹಾರ ನೀಡಬೇಕು ಎಂದಿದೆ.

ಸ್ವಯಂ ಔಷಧೋಪಚಾರ ಮಾಡಬಾರದು. ವೈದ್ಯರ ಸೂಚನೆ ಇಲ್ಲದೇ ಕೆಮ್ಮಿನ ಔಷಧ ಖರೀದಿಸಬಾರದು, ಬಳಸಬಾರದು. ಈ ಹಿಂದೆ ಬಳಸಿ ಉಳಿದ ಔಷಧವನ್ನು ಬಳಕೆ ಮಾಡಬಾರದು. ವೈದ್ಯರಲ್ಲದವರು ಶಿಫಾರಸು ಮಾಡಿದ ಔಷಧವನ್ನು ಬಳಸಬಾರದು. ಅವಧಿ ಮುಗಿದ ಔಷಧವನ್ನು ತೆಗೆದುಕೊಳ್ಳಬಾರದು ಎಂದು ತಿಳಿಸಲಾಗಿದೆ.

ಅಸಹಜ ಪ್ರತಿಕ್ರಿಯೆ, ಅಧಿಕ ನಿದ್ರಾವಸ್ಥೆ, ವಾಂತಿ, ಉಸಿರಾಟದ ಸಮಸ್ಯೆ ಅಥವಾ ವೇಗದ ಉಸಿರಾಟದ ಸಮಸ್ಯೆ, ನಿರಂತರ ಅಥವಾ ಉಲ್ಬಣಗೊಳ್ಳುತ್ತಿರುವ ಕೆಮ್ಮು, ಜ್ವರ, ಆಹಾರ ಸೇವಿಸದಿರುವ ಸ್ಥಿತಿ ಮಕ್ಕಳಲ್ಲಿ ಕಂಡು ಬಂದರೆ ತಕ್ಷಣ ತಜ್ಞ ವೈದ್ಯರಿಗೆ ವರದಿ ಮಾಡಬೇಕು ಎಂದು ಆರೋಗ್ಯ ಇಲಾಖೆಯ ನಿರ್ದೇಶಕರು ತಿಳಿಸಿದ್ದಾರೆ.

ಹವಾಮಾನ ಮುನ್ಸೂಚನೆ: ನಗರದಲ್ಲಿ ಮೋಡ ಕವಿದ ವಾತಾವರಣವಿರಲಿದ್ದು, ಗುಡುಗು ಸಹಿತ ಮಳೆಯಾಗುವ ಸಾಧ್ಯತೆಯಿದೆ

ನಗರದಲ್ಲಿ ಇಂದು

ಮಹರ್ಷಿ ವಾಲ್ಮೀಕಿ ಜಯಂತಿ, ಮಹರ್ಷಿ ವಾಲ್ಮೀಕಿ ಪ್ರಶಸ್ತಿ ಪ್ರದಾನ: ಸಾನ್ನಿಧ್ಯ: ಪ್ರಸನ್ನಾನಂದಪುರಿ ಸ್ವಾಮೀಜಿ, ಉದ್ಘಾಟನೆ: ಸಿದ್ದರಾಮಯ್ಯ, ಉಪಸ್ಥಿತಿ: ಡಿ.ಕೆ. ಶಿವಕುಮಾರ್, ಬಸವರಾಜ ಹೊರಟ್ಟಿ, ಯು.ಟಿ. ಖಾದರ್, ಎಚ್.ಸಿ. ಮಹದೇವಪ್ಪ, ಸತೀಶ್ ಜಾರಕಿಹೊಳಿ, ಅಧ್ಯಕ್ಷತೆ: ರಿಜ್ವಾನ್ ಅರ್ಷದ್, ಆಯೋಜನೆ: ಪರಿಶಿಷ್ಟ ಪಂಗಡಗಳ ಕಲ್ಯಾಣ ಇಲಾಖೆ, ಸ್ಥಳ: ಬ್ಯಾಂಕ್ವೆಟ್ ಹಾಲ್, ವಿಧಾನಸೌಧ, ಬೆಳಿಗ್ಗೆ 10.30

'ಭಾವ ಸೌರಭ, ಭಾವ ಸಂಭ್ರಮ' ಭಾವಗೀತೆಗಳ ಧ್ವನಿಸಾಂದ್ರಿಕೆಯ ಬಿಡುಗಡೆ: ವೇಮಗಲ್ ಡಿ. ನಾರಾಯಣಸ್ವಾಮಿ, ಅಭಿನಂದನೆ ಸ್ವೀಕರಿಸುವವರು: ಕೆ.ಜಿ. ರಘುಚಂದ್ರ, ಕೆಂಪೇಗೌಡ, ಆಯೋಜನೆ: ಶ್ರೀಕಾರ ಸುಗಮ ಸಂಗೀತ ಸಂಸ್ಥೆ, ಸ್ಥಳ: ಮಹಿಳಾ ವಿಶ್ರಾಂತಿ ಕೊಠಡಿ, ರವೀಂದ್ರ ಕಲಾಕ್ಷೇತ್ರ, ಜೆ.ಸಿ. ರಸ್ತೆ, ಮಧ್ಯಾಹ್ನ 3.30

ನವರಾತ್ರಿ ಸಂಗೀತ ನೃತ್ಯ ನಾಟಕ ದಾಂಡಿಯಾ ಉತ್ಸವ: 'ಸೃಷ್ಟಿ ಸಂಗೀತ ಸಮ್ಮಾನ್' ಮತ್ತು ರೋಟರಿ ಸೇವಾ ಪರಿಣತ' ಪ್ರಶಸ್ತಿ ಪ್ರದಾನ: ರಾಮಲಿಂಗಾರೆಡ್ಡಿ, ಪ್ರಶಸ್ತಿ ಸ್ವೀಕರಿಸುವವರು: ನಾಗಮಣಿ ಶ್ರೀನಾಥ್, ಉಪಸ್ಥಿತಿ: ಎಂ.ವಿ. ವೆಂಕಟೇಶ್, ಶುಭ ಧನಂಜಯ್, ಸುಮ ಸುಧೀಂದ್ರ, ಬಿ.ಆರ್. ಶ್ರೀಧರ್, ಎ.ವಿ. ಸತ್ಯನಾರಾಯಣ, ಆಯೋಜನೆ: ಸೃಷ್ಟಿ ಅಧಿನಯ ಕಲಾವಿದರ ಕೇಂದ್ರ ಮತ್ತು ರೋಟರಿ ಬ್ಯೂಗಲ್ ರಾಕ್, ಸ್ಥಳ: ರವೀಂದ್ರ ಕಲಾಕ್ಷೇತ್ರ, ಜೆ.ಸಿ. ರಸ್ತೆ, ಸಂಜೆ 4

ಶರಣ ಸಂಗಮ, ಬಸವೋತ್ಸವ ಕಾರ್ಯಕ್ರಮಗಳ ಪೂರ್ವಭಾವಿ ಸಭೆ: ಸಾನ್ನಿಧ್ಯ: ಶಾಂತವೀರ ಸ್ವಾಮೀಜಿ, ಮಾದಾರ ಚೆನ್ನಯ್ಯ ಸ್ವಾಮೀಜಿ, ಇಮ್ಮಡಿ ಸಿದ್ಧರಾಮೇಶ್ವರ ಸ್ವಾಮೀಜಿ, ಮಾಚಿದೇವ ಸ್ವಾಮೀಜಿ, ಶಿವಬಸವ ಸ್ವಾಮೀಜಿ, ಶಾಂತವೀರ ಮುರುಗೇಂದ್ರ ಸ್ವಾಮೀಜಿ, ಮಲ್ಲಿಕಾರ್ಜುನ್ ಸ್ವಾಮೀಜಿ, ಅತಿಥಿಗಳು: ನವೀನ್ ಕುಮಾರ್, ಮಲ್ಲಿಕಾರ್ಜುನಯ್ಯ ಎಚ್.ಆರ್., ಉಮೇಶ ಚಂದ್ರ, ಆಯೋಜನೆ: ರಾಷ್ಟ್ರೀಯ ಬಸವತತ್ವ ಪರಿಷತ್ತು, ಸ್ಥಳ: ಡಾ.ಎಂ. ಚಿದಾನಂದಮೂರ್ತಿ ಸಭಾಂಗಣ, ಗೋವಿಂದರಾಜನಗರ, ಪಾಲಿಕೆಸೌಧ, ವಿಜಯನಗರ, ಸಂಜೆ 4.30

ಹುಣ್ಣಿಮೆ ಹಾಡು 'ಭಾವ ಗೀತೆಗಳ ಸಂಜೆ': ಗಾಯನ: ನಾಗಚಂದ್ರಿಕಾ ಭಟ್ ಮತ್ತು ತಂಡ, ಅತಿಥಿಗಳು: ವಿಠ್ಠಲರಾವ್, ವಿ.ಕೆ. ಶಿವರಾಂ, ಆಯೋಜನೆ ಮತ್ತು ಸ್ಥಳ: ಕಾಡುಮಲ್ಲೇಶ್ವರ ಗೆಳೆಯರ ಬಳಗ, ಮಲ್ಲೇಶ್ವರ, ಸಂಜೆ 6.30

ಸಾಹಿತ್ಯಿಕ, ಸಾಂಸ್ಕೃತಿಕ ಸೇರಿದಂತೆ ವಿವಿಧ ಪ್ರಕಾರಗಳ ಕಾರ್ಯಕ್ರಮಗಳ ವಿವರಗಳನ್ನು 'ನಗರದಲ್ಲಿ ಇಂದು' ಅಂಕಣದಲ್ಲಿ ಪ್ರಕಟಿಸಲು ಈ ಕೆಳಗಿನ ಇ-ಮೇಲ್‌ಗೆ (ಸಂಜೆ 6 ಗಂಟೆ ಒಳಗೆ) ಕಳುಹಿಸಿ.
nagaradalli_indu@prajavani.co.in

ನೈರುತ್ಯ ರೈಲ್ವೆ

ಮುಕ್ತ ಟೆಂಡರ್ ಪ್ರಕಟಣೆ ಸಂಖ್ಯೆ. ಬಿ-ಇ-ಟಿಎಲ್‌ಎಸಿ-ನಾನ್‌ಕೋರ್-2025 ದಿನಾಂಕ. 26.09.2025
(ಇ-ಟೆಂಡರಿಂಗ್ ಮೂಲಕ)

ಭಾರತದ ರಾಷ್ಟ್ರಪತಿಗಳ ಪರವಾಗಿ ಕೆಳ ಸಹಿದಾರರು ಕೆಳಕಂಡ ಕೆಲಸಗಳಿಗಾಗಿ ಇ-ಟೆಂಡರ್‌ಗಳನ್ನು ಆಹ್ವಾನಿಸಿದ್ದಾರೆ.

ಕೆಲಸದ ಹೆಸರು	ಅಂದಾಜು ಮೌಲ್ಯ
ಎರಡು ವರ್ಷಗಳ ಕಾಲ	ರೂ. 5,50,05,802.95

ಬೆಂಗಳೂರು ವಿಭಾಗದಲ್ಲಿ ಟ್ರೇನ್ ಲೈಟಿಂಗ್ ಡಿಪೋಗಳಲ್ಲಿ ಐಸಿಎಫ್ ಮತ್ತು ಎಲ್‌ಎಚ್‌ಬಿ ಕೋಚ್‌ಗಳಿಗೆ ನಾನ್ ಕೋರ್ ಚಟುವಟಿಕೆ ಮತ್ತು ಹವಾನಿಯಂತ್ರಿತ ಡಿಪೋಗಳಲ್ಲಿ ಪ್ಯಾಂಟ್ರಿ ಉಪಕರಣಗಳ ದುರಸ್ತಿಗೆ ಹೊರಗುತ್ತಿಗೆ

ಬಿಡ್‌ಗಳನ್ನು ಸಲ್ಲಿಸಲು ಕೊನೆಯ ದಿನಾಂಕ: 17-10-2025 ರಂದು 16:00 ಗಂಟೆಯವರೆಗೆ

ಹೆಚ್ಚಿನ ಮಾಹಿತಿಗಳಿಗಾಗಿ: www.ireps.gov.in ಲಾಗಿನ್ ಮಾಡಿ

ಹಿರಿಯ ವಿಭಾಗೀಯ ವಿದ್ಯುತ್ ಅಭಿಯಂತರರು ಬೆಂಗಳೂರು
ಪಿಯುಬಿ/525/ಎಎಡಿ360/ಪಿಆರ್ ಬಿ/ಎಸ್ ಡಬ್ಲ್ಯೂ ಆರ್/2025-26

ಕಾಯ್ದಿರಿಸದ ಟಿಕೆಟ್‌ಗಳನ್ನು ಸುಲಭವಾಗಿ ಬುಕ್ ಮಾಡಲು Google Play Store ನಿಂದ UTS Moblie ಅಪ್ಲಿಕೇಶನ್ ಡೌನ್‌ಲೋಡ್ ಮಾಡಿ.

South Western Railway - SWR | SWRRLY | @SWRAILWAYHQ | @sw_railways

ನೈರುತ್ಯ ರೈಲ್ವೆ

30.09.2025 ದಿನಾಂಕದ ಇ-ಟೆಂಡರ್ ಸೂಚನೆ ಸಂಖ್ಯೆ ಇ-ಜಿಎಸ್‌ಯು-ಇಎಲ್‌ಇ-2025-26-ಒಟಿ-4ಎ ಪ್ರಕಟಣೆ.

ಭಾರತದ ರಾಷ್ಟ್ರಪತಿಗಳ ಪರವಾಗಿ ಕೆಳಗೆ ಸಹಿ ಮಾಡಿರುವವರು ಈ ಕೆಳಗಿನ ಕೆಲಸಗಳಿಗೆ ಇ-ಟೆಂಡರ್ ಆಹ್ವಾನಿಸಿದ್ದಾರೆ.

ಕೆಲಸದ ಹೆಸರು	ಅಂದಾಜು ಮೌಲ್ಯ
ಅಮೃತ ಭಾರತ	ರೂ. 1,44,03,265.76/-

ಯೋಜನೆಯಡಿ ಬೆಂಗಳೂರು ವಿಭಾಗದ 14 ನಿಲ್ದಾಣಗಳಲ್ಲಿ ಪ್ರಸ್ತಾವಿತ ಪ್ರಯಾಣಿಕರ ಲಿಫ್ಟ್‌ಗಳು ಮತ್ತು ಎಸ್ಕಲೇಟರ್‌ಗಳ ವ್ಯವಸ್ಥೆಗೆ ವಿದ್ಯುತ್ ವ್ಯವಸ್ಥೆ.

ಬಿಡ್‌ಗಳನ್ನು ಸಲ್ಲಿಸಲು ಕೊನೆಯ ದಿನಾಂಕ: 22-10-2025 ರಂದು 11:00 ಗಂಟೆಯವರೆಗೆ

ಹೆಚ್ಚಿನ ಮಾಹಿತಿಗಳಿಗಾಗಿ: www.ireps.gov.in ಲಾಗಿನ್ ಮಾಡಿ

ಉಪ ಮುಖ್ಯ ಎಲೆಕ್ಟ್ರಿಕಲ್ ಅಭಿಯಂತರರು, ಗತಿ ಶಕ್ತಿ ಘಟಕ, ಬೆಂಗಳೂರು
ಪಿಯುಬಿ/528/ಎಎಡಿ360/ಪಿಆರ್ ಬಿ/ಎಸ್ ಡಬ್ಲ್ಯೂ ಆರ್/2025-26

ಕಾಯ್ದಿರಿಸದ ಟಿಕೆಟ್‌ಗಳನ್ನು ಸುಲಭವಾಗಿ ಬುಕ್ ಮಾಡಲು Google Play Store ನಿಂದ UTS Moblie ಅಪ್ಲಿಕೇಶನ್ ಡೌನ್‌ಲೋಡ್ ಮಾಡಿ.

South Western Railway - SWR | SWRRLY | @SWRAILWAYHQ | @sw_railways

ನೈಋತ್ಯ ರೈಲ್ವೆ

ಇ-ಟೆಂಡರು ಸೂಚನೆ ಸಂ.: SG-SWR-PROJ-UBL-22LC ದಿನಾಂಕ: 26.09.2025

ಈ ಕೆಳ ಸಹಿದಾರರು, ಭಾರತದ ರಾಷ್ಟ್ರಪತಿಗಳ ಪರವಾಗಿ ಕೆಳಗಡೆ ನೀಡಿರುವ ಕಾಮಗಾರಿಗಳಿಗೆ ಇ-ಟೆಂಡರ್‌ಗಳನ್ನು ಆಹ್ವಾನಿಸಿದ್ದಾರೆ:

ಕಾಮಗಾರಿಯ ವಿವರ	ಅಂದಾಜು ಮೌಲ್ಯ
ಹುಬ್ಬಳ್ಳಿ ವಿಭಾಗದ	ರೂ. 5,32,66,048.05

22 ಎಲ್ ಸಿ ಗೇಟ್‌ಗಳಲ್ಲಿ ರೈಲು ಸಮೀಪಿಸುವಾಗ ಸಿಗ್ನಲ್‌ಗಳು ಬ್ಲಾಂಕಿಂಗ್ ಆಗುವುದನ್ನು ತಪ್ಪಿಸಲು ಮಿನಿ ಐಪಿಎಸ್ ವ್ಯವಸ್ಥೆಯನ್ನು ಒದಗಿಸುವುದು ಮತ್ತು 21 ಎಲ್‌ಸಿ ಗೇಟ್‌ಗಳಿಗೆ ಆರ್‌ಟಿಯು ಅನ್ನು ಒದಗಿಸುವುದು.

ಬಿಡ್‌ಗಳನ್ನು ಸಲ್ಲಿಸಲು ಕೊನೆಯ ದಿನಾಂಕ: 27.10.2025, 11:00 ಗಂಟೆಯವರೆಗೆ

ಹೆಚ್ಚಿನ ಮಾಹಿತಿಗಾಗಿ www.ireps.gov.in ಗೆ ಲಾಗ್ ಆನ್ ಆಗಿ ಕೊನೆಯ ದಿನಾಂಕದವರೆಗೆ ಯಾವುದಾದರೂ ತಿದ್ದುಪಡಿ ಇದ್ದಲ್ಲಿ ವೆಬ್‌ಸೈಟ್‌ಅನ್ನು ನೋಡುತ್ತಲೇ ಇರಿ

ಉಪ ಮುಖ್ಯ ಸಿಗ್ನಲ್ & ದೂರಸಂಪರ್ಕ ಇಂಜಿನಿಯರ್ ಯೋಜನೆ-II/ಹುಬ್ಬಳ್ಳಿ
PUB/521/AAF/PRB/SWR/2025-26

ಕಾಯ್ದಿರಿಸದ ಟಿಕೇಟುಗಳನ್ನು ಸುಲಭವಾಗಿ ಬುಕಿಂಗ್ ಮಾಡಲು ಗೂಗಲ್ ಪ್ಲೇ ಸ್ಟೋರ್‌ನಿಂದ ಯುಟಿಎಸ್ ಮೊಬೈಲ್ ಆ್ಯಪ್‌ಅನ್ನು ಡೌನ್‌ಲೋಡ್ ಮಾಡಿರಿ

South Western Railway - SWR | SWRRLY | SWRAILWAYHQ | sw_railways

ಕೋರ್ಸ್ ಅವಧಿಯಲ್ಲೇ ಉದ್ಯೋಗದ ತರಬೇತಿ

ಸ್ನಾತಕೋತ್ತರ ವಿದ್ಯಾರ್ಥಿಗಳಿಗಾಗಿ ಬೆಂಗಳೂರು ನಗರ ವಿಶ್ವವಿದ್ಯಾಲಯದಿಂದ ಹೊಸ ಹೆಜ್ಜೆ

● ಎ.ಎಂ.ಸುರೇಶ

ಬೆಂಗಳೂರು: ಸ್ನಾತಕೋತ್ತರ ಕೋರ್ಸ್‌ಗಳಲ್ಲಿ ವ್ಯಾಸಂಗ ಮಾಡುತ್ತಿರುವ ವಿದ್ಯಾರ್ಥಿಗಳನ್ನು ಸ್ಪರ್ಧಾತ್ಮಕ ಪರೀಕ್ಷೆಗಳಿಗೆ ಸಜ್ಜುಗೊಳಿಸಲು ಬೆಂಗಳೂರು ನಗರ ವಿಶ್ವವಿದ್ಯಾಲಯ ಮುಂದಾಗಿದೆ.

ಈ ಉದ್ದೇಶಕ್ಕಾಗಿ ಪರೀಕ್ಷಾ ಪೂರ್ವ ತರಬೇತಿ ಕೇಂದ್ರ ಆರಂಭಿಸಿದ್ದು, ಈ ತಿಂಗಳಲ್ಲೇ ತರಬೇತಿ ಶುರುವಾಗಲಿದೆ.

ಖಾಸಗಿ ಕ್ಷೇತ್ರದಲ್ಲಿ ಅಷ್ಟೇ ಅಲ್ಲದೆ, ರಾಜ್ಯ ಮತ್ತು ಕೇಂದ್ರ ಸರ್ಕಾರದ ವಿವಿಧ ಇಲಾಖೆಗಳಲ್ಲಿ ನೇಮಕಾತಿಗೆ ಅಧಿಸೂಚನೆ ಹೊರಡಿಸುತ್ತಿದ್ದರೂ ಆ ಬಗ್ಗೆ ವಿದ್ಯಾರ್ಥಿಗಳಿಗೆ ಮಾಹಿತಿ ನೀಡಲಾಗುತ್ತಿಲ್ಲ. ಅರ್ಜಿ ಸಲ್ಲಿಸುವ ಪ್ರಕ್ರಿಯೆಯಿಂದ ಹಿಡಿದು ಸ್ಪರ್ಧಾತ್ಮಕ ಪರೀಕ್ಷೆ ಬರೆಯುವವರೆಗೆ ಅವರಿಗೆ ಬೇಕಾದ ಎಲ್ಲ ಮಾಹಿತಿಯನ್ನು ತರಬೇತಿ ಕೇಂದ್ರದ ಮೂಲಕ ನೀಡಲಾಗುತ್ತದೆ.

ಉದ್ಯೋಗಕ್ಕೆ ಅರ್ಜಿ ಸಲ್ಲಿಸಲು ಬೇಕಾದ ನೆರವು ನೀಡಲಾಗುತ್ತದೆ. ಸ್ಪರ್ಧಾತ್ಮಕ ಪರೀಕ್ಷೆಗೆ ಸಿದ್ಧತೆ ನಡೆಸಲು ಅಗತ್ಯವಿರುವ ಪುಸ್ತಕಗಳ ವ್ಯವಸ್ಥೆ ಮಾಡಲಾಗುತ್ತದೆ. ಇದಕ್ಕಾಗಿಯೇ ಪ್ರತ್ಯೇಕ ಗ್ರಂಥಾಲಯ ಆರಂಭಿಸಲಾಗುವುದು. ಅಲ್ಲದೆ ಪರೀಕ್ಷೆ ಬರೆಯಲು, ಸಂದರ್ಶನ ಎದುರಿಸಲು ಅಗತ್ಯ ತರಬೇತಿ ನೀಡಲಾಗುತ್ತದೆ ಎಂದು ವಿಶ್ವವಿದ್ಯಾಲಯದ ಕುಲಪತಿ ಪ್ರೊ.ಟಿ.ರಮೇಶ್ ಅವರು 'ಪ್ರಜಾವಾಣಿ'ಗೆ ತಿಳಿಸಿದರು.

'ಬೆಂಗಳೂರು ನಗರ ವಿಶ್ವವಿದ್ಯಾಲಯದಲ್ಲಿ 21 ಸ್ನಾತಕೋತ್ತರ ವಿಭಾಗಗಳಿವೆ. ದಾಖಲಾತಿ ಪ್ರಕ್ರಿಯೆ ಮುಗಿಯುತ್ತಿದ್ದಂತೆಯೇ 'ಅನಿಕೇತನ' ಹೆಸರಿನಲ್ಲಿ ಓರಿಯೆಂಟೇಷನ್ ಮೂಲಕ ವಿದ್ಯಾರ್ಥಿಗಳಿಗೆ ವಿಶ್ವವಿದ್ಯಾಲಯದಲ್ಲಿರುವ ಸೌಲಭ್ಯಗಳು, ಉದ್ಯೋಗಾವಕಾಶಗಳ ಬಗ್ಗೆ ತಿಳಿಸಿ ಕೊಡಲಾಗುತ್ತದೆ. ಯಾರಿಗೆ, ಯಾವ ಕ್ಷೇತ್ರದಲ್ಲಿ ಆಸಕ್ತಿ ಇದೆ ಎಂಬುದನ್ನು ಗುರುತಿಸಿ, ಬಳಿಕ ಆಯಾ ಕ್ಷೇತ್ರದಲ್ಲಿನ ಉದ್ಯೋಗಾವಕಾಶಗಳು ಹಾಗೂ ಅದಕ್ಕೆ ಸ್ಪರ್ಧಾತ್ಮಕ ಪರೀಕ್ಷೆಗೆ ತಯಾರಿ ಮಾಡಲಾಗುತ್ತದೆ' ಎಂದು ವಿವರಿಸಿದರು.

ಮೊದಲ ಸೆಮಿಸ್ಟರ್‌ನಿಂದಲೇ ಸ್ಪರ್ಧಾತ್ಮಕ ಪರೀಕ್ಷೆಗೆ ತರಬೇತಿ ಶುರುವಾಗಲಿದ್ದು, ಎರಡು ವರ್ಷ ವಿದ್ಯಾರ್ಥಿಗಳನ್ನು ಸಜ್ಜುಗೊಳಿಸಲಾಗುತ್ತದೆ. ಬ್ಯಾಂಕಿಂಗ್, ರೈಲ್ವೆ, ರಕ್ಷಣಾ ಇಲಾಖೆ, ಸೇನೆ ಸೇರಿದಂತೆ ಕೇಂದ್ರದ ಸರ್ಕಾರದ ಉದ್ಯೋಗಗಳಿಗೆ ಕನ್ನಡಿಗರು ಹೋಗುವುದು ಕಡಿಮೆ. ಇದಕ್ಕೆ ಕಾರಣ ಅರಿವಿನ ಕೊರತೆ. ಇದನ್ನು ಮನಗಂಡು ವಿಶ್ವವಿದ್ಯಾಲಯವು ಅಗತ್ಯ ಮಾಹಿತಿ ಜೊತೆಗೆ, ತರಬೇತಿಯನ್ನೂ ನೀಡಲಿದೆ.

ಕರ್ನಾಟಕ ಲೋಕಸೇವಾ ಆಯೋಗ, ಕೇಂದ್ರ ಲೋಕಸೇವಾ ಆಯೋಗ ನಡೆಸುವ ನಾಗರಿಕ ಸೇವಾ ಪರೀಕ್ಷೆಗಳಿಗೂ ತರಬೇತಿ ನೀಡಲಾಗುತ್ತದೆ. ಇದಕ್ಕಾಗಿ ಸ್ಪರ್ಧಾತ್ಮಕ ಪರೀಕ್ಷೆಗೆ ತರಬೇತಿ ನೀಡುವ ಖಾಸಗಿ ಸಂಸ್ಥೆಗಳ ಜೊತೆ ಒಪ್ಪಂದ ಮಾಡಿಕೊಂಡು, ಅಲ್ಲಿರುವ ತಜ್ಞರ ಸೇವೆಯನ್ನೂ ಪಡೆಯಲಾಗುತ್ತದೆ. ಸಂವಹನ ಕೌಶಲ, ಸಂದರ್ಶನ ಎದುರಿಸಲು ಬೇಕಾಗುವ ಕೌಶಲದ ಬಗ್ಗೆಯೂ ತಿಳಿಸಿಕೊಡಲಾಗುತ್ತದೆ.

ಹೊಸ ಕೋರ್ಸ್: ಬಿ.ಇಡಿ, ಎಂ.ಇಡಿ, ಬಿ.ಪಿಇಡಿ, ಎಂ.ಪಿಇಡಿ ಕೋರ್ಸ್‌ಗಳನ್ನು ಮುಂದಿನ ವರ್ಷದಿಂದ ಆರಂಭಿಸಲಾಗುತ್ತದೆ. ಇದಲ್ಲದೆ, ಎಲ್‌ಎಲ್‌ಎಂ (ಸಂಜೆ ವೇಳೆ) ಕೋರ್ಸ್ ಆರಂಭಿಸಲು ಅನುಮತಿ ಕೇಳಲಾಗಿದೆ. ಒಪ್ಪಿಗೆ ದೊರೆತರೆ ಈ ವರ್ಷವೇ ಶುರು ಮಾಡಲಾಗುತ್ತದೆ. ವಿಶ್ವವಿದ್ಯಾಲಯದಲ್ಲಿ ಸದ್ಯ ಕಾನೂನು ಕೋರ್ಸ್‌ಗಳು ಇಲ್ಲ. ಮೂರು ಹಾಗೂ ಐದು ವರ್ಷದ ಎಲ್‌ಎಲ್‌ಬಿ ಕೋರ್ಸ್ ಆರಂಭಿಸಲು ಅನುಮತಿ ನೀಡುವಂತೆ ದೂರಶಿಕ್ಷಣ ಮುಂದಿನ ವರ್ಷ ಕೋರ್ಸ್ ಕೋರಿ ಬಾರ್ ಕೌನ್ಸಿಲ್ ಆಫ್ ಇಂಡಿಯಾಗೆ ಪ್ರಾರಂಭಿಸಲಾಗುವುದು ಎಂದು ಪತ್ರ ಬರೆಯಲಾಗುವುದು. ಒಪ್ಪಿಗೆ ರಮೇಶ್ ಅವರು ತಿಳಿಸಿದರು.

ಮುಖ್ಯಾಂಶಗಳು

- ಬಾಗಲೂರಿನ ಸ್ನಾತಕೋತ್ತರ ಕೇಂದ್ರಕ್ಕೆ 20 ಎಕರೆ ನೀಡಲು ಮನವಿ
- ಬೇಡಿಕೆ ಆಧರಿಸಿ ಹೊಸ ಕೋರ್ಸ್‌ಗಳ ಆರಂಭ
- ಸ್ನಾತಕೋತ್ತರ ಜೊತೆಗೆ ಪದವಿ ಕೋರ್ಸ್‌ಗಳ ಆರಂಭಕ್ಕೂ ಕ್ರಮ

ಕೃತಕ ಬುದ್ಧಿಮತ್ತೆಗೆ ಒತ್ತು

ಪ್ರೊ.ಟಿ. ರಮೇಶ್

ಪದವಿ ಹಂತದಲ್ಲೇ ಕೃತಕ ಬುದ್ಧಿಮತ್ತೆ ಮತ್ತು ಮಷಿನ್ ಲರ್ನಿಂಗ್‌ಗೆ ಒತ್ತು ನೀಡಲು ವಿಶ್ವವಿದ್ಯಾಲಯ ನಿರ್ಧರಿಸಿದೆ. ಸದ್ಯಕ್ಕೆ ಬಿಸಿಎಗೆ ಕೃತಕ ಬುದ್ಧಿಮತ್ತೆ ವಿಷಯಕ್ಕೆ ಅವಕಾಶ ಕಲ್ಪಿಸಲಾಗಿದೆ. ಬೇರೆ ಕೋರ್ಸ್‌ಗಳಲ್ಲೂ ಕೃತಕ ಬುದ್ಧಿಮತ್ತೆ ವಿಷಯಕ್ಕೆ ಆದ್ಯತೆ ನೀಡಲಾಗುವುದು ಎಂದು ಕುಲಪತಿ ಪ್ರೊ.ರಮೇಶ್ ತಿಳಿಸಿದರು.

ವಿಶ್ವವಿದ್ಯಾಲಯದ ಅಧೀನದಲ್ಲಿ 228 ಪದವಿ ಕಾಲೇಜುಗಳಿವೆ. ಪದವಿ ಹಂತದಲ್ಲೇ ಕೃತಕ ಬುದ್ಧಿಮತ್ತೆ ಕೋರ್ಸ್ ಪರಿಚಯಿಸುವ ಮೂಲಕ ಯುವಕರಿಗೆ ಹೆಚ್ಚು ಉದ್ಯೋಗಾವಕಾಶಗಳು ಲಭ್ಯವಾಗುವಂತೆ ಮಾಡಲಾಗುವುದು. ಈ ವರ್ಷ ನಡೆದ ಕ್ಯಾಂಪಸ್ ಸಂದರ್ಶನದಲ್ಲಿ 300ಕ್ಕೂ ಅಧಿಕ ಮಂದಿಗೆ ಉದ್ಯೋಗ ದೊರೆತಿದೆ. ಮುಂದಿನ ವರ್ಷ ಈ ಸಂಖ್ಯೆಯನ್ನು ದ್ವಿಗುಣಗೊಳಿಸಲಾಗುತ್ತದೆ. ಸಂವಹನ ಕ್ಷೇತ್ರದಲ್ಲಿ ವಿದ್ಯಾರ್ಥಿಗಳು ಹಿಂದೆ ಇರುವುದನ್ನು ಕಂಪನಿಗಳು ಗುರುತಿಸಿವೆ. ಇದನ್ನು ಗಮನದಲ್ಲಿಟ್ಟುಕೊಂಡು ಸಂವಹನ ಕೌಶಲ ಹೆಚ್ಚಿಸಲು ಈ ವರ್ಷ ಒತ್ತು ನೀಡಲು ತೀರ್ಮಾನಿಸಲಾಗಿದೆ.

ವಿದೇಶಿ ಭಾಷೆ ಕಲಿತವರಿಗೆ ಉದ್ಯೋಗ

ವಿಶ್ವವಿದ್ಯಾಲಯದಲ್ಲಿ ಇಟಾಲಿಯನ್, ಸ್ಪ್ಯಾನಿಷ್, ಜರ್ಮನ್ ಸೇರಿದಂತೆ ಹಲವು ವಿದೇಶಿ ಭಾಷಾ ಕೋರ್ಸ್‌ಗಳಿವೆ. ಈ ಕೋರ್ಸ್‌ಗಳನ್ನು ಮಾಡಿದವರಿಗೆ ಉದ್ಯೋಗಾವಕಾಶ ಕಲ್ಪಿಸಲು ವಿವಿಧ ದೇಶಗಳ ಕಾನ್ಸುಲೇಟ್‌ಗಳ ಜೊತೆ ಒಪ್ಪಂದ ಮಾಡಿಕೊಳ್ಳಲಾಗುವುದು ಎಂದು ರಮೇಶ್ ಹೇಳಿದರು.

ಈ ನಿಟ್ಟಿನಲ್ಲಿ ಮಾತುಕತೆ ನಡೆದಿದ್ದು ಜಪಾನ್‌ನ ನಿಯೋಗ ಸದ್ಯದಲ್ಲೇ ವಿಶ್ವವಿದ್ಯಾಲಯಕ್ಕೆ ಭೇಟಿ ನೀಡಲಿದೆ. ಜಪಾನೀಸ್ ಭಾಷೆ ಕಲಿತ ಸುಮಾರು 100 ಮಂದಿಗೆ ಈ ವರ್ಷ ಉದ್ಯೋಗ ಕಲ್ಪಿಸುವ ಸಂಬಂಧ ಒಪ್ಪಂದ ಮಾಡಿಕೊಳ್ಳಲಾಗುವುದು. ಇದೇ ರೀತಿ ವಿದೇಶಿ ಭಾಷೆಗಳನ್ನು ಕಲಿತವರಿಗೆ ಬೇರೆ ಬೇರೆ ದೇಶಗಳಲ್ಲಿ ಉದ್ಯೋಗ ಅವಕಾಶಗಳು ಲಭ್ಯ ಇವೆ. ಹೀಗಾಗಿ ಮಾತುಕತೆ ಸಂವಹನ ಕೌಶಲ ಕಲಿಸುವ ಮೂಲಕ ವಿದ್ಯಾರ್ಥಿಗಳನ್ನು ಉದ್ಯೋಗಕ್ಕೆ ಸಜ್ಜುಗೊಳಿಸಲಾಗುವುದು ಎಂದರು.

ಸುದ್ದಿ ವೈವಿಧ್ಯಕ್ಕೆ prajavani.net ಗೆ ಭೇಟಿ ಮಾಡಿ

ನಿಧನ ವಾರ್ತೆ

ಹೇಮಲತಾ ಜಿ.

ಬೆಂಗಳೂರು: 'ಪ್ರಜಾವಾಣಿ' ಪತ್ರಿಕೆಯ ರಾಜಾಜಿನಗರದ ವಿತರಕರಾದ ಹೇಮಲತಾ ಜಿ. (ನಾಗರತ್ನ) ಅವರು ಸೋಮವಾರ ಹೃದಯಾಘಾತದಿಂದ ನಿಧನರಾದರು. ಕುರುಬರಹಳ್ಳಿ ನಿವಾಸಿ ಆಗಿರುವ ಹೇಮಲತಾ 30 ವರ್ಷಗಳಿಂದ ಪತ್ರಿಕೆ ವಿತರಕರಾಗಿ ಕೆಲಸ ಮಾಡುತ್ತಿದ್ದರು. ಅವರಿಗೆ 52 ವರ್ಷ ವಯಸ್ಸಾಗಿತ್ತು. ಮೃತರಿಗೆ ಪತಿ ಹಾಗೂ ಇಬ್ಬರು ಪುತ್ರರು ಇದ್ದಾರೆ.

'ದಲಿತರಿಗೆ ಮೀಸಲಿಟ್ಟ ಸ್ಮಶಾನ ತೆರವುಗೊಳಿಸಿ'

ಕೆ.ಆರ್.ಪುರ: ಬೆಂಗಳೂರು ಪೂರ್ವ ತಾಲ್ಲೂಕಿನಲ್ಲಿ ದಲಿತರಿಗೆ ಮೀಸಲಿಟ್ಟಿದ್ದ ಸ್ಮಶಾನ ಜಾಗ ತೆರವುಗೊಳಿಸುವಂತೆ ಆಗ್ರಹಿಸಿ ಪ್ರಜಾ ವಿಮೋಚನಾ ಸಮಿತಿ (ಸಾಮಾಜಿಕ-ನ್ಯಾಯ) ಕಾರ್ಯಕರ್ತರು ತಹಶೀಲ್ದಾರ್‌ಗೆ ಮನವಿ ಮಾಡಿದರು.

ರಾಜ್ಯಾಧ್ಯಕ್ಷ ಯಡವನಹಳ್ಳಿ ಕೃಷ್ಣಪ್ಪ, 'ಬೆಂಗಳೂರು ಪೂರ್ವ ತಾಲ್ಲೂಕಿನಲ್ಲಿ ದಲಿತ ಸಮುದಾಯಕ್ಕೆ ಮೀಸಲಿರಿಸಿರುವ ಸ್ಮಶಾನವನ್ನು ಕೆಲವು ಬಲಾಢ್ಯರು ಒತ್ತುವರಿ ಮಾಡಿಕೊಂಡಿದ್ದಾರೆ. ಒತ್ತುವರಿ ಜಾಗವನ್ನು ಕೂಡಲೇ ತೆರವುಗೊಳಿಸಬೇಕು' ಎಂದು ಒತ್ತಾಯಿಸಿದರು.

ಪ್ರತಿಭಟನೆ...
ಕರ್ನಾಟಕ ರಾಜ್ಯ ಪೌರ ನೀರು ಸರಬರಾಜು ನೌಕರರ ಮಹಾ ಸಂಘ ಸದಸ್ಯರು ನಗರದ ಸ್ವಾತಂತ್ರ್ಯ ಉದ್ಯಾನದಲ್ಲಿ ಸೋಮವಾರ ವಿಶೇಷ ನೇರನೇಮಕಾತಿ/ ನೇರ ಪಾವತಿ ಮತ್ತು ಇತರ ಬೇಡಿಕೆಗಳನ್ನು ಈಡೇರಿಸುವಂತೆ ಪ್ರತಿಭಟನೆ ನಡೆಸಿದರು
ಪ್ರಜಾವಾಣಿ ಚಿತ್ರ

ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ ನಿಯಮಿತ

(ಸಿಐಎನ್: ಯು40109ಕೆಎ1999ಎಸ್‌ಜಿಸಿ025521)
ಸಂಖ್ಯೆ: ಮು.ಪ್ರ.ವ್ಯ(ತಾ)/ ಉ.ಪ್ರ.ವ್ಯ(ಎಪಿಸಿಸಿ&ಪ್ರೊ)/ಕಾನಿಇಂ-ಪ್ರೊ/ಸ.ಕಾ.ನಿ.ಇಂ-1/ 2025-26/3608-626 ದಿನಾಂಕ: 06.10.2025

ಸಂಕ್ಷಿಪ್ತ ಅಲ್ಪಾವಧಿ ಟೆಂಡರ್ ಪ್ರಕಟಣೆ (ಮರು ಟೆಂಡರ್)
(ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳ ಪೋರ್ಟಲ್ ಮೂಲಕ ಮಾತ್ರ)

ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ ನಿಯಮಿತವು ಈ ಕೆಳಕಂಡ ವಿಚಾರಣೆ ಸಂಖ್ಯೆಗಳ ಮೂಲಕ ಕೆಳಕಂಡ ಕಾಮಗಾರಿಗಳಿಗೆ **ಸಂಯೋಜಿತ ಪ್ಯಾಕೇಜ್ ಅಡಿಯಲ್ಲಿ**, ಎಲೆಕ್ಟ್ರಾನಿಕ್ ವಿಧಾನದ ಮೂಲಕ ಬಿಡ್‌ಗಳನ್ನು ಮರು ಆಹ್ವಾನಿಸಿದೆ:

ವಿಚಾರಣಾ ಸಂಖ್ಯೆ ಮತ್ತು ಕಾಮಗಾರಿ ವಿವರ
1. ಕವಿಪ್ರನಿನಿ/2025-26/ಎಸ್‌ಎಸ್/ವರ್ಕ್_ಇಂಡೆಂಟ್2831
ಸಂಯೋಜಿತ ಪ್ಯಾಕೇಜ್ ಅಡಿಯಲ್ಲಿ, **ಕಾಮಗಾರಿ-ಎ:** ತುಮಕೂರು ಜಿಲ್ಲೆಯ ಕುಣಿಗಲ್ ತಾಲ್ಲೂಕಿನ **66/11ಕೆವಿ ಕೆಂಪನಹಳ್ಳಿ ಉಪಕೇಂದ್ರದಲ್ಲಿ 1X8ಎಂವಿಎ, 66/11ಕೆವಿ ವಿದ್ಯುತ್ ಪರಿವರ್ತಕ-1ನ್ನು 1X20ಎಂವಿಎ, 66/11ಕೆವಿ** ವಿದ್ಯುತ್ ಪರಿವರ್ತಕವನ್ನಾಗಿ ಬದಲಾಯಿಸುವ ಕಾಮಗಾರಿ. **ಕಾಮಗಾರಿ-ಬಿ:** ದಾವಣಗೆರೆ ಜಿಲ್ಲೆಯ ಮತ್ತು ತಾಲ್ಲೂಕಿನ **66/11ಕೆವಿ ಅನಗೋಡು ಉಪಕೇಂದ್ರದಲ್ಲಿ 1X12.5ಎಂವಿಎ, 66/11ಕೆವಿ ವಿದ್ಯುತ್ ಪರಿವರ್ತಕ-1ನ್ನು 1X20ಎಂವಿಎ, 66/11ಕೆವಿ** ವಿದ್ಯುತ್ ಪರಿವರ್ತಕವನ್ನಾಗಿ ಬದಲಾಯಿಸುವ ಕಾಮಗಾರಿ. **ಕಾಮಗಾರಿ-ಸಿ:** ದಾವಣಗೆರೆ ಜಿಲ್ಲೆಯ ಮತ್ತು ತಾಲ್ಲೂಕಿನ **66/11ಕೆವಿ ಮಾಯಕೊಂಡ ಉಪಕೇಂದ್ರದಲ್ಲಿ 2X12.5ಎಂವಿಎ, 66/11ಕೆವಿ** ವಿದ್ಯುತ್ ಪರಿವರ್ತಕಗಳನ್ನು **2X20ಎಂವಿಎ, 66/11ಕೆವಿ** ವಿದ್ಯುತ್ ಪರಿವರ್ತಕಗಳನ್ನಾಗಿ ಬದಲಾಯಿಸುವ ಕಾಮಗಾರಿ. **ಕಾಮಗಾರಿ-ಡಿ:** ದಾವಣಗೆರೆ ಜಿಲ್ಲೆಯ ಹೊನ್ನಾಳಿ ತಾಲ್ಲೂಕಿನ **66/11ಕೆವಿ ಸಾಸುವೇಹಳ್ಳಿ ಉಪಕೇಂದ್ರದಲ್ಲಿ 2X12.5ಎಂವಿಎ, 66/11ಕೆವಿ** ವಿದ್ಯುತ್ ಪರಿವರ್ತಕಗಳನ್ನು **2X20ಎಂವಿಎ, 66/11ಕೆವಿ** ವಿದ್ಯುತ್ ಪರಿವರ್ತಕಗಳನ್ನಾಗಿ ಬದಲಾಯಿಸುವ ಕಾಮಗಾರಿ. **ಕಾಮಗಾರಿ-ಇ:** ದಾವಣಗೆರೆ ಜಿಲ್ಲೆಯ ಮತ್ತು ತಾಲ್ಲೂಕಿನ **66/11ಕೆವಿ ಮೆಳ್ಳೆಕಟ್ಟೆ ಉಪಕೇಂದ್ರದಲ್ಲಿ 2X12.5ಎಂವಿಎ, 66/11ಕೆವಿ** ವಿದ್ಯುತ್ ಪರಿವರ್ತಕಗಳನ್ನು **2X20ಎಂವಿಎ, 66/11ಕೆವಿ** ವಿದ್ಯುತ್ ಪರಿವರ್ತಕಗಳನ್ನಾಗಿ ಬದಲಾಯಿಸುವ ಕಾಮಗಾರಿಗಳನ್ನು **ಸಂಪೂರ್ಣ ಟರ್ನ್‌ಕೀ ಆಧಾರದ ಮೇಲೆ** ಎಲ್ಲಾ ಉಪಕರಣಗಳು/ಸಾಮಗ್ರಿಗಳ ಸರಬರಾಜು ಪೂರೈಕೆ ಮತ್ತು ಸ್ಥಾಪನೆ (ಕಳಚಿಹಾಕುವಿಕೆ ಮತ್ತು ಸಿವಿಲ್ ಕಾಮಗಾರಿಯನ್ನು ಒಳಗೊಂಡಂತೆ), ಪರೀಕ್ಷಿಸುವುದು ಮತ್ತು ಕಾರ್ಯಾರಂಭಗೊಳಿಸುವುದು.
2. ಕವಿಪ್ರನಿನಿ/2025-26/ ಎಸ್‌ಎಸ್/ವರ್ಕ್_ಇಂಡೆಂಟ್2832
ಸಂಯೋಜಿತ ಪ್ಯಾಕೇಜ್ ಅಡಿಯಲ್ಲಿ, **ಕಾಮಗಾರಿ-ಎ:** ತುಮಕೂರು ಜಿಲ್ಲೆಯ ತಿಪಟೂರು ತಾಲ್ಲೂಕಿನ **110/11ಕೆವಿ ಹುಣಸೆಘಟ್ಟ ಉಪಕೇಂದ್ರದಲ್ಲಿ** 2X10ಎಂವಿಎ, 110/33-11 ಕೆವಿ ವಿದ್ಯುತ್ ಪರಿವರ್ತಕಗಳನ್ನು **2X20 ಎಂವಿಎ, 110/33-11ಕೆವಿ** ವಿದ್ಯುತ್ ಪರಿವರ್ತಕಗಳನ್ನಾಗಿ ಬದಲಾಯಿಸುವ ಕಾಮಗಾರಿ. **ಕಾಮಗಾರಿ-ಬಿ:** ತುಮಕೂರು ಜಿಲ್ಲೆಯ ತಿಪಟೂರು ತಾಲ್ಲೂಕಿನಲ್ಲಿರುವ **110/11ಕೆವಿ ಕರಡಿ ಉಪಕೇಂದ್ರದಲ್ಲಿ** ಹೆಚ್ಚುವರಿ 1X10ಎಂವಿಎ, 110/33-11ಕೆವಿ ವಿದ್ಯುತ್ ಪರಿವರ್ತಕ ಹಾಗೂ ಸಂಬಂಧಿತ 11 ಕೆವಿ ಸ್ವಿಚ್‌ಗೇರ್‌ಗಳನ್ನು ಒದಗಿಸುವ ಕಾಮಗಾರಿ. **ಕಾಮಗಾರಿ-ಸಿ:** ತುಮಕೂರು ಜಿಲ್ಲೆಯ ತಿಪಟೂರು ತಾಲ್ಲೂಕಿನಲ್ಲಿರುವ **110/11 ಕೆವಿ ಗುಂಗುರುಮಲೆ ಉಪಕೇಂದ್ರದಲ್ಲಿ** ಹೆಚ್ಚುವರಿ 1X10 ಎಂವಿಎ 110/33-11ಕೆವಿ ವಿದ್ಯುತ್ ಪರಿವರ್ತಕ ಹಾಗೂ ಸಂಬಂಧಿತ 11 ಕೆವಿ ಸ್ವಿಚ್‌ಗೇರ್‌ಗಳನ್ನು ಒದಗಿಸುವ ಕಾಮಗಾರಿ. **ಕಾಮಗಾರಿ-ಡಿ:** ತುಮಕೂರು ಜಿಲ್ಲೆಯ ಗುಬ್ಬಿ ತಾಲ್ಲೂಕಿನಲ್ಲಿರುವ **110/11ಕೆವಿ ಕೆ.ಜಿ. ಟೆಂಪಲ್ ಉಪಕೇಂದ್ರದಲ್ಲಿ** 1X10ಎಂವಿಎ, 110/33-11ಕೆವಿ ವಿದ್ಯುತ್ ಪರಿವರ್ತಕವನ್ನು **1X20ಎಂವಿಎ, 110/33-11ಕೆವಿ** ವಿದ್ಯುತ್ ಪರಿವರ್ತಕವನ್ನಾಗಿ ಬದಲಾಯಿಸುವ ಕಾಮಗಾರಿ. **ಕಾಮಗಾರಿ-ಇ:** ತುಮಕೂರು ಜಿಲ್ಲೆಯ ತಿಪಟೂರು ತಾಲ್ಲೂಕಿನಲ್ಲಿರುವ **110/11ಕೆವಿ ಕೆರೆಗೋಡಿ ಉಪಕೇಂದ್ರದಲ್ಲಿ** ಹೆಚ್ಚುವರಿ **1X10ಎಂವಿಎ, 110/33-11ಕೆವಿ** ವಿದ್ಯುತ್ ಪರಿವರ್ತಕ ಹಾಗೂ ಸಂಬಂಧಿತ 11 ಕೆವಿ ಸ್ವಿಚ್‌ಗೇರ್‌ಗಳನ್ನು ಒದಗಿಸುವ ಕಾಮಗಾರಿ. **ಭಾಗಶಃ ಟರ್ನ್‌ಕೀ ಆಧಾರದ ಮೇಲೆ** ಎಲ್ಲಾ ಉಪಕರಣಗಳು/ಸಾಮಗ್ರಿಗಳ ಸರಬರಾಜು (1X10 ಎಂವಿಎ 110/33-11ಕೆವಿ ವಿದ್ಯುತ್ ಪರಿವರ್ತಕ ಮತ್ತು 11ಕೆವಿ ಸ್ವಿಚ್‌ಗೇರ್ ಪೂರೈಕೆಯನ್ನು ಹೊರತುಪಡಿಸಿ) ಮತ್ತು ಎಲ್ಲಾ ಉಪಕರಣಗಳು/ಸಾಮಗ್ರಿಗಳ ಸ್ಥಾಪನೆ (ಕಳಚಿಹಾಕುವಿಕೆ ಮತ್ತು ಸಿವಿಲ್ ಕಾಮಗಾರಿಯನ್ನು ಒಳಗೊಂಡಂತೆ), ಪರೀಕ್ಷಿಸುವುದು ಮತ್ತು ಕಾರ್ಯಾರಂಭಗೊಳಿಸುವುದು.

ಬಿಡ್‌ಗಳನ್ನು ಕೆಪಿಪಿ ಪೋರ್ಟಲ್ ಮೂಲಕ ಮಾತ್ರ ಸ್ವೀಕರಿಸಲಾಗುವುದು. ಇ-ಟೆಂಡರಿಂಗ್ ಪ್ರಕ್ರಿಯೆಯಲ್ಲಿ ಭಾಗವಹಿಸುವುದರ ಕುರಿತಾದ ವಿವರಗಳನ್ನು ಕವಿಪ್ರನಿನಿಯ ವೆಬ್‌ಸೈಟ್ **https://kptcl.karnataka.gov.in** ನ ಹೈಪರ್‌ಲಿಂಕ್ 'ಇ ಪ್ರೊಕ್ಯೂರ್‌ಮೆಂಟ್ ಕವಿಪ್ರನಿನಿ' ಅಥವಾ **https://kppp.karnataka.gov.in** ನಲ್ಲಿ ಲಾಗಿನ್ ಆಗಿ **ದಿನಾಂಕ 13.10.2025 ರಂದು 15.00 ಗಂಟೆ** ಅಥವಾ ನಂತರದಿಂದ ಪಡೆಯಬಹುದು. ಬಿಡ್ ಸಲ್ಲಿಕೆಗೆ ಕೊನೆಯ **ದಿನಾಂಕ 28.10.2025 15.00 ಗಂಟೆ. ಬಿಡ್ ಸಲ್ಲಿಕೆಯ ಕೊನೆಯ ದಿನಾಂಕವನ್ನು ವಿಸ್ತರಿಸಿದಲ್ಲಿ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳ ಪೋರ್ಟಲ್‌ನಲ್ಲಿ ತಿಳಿಸಲಾಗುವುದು.** ಇದಕ್ಕೆ ಸಂಬಂಧಿಸಿದಂತೆ ಇತರೆ ಹೆಚ್ಚಿನ ಮಾಹಿತಿಗಳು ಬೇಕಾದಲ್ಲಿ ಕೆಳಸಹಿದಾರರ ಕಛೇರಿಯಿಂದ ಕಛೇರಿ ವೇಳೆಯಲ್ಲಿ ಸಂಪರ್ಕಿಸಿ ಪಡೆಯ ಬಹುದಾಗಿದೆ. ಬಿಡ್ಡುದಾರರು ಬಿಡ್‌ಗಳನ್ನು ಸಲ್ಲಿಸುವ ಕೊನೆಯ ದಿನಾಂಕದ ಮುನ್ನ ಪ್ರಕಟಿಸುವ ಎಲ್ಲಾ ತಿದ್ದುಪಡಿಗಳು/ಸೇರ್ಪಡೆಗಳನ್ನು ಗಮನಿಸತಕ್ಕದ್ದು.

ಸಹಿ/-, ಮುಖ್ಯ ಪ್ರಧಾನ ವ್ಯವಸ್ಥಾಪಕರು (ತಾಂತ್ರಿಕ)
ಕವಿಪ್ರನಿನಿ, ನಿಗಮ ಕಾರ್ಯಾಲಯ, 2ನೇ ಮಹಡಿ, ಕಾವೇರಿ ಭವನ, ಬೆಂಗಳೂರು-560 009.

ಬೆಂಗಳೂರು ಕೇಂದ್ರ ನಗರ ಪಾಲಿಕೆ
ಕಾರ್ಯಪಾಲಕ ಅಭಿಯಂತರರ ಕಛೇರಿ, ಶಾಂತಿನಗರ ವಿಭಾಗ, 9ನೇ ಮಹಡಿ, ಪಿಯು ಕಟ್ಟಡ, ಬೆಂಗಳೂರು-560001

ನಂ.: ಕಾಪಾಅ/ಶಾನ/ಇಒಐ-01/2ನೇ ಕರೆ/2025-26 ದಿನಾಂಕ : 06.10.2025

ಆಸಕ್ತಿ ವ್ಯಕ್ತಪಡಿಸುವಿಕೆ [ಇಒಐ]

ನಾಲ್ಕು [4] ಹೊಸದಾಗಿ ರಚಿತವಾಗಿರುವ ನಗರಪಾಲಿಕೆಗಳಿಗೆ [ಪೂರ್ವ, ಪಶ್ಚಿಮ, ದಕ್ಷಿಣ ಮತ್ತು ಉತ್ತರ] ಅಗತ್ಯ ಪೂರೈಕೆಗಳೊಂದಿಗೆ ಗ್ರೇಟರ್ ಬೆಂಗಳೂರು ಪ್ರಾಧಿಕಾರದ ಮುಖ್ಯ ಆಡಳಿತ ಕಚೇರಿ ಕಟ್ಟಡದ [ಜಿಬಿಎ] ವಿನ್ಯಾಸಕ್ಕಾಗಿ ಅರ್ಹ ವಾಸ್ತುಶಿಲ್ಪ/ಅರ್ಹ ಸಂಸ್ಥೆಗಳಿಂದ ಆಸಕ್ತಿ ವ್ಯಕ್ತಪಡಿಸುವಿಕೆಯನ್ನು ಆಹ್ವಾನಿಸಲಾಗಿದೆ.

ಸಂಸ್ಥೆಗಳು ಸಲ್ಲಿಸುವ ವಿನ್ಯಾಸಗಳು, ಸಮಗ್ರ ವಿಧಾನ, ಹಲವು-ಶಿಸ್ತುಬದ್ಧ ಚಟುವಟಿಕೆಗಳು ಮತ್ತು ಸಮರ್ಥನೀಯತೆಯ ಉತ್ತೇಜನವನ್ನು ಹೊಂದಿರಬೇಕು. ಸಲ್ಲಿಸುವ ವಿನ್ಯಾಸಗಳು ಉದ್ದೇಶಿತ ಆಡಳಿತಾತ್ಮಕ ನಗರಸಭೆ ಕಟ್ಟಡಗಳು ಜಿಬಿಎ ವ್ಯಾಪ್ತಿ ಸಮಗ್ರತೆಯನ್ನು ಒಳಗೊಂಡಿರಬೇಕು. ವಿನ್ಯಾಸಗಳು ಕಡ್ಡಾಯವಾಗಿ ಈ ಕೆಳಕಂಡವುಗಳನ್ನು ಒಳಗೊಂಡಿರತಕ್ಕದ್ದು.

- **ಸ್ಟೇಟ್-ಆಫ್-ದ-ಆರ್ಟ್ ವಿನ್ಯಾಸ**
- **ವಿಶೇಷ ಮಾದರಿ ಮತ್ತು ಸ್ಥಳೀಯ**
- **ಸಂಸ್ಕೃತಿಯ ಮಿಶ್ರಣದ ಸೊಬಗಿನಿಂದ ಕೂಡಿರಬೇಕು.**
- **ಜಲ ನಿರ್ವಹಣೆ, ತ್ಯಾಜ್ಯ ಸಂಸ್ಕರಣೆ,** ಲ್ಯಾಂಡ್‌ಸ್ಕೇಪ್ ವಾಸ್ತುಶಿಲ್ಪ, ಮತ್ತು ಇಂಧನ ಸಮರ್ಥತೆಗೆ ಒತ್ತು ನೀಡುವುದರೊಂದಿಗೆ ಪರಿಸರ ಸ್ನೇಹಿ ನಿಲುವನ್ನು ಹೊಂದಿರುವುದು.

ಸಲ್ಲಿಸುವ ಆಸಕ್ತಿ ವ್ಯಕ್ತಪಡಿಸುವಿಕೆ - ಆಸಕ್ತ ವಾಸ್ತುಶಿಲ್ಪಿಗಳು/ಸಂಸ್ಥೆಗಳು ಅವರ ವಿಸ್ತೃತ ಸ್ವ-ವಿವರಗಳು ಈ ಕೆಳಕಂಡ ವಿವರಣೆಗಳೊಂದಿಗೆ ಸಲ್ಲಿಸುವುದು:
(1). ಸಂಸ್ಥೆಯ ಪ್ರೊಫೈಲ್ (2). ನೋಂದಣಿ ಪ್ರಮಾಣಪತ್ರಗಳು [ಐ.ಐ.ಎ, ಸಿಒಎ, ಬೆಂಗಳೂರು ನಗರ ಪಾಲಿಕೆ (3). ಮೇಲ್ಕಂಡಂತೆ ತದ್ರೂಪಿ ಕಾಮಗಾರಿಗಳನ್ನು ನಿರ್ವಹಿಸಿರುವ ಅನುಭವ (4), ಉದ್ದೇಶಿತ ರಚನಾತ್ಮಕ ತಂಡ (5), ಸಮರ್ಥತೆ ಮತ್ತು ವಿನ್ಯಾಸ ತತ್ವಗಳ ಅನುಸಂಧಾನತೆ (6), ಅರ್ಜಿದಾರರ ವಿವರಗಳೊಂದಿಗೆ ಆಸಕ್ತಿ ಹೊಂದಿರುವ ಪತ್ರ (7). ತದ್ರೂಪಿ ವಿನ್ಯಾಸ ಕೆಲಸಗಳ ಸಮಗ್ರ ವರದಿ (8). ಅಪ್ರೋಚ್ ಮತ್ತು ಕಾರ್ಯನಿರ್ವಹಣೆ ವಿಧಾನವನ್ನು ಬಿಂಬಿಸುವ ತಾಂತ್ರಿಕ ಪ್ರಸ್ತಾವನೆ (9). ಮಹಾಯೋಜನೆ (10). ವಾಸ್ತುಶಿಲ್ಪಗಳ ವಿನ್ಯಾಸ (11). ರಚನಾತ್ಮಕ ವಿನ್ಯಾಸಗಳು (12) ಪಿಹೆಚ್ ಇ ವಿದ್ಯುತ್ ಲ್ಯಾಂಡ್ ಸ್ಕೇಪ್ ಇತ್ಯಾದಿಗಳನ್ನು ಒಳಗೊಂಡಂತೆ ಮೂಲಭೂತ ಸೌಕರ್ಯಗಳ ವಿನ್ಯಾಸಗಳು

ಆಯ್ಕೆ ಪ್ರಕ್ರಿಯೆ
1. ಆಸಕ್ತಿ ವ್ಯಕ್ತಪಡಿಸುವಿಕೆಯನ್ನು ಅನುಭವ, ಪರಿಕಲ್ಪನೆ/ಸೃಜನತೆ, ಹಿಂದಿನ ಕಾಮಗಾರಿಗಳು ಮತ್ತು ಉದ್ದೇಶಿತ ಕಾರ್ಯವಿಧಾನಗಳ ಆಧಾರದ ಮೇಲೆ ಮೌಲ್ಯಮಾಪನ ಮಾಡಲಾಗುವುದು.
2. ಕ್ರೋಢೀಕೃತ ಅಭ್ಯರ್ಥಿಗಳನ್ನು ಪ್ರಾತ್ಯಕ್ಷಿತೆಗೆ ಆಹ್ವಾನಿಸಲಾಗುವುದು.
3. ಅಂತಿಮ ಆಯ್ಕೆಗೊಳಿಸಿ ನಂತರ ತಿಳಿಸಲಾಗುವುದು.

ಅರ್ಹತಾ ಮಾನದಂಡಗಳು
ವಾಸ್ತುಶಿಲ್ಪಿಗಳು/ಸಂಸ್ಥೆಗಳು ಭಾರತೀಯ ವಾಸ್ತುಶಿಲ್ಪ ಸಂಸ್ಥೆಯ ಸದಸ್ಯರಾಗಿದ್ದು ಮತ್ತು ಬೆಂಗಳೂರು ನಗರಪಾಲಿಕೆಯಲ್ಲಿ ನೋಂದಣಿಯಾಗಿರಬೇಕು. ಮುಂಚೂಣಿಯಲ್ಲಿರುವ ವಾಸ್ತುಶಿಲ್ಪಿಗಳು ಕನಿಷ್ಠ 15 ವರ್ಷಗಳ ಅನುಭವ ಹೊಂದಿರಬೇಕು. ಮತ್ತು ಅನುಭವವನ್ನು ವಾಸ್ತುಶಿಲ್ಪ ಪರಿಷತ್ತಿನಲ್ಲಿ [ಸಿಓಎ] ನೋಂದಣಿಯಾದ ದಿನಾಂಕದಿಂದ ಆಸಕ್ತಿ ವ್ಯಕ್ತಪಡಿಸುವಿಕೆ ಸಲ್ಲಿಕೆಯ ದಿನಾಂಕದವರೆಗೆ ಪರಿಗಣಿಸಲಾಗುವುದು. ವಾಸ್ತುಸಿಲ್ಪಿಗಳು/ಸಂಸ್ಥೆಗಳು ಕಳೆದ 5 ವರ್ಷಗಳಲ್ಲಿ ಒಂದು ಕಟ್ಟಡದ ಕನಿಷ್ಠ ಮೊತ್ತ ರೂ. 25.00 ಕೋಟಿಗಳ ಯೋಜನೆಯ ವಿನ್ಯಾಸವನ್ನು ಮಾಡಿರತಕ್ಕದ್ದು. ಉದ್ದೇಶಿತ ಕಟ್ಟಡದ ಅಂದಾಜು ಪ್ರದೇಶವು ಸುಮಾರು 50 ರಿಂದ 60 ಸಾವಿರ ಚದರ ಅಡಿಗಳಷ್ಟಿರುತ್ತದೆ. ಪರಿಸರ ಸಮರ್ಥತೆ, ನೀರು ಮತ್ತು ತ್ಯಾಜ್ಯ ನಿರ್ವಹಣೆ, ಲ್ಯಾಂಡ್ ಸ್ಕೇಪ್ ವಿನ್ಯಾಸಗಳಲ್ಲಿ ಪರಿಣಿತರಾಗಿದ್ದು ಮತ್ತು ಇತರೆ ಪ್ರಚಲಿತ ಸಂಬಂಧಿತ ವಿದ್ಯಾಮಾನಗಳು ಕಡ್ಡಾಯವಾಗಿರಬೇಕು.
ವಾಸ್ತುಶಿಲ್ಪಿಗಳು/ಸಂಸ್ಥೆಗಳು, ಕಚೇರಿಯಲ್ಲಿ ಸಮಾಲೋಚಕ ಸೇವೆಗಳನ್ನು ಕಡ್ಡಾಯವಾಗಿ ಹೊಂದಿರಬೇಕು ಅಥವಾ ಸಮಾಲೋಚಕ ಅಭಿವೃದ್ಧಿ ಕೇಂದ್ರ (ಸಿಡಿಸಿ) ಅಡಿಯಲ್ಲಿ ಅರ್ಹ ಬಾಹ್ಯ ಸಮಾಲೋಚಕರೊಂದಿಗೆ ನೋಂದಾಯಿತರಾಗಿರಬೇಕು.

ವೇಳಾಪಟ್ಟಿ:
- ಬಿಡ್ ಪೂರ್ವಭಾವಿ ಸಭೆಯನ್ನು **ದಿನಾಂಕ: 13.10.2025ರ ಮಧ್ಯಾಹ್ನ 15:30 ಗಂಟೆಗೆ** ಮುಖ್ಯ ಅಭಿಯಂತರರ ಕಚೇರಿ (ಸಿವಿಆರ್ ವಲಯ) ಬಿಸಿಸಿಸಿ, 18ನೇ ಮಹಡಿ, ಪಬ್ಲಿಕ್ ಯುಟಿಲಿಟಿ ಕಟ್ಟಡ, ಬೆಂಗಳೂರು-560001 ಇಲ್ಲಿ ನಡೆಸಲಾಗುವುದು.
- ಆಸಕ್ತಿ ವ್ಯಕ್ತಪಡಿಸುವಿಕೆ ಸಲ್ಲಿಸಲು ಕೊನೇಯ **ದಿನಾಂಕ: 16.10.2025 ಸಂಜೆ 4:00 ಗಂಟೆಯವರೆಗೆ** ಕ್ರೋಢೀಕೃತ ಪಟ್ಟಿ ಮತ್ತು ಪ್ರಾಧ್ಯಕ್ಷಿತೆಯನ್ನು ಆಸಕ್ತಿ ವ್ಯಕ್ತಪಡಿಸುವಿಕೆ ಸಲ್ಲಿಕೆಯ ಕೊನೆಯ ದಿನಾಂಕದ ನಂತರ 5 ದಿನಗಳೊಳಗಾಗಿ **ಸಂಪರ್ಕ ಮಾಹಿತಿ:** ಕಾರ್ಯಪಾಲಕ ಅಭಿಯಂತರರು, ಶಾಂತಿನಗರ ವಿಭಾಗ, ಬಿಸಿಸಿಸಿ, 9ನೇ ಮಹಡಿ, ಪಿಯು ಕಟ್ಟಡ, ಎಂ ಜಿ ರಸ್ತೆ ಬೆಂಗಳೂರು.

ಷರತ್ತು ಮತ್ತು ನಿಬಂಧನೆಗಳು:
(1) ಸಲ್ಲಿಕೆಯಾಗುವ ಯಾವುದೇ ಅಥವಾ ಎಲ್ಲಾ ಅರ್ಜಿಗಳನ್ನು ಯಾವುದೇ ಕಾರಣ ನೀಡದೆ ಸ್ವೀಕರಿಸುವ ಅಥವಾ ತಿರಸ್ಕರಿಸುವ ಹಕ್ಕುಗಳು ಜಿಬಿಎ ಕಾಯ್ದಿರಿಸಿಕೊಂಡಿದೆ.
(2) ಅಂತಿಮ ವಿನ್ಯಾಸದ ಎಲ್ಲಾ ಭೌತಿಕ ಆಸ್ತಿ ಹಕ್ಕನ್ನು ಜಿಬಿಎ ಬಳಿಯಲ್ಲಿಯೇ ಇರುತ್ತದೆ.
(3) ಆಸಕ್ತಿ ವ್ಯಕ್ತಪಡಿಸುವಿಕೆಯನ್ನು ಸಿದ್ಧಪಡಿಸುವಾಗ ಅರ್ಜಿದಾರರು ವೆಚ್ಚ ಮಾಡುವ ಯಾವುದೇ ಮೊತ್ತವನ್ನು ಮರುಪಾವತಿಸಲಾಗುವುದಿಲ್ಲ.

ಸಹಿ/- ಕಾರ್ಯಪಾಲಕ ಅಭಿಯಂತರರು, ಶಾಂತಿನಗರ ವಿಭಾಗ

ಪ್ರಜಾವಾಣಿ **ಕ್ಲಾಸಿಫೈಡ್ಸ್** ಪ್ರತಿಯೊಬ್ಬರಿಗೂ ಉಪಯುಕ್ತ
email: classifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080 - 45557160 /161/ 162/ 163/ 164
9845114560 / 9731810277/ 9886213331

PUBLIC NOTICE

PUBLIC NOTICE
Public are hereby notified that my client proposes to purchase the Item No. 1 and 2 Properties described in the Schedule herein from **Smt. R. LAVANYA SRINIVAS,** Wife of Sri. R.Srinivas, Ramaiah Garden, Vidyasagara, Thanisandra Main Road, SRK Nagar Post, BANGALORE-560077, who has represented that she purchased the Site in Item No.1 from her vendors Smt. Uma and others in terms of a Sale Deed dated 04/06/2015, registered as Document No.1673/2015-16 in Book-I and stored in C.D. No. KRID 557 in the Office of the Sub- Registrar, Krishnarajapuram, Bangalore and acquired the Site in Item No.2 in terms of a Gift Deed dated 12/06/2003, registered as Document No.4831/2003-04 in Book-I and stored in C.D.No. 91 in the Office of the Photo Registrar, Krishnarajapuram , Bangalore (Urban) District, read with Deed of Rectification dated 23/04/2025, registered as Document No. BNS-1-01122-2025-26 in Book-I and stored in Centralized Data Cell in the Electronic Form in the Office of the Sub- Registrar, (Shivajinagara), Banasavadi, Bangalore executed by her father Sri.H. Ramappa and constructed a building which is utilized for running an educational institution/School . Any person or persons objecting for the proposed purchase and any persons who are having any right, title, interest or ownership or any other right or claim in the Schedule Property including by way of any agreement or otherwise shall lodge his/her/ their objections and/or claims with the undersigned along with supporting documentary evidence within **Fifteen (15) days** from the date of this publication. Further, claims or alleged interest or objections if any, which are not received within Fifteen (15) days from the date of publication of this notice shall be considered to have been consciously waived or abandoned for all intents and purposes and shall no longer be considered. Any objections and/or claims and/or response received thereafter will not be considered by my client and my client will proceed to purchase the Schedule Property as if there are no claims/objections.

SCHEDULE
Item No.1 All that Property being Site No.24 with building thereon presently bearing Municipal 5334/Sy.No.30/2/Site No.24 (EPID No.3421987588), situated in Municipal Ward No. 54 of Hoodi, Varanasi also known as Jinkethimmanahalli Village, Bidarahalli Hobli, Bangalore East Taluk and built on Site measuring East to West 40 feet and North to South 40 feet, totally measuring 1600 Sq. Ft., area and the Property is bounded by: **East by :** Road **West by :** Site No.23 **North by :** Road and **South by :** Site No.25
Item No.2 All that Property being Site with building thereon presently bearing Municipal No. Sy.No.108/30/2 (EPID No.2053182655), situated in Municipal Ward No. 54 of Hoodi, Varanasi also known as Jinkethimmanahalli Village, Bidarahalli Hobli, Bangalore East Taluk and built on Site measuring East to West 135 feet and North to South 165 feet, totally measuring 22275 Sq. Ft., area and the Property is bounded by: **East by :** Road **West by :** Private Property **North by :** Private Property and **South by :** Panchayath Road

Sri. Kusuma R. Muniraju,
Sri. Kusuma Kaushik
Advocates,
No. 101,"EDEN PARK"
No.20, Vittal Mallya Road,
Bangalore-01. **Tel: 080-22217971**
Place: Bangalore Dt: 06-10-2025

PROPERTY CORNER ಕ್ಲಾಸಿಫೈಡ್ಸ್

KAPL
(A Govt of India Enterprise)
Regd. & Corp. Office/Factory, Peenya, Bengaluru
EXPRESSION OF INTEREST
(EOI) is invited by **KAPL for carrying out AMC for 150 KLD ETP operations** as per KSPCB Guidelines from persons / companies having license, and also for AMC of **Garden maintenance.** Detailed Terms & Conditions are available in the company Website: **"www.kaplindia.com".** The due date for submission of Tender is **15.10.2025** upto 23:59 Hrs.

BUILDERS ESSENTIAL

Water Proofing

LEAKAGE... LEAKAGE... Old/New Building, Sump, Bathroom, Wallcrack, Skylight, Terrace Waterproofing done by New Technology- 9880916988

PERSONAL

Change of Name

CHANGE OF NAME
I, **Tarun George** S/o **Antony Jaison K G,** R/O No. 25, Kattikatt House, Tulips Layout, Gate #2, Hullahalli Gate, South Bingipura, Begur - Koppa Road, Bangalore - 560105 have changed my name to **Luke George** for all purposes vide affidavit dated 30/12/2021, sworn before notary P.P. Paul, Bengaluru.

CHANGE OF NAME
I JAMUNA SUBHAKARA REDDY W/o K C SUBHAKARA REDDY R/a #12B, 3rd Cross, Kempapura, Yemalur Post, Bangalore-560037 have changed my name to **N R JAMUNA** vide affidavit dated: 06.10.2025 before Notary B M Chandrashekhar, Bangalore.

I, GAGAN PRADHAN, Residing at Haladia Village, Sasanipada Post, Marsanghai, Kendrapara dist. Odisha-754213 have changed my name as GAGAN KUMAR PRADHAN, vide affidavit dated 3/10/2025 before Notary D.S. Satyanarayana, Bengaluru

CAUTION NOTICE
Readers are advised to make appropriate thorough enquiries before acting upon any advertisement. This newspaper does not vouch or subscribe to the claims and representations made by advertisers.
Advertisement Manager
The Printers (Mysore) Pvt. Ltd. Bengaluru

PUBLIC NOTICE
To Place your Classified Ads Contact
9731810277

ಕಾರು ‘ರಿವರ್ಸ್’ ತೆಗೆಯುವಾಗ ಮಗು ಸಾವು

ಕಾರು ಚಾಲಕನ ಬಂಧನ • ಮಗುವನ್ನು ಆಟವಾಡಲು ಬಿಟ್ಟು ಕೆಲಸದಲ್ಲಿ ಮಗ್ನರಾಗಿದ್ದ ತಾಯಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕಾಮಾಕ್ಷಿಪಾಳ್ಯ ಸಂಚಾರ ಪೊಲೀಸ್ ಠಾಣಾ ವ್ಯಾಪ್ತಿಯ ಗೊಲ್ಲರಹಟ್ಟಿಯ ಮನೆಯೊಂದರ ಎದುರು ನಿಲುಗಡೆ ಮಾಡಿದ್ದ ಕಾರನ್ನು ಹಿಂದಕ್ಕೆ ಚಾಲನೆ (ರಿವರ್ಸ್) ಮಾಡುವ ಸಂದರ್ಭದಲ್ಲಿ ಡಿಕ್ಕಿಯಾಗಿ 11 ತಿಂಗಳ ಮಗು ಮೃತಪಟ್ಟಿದೆ. ಸೋಮವಾರ ಬೆಳಿಗ್ಗೆ 9.45ರ ಸುಮಾರಿಗೆ ಘಟನೆ ನಡೆದಿದೆ.

ಗೊಲ್ಲರಹಟ್ಟಿ ನಿವಾಸಿ ಅಬ್ದುಲ್ಲಾ ಅವರ ಮಗು ಮಹಮ್ಮದ್ ಉಮರ್ ಫಾರೂಕ್ ಮೃತ ಮಗು. ಘಟನೆ ಸಂಬಂಧ ಕಾರು ಚಾಲಕ ಸ್ವಾಮಿ ಅವರನ್ನು ಪೊಲೀಸರು ಬಂಧಿಸಿದ್ದಾರೆ.

ಆರೋಪಿ ಸ್ವಾಮಿ ಅವರಿಗೆ ಸೇರಿದ ಮನೆಯಲ್ಲಿ ಅಬ್ದುಲ್ಲಾ ಅವರು ಬಾಡಿಗೆಗೆ ಇದ್ದಾರೆ. ಅಬ್ದುಲ್ಲಾ ಪತ್ನಿ ಮಗುವನ್ನು ಮನೆಯ ಎದುರು ಆಟವಾಡಲು ಬಿಟ್ಟು ಮನೆಯೊಳಗೆ ಕೆಲಸದಲ್ಲಿ ಮಗ್ನರಾಗಿದ್ದರು. ಆಗ ಮಗು ತೆವಳುತ್ತಾ ಕಾರಿನ ಬಳಿ ಹೋಯಿತು. ಕೆಲಸಕ್ಕೆ ಹೊರಟಿದ್ದ ಸ್ವಾಮಿ ಅವರು ಮಗುವನ್ನು ಗಮನಿಸದೆ ಕಾರು ಚಾಲನೆ ಮಾಡಿದರು. ಆಗ ಕಾರಿನ ಚಕ್ರ ಹರಿದು ಮಗು ಸ್ಥಳದಲ್ಲೇ ಮೃತಪಟ್ಟಿದೆ ಎಂದು ಪೊಲೀಸರು ಹೇಳಿದರು.

ಚಾಲಕ ಸ್ವಾಮಿಯ ನಿರ್ಲಕ್ಷ್ಯದಿಂದ ಈ ಘಟನೆ ನಡೆದಿದೆ. ಕಾರು ಜಪ್ತಿ ಮಾಡಲಾಗಿದೆ ಎಂದು ಪೊಲೀಸರು ಮಾಹಿತಿ ನೀಡಿದರು. ಕಾಮಾಕ್ಷಿಪಾಳ್ಯ ಸಂಚಾರ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

2023ರ ಡಿಸೆಂಬರ್‌ನಲ್ಲೂ ನಗರದಲ್ಲಿ ಇದೇ ರೀತಿಯ ಘಟನೆ ನಡೆದಿತ್ತು. ಕಸವನಹಳ್ಳಿಯಲ್ಲಿರುವ ಸಮೃದ್ಧಿ ಅಪಾರ್ಟ್‌ಮೆಂಟ್ ಸಮುಚ್ಚಯದ ಎದುರು ಕಾರಿನ ಚಕ್ರ ಮೈಮೇಲೆ ಹರಿದು ಮೂರು ವರ್ಷದ ಹೆಣ್ಣು ಮಗು ಅರ್ಬಿನಾ ಮೃತಪಟ್ಟಿತ್ತು. ಬೆಳ್ಳಂದೂರು ಠಾಣೆಯಲ್ಲಿ ಎಫ್‌ಐಆರ್ ದಾಖಲಾಗಿತ್ತು.

ಮಗು ಅರ್ಬಿನಾ, ಅಪಾರ್ಟ್‌ಮೆಂಟ್ ಸಮುಚ್ಚಯದ ಪ್ರವೇಶ ದ್ವಾರದಲ್ಲಿ ಆಟವಾಡುತ್ತಾ ಕುಳಿತಿತ್ತು. ಇದೇ ಸಂದರ್ಭದಲ್ಲಿ ಆರೋಪಿ ಚಾಲಕ ಸುಮನ್, ಪಾರ್ಕಿಂಗ್‌ನಲ್ಲಿದ್ದ ಕಾರು ಚಲಾಯಿಸಿಕೊಂಡು ರಸ್ತೆಯತ್ತ ಸಾಗಿದ್ದರು. ಪ್ರವೇಶ ದ್ವಾರದಲ್ಲಿದ್ದ ಮಗುವನ್ನು ಗಮನಿಸಿರಲಿಲ್ಲ. ಮಗುವಿನ ಮೇಲೆಯೇ ಕಾರಿನ ಚಕ್ರ ಹರಿದಿತ್ತು. ಸುಮನ್ ಸಹ ಸ್ಥಳದಿಂದ ಹೊರಟು ಹೋಗಿದ್ದರು. ಸಿ.ಸಿ.ಟಿ.ವಿ ಕ್ಯಾಮೆರಾ ದೃಶ್ಯ ಪರಿಶೀಲಿಸಿದಾಗ ಕಾರಿನ ಚಕ್ರ ಹರಿದು ಮಗು ಮೃತಪಟ್ಟಿದ್ದು ಗೊತ್ತಾಗಿತ್ತು.

‘ಎಚ್ಚರಿಕೆ ವಹಿಸಿ’

‘ಈ ರೀತಿಯ ಘಟನೆಗಳು ಆಗಾಗ್ಗೆ ನಡೆಯುತ್ತಿವೆ. ಮನೆಯ ಎದುರು ಅಥವಾ ರಸ್ತೆಯ ಬದಿಯಲ್ಲಿ ನಿಲುಗಡೆ ಮಾಡಿದ್ದ ಕಾರು ರಿವರ್ಸ್ ತೆಗೆಯುವ ಸಂದರ್ಭದಲ್ಲಿ ಚಾಲಕರು ಎಚ್ಚರಿಕೆ ವಹಿಸಬೇಕು. ಪುಟ್ಟ ಮಕ್ಕಳು ಹಿಂದೆ ನಿಂತಿರುವ ಸಾಧ್ಯತೆ ಇರುತ್ತದೆ. ಅಲ್ಲದೇ ಸಾಕು ಪ್ರಾಣಿಗಳು ಕಾರಿನ ಕೆಳಗೆ ಮಲಗಿರುತ್ತವೆ. ಕಾರು ಚಲಾಯಿಸುವ ಮುನ್ನ ಸುತ್ತಲೂ ಒಮ್ಮೆ ಪರಿಶೀಲಿಸಿದರೆ ಒಳ್ಳೆಯದು’ ಎಂದು ಪೊಲೀಸರು ಮನವಿ ಮಾಡಿದ್ದಾರೆ.

ಅಪರಾಧ ಸುದ್ದಿ

ಡ್ರಗ್ಸ್ ಮಾರಾಟ: ಆರೋಪಿ ಸೆರೆ

ಕುಶಾಲ್

ಕೆಂಪೇಗೌಡ ರಸ್ತೆಯ ಪಾದಚಾರಿ ಮಾರ್ಗದಲ್ಲಿ ಡ್ರಗ್ಸ್ ಮಾರಾಟ ಮಾಡುತ್ತಿದ್ದ ಆರೋಪಿಯನ್ನು ಹಲಸೂರು ಗೇಟ್ ಠಾಣೆಯ ಪೊಲೀಸರು ಬಂಧಿಸಿದ್ದಾರೆ.

ಲಕ್ಷ್ಮಿ ಲೇಔಟ್ ಗಾರ್ವೆಬಾಯಿಪಾಳ್ಯದ ನಿವಾಸಿ ಕುಶಾಲ್ (31) ಬಂಧಿತ ಆರೋಪಿ. ಆರೋಪಿಯಿಂದ ₹10.45 ಲಕ್ಷ ಮೌಲ್ಯದ 10 ಕೆ.ಜಿ. ಗಾಂಜಾ ಜಪ್ತಿ ಮಾಡಲಾಗಿದೆ ಎಂದು ಪೊಲೀಸರು ಹೇಳಿದರು.

ಬಂಧಿತ ಆರೋಪಿಯು ಹೊರರಾಜ್ಯದಿಂದ ಕಡಿಮೆ ಬೆಲೆಗೆ ಗಾಂಜಾ ಖರೀದಿಸಿ, ಹೆಚ್ಚಿನ ಬೆಲೆಗೆ ಗ್ರಾಹಕರಿಗೆ ಮಾರಾಟ ಮಾಡುತ್ತಿದ್ದ. ಡ್ರಗ್ಸ್ ಮಾರಾಟದಿಂದ ಬಂದ ಹಣದಲ್ಲಿ ಮೋಜು-ಮಸ್ತಿ ಮಾಡುತ್ತಿದ್ದ. ಬಾತ್ಮೀದಾರರಿಂದ ಬಂದ ಖಚಿತ ಮಾಹಿತಿ ಆಧರಿಸಿ, ಕಾರ್ಯಾಚರಣೆ ನಡೆಸಿ ಆರೋಪಿಯನ್ನು ಬಂಧಿಸಲಾಯಿತು ಎಂದು ಪೊಲೀಸರು ಹೇಳಿದರು.

ಹೆಣ್ಣು ಮಗು ಬೇಡವೆಂದು ಗಲಾಟೆ: ಪತ್ನಿ ಅನುಮಾನಾಸ್ಪದ ಸಾವು

ಗೃಹಿಣಿಯೊಬ್ಬರು ಅನುಮಾನಾಸ್ಪದವಾಗಿ ಮೃತಪಟ್ಟಿರುವ ಘಟನೆ ಲಗ್ಗೆರೆಯಲ್ಲಿ ನಡೆದಿದೆ.

ರಕ್ಷಿತಾ (26) ಮೃತಪಟ್ಟ ಗೃಹಿಣಿ. ‘ಇದು ಆತ್ಮಹತ್ಯೆ ಅಲ್ಲ, ಕೊಲೆ’ ಎಂದು ರಕ್ಷಿತಾ ಕುಟುಂಬಸ್ಥರು ಆರೋಪಿಸಿದ್ದಾರೆ.

ಕುಣಿಗಲ್ ಬಳಿಯ ಹುಲಿದುರ್ಗದ ರವೀಶ್ ಹಾಗೂ ಹಾಸನ ಜಿಲ್ಲೆಯ ಅರಸೀಕೆರೆಯ ರಕ್ಷಿತಾ ಅವರು ನಾಲ್ಕು ವರ್ಷದ ಹಿಂದೆ ಮದುವೆ ಆಗಿದ್ದರು. ಲಗ್ಗೆರೆಯಲ್ಲಿ ನೆಲಸಿದ್ದರು. ದಂಪತಿಗೆ ಹೆಣ್ಣು ಮಗುವಿದೆ. ಖಾಸಗಿ ಬ್ಯಾಂಕ್‌ನಲ್ಲಿ ರವೀಶ್ ಅವರು ವ್ಯವಸ್ಥಾಪಕರಾಗಿ ಕೆಲಸ ಮಾಡುತ್ತಿದ್ದಾರೆ ಎಂದು ಪೊಲೀಸರು ಹೇಳಿದರು.

‘ಹೆಣ್ಣು ಮಗು ಬೇಡ. ಗಂಡು ಮಗು ಬೇಕೆಂದು ರವೀಶ್ ಅವರು ಪ್ರತಿನಿತ್ಯ ಮನೆಯಲ್ಲಿ ಗಲಾಟೆ ಮಾಡುತ್ತಿದ್ದರು. ಭಾನುವಾರ ರಾತ್ರಿ ಗಲಾಟೆ ವಿಕೋಪಕ್ಕೆ ಹೋಗಿತ್ತು. ಸೋಮವಾರ ಬೆಳಿಗ್ಗೆ ಕರೆ ಮಾಡಿದ್ದರೂ ರಕ್ಷಿತಾ ಅವರು ಕರೆ ಸ್ವೀಕರಿಸಿರಲಿಲ್ಲ. ಅವರ ತಂದೆ ತಿಮ್ಮರಾಜು ಅವರು ಮನೆಯ ಬಳಿಗೆ ಬಂದು ಬಾಗಿಲು ತೆಗೆದು ನೋಡಿದಾಗ ಘಟನೆ ನಡೆದಿರುವುದು ಗೊತ್ತಾಗಿದೆ’ ಎಂದು ಪೊಲೀಸರು ಹೇಳಿದರು.

‘ರವೀಶ್ ಮನೆಯಲ್ಲಿ ಸಹೋದರ ಲೋಕೇಶ್ ಸಹ ವಾಸವಿದ್ದರು. ಭಾನುವಾರ ರಾತ್ರಿ ರವೀಶ್ ಮತ್ತು ಲೋಕೇಶ್ ಸಹ ಗಲಾಟೆ ಮಾಡಿಕೊಂಡಿದ್ದರು’ ಎಂದು ಮೂಲಗಳು ಹೇಳಿವೆ.

‘ಮಗುವನ್ನು ರವೀಶ್ ಸರಿಯಾಗಿ ಮಾತನಾಡಿಸುತ್ತಿರಲಿಲ್ಲ. ಮಗುವಿನ ಕಿವಿಯನ್ನೂ ಸುಟ್ಟಿದ್ದರು. ಮಗು ಜನಿಸಿದಾಗ ಆಸ್ಪತ್ರೆ ಬಿಲ್ ಅನ್ನೂ ಪಾವತಿ ಮಾಡಿರಲಿಲ್ಲ. ಈ ಹಿಂದೆಯೂ ಗಲಾಟೆ ನಡೆದಿತ್ತು. ಎರಡೂ ಕಡೆಯ ಕುಟುಂಬಸ್ಥರು ಸಂಧಾನ ನಡೆಸಿ ಕಳುಹಿಸಿದ್ದರು’ ಎಂದು ಮೂಲಗಳು ತಿಳಿಸಿವೆ.

ದೂರು ನೀಡಿದ್ದ ರಕ್ಷಿತಾ: ರವೀಶ್ ಹಾಗೂ ಲೋಕೇಶ್ ಅವರ ವಿರುದ್ಧ ಈ ಹಿಂದೆ ರಕ್ಷಿತಾ ಕುಟುಂಬಸ್ಥರು ದೂರು ನೀಡಿದ್ದರು. ಕೊಲೆ ಮಾಡಿ ನೇಣು ಹಾಕಲಾಗಿದೆ. ಎರಡು ದಿನಗಳ ಹಿಂದೆಯೇ ಆಸ್ತಿ ಪತ್ರ ಮತ್ತು ಚಿನ್ನಾಭರಣ ಬೇರೆಡೆ ಕೊಂಡೊಯ್ದು ಕೃತ್ಯ ಎಸಗಿದ್ದಾರೆ. ಮನೆಗೆ ಹೊರಗಿನಿಂದ ಬಾಗಿಲು ಹಾಕಿದ್ದು ಕಂಡುಬಂತು. ರಕ್ಷಿತಾ ಸಾವಿನ ಕುರಿತು ಅನುಮಾನವಿದ್ದು, ಸೂಕ್ತ ತನಿಖೆ ಆಗಬೇಕು’ ಎಂದು ಕುಟುಂಬಸ್ಥರು ಕೋರಿದ್ದಾರೆ.

ನೀರು ಕೊಡದ ಪತ್ನಿಗೆ ಲಟ್ಟಣಿಗೆಯಿಂದ ಹೊಡೆದು ಕೊಲೆ

ನೀರು ಕೊಡಲಿಲ್ಲ ಎಂದು ಕೋಪಗೊಂಡ ವ್ಯಕ್ತಿಯು ಲಟ್ಟಣಿಗೆಯಿಂದ ಪತ್ನಿಗೆ ಹೊಡೆದು ಕೊಲೆ ಮಾಡಿದ್ದಾನೆ. ಪೀಣ್ಯ ಠಾಣೆಯ ಪೊಲೀಸರು ಆತನನ್ನು ಬಂಧಿಸಿದ್ದಾರೆ.

ಮಧ್ಯಪ್ರದೇಶದ ಪ್ರೀತಿ ಸಿಂಗ್(26) ಕೊಲೆಯಾದ ಮಹಿಳೆ. ಕೃತ್ಯ ಎಸಗಿದ ಪತಿ ಛೋಟೆಲಾಲ್ ಸಿಂಗ್ ಎಂಬಾತನನ್ನು ಬಂಧಿಸಲಾಗಿದೆ ಎಂದು ಪೊಲೀಸರು ಹೇಳಿದರು.

ಮಧ್ಯಪ್ರದೇಶದ ಛೋಟೆಲಾಲ್ ಸಿಂಗ್ ಮತ್ತು ಪ್ರೀತಿ ಸಿಂಗ್ ನಾಲ್ಕು ತಿಂಗಳ ಹಿಂದಷ್ಟೇ ನಗರಕ್ಕೆ ಬಂದಿದ್ದರು. ಪೀಣ್ಯದಲ್ಲಿರುವ ಕಾರ್ಖಾನೆಯೊಂದರಲ್ಲಿ ಇಬ್ಬರೂ ಕೆಲಸ ಮಾಡುತ್ತಿದ್ದು, ಚೊಕ್ಕಸಂದ್ರದ ಬಾಡಿಗೆ ಮನೆಯಲ್ಲಿ ವಾಸವಾಗಿದ್ದರು ಎಂದು ಹೇಳಿದರು.

ಪ್ರೀತಿ ಸಿಂಗ್ ಕೆಲಸಕ್ಕೆ ಹೊರಟಿದ್ದರು. ಅದೇ ವೇಳೆ ಊಟ ಮಾಡುತ್ತಿದ್ದ ಛೋಟೆಲಾಲ್ ಸಿಂಗ್ ನೀರು ಕೊಡುವಂತೆ ಕೇಳಿದ್ದ. ‘ಕೆಲಸಕ್ಕೆ ಹೋಗಲು ತಡವಾಗುತ್ತಿದೆ. ನೀವೇ ನೀರು ತೆಗೆದುಕೊಂಡು ಕುಡಿಯಿರಿ’ ಎಂದು ಪ್ರೀತಿ ಹೇಳಿದ್ದರು. ಮದ್ಯದ ಅಮಲಿನಲ್ಲಿದ್ದ ಆರೋಪಿ, ಕೋಪಗೊಂಡು ಅಡುಗೆ ಮನೆಯಲ್ಲಿದ್ದ ಲಟ್ಟಣಿಗೆಯಿಂದ ಪತ್ನಿಯ ತಲೆಗೆ ಹೊಡೆದಿದ್ದಾನೆ.

ಛೋಟೆಲಾಲ್ ಸಿಂಗ್

ಗಂಭೀರವಾಗಿ ಗಾಯಗೊಂಡಿದ್ದ ಪ್ರೀತಿ ಅವರನ್ನು ಆಸ್ಪತ್ರೆಗೆ ಸೇರಿಸಲಾಗಿತ್ತು. ಆಸ್ಪತ್ರೆಯಲ್ಲಿ ಅವರು ಮೃತಪಟ್ಟಿದ್ದಾರೆ ಎಂದು ಪೊಲೀಸರು ಹೇಳಿದರು.

‘ಕೊಲೆ ಪ್ರಕರಣ ದಾಖಲಿಸಿಕೊಂಡು ಆರೋಪಿಯನ್ನು ಬಂಧಿಸಲಾಗಿದೆ’ ಎಂದು ಪೊಲೀಸರು ಮಾಹಿತಿ ನೀಡಿದರು.

ದರ್ಶನ್‌ಗೆ ಜೈಲಿನಲ್ಲಿ ಸೌಲಭ್ಯ ಪರಿಶೀಲಿಸಲು ಮನವಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಚಿತ್ರದುರ್ಗದ ರೇಣುಕಸ್ವಾಮಿ ಕೊಲೆ ಪ್ರಕರಣದ ಆರೋಪಿ, ನಟ ದರ್ಶನ್ ಅವರು ಪರಪ್ಪನ ಅಗ್ರಹಾರ ಕೇಂದ್ರ ಕಾರಾಗೃಹದಲ್ಲಿ ನ್ಯಾಯಾಂಗ ಬಂಧನದಲ್ಲಿದ್ದು, ಅವರಿಗೆ ಮೂಲಸೌಲಭ್ಯ ಕಲ್ಪಿಸಲು ಜೈಲಿನ ಅಧಿಕಾರಿಗಳಿಗೆ ಮತ್ತೊಮ್ಮೆ ನಿರ್ದೇಶನ ನೀಡಬೇಕು ಎಂದು ಕೋರಿ ದರ್ಶನ್ ಪರ ವಕೀಲರು, 57ನೇ ಎಸಿಎಂಎಂ ನ್ಯಾಯಾಲಯಕ್ಕೆ ಸೋಮವಾರ ಮೂರನೇ ಬಾರಿ ಅರ್ಜಿ ಸಲ್ಲಿಸಿದರು.

ಅರ್ಜಿಯ ವಿಚಾರಣೆ ನಡೆಸಿದ ನ್ಯಾಯಾಧೀಶರು, ಅ.9ಕ್ಕೆ ಆದೇಶ ನೀಡುವುದಾಗಿ ಹೇಳಿ ಮುಂದೂಡಿದರು.

ದರ್ಶನ್ ಅವರನ್ನು ಕ್ವಾರಂಟೈನ್ ಸೆಲ್‌ನಲ್ಲೇ ಇರಿಸಲಾಗಿದೆ. ಬಿಸಿಲು ಬೀಳದ ಜಾಗದಲ್ಲಿ ವಾಕಿಂಗ್‌ಗೆ ಅವಕಾಶ ನೀಡಲಾಗುತ್ತಿದೆ. ಇದರಿಂದ ಅವರ ಆರೋಗ್ಯದಲ್ಲಿ ಮತ್ತಷ್ಟು ವ್ಯತ್ಯಾಸವಾಗಿದೆ. ಈ ಹಿಂದೆ ನ್ಯಾಯಾಲಯವು ನೀಡಿದ್ದ ಆದೇಶಕ್ಕೂ ಜೈಲಿನ ಅಧಿಕಾರಿಗಳು ಬೆಲೆ ನೀಡುತ್ತಿಲ್ಲ. ನ್ಯಾಯಾಧೀಶರೇ ಖುದ್ದು ಜೈಲಿಗೆ ಭೇಟಿ ನೀಡಿ ಪರಿಶೀಲಿಸುವಂತೆ ಅರ್ಜಿಯಲ್ಲಿ ವಕೀಲರು ಕೋರಿದ್ದಾರೆ.

‘ಜೈಲಿಗೆ ನ್ಯಾಯಾಧೀಶರು ಭೇಟಿ ನೀಡಿ ಸತ್ಯಾಸತ್ಯತೆಯ ಪರಿಶೀಲನೆ ನಡೆಸಲಿ. ದರ್ಶನ್ ಅವರನ್ನು ಕ್ವಾರಂಟೈನ್ ಸೆಲ್‌ನಲ್ಲಿ ಇಡಲಾಗಿದೆಯೇ ಅಥವಾ ಬೇರೆ ಬ್ಯಾರಕ್‌ನಲ್ಲಿ ಇಡಲಾಗಿದೆಯೇ ಎಂಬುದನ್ನು ಪರಿಶೀಲಿಸಬೇಕು’ ಎಂದು ವಕೀಲರು ನ್ಯಾಯಾಲಯದಲ್ಲಿ ಮನವಿ ಮಾಡಿದ್ದಾರೆ.

‘ಜೈಲಿನಲ್ಲಿ ಕನಿಷ್ಠ ಮೂಲ ಸೌಲಭ್ಯಗಳನ್ನೂ ನೀಡುತ್ತಿಲ್ಲ. ಬ್ಯಾರಕ್‌ನಿಂದ ಹೊರಗೆ ಬರುವುದಕ್ಕೂ ಬಿಡುತ್ತಿಲ್ಲ. ಮೈಮೇಲೆ ಬಿಸಿಲು ಬಿದ್ದು ಹಲವು ದಿನಗಳೇ ಆಗಿವೆ. ಕೈಯಲ್ಲಿ ಫಂಗಸ್ ಕಾಣಿಸಿಕೊಂಡಿದೆ (ಚರ್ಮದ ಅಲರ್ಜಿ). ಬೇರೆ ಯಾರಿಗೂ ಬೇಡ. ನನಗೆ ಮಾತ್ರ ವಿಷ ನೀಡಲಿ. ಈ ಸಂಬಂಧ ಕೋರ್ಟ್ ಆದೇಶ ನೀಡಲಿ...’ ಎಂದು ದರ್ಶನ್ ಅವರು ಈ ಹಿಂದೆ ವಿಡಿಯೊ ಕಾನ್ಫರೆನ್ಸ್ ಮೂಲಕ ವಿಚಾರಣೆಗೆ ಹಾಜರಾಗಿದ್ದ ವೇಳೆ ನ್ಯಾಯಾಧೀಶರ ಎದುರು ಅಲವತ್ತುಕೊಂಡಿದ್ದರು.

ಜನ್ಮದಿನದ ಶುಭಾಶಯಗಳು

ಶರಣ ಎಂ.ಬಿ. ಪಾಟೀಲ
ಬೃಹತ್ & ಮಧ್ಯಮ ಕೈಗಾರಿಕೆಗಳು ಹಾಗೂ ಮೂಲಸೌಕರ್ಯ ಅಭಿವೃದ್ಧಿ ಸಚಿವರು
ಅಧ್ಯಕ್ಷರು, ಬಿ.ಎಲ್.ಡಿ.ಇ. ಸಂಸ್ಥೆ

ಎತ್ತೆತ್ತ ನೋಡಿದಡತ್ತತ್ತ ನೀನೇ ದೇವಾ,
ಸಕಲ ವಿಸ್ತಾರದ ರೂಹು ನೀನೇ ದೇವಾ,
ವಿಶ್ವತಶ್ಚಕ್ಷು ನೀನೇ ದೇವಾ,
ವಿಶ್ವತೋ ಮುಖ ನೀನೇ ದೇವಾ,
ವಿಶ್ವತೋ ಬಾಹು ನೀನೇ ದೇವಾ,
ವಿಶ್ವತಃ ಪಾದ ನೀನೇ ದೇವಾ, ಕೂಡಲಸಂಗಮದೇವಾ.

ಬಂಧುಗಳು... ಮಿತ್ರರು... ಅಭಿಮಾನಿಗಳು...

ಲೈಂಗಿಕ ಕಿರುಕುಳ: ನಕಲಿ ನಿರ್ಮಾಪಕ ಸೆರೆ

ಪ್ರಜಾವಾಣಿ ವಾರ್ತೆ

ಹೇಮಂತ್

ಬೆಂಗಳೂರು: ಸಿನಿಮಾದಲ್ಲಿ ಅವಕಾಶ ನೀಡುವುದಾಗಿ ನಂಬಿಸಿ ನಟಿಯೊಬ್ಬರಿಗೆ ಲೈಂಗಿಕ ಕಿರುಕುಳ ನೀಡಿದ್ದ ನಕಲಿ ನಿರ್ಮಾಪಕರೊಬ್ಬರನ್ನು ರಾಜಾಜಿನಗರ ಪೊಲೀಸರು ಬಂಧಿಸಿದ್ದಾರೆ.

ಅನ್ನಪೂರ್ಣೇಶ್ವರಿನಗರ ನಿವಾಸಿ ಹೇಮಂತ್ ಕುಮಾರ್ (34) ಬಂಧಿತ ಆರೋಪಿ. ಕಿರುತೆರೆ ನಟಿ ದೂರಿನ ಮೇರೆಗೆ ಆರೋಪಿಯನ್ನು ಬಂಧಿಸಲಾಗಿದೆ.

ನಟಿಗೆ 2022ರಲ್ಲಿ ನಿರ್ದೇಶಕ, ನಿರ್ಮಾಪಕ ಎಂದು ಹೇಳಿಕೊಂಡು ಆರೋಪಿ ಪರಿಚಯವಾಗಿದ್ದರು. ‘ರಿಚ್ಚಿ ಹೆಸರಿನ ಸಿನಿಮಾ ಮಾಡುತ್ತಿದ್ದು, ಅದರಲ್ಲಿ ನಾಯಕಿಯಾಗಿ ನಟಿಸಬೇಕು ಎಂದು ಹೇಮಂತ್ ಅವರು ನಟಿಯನ್ನು ಕೋರಿದ್ದರು. ₹2 ಲಕ್ಷ ಸಂಭಾವನೆ ನೀಡುವುದಾಗಿ ಮಾತುಕತೆ ನಡೆದು ಚಿತ್ರೀಕರಣದ ಅವಧಿಯಲ್ಲಿ ಆರೋಪಿ ಅಸಭ್ಯ ರೀತಿಯಲ್ಲಿ ಸ್ಪರ್ಶಿಸುತ್ತಿದ್ದರು’ ಎಂದು ನಟಿ ದೂರು ನೀಡಿರುವುದಾಗಿ ಪೊಲೀಸರು ತಿಳಿಸಿದ್ದಾರೆ.

‘ಬೇರೆ ಕಡೆ ಸಿನಿಮಾ ಪ್ರಚಾರಕ್ಕೆ ಒಬ್ಬಳೇ ಬರುವಂತೆ ಹೇಳುತ್ತಿದ್ದರು. ಅದಕ್ಕೆ ನಿರಾಕರಿಸಿದಾಗ, ನನ್ನ ಹಿಂದೆ ರೌಡಿಗಳನ್ನು ಬಿಟ್ಟು ಬೆದರಿಕೆ ಹಾಕಿದ್ದಾರೆ’ ಎಂದು ದೂರಿನಲ್ಲಿ ಉಲ್ಲೇಖಿಸಲಾಗಿದೆ.

ಜೈಲಿನಲ್ಲಿ ಜನ್ಮದಿನ ಆಚರಣೆ: ಎನ್‌ಸಿಆರ್

ಬೆಂಗಳೂರು: ಪರಪ್ಪನ ಅಗ್ರಹಾರ ಕೇಂದ್ರ ಕಾರಾಗೃಹದಲ್ಲಿ ರೌಡಿಶೀಟರ್‌ವೊಬ್ಬ ಜನ್ಮದಿನ ಆಚರಣೆ ಮಾಡಿಕೊಂಡಿದ್ದ ವಿಡಿಯೊವು ಸಾಮಾಜಿಕ ಜಾಲತಾಣದಲ್ಲಿ ಹರಿದಾಡಿದ್ದು, ಪ್ರಕರಣ ಸಂಬಂಧ ಜೈಲಿನ ಅಧಿಕಾರಿಗಳು ಪರಪ್ಪನ ಅಗ್ರಹಾರ ಠಾಣೆಗೆ ದೂರು ನೀಡಿದ್ದಾರೆ.

ದೂರಿನ ಅನ್ವಯ ಸರ್ಜಾಪುರದ ರೌಡಿಶೀಟರ್ ಶ್ರೀನಿವಾಸ್ ಅಲಿಯಾಸ್ ಗುಬ್ಬಚ್ಚಿ ಸೀನ ಮತ್ತು ಈತನ ಸಹಚರರ ವಿರುದ್ಧ ಪೊಲೀಸರು ಎನ್‌ಸಿಆರ್ (ಗಂಭೀರ ಸ್ವರೂಪವಲ್ಲದ ಪ್ರಕರಣ) ದಾಖಲಿಸಿಕೊಂಡು ತನಿಖೆ ನಡೆಸುತ್ತಿದ್ದಾರೆ.

ಹಾಸ್ಟೆಲ್‌ನಲ್ಲಿ ಅನಧಿಕೃತ ವಾಸ: ಎಫ್‌ಐಆರ್

ಪ್ರಜಾವಾಣಿ ವಾರ್ತೆ

ಮುಖ್ಯಾಂಶಗಳು

- 14 ಮಂದಿ ವಿರುದ್ಧ ದೂರು
- ಶ್ರೀಗಂಧದಕಾವಲ್‌ನಲ್ಲಿ ಇರುವ ವಸತಿನಿಲಯ

ಬೆಂಗಳೂರು: ಶ್ರೀಗಂಧದ ಕಾವಲ್‌ನಲ್ಲಿರುವ ಬಿ.ಆರ್.ಅಂಬೇಡ್ಕರ್ ವಸತಿನಿಲಯದಲ್ಲಿ ಅನಧಿಕೃತವಾಗಿ ವಾಸವಾಗಿದ್ದ 14 ಮಂದಿ ವಿರುದ್ಧ ಕಾಮಾಕ್ಷಿಪಾಳ್ಯ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ವಾರ್ಡನ್‌ಗಳಾದ ಮಂಜುನಾಥ್, ವಿಜಯ್ ಕುಮಾರ್ ಹಾಗೂ ವಿದ್ಯಾರ್ಥಿಗಳಾದ ಮನೋಹರ್, ಅರುಣ್ ಕುಮಾರ್, ಶ್ರೀಕಾಂತ್, ಗಣೇಶ್, ಜಯರಾಜ್, ರಘು, ಅಂಜನಪ್ಪ, ಸಂದೇಶ, ಜೀವರತ್ನಂ, ನರೇಂದ್ರ, ಸಾಗರ್, ಕಾರ್ತಿಕ್ ನಾಯಕ್ ಎಂಬುವರ ವಿರುದ್ಧ ಪ್ರಕರಣ ದಾಖಲಾಗಿದೆ.

ವಿಚಕ್ಷಣಾ ದಳದ ಅಧಿಕಾರಿ ಎಂ.ರಾಜೇಶ್ ಜಯಸಿಂಹನ್ ಅವರು ನೀಡಿದ ದೂರಿನ ಮೇರೆಗೆ ಪ್ರಕರಣ ದಾಖಲು ಮಾಡಿಕೊಳ್ಳಲಾಗಿದೆ.

ವಸತಿ ನಿಲಯದಲ್ಲಿ ಅನರ್ಹ ವ್ಯಕ್ತಿಗಳು ವಾಸವಾಗಿದ್ದಾರೆ ಎಂಬ ಮಾಹಿತಿ ಮೇರೆಗೆ ರಾಜೇಶ್ ಜಯಸಿಂಹನ್, ಸಿಬ್ಬಂದಿ ಹಾಗೂ ಡಿಸಿಆರ್‌ಇ ಪೊಲೀಸರು ಸೋಮವಾರ ಬೆಳಿಗ್ಗೆ ವಸತಿನಿಲಯದ ಮೇಲೆ ದಾಳಿ ನಡೆಸಿ ಪರಿಶೀಲಿಸಿದ್ದರು. ಹಾಸ್ಟೆಲ್ ವಿದ್ಯಾರ್ಥಿಗಳನ್ನು ವಿಚಾರಣೆ ನಡೆಸಿದಾಗ ವಾರ್ಡನ್‌ಗಳು ಹಾಗೂ ವಿದ್ಯಾರ್ಥಿಗಳು ಅನಧಿಕೃತವಾಗಿ ವಾಸವಾಗಿರುವುದು ಗೊತ್ತಾಗಿದೆ. ಅಲ್ಲದೆ, ಇವರಿಗೆ ಅನಧಿಕೃತವಾಗಿ ವಾಸವಾಗಲು ವಾರ್ಡನ್‌ಗಳು ಅವಕಾಶ ನೀಡಿರುವುದು ಗೊತ್ತಾಗಿದೆ. ಹೀಗಾಗಿ ಅವರ ವಿರುದ್ಧ ಕ್ರಮಕೈಗೊಳ್ಳುವಂತೆ ದೂರು ನೀಡಿದ್ದಾರೆ. ತನಿಖೆ ನಡೆಯುತ್ತಿದೆ ಎಂದು ಪೊಲೀಸರು ಮಾಹಿತಿ ನೀಡಿದರು. ಕಾಮಾಕ್ಷಿಪಾಳ್ಯ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

*T&C apply. GST reduced price offer applicable from 22nd Sep, 2025. Insurance offer available on selected models purchased in Sep-Oct 2025.Total savings may vary for different models/variants on the basis of actual insurance cost (without add-ons); and RTO/statutory. For more information contact your nearest dealership.

BANGALORE: Garuda Wheels - Hoskote: 9035040171 | **Whitefield Yamaha - Whitefield:** 9972864913 | **Mahadevapura:** 9148086668 | **Motoworld - Bommanahalli:** 8722879944 | **Chandapura:** 8722879900 | **Bellandur:** 8722879911 | **Bangalore Wheels - Rajajinagar:** 9740653587 | **Vijayanagar:** 9611920002 **Marathahalli:** 9916610017 | **Kengeri:** 9916610022 | **Perfect Riders - Lalbagh Road:** 8497816000 | **Jayanagar:** 8497816000 | **Pacer Yamaha - Hebbal:** 6360237411 | **Kalyan Nagar:** 9902607629 | **R.R. Nagar:** 7624818307 | **Vidyaranyapura:** 9448443578 | **Vinayak Motors - Domlur:** 9591072222 | **Koramangala:** 9740014067 | **Laxmi International - Bannerghatta Road:** 8904154299 | **Chandan Motors - Banashankari:** 9606861911 | **Geetha Motors - Nelamangala:** 7619628882 | **Peenya:** 8951954565 | **Panache Enterprises - Indiranagar:** 9844011961 | **Marathahalli** - 9844011961 | **Eye Automobile - K.R. Puram:** 8088448844 **Srijaya Motors - Yelahanka:** 080-40900699, 6366975164 | **Miles - Kanakapura Road:** 9035754656 | **Niruppallava Motors - Ramanagara:** 8123340803 | **Sree Geetha Motors - Sira Road Tumkur:** 6364885726 | **SLR Motors - Kunigal Road Tumkur:** 9071719601/03 | **Sri RV Advent Ride - Kolar:** 9071374827.
Yamaha Bike Corner: Touch Yamaha - Varthur: 9986547353 | **Nandi Bikes - Devanahalli:** 9739030606, 9482090890 | **Jenukallu Yamaha - Tiptur:** 7892862641 | **Sri RV Advent Ride - Mulbagal:** 9071374830 | **Moto World - Attibele:** 8884452700 | **Moto World - Dommasandra:** 8884452899.

2.66 ಲಕ್ಷ ಕುಟುಂಬಗಳ ಸಮೀಕ್ಷೆ

ಸೋಮವಾರ 1.41 ಲಕ್ಷ ಮನೆಗಳಲ್ಲಿ ಸಮೀಕ್ಷೆ: ಮಹೇಶ್ವರ್ ರಾವ್

ಪ್ರಜಾವಾಣಿ ವಾರ್ತೆ

ಬೆಂಗಳೂರು: ಗ್ರೇಟರ್ ಬೆಂಗಳೂರು ಪ್ರಾಧಿಕಾರದ (ಜಿಬಿಎ) ವ್ಯಾಪ್ತಿಯಲ್ಲಿ ಮೂರು ದಿನಗಳಲ್ಲಿ 2.66 ಲಕ್ಷ ಕುಟುಂಬಗಳ ಸಾಮಾಜಿಕ ಮತ್ತು ಶೈಕ್ಷಣಿಕ ಸ್ಥಿತಿ-ಗತಿ ಸಮೀಕ್ಷೆ ಕಾರ್ಯ ಪೂರ್ಣಗೊಂಡಿದೆ.

'ಜಿಬಿಎ ವ್ಯಾಪ್ತಿಯಲ್ಲಿ ಶನಿವಾರದಿಂದ ಸಮೀಕ್ಷೆ ಆರಂಭವಾಗಿದ್ದು, ಸೋಮವಾರ ಒಂದೇ ದಿನ 1.41 ಲಕ್ಷ ಮನೆಗಳಲ್ಲಿ ಸಮೀಕ್ಷೆ ನಡೆದಿದೆ. ಆದರೆ, ಸಮೀಕ್ಷೆ ಇನ್ನಷ್ಟು ವೇಗ ನೀಡಬೇಕಾಗಿದ್ದು, ಪ್ರತಿ ದಿನ ಮೂರು ಲಕ್ಷ ಮನೆಗಳ ಸಮೀಕ್ಷೆ ಪೂರ್ಣಗೊಳಿಸಬೇಕಾದ ಗುರಿಯನ್ನು ನಾವು ಹೊಂದಿದ್ದೇವೆ' ಎಂದು ಜಿಬಿಎ ಮುಖ್ಯ ಆಯುಕ್ತ ಮಹೇಶ್ವರ್ ರಾವ್ ಅವರು ಸುದ್ದಿಗಾರರಿಗೆ ತಿಳಿಸಿದರು.

'ಸುಮಾರು 50 ಲಕ್ಷಕ್ಕೂ ಹೆಚ್ಚು ಮನೆಗಳಲ್ಲಿ ಸಮೀಕ್ಷೆ ನಡೆಯಬೇಕಾಗಿದ್ದು, ಆದಷ್ಟು ಬೇಗ ಮುಗಿಸಲು ನಾವು ಕ್ರಮ ಕೈಗೊಳ್ಳುತ್ತೇವೆ' ಎಂದರು.

'ಪರಿಶಿಷ್ಟ ಜಾತಿ ಮತ್ತು ಪಂಗಡದ ಸಮೀಕ್ಷೆ ನಡೆಸಿದ ಸಂದರ್ಭದಲ್ಲಿ ಮೂರು ಸಾವಿರ ಜನರನ್ನು ಮಾತ್ರ ಸಮೀಕ್ಷಕರನ್ನಾಗಿ ನಿಯೋಜಿಸಲಾಗಿತ್ತು. ಸಾಮಾಜಿಕ ಮತ್ತು ಶೈಕ್ಷಣಿಕ ಸಮೀಕ್ಷೆಗೆ ಸುಮಾರು 15 ಸಾವಿರ ಸಮೀಕ್ಷಕರನ್ನು ನೇಮಿಸಲಾಗಿದೆ. ಆದಷ್ಟು ಬೇಗ ಸಮೀಕ್ಷೆ ನಡೆಸಲು ಕ್ರಮ ಕೈಗೊಳ್ಳಲಾಗುತ್ತಿದೆ' ಎಂದು ಮಾಹಿತಿ ನೀಡಿದರು.

ಜಿಬಿಎ ವ್ಯಾಪ್ತಿಯಲ್ಲಿ ಸಮೀಕ್ಷೆ (ಸೋಮವಾರದವರೆಗೆ)	
31,815	ಕೇಂದ್ರ ನಗರ ಪಾಲಿಕೆ
38,374	ಪೂರ್ವ ನಗರ ಪಾಲಿಕೆ
68,639	ಉತ್ತರ ನಗರ ಪಾಲಿಕೆ
39,315	ದಕ್ಷಿಣ ನಗರ ಪಾಲಿಕೆ
87,923	ಪಶ್ಚಿಮ ನಗರ ಪಾಲಿಕೆ
2,66,066	ಒಟ್ಟು ಮನೆಗಳು

'ಸಮೀಕ್ಷಕರು ಅವರಿಗೆ ನೀಡುವ ಪ್ರದೇಶದ ಬಗ್ಗೆ ಮಾಹಿತಿ ಪಡೆದುಕೊಳ್ಳಬೇಕು. ಅಧಿಕಾರಿಗಳು ಅದರ ಬಗ್ಗೆ ತಿಳಿದುಕೊಳ್ಳಬೇಕು. ಹೀಗಾಗಿ, ಕೆಲವು ಸಮಸ್ಯೆಗಳಾಗಿ, ನಿಧಾನಗತಿಯಾಗಿದೆ. ಹಿರಿಯ ಅಧಿಕಾರಿಗಳು ಪರಿಹಾರ ನೀಡುತ್ತಿದ್ದಾರೆ' ಎಂದು ಹೇಳಿದರು.

'ಸಮೀಕ್ಷೆಗೆ ಹಾಜರಾಗಲು ಸಮಸ್ಯೆ ಇರುವವರು ಅದರ ಬಗ್ಗೆ ವಿವರಣೆ ನೀಡಬೇಕು. ಈವರೆಗೆ ಎರಡು ಸಾವಿರಕ್ಕೂ ಹೆಚ್ಚು ಮಂದಿಗೆ ಸಮೀಕ್ಷೆಯಿಂದ ವಿನಾಯಿತಿ ನೀಡಲಾಗಿದೆ. ಅನಾರೋಗ್ಯ, ಚಿಕ್ಕ ಮಕ್ಕಳು, ಮನೆಯಲ್ಲಿ ಸಮಸ್ಯೆ ಸೇರಿದಂತೆ ಸೂಕ್ತ ಕಾರಣಗಳಿದ್ದರೆ ಅವರಿಗೆ ವಿನಾಯಿತಿ ನೀಡಲಾಗುತ್ತದೆ. ಕಾರಣಗಳಿಲ್ಲದೆ ಸಮೀಕ್ಷೆಗೆ ಹಾಜರಾಗದವರ ಮೇಲೆ ಕ್ರಮ ಕೈಗೊಳ್ಳಲಾಗುತ್ತದೆ. ಸಮೀಕ್ಷೆಗೆ ಬಂದ ಹಾಜರಾತಿಯನ್ನು ಪಡೆದುಕೊಂಡೇ ಅವರಿಗೆ ವೇತನ ಬಿಡುಗಡೆ ಮಾಡಬೇಕು ಎಂದು ಆಯಾ ಇಲಾಖೆಗಳಿಗೆ ತಿಳಿಸಲಾಗಿದೆ' ಎಂದರು.

'ಸಮೀಕ್ಷೆಗೆ ಬಾರದವರಲ್ಲಿ ಈವರೆಗೂ ಯಾರನ್ನೂ ಅಮಾನತು ಮಾಡಿಲ್ಲ. ಅಂತಹವರ ಬಗ್ಗೆ ಮಾಹಿತಿ ಕಲೆ ಹಾಕಿ, ಪರಿಶೀಲನೆ ನಡೆಸಿ ಕ್ರಮ ಕೈಗೊಳ್ಳಲಾಗುವುದು' ಎಂದು ತಿಳಿಸಿದರು.

ಸರಿಪಡಿಸಲಾಗುವುದು: 'ಐದು ನಗರ ಪಾಲಿಕೆಗಳ ವಾರ್ಡ್‌ಗಳ ಹೆಸರುಗಳನ್ನು ತರಾತುರಿಯಲ್ಲಿ ಅನುವಾದ ಮಾಡುವಾಗ ಕೆಲವು ತಪ್ಪುಗಳಿರುವುದು ಗಮನಕ್ಕೆ ಬಂದಿದೆ. ಆಕ್ಷೇಪಣೆಗೆ ಅವಕಾಶವಿದ್ದು, ಅವುಗಳನ್ನು ಸರಿಪಡಿಸಲಾಗುವುದು' ಎಂದು ಪ್ರಶ್ನೆಯೊಂದಕ್ಕೆ ಮಹೇಶ್ವರ್ ರಾವ್ ಉತ್ತರಿಸಿದರು.

ಮರಗಳ ಸಮೀಕ್ಷೆ: ನಗರದಲ್ಲಿರುವ ಒಣ ಹಾಗೂ ಬೀಳುವ ಹಂತದಲ್ಲಿರುವ ಮರಗಳ ಬಗ್ಗೆ ಮತ್ತೆ ಸಮೀಕ್ಷೆ ಮಾಡಿ, ಅನಾಹುತಗಳನ್ನು ತಡೆಯಲು ಕ್ರಮ ಕೈಗೊಳ್ಳಲಾಗುತ್ತದೆ. ಅರಣ್ಯ ವಿಭಾಗದವರು ಈ ಬಗ್ಗೆ ನಿಗಾವಹಿಸಬೇಕಾಗುತ್ತದೆ ಎಂದರು.

ಮಳೆಯಾಗುತ್ತಿರುವುದರಿಂದ ಗುಂಡಿ ಮುಚ್ಚುವ ಕೆಲಸದಲ್ಲಿ ನಿಧಾನಗತಿಯಾಗಿದೆ. ಇನ್ನೂ ಸುಮಾರು ಮೂರು ಸಾವಿರ ಗುಂಡಿಗಳಿದ್ದು, ದುರಸ್ತಿ ಕಾರ್ಯ ನಡೆಸಲಾಗುತ್ತದೆ ಎಂದು ಹೇಳಿದರು.

'ರಾಸಾಯನಿಕ ಪಟಾಕಿ ಮಾರಾಟ ಮಾಡಿದರೆ ಲೈಸೆನ್ಸ್ ರದ್ದು'

ಪರಿಸರಸ್ನೇಹಿ ವಾಹನಕ್ಕೆ ಚಾಲನೆ

ಪ್ರಜಾವಾಣಿ ವಾರ್ತೆ

ವಿಧಾನ ಸೌಧದ ಆವರಣದಲ್ಲಿ ಸೋಮವಾರ ಸಂಚರಿಸಿದ ಪರಿಸರಸ್ನೇಹಿ ವಾಹನಗಳು ಪ್ರಜಾವಾಣಿ ಚಿತ್ರ

ಬೆಂಗಳೂರು: ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು 68 ಪರಿಸರಸ್ನೇಹಿ ವಾಹನಗಳಿಗೆ ವಿಧಾನಸೌಧದ ಮುಂಭಾಗದಲ್ಲಿ ಸೋಮವಾರ ಚಾಲನೆ ನೀಡಿದರು. ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿಯ ಸುವರ್ಣ ಮಹೋತ್ಸವದ ಲಾಂಛನವನ್ನು ಅವರು ಇದೇ ಸಂದರ್ಭದಲ್ಲಿ ಬಿಡುಗಡೆ ಮಾಡಿದರು.

ಸಮಾರಂಭದಲ್ಲಿ ಮಾತನಾಡಿದ ಅರಣ್ಯ ಸಚಿವ ಈಶ್ವರ ಬಿ. ಖಂಡ್ರೆ, 'ದೀಪಾವಳಿ ಹಬ್ಬ ಹತ್ತಿರದಲ್ಲಿದೆ. ಭಾರ ಲೋಹಯುಕ್ತ ರಾಸಾಯನಿಕ ಪಟಾಕಿ ಮಾರಾಟ ಮಾಡುವುದು ಕಂಡು ಬಂದರೆ ಅಂಥವರ ಮಾರಾಟ ಪರವಾನಗಿಯನ್ನು ರದ್ದುಪಡಿಸಿ' ಎಂದು ಅಧಿಕಾರಿಗಳಿಗೆ ಸೂಚಿಸಿದರು.

'ಪರಿಸರಸ್ನೇಹಿ ಹಸಿರು ಪಟಾಕಿ ಮಾತ್ರ ಮಾರಾಟ ಮಾಡಬೇಕು. ಈ ಸಂಬಂಧ ಪಟಾಕಿ ಮಾರಾಟಗಾರರಿಂದ ಮುಚ್ಚಳಿಕೆ ಬರೆಯಿಸಿಕೊಳ್ಳಬೇಕು' ಎಂದು ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿಯ ಅಧಿಕಾರಿಗಳಿಗೆ ಸಚಿವರು ಸೂಚಿಸಿದರು.

'15 ವರ್ಷ ಪೂರೈಸಿದ ಡೀಸೆಲ್ ವಾಹನಗಳನ್ನು ಬಳಕೆ ಮಾಡುವಂತಿಲ್ಲ. ಸ್ಕ್ರ್ಯಾಪ್ ನೀತಿಯಂತೆ ಅವುಗಳನ್ನು ಬಳಕೆಯಿಂದ ದೂರವಿಡಬೇಕು. ಮಂಡಳಿಯಲ್ಲಿ ವಾಹನಗಳ ಕೊರತೆಯಿಂದ ಏಕ ಬಳಕೆ ಪ್ಲಾಸ್ಟಿಕ್, ವೈದ್ಯಕೀಯ ತ್ಯಾಜ್ಯ, ಇ-ತ್ಯಾಜ್ಯ ವಿಲೇವಾರಿ ಘಟಕಗಳ ಮೇಲೆ ನಿಗಾ ಇಡಲು ಮತ್ತು ಏಕ ಬಳಕೆ ಪ್ಲಾಸ್ಟಿಕ್ ತಯಾರಿಕಾ ಘಟಕ, ಮಳಿಗೆಗಳ ತಪಾಸಣೆ, ಪರಿಶೀಲನೆ ಮಾಡಲು, ಜಲ ಮೂಲಗಳ ಗುಣಮಟ್ಟ ಪರೀಕ್ಷೆ ಮಾಡಲು ಅಡ್ಡಿಯಾಗುತ್ತಿತ್ತು' ಎಂದು ಹೇಳಿದರು.

ಮಂಡಳಿ ಅಧ್ಯಕ್ಷ ಪಿ.ಎಂ. ನರೇಂದ್ರಸ್ವಾಮಿ, ಆಹಾರ ಸಚಿವ ಕೆ.ಎಚ್. ಮುನಿಯಪ್ಪ, ವಸತಿ ಸಚಿವ ಜಮೀರ್ ಅಹಮದ್‌ಖಾನ್, ವೈದ್ಯಕೀಯ ಶಿಕ್ಷಣ ಸಚಿವ ಶರಣ ಪ್ರಕಾಶ ಪಾಟೀಲ, ಮುಖ್ಯಮಂತ್ರಿಯವರ ರಾಜಕೀಯ ಕಾರ್ಯದರ್ಶಿ ನಸೀರ್ ಅಹಮದ್, ರಾಜ್ಯ ಗ್ಯಾರಂಟಿ ಯೋಜನೆಗಳ ಅನುಷ್ಠಾನ ಪ್ರಾಧಿಕಾರದ ಅಧ್ಯಕ್ಷ ಎಚ್.ಎಂ. ರೇವಣ್ಣ ಉಪಸ್ಥಿತರಿದ್ದರು.

ಸಿ.ಎಂಗೆ ಇ.ವಿ ಕಾರು: ನರೇಂದ್ರ ಸ್ವಾಮಿ

ಮುಖ್ಯಮಂತ್ರಿ ಸಿದ್ದರಾಮಯ್ಯ ಅವರಿಗೆ ಓಡಾಡಲು ಶೀಘ್ರದಲ್ಲಿಯೇ ಪರಿಸರ ಸ್ನೇಹಿ ವಿದ್ಯುತ್ ಚಾಲಿತ ಕಾರು ಒದಗಿಸಲಾಗುವುದು ಎಂದು ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿಯ ಅಧ್ಯಕ್ಷ ಪಿ.ಎಂ. ನರೇಂದ್ರ ಸ್ವಾಮಿ ತಿಳಿಸಿದರು.

'ಮುಖ್ಯಮಂತ್ರಿಯವರಿಗೆ ಕಾರು ಒದಗಿಸಿದ ಬಳಿಕ ಅರಣ್ಯ ಸಚಿವ ಖಂಡ್ರೆಯವರಿಗೆ ಇವಿ ಕಾರು ನೀಡಲಾಗುವುದು. ಮುಂದೆ ಹಂತಹಂತವಾಗಿ ಎಲ್ಲ ಸಚಿವರು, ಅಧಿಕಾರಿಗಳು ಇವಿ ಕಾರುಗಳಲ್ಲಿಯೇ ಓಡಾಡುವಂತೆ ಮಾಡುವುದು ನಮ್ಮ ಉದ್ದೇಶ' ಎಂದು ಹೇಳಿದರು.

ದೂರದ ವಾರ್ಡ್‌ಗಳಿಗೆ ನಿಯೋಜನೆ: ಗೊಂದಲ ನಿವಾರಿಸಲು ಮನವಿ

ಸಮೀಕ್ಷಕರಿಂದ ಜಿಬಿಎ ವಿರುದ್ಧ ಪ್ರತಿಭಟನೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಸಾಮಾಜಿಕ ಮತ್ತು ಶೈಕ್ಷಣಿಕ ಸಮೀಕ್ಷೆಗೆ ನಿಯೋಜನೆಯಾಗಿರುವ ಹಲವು ಸಮೀಕ್ಷಕರು ಮಲ್ಲೇಶ್ವರದಲ್ಲಿರುವ ನಗರ ಪಾಲಿಕೆ ಕಚೇರಿ ಎದುರು ಸೋಮವಾರ ಪ್ರತಿಭಟನೆ ನಡೆಸಿದರು.

'ತರಬೇತಿ ಸಂದರ್ಭದಲ್ಲಿ ನೀಡಲಾಗಿದ್ದ 10 ವಾರ್ಡ್‌ಗಳ ಆಯ್ಕೆಯಂತೆ ಸಮೀಕ್ಷೆ ಕಾರ್ಯವನ್ನು ಆದೇಶದಲ್ಲಿ ನೀಡಲಾಗಿಲ್ಲ. ಇದರಿಂದ ತುಂಬಾ ಸಮಸ್ಯೆಯಾಗಿದೆ. ಅನ್ಯಾಯವನ್ನು ಕೂಡಲೇ ಸರಿಪಡಿಸಬೇಕು' ಎಂದು ಪ್ರತಿಭಟಿಸಿದರು.

ಮನವಿ: 'ಸಾಮಾಜಿಕ ಮತ್ತು ಶೈಕ್ಷಣಿಕ ಸಮೀಕ್ಷೆಯಲ್ಲಾಗಿರುವ ಅಧಿಕಾರಿ ಮತ್ತು ನೌಕರರ ನಿಯೋಜನೆಯ ಗೊಂದಲವನ್ನು ಶೀಘ್ರ ನಿವಾರಿಸಬೇಕು' ಎಂದು ಗ್ರೇಟರ್ ಬೆಂಗಳೂರು ಪ್ರಾಧಿಕಾರ-ಪಾಲಿಕೆಗಳ ಅಧಿಕಾರಿ ಮತ್ತು ನೌಕರರ ಕ್ಷೇಮಾಭಿವೃದ್ಧಿ ಸಂಘ ಮನವಿ ಮಾಡಿಕೊಂಡಿದೆ.

ಜಿಬಿಎ ಮುಖ್ಯ ಆಯುಕ್ತ ಮಹೇಶ್ವರ್ ರಾವ್ ಅವರಿಗೆ ಪತ್ರ ಬರೆದಿರುವ ಸಂಘದ ಅಧ್ಯಕ್ಷ ಎ.ಅಮೃತ್ ರಾಜ್, ಸಮೀಕ್ಷೆಗೆ ನಿಯೋಜಿಸಿರುವ ಅಧಿಕಾರಿ/ನೌಕರರಿಗೆ ಅವರು ವಾಸವಾಗಿರುವ ಸ್ಥಳದ ಸುತ್ತಲಿನ 10 ವಾರ್ಡ್‌ಗಳಲ್ಲಿ ಸಮೀಕ್ಷೆ ಕೆಲಸ ನಿರ್ವಹಿಸಲು ಅವಕಾಶ ಮಾಡಿಕೊಡಬೇಕು ಎಂದಿದ್ದಾರೆ.

ವೇತನ ಪಾವತಿ: ಜಿಬಿಎ ಹಾಗೂ ಐದು ನಗರ ಪಾಲಿಕೆಗಳ ಅಧಿಕಾರಿ ಮತ್ತು ನೌಕರರಿಗೆ ವೇತನ ಪಾವತಿಸಲಾಗಿದೆ.

'ಅ.4ರವರೆಗೂ ವೇತನ ಹಾಗೂ ನಿವೃತ್ತರಿಗೆ ಸೌಲಭ್ಯ ಕಲ್ಪಿಸಿಲ್ಲ, ಕೂಡಲೇ ಪಾವತಿಗೆ ಕ್ರಮ ಕೈಗೊಳ್ಳಬೇಕು' ಎಂದು ಗ್ರೇಟರ್ ಬೆಂಗಳೂರು ಪ್ರಾಧಿಕಾರ-ಪಾಲಿಕೆಗಳ ಅಧಿಕಾರಿ ಮತ್ತು ನೌಕರರ ಕ್ಷೇಮಾಭಿವೃದ್ಧಿ ಸಂಘದ ವತಿಯಿಂದ ಶನಿವಾರ ಮನವಿ ಮಾಡಲಾಗಿತ್ತು.

ಮಲ್ಲೇಶ್ವರದಲ್ಲಿರುವ ನಗರ ಪಾಲಿಕೆ ಕಚೇರಿ ಎದುರು ಸಮೀಕ್ಷಕರು ಸೋಮವಾರ ಪ್ರತಿಭಟನೆ ನಡೆಸಿದರು

'10 ವಾರ್ಡ್‌ನಲ್ಲೇ ಎಲ್ಲರಿಗೂ ನಿಯೋಜನೆ ಕಷ್ಟ'

'ಸಮೀಕ್ಷೆ ನಿಯೋಜಿಸಿರುವ ಸುಮಾರು 15 ಸಾವಿರ ಸಮೀಕ್ಷಕರಲ್ಲಿ ಹೆಚ್ಚಿನ ಪ್ರಮಾಣದವರು ಬೆಂಗಳೂರು ದಕ್ಷಿಣ ಹಾಗೂ ಪಶ್ಚಿಮ ಭಾಗದಲ್ಲಿ ವಾಸಿಸುತ್ತಾರೆ. ಎಲ್ಲರಿಗೂ ಅವರ ನಿವಾಸಗಳ ಸುತ್ತಮುತ್ತಲಿನ 10 ವಾರ್ಡ್‌ಗಳಲ್ಲೇ ಸಮೀಕ್ಷೆಗೆ ನಿಯೋಜಿಸುವುದು ಕಷ್ಟವಾಗುತ್ತದೆ. ಹೀಗಾಗಿ, ದೂರದ ಪ್ರದೇಶಗಳಲ್ಲೂ ಸಮೀಕ್ಷೆ ಮಾಡಬೇಕಾಗುತ್ತದೆ' ಎಂದು ಮಲ್ಲೇಶ್ವರದ ಪಾಲಿಕೆ ಕಚೇರಿಯಲ್ಲಿ ಸಮೀಕ್ಷಕರು ನಡೆಸಿದ ಪ್ರತಿಭಟನೆಗೆ ಮಹೇಶ್ವರ್ ರಾವ್ ಪ್ರತಿಕ್ರಿಯಿಸಿದರು.

'ಸಮೀಕ್ಷೆಗೆ ನಿಯೋಜಿಸಿರುವ ಬಹುಪಾಲು ಎಲ್ಲರೂ ಸಮೀಕ್ಷೆಗೆ ತೆರಳಿದ್ದಾರೆ. ಕೆಲವರಿಗಷ್ಟೇ ಸಮಸ್ಯೆ ಇದೆ. ಸಾಧ್ಯವಾದಷ್ಟು ಪರಿಹಾರ ಕಲ್ಪಿಸಲಾಗುತ್ತಿದೆ' ಎಂದು ಹೇಳಿದರು. 'ಜಿಬಿಎ ವ್ಯಾಪ್ತಿಯಲ್ಲಿ ಸಮೀಕ್ಷಕರಿಗೆ ಕೆಲವು ತೊಂದರೆಗಳಾಗಿರುವುದು ನಿಜ. ಒಂದೆರಡು ದಿನ ಇಂತಹ ಸಮಸ್ಯೆ ಇದ್ದೇ ಇರುತ್ತದೆ. ಇನ್ನೆರಡು ದಿನದಲ್ಲಿ ಅವುಗಳನ್ನು ನಿವಾರಿಸಲಾಗುತ್ತದೆ' ಎಂದು ಜಿಬಿಎ ಮುಖ್ಯ ಆಯುಕ್ತ ಮಹೇಶ್ವರ್ ರಾವ್ ತಿಳಿಸಿದರು.

ಲಿಂಗತ್ವ ಅಲ್ಪಸಂಖ್ಯಾತರಿಗೆ ತಾರತಮ್ಯ

ಬೆಂಗಳೂರು: ಹಿಂದುಳಿದ ವರ್ಗಗಳ ಶಾಶ್ವತ ಆಯೋಗ ನಡೆಸುತ್ತಿರುವ ಸಾಮಾಜಿಕ ಮತ್ತು ಶೈಕ್ಷಣಿಕ ಸಮೀಕ್ಷೆಯ ವೇಳೆ ಲಿಂಗತ್ವ ಅಲ್ಪಸಂಖ್ಯಾತರಿಗೆ ತಾರತಮ್ಯ ಮಾಡಲಾಗುತ್ತಿದೆ ಎಂದು ಕರ್ನಾಟಕ ಟ್ರಾನ್ಸ್‌ಜೆಂಡರ್ ಕಾರ್ಯಪಡೆ ಅಸಮಾಧಾನ ವ್ಯಕ್ತಪಡಿಸಿದೆ.

ಲಿಂಗತ್ವ ಅಲ್ಪಸಂಖ್ಯಾತ ಸಮುದಾಯದ ಸಮೀಕ್ಷೆಯಲ್ಲಿ ಆಗುತ್ತಿರುವ ಸಮಸ್ಯೆಗಳ ಕುರಿತು ಸೋಮವಾರ ನಡೆದ ತುರ್ತು ಸಭೆಯಲ್ಲಿ ಈ ಅಸಮಾಧಾನ ವ್ಯಕ್ತವಾಗಿದೆ. ಎಲ್ಲ ಸಮಯದಾಯದವರು ಇರುವಲ್ಲಿಗೆ ಹೋಗಿ ಅವರ ವಿವರ ಪಡೆಯಲಾಗುತ್ತಿದೆ. ಆದರೆ, ಲಿಂಗತ್ವ ಅಲ್ಪಸಂಖ್ಯಾತರನ್ನು ಆಸ್ಪತ್ರೆಗೆ ಬರಲು ಹೇಳುತ್ತಿದ್ದಾರೆ. ಅಲ್ಲಿ ಆಸ್ಪತ್ರೆಯವರು ಶೌಚಾಲಯ ಬಳಕೆ ಮಾಡಲು ಬಿಡುವುದಿಲ್ಲ. ಕುಡಿಯಲು ನೀರೂ ಕೊಡುವುದಿಲ್ಲ. ಲಿಂಗತ್ವ ಅಲ್ಪಸಂಖ್ಯಾತರು ಕೂಡ ಮನುಷ್ಯರು ಎಂಬುದನ್ನು ಮರೆತುಬಿಟ್ಟಿದ್ದಾರೆ ಎಂದು ಕಾರ್ಯಪಡೆಯ ಪದಾಧಿಕಾರಿಗಳು ದೂರಿದರು.

ಈ ಸಮುದಾಯದ ಕೆಲವರು ಉತ್ತಮ ಸ್ಥಿತಿಯಲ್ಲಿದ್ದಾರೆ. ಅವರ ಮನೆಗಳಿಗೆ ಸುತ್ತಮುತ್ತಲಿನ ಲಿಂಗತ್ವ ಸಮುದಾಯದವರನ್ನು ಕರೆಸಿ ಸಮೀಕ್ಷೆ ನಡೆಸಬಹುದು. ಈ ಸಮುದಾಯದ ಸಂಘಟನೆಗಳ ಕಚೇರಿಗಳಿವೆ. ಅಲ್ಲಿಗೆ ಕರೆಸಬಹುದು. ಇಲ್ಲವೇ ಲಿಂಗತ್ವ ಅಲ್ಪಸಂಖ್ಯಾತರು ಇರುವ ಕ್ರೂಸಿಂಗ್ ಸೈಟ್‌ಗಳಲ್ಲಿ ಭೇಟಿಯಾಗಿ ವಿವರ ಪಡೆಯಬಹುದು. ಆದರೆ, ಇವೆಲ್ಲವನ್ನು ಮಾಡದೇ ಆಸ್ಪತ್ರೆಗಳಿಗೆ ಕರೆಸುವುದು ಸರಿಯಲ್ಲ ಎಂದು ಹೇಳಿದರು.

ಲಿಂಗತ್ವ ಅಲ್ಪಸಂಖ್ಯಾತರು ಎಲ್ಲರೂ ಎಚ್‌ಐವಿ ಪೀಡಿತರು ಎಂಬ ತಪ್ಪು ಕಲ್ಪನೆ ಜನರಲ್ಲಿ, ಅಧಿಕಾರಿಗಳಲ್ಲಿ ಇದೆ. ಸಮೀಕ್ಷೆಗೆ ಕರೆಸಿ ರಕ್ತ ಪರೀಕ್ಷೆ ಮಾಡಿಸುತ್ತಿದ್ದಾರೆ. ಸಮೀಕ್ಷೆಗೂ ಆರೋಗ್ಯ ತಪಾಸಣೆಗೂ ಏನು ಸಂಬಂಧ ಎಂದು ಪ್ರಶ್ನಿಸಿದರು.

ಕಾರ್ಯಪಡೆಯ ಅಕ್ಕೈ ಪದ್ಮಸಾಲಿ, ಸೌಮ್ಯಾ, ಕ್ರಿಷ್ಟಿರಾಜ್, ಆರತಿ, ಕುಮಾರ್ ಸಹಿತ ವಿವಿಧ ಮುಖಂಡರು ಭಾಗವಹಿಸಿದ್ದರು.

ವಿದ್ಯಾರ್ಥಿ ಸಾವು

ಚಿಕ್ಕಬಳ್ಳಾಪುರ: ತಾಲ್ಲೂಕಿನ ಕೊತ್ತನೂರು ಗೇಟ್ ಬಳಿ ಸೋಮವಾರ ಸಂಭವಿಸಿದ ಅಪಘಾತದಲಿ ಎಸ್‌ಜೆಸಿಐಟಿಯ ಎಂಜಿನಿಯರಿಂಗ್ ವಿದ್ಯಾರ್ಥಿ ಸುದೀಪ್ (19) ಮೃತಪಟ್ಟಿದ್ದಾರೆ. ಸುದೀಪ್ ಕಾಲೇಜು ಮುಗಿಸಿ ಬೈಕ್‌ನಲ್ಲಿ ದೇವನಹಳ್ಳಿಗೆ ವಾಪಸ್ಸಾಗುತ್ತಿದ್ದರು. ಈ ವೇಳೆ ಕೊತ್ತನೂರು ಗೇಟ್ ಬಳಿ ಬೈಕ್ ಮತ್ತು ಟ್ರಾಕ್ಟರ್ ನಡುವೆ ಡಿಕ್ಕಿ ಸಂಭವಿಸಿದೆ.

'ಮಾನವತಾವಾದಿ' ಪುಸ್ತಕ ಬಿಡುಗಡೆ, ಸಾಕ್ಷ್ಯಚಿತ್ರ ಪ್ರದರ್ಶನ

ಗೋಪಾಲಗೌಡರ ಸಾಧನೆ ಮಾದರಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕಠಿಣ ಪರಿಶ್ರಮ, ಪ್ರಾಮಾಣಿಕತೆ ಮತ್ತು ಬದ್ಧತೆ ಮೂಲಕ ಜೀವನದಲ್ಲಿ ಉನ್ನತ ಸ್ಥಾನಕ್ಕೇರಿದ ವಿ.ಗೋಪಾಲಗೌಡ ಅವರ ಸಾಧನೆ ಇತರರಿಗೆ ಮಾದರಿಯಾಗಿದೆ ಎಂದು ಆಂಧ್ರ ಪ್ರದೇಶದ ಉಪ ಮುಖ್ಯಮಂತ್ರಿ ಪವನ್ ಕಲ್ಯಾಣ್ ಹೇಳಿದರು.

ವಿಧಾನಸೌಧದ ಬ್ಯಾಂಕ್ವೆಟ್ ಹಾಲ್‌ನಲ್ಲಿ ವಿ.ಗೋಪಾಲಗೌಡ ಅಭಿನಂದನಾ ಸಮಿತಿ ಸೋಮವಾರ ಆಯೋಜಿಸಿದ್ದ ವಿ.ಗೋಪಾಲಗೌಡ–75 ಅಭಿನಂದನೆ ಹಾಗೂ ಪುಸ್ತಕ ಬಿಡುಗಡೆ ಸಮಾರಂಭದಲ್ಲಿ ಮಾತನಾಡಿದರು.

'ವಕೀಲರಾಗಿ, ಹೈಕೋರ್ಟ್ ನ್ಯಾಯಮೂರ್ತಿಯಾಗಿ ಮತ್ತು ಸುಪ್ರೀಂ ಕೋರ್ಟ್ ನ್ಯಾಯಮೂರ್ತಿಗಳಾಗಿ ಕಾರ್ಯ ನಿರ್ವಹಿಸಿರುವ ಅವರು, ಧ್ವನಿ ಇಲ್ಲದವರಿಗೆ ಧ್ವನಿಯಾಗಿದ್ದಾರೆ. ಅವರು ಸ್ಫೂರ್ತಿದಾಯಕ ವ್ಯಕ್ತಿ ಮಾತ್ರವಲ್ಲ, ನನಗೆ ಮಾರ್ಗದರ್ಶಕರು. ಸುಪ್ರೀಂ ಕೋರ್ಟ್ ನ್ಯಾಯಮೂರ್ತಿ ಆಗಿದ್ದಾಗ ಹಲವು ವ್ಯಾಜ್ಯಗಳನ್ನು ಇತ್ಯರ್ಥಪಡಿಸಿ, ಉತ್ತಮ ತೀರ್ಪು ನೀಡಿದ್ದಾರೆ. ಆಳವಾಗಿ ಕಾನೂನು ಅಧ್ಯಯನ ಮಾಡಿರುವ ಅವರು, ಸಂವಿಧಾನದ ಬಗ್ಗೆ ಅಪಾರ ಪ್ರೀತಿ ಇಟ್ಟುಕೊಂಡಿದ್ದಾರೆ' ಎಂದರು.

ಕಾನೂನು ಸಚಿವ ಎಚ್.ಕೆ.ಪಾಟೀಲ ಮಾತನಾಡಿ, 'ನನ್ನ ಮತ್ತು ಗೋಪಾಲಗೌಡರ ಜತೆಗಿನ ಸಂಬಂಧ 30 ವರ್ಷ ಹಳೆಯದು. ನಿವೃತ್ತಿ ಬಳಿಕವೂ ಜನಪರ ಹೋರಾಟಗಳಲ್ಲಿ ತೊಡಗಿಸಿಕೊಂಡಿದ್ದು, ಬಡವರ ಮೇಲಿನ ಕಾಳಜಿ ಎಳ್ಳಷ್ಟೂ ಬದಲಾಗಿಲ್ಲ. ನ್ಯಾಯದಾನ ವ್ಯವಸ್ಥೆಯಲ್ಲಿನ ಲೋಪಗಳನ್ನು ತಿಳಿಸಿದ್ದಾರೆ. ದೇಶ ಸೇವೆಯನ್ನು ಮತ್ತಷ್ಟು ಮುಂದುವರಿಸಲಿ' ಎಂದರು.

ಅಭಿನಂದನಾ ನುಡಿಗಳಾಡಿದ ಲೋಕಾಯುಕ್ತ ನಿವೃತ್ತ ನ್ಯಾಯಮೂರ್ತಿ ಸಂತೋಷ್ ಹೆಗ್ಡೆ, 'ಗೋಪಾಲಗೌಡ ಅವರು ಯಾವುದೇ ಒತ್ತಡ, ಪ್ರಭಾವಕ್ಕೆ ಒಳಗಾಗದೇ ತೀರ್ಪುಗಳನ್ನು ನೀಡಿದ್ದಾರೆ. ಸಾಮಾಜಿಕ ಬದ್ಧತೆವುಳ್ಳವರಾಗಿದ್ದು, ಸಮಾಜ ಸೇವೆಯಲ್ಲಿ ತೊಡಗಿಸಿಕೊಂಡಿದ್ದಾರೆ' ಎಂದು ಬಣ್ಣಿಸಿದರು.

ನಿವೃತ್ತ ನ್ಯಾಯಮೂರ್ತಿ ಎಂ.ಎನ್.ವೆಂಕಟಾಚಲಯ್ಯ ಅವರು ವರ್ಚುವಲ್ ಮೂಲಕ ಕಾರ್ಯಕ್ರಮ ಉದ್ಘಾಟಿಸಿದರು. ಸುಪ್ರೀಂ ಕೋರ್ಟ್ ವಿಶ್ರಾಂತ ನ್ಯಾಯಮೂರ್ತಿ ಎ.ಕೆ. ಪಟ್ನಾಯಕ್, ಶಾಸಕ ಜಿ.ಟಿ.ದೇವೇಗೌಡ, ಮಾಜಿ ಶಾಸಕ ವೈ.ಎ.ನಾರಾಯಣಸ್ವಾಮಿ ಮಾತನಾಡಿದರು. ವಕೀಲ ಎಂ.ಎನ್. ಶೇಷಾದ್ರಿ ಅಧ್ಯಕ್ಷತೆ ವಹಿಸಿದ್ದರು.

ವಿಶ್ರಾಂತ ನ್ಯಾಯಮೂರ್ತಿ ಎನ್. ಕೆ.ಸುಧೀಂದ್ರರಾವ್, ಪುಸ್ತಕದ ಸಂಪಾದಕ ಸಂತೇಬಾಚಹಳ್ಳಿ ಡಾ.ಎಸ್.ನಂಜುಂಡಸ್ವಾಮಿ, ಪ್ರಧಾನ ಕಾರ್ಯದರ್ಶಿ ಎಂ.ಎನ್.ಪಿಳ್ಳಪ್ಪ ಹಾಜರಿದ್ದರು. ನಿವೃತ್ತ ನ್ಯಾಯಾಧೀಶೆ ಶಶಿಕಲಾ ಉರಂಕರ್ ಸ್ವಾಗತಿಸಿದರು. ಇದೇ ವೇಳೆ ಮಾನವತಾವಾದಿ ನ್ಯಾಯಮೂರ್ತಿ ವಿ.ಗೋಪಾಲಗೌಡರ ಸಾಕ್ಷ್ಯಚಿತ್ರ ಪ್ರದರ್ಶಿಸಲಾಯಿತು.

ವಿಧಾನಸೌಧದ ಬ್ಯಾಂಕ್ವೆಟ್ ಹಾಲ್‌ನಲ್ಲಿ ನಡೆದ ಕಾರ್ಯಕ್ರಮದಲ್ಲಿ ನಿವೃತ್ತ ನ್ಯಾಯಮೂರ್ತಿ ವಿ. ಗೋಪಾಲಗೌಡ ಮತ್ತು ಉಷಾ ಗೋಪಾಲಗೌಡ ಅವರನ್ನು ಗೌರವಿಸಲಾಯಿತು. ಎ.ಕೆ. ಪಟ್ನಾಯಕ್, ಎನ್. ಸಂತೋಷ್ ಹೆಗ್ಡೆ, ಪವನ್ ಕಲ್ಯಾಣ್, ಎಂ.ಎನ್. ಶೇಷಾದ್ರಿ, ಎಚ್.ಕೆ. ಪಾಟೀಲ ಇದ್ದರು ಪ್ರಜಾವಾಣಿ ಚಿತ್ರ

'18 ತಾಸು ಕೆಲಸ'

'ನ್ಯಾಯಮೂರ್ತಿ ಆಗಿದ್ದಾಗ ಮತ್ತು ನಿವೃತ್ತಿ ಬಳಿಕವೂ ನಿತ್ಯ 18 ತಾಸು ಕೆಲಸ ಮಾಡುತ್ತೇನೆ. ಬದುಕಿರುವವರೆಗೂ ಜನಪರ ಹೋರಾಟದಲ್ಲಿ ತೊಡಗಿರುತ್ತೇನೆ' ಎಂದು ವಿಶ್ರಾಂತ ನ್ಯಾಯಮೂರ್ತಿ ವಿ.ಗೋಪಾಲಗೌಡ ತಿಳಿಸಿದರು.

ಅಭಿನಂದನೆ ಸ್ವೀಕರಿಸಿ ಮಾತನಾಡಿದ ಅವರು, 'ಬಡ ರೈತ ಕುಟುಂಬದಲ್ಲಿ ಜನಿಸಿ, ಕಷ್ಟಪಟ್ಟು ಶಿಕ್ಷಣ ಕಲಿತೆ. ಗ್ರಾಮೀಣ ಪ್ರದೇಶದಲ್ಲಿ ಹಿಮಾಲಯ ಪರ್ವತದಷ್ಟೇ ಸಮಸ್ಯೆ ಇದೆ. ನ್ಯಾಯಮೂರ್ತಿಯಾದ ಕೆಲವೇ ದಿನಗಳಲ್ಲಿ ರಾಜೀನಾಮೆಗೆ ಮುಂದಾಗಿದ್ದೆ. ಹಲವರ ಸಲಹೆ ಮೇರೆಗೆ ನನ್ನ ನಿರ್ಧಾರ ಬದಲಿಸಿದೆ' ಎಂದರು.

'ಪಟ್ಟಭದ್ರ ಹಿತಾಸಕ್ತಿಗಳು ನನ್ನನ್ನು ಕಷ್ಟಕ್ಕೆ ಸಿಲುಕಿಸಿದಾಗ ಸಂತೋಷ್ ಹೆಗ್ಡೆ ಅವರು ನೆರವಿಗೆ ಬಂದರು. ಅಂದಿನ ಸುಪ್ರೀಂ ಕೋರ್ಟ್ ಮುಖ್ಯ ನ್ಯಾಯಮೂರ್ತಿಗೆ ನನ್ನ ಬಗ್ಗೆ ಸತ್ಯಾಂಶ ತಿಳಿಸಿ, ವರ್ಗಾವಣೆ ಮಾಡದಂತೆ ಬೆಂಬಲಕ್ಕೆ ನಿಂತರು. ಇದನ್ನು ಮರೆಯಲು ಸಾಧ್ಯವಿಲ್ಲ' ಎಂದು ನೆನಪಿಸಿಕೊಂಡರು.

ಇನ್‌ಸ್ಪೆಕ್ಟರ್, ಡಿವೈಎಸ್‌ಪಿ ವರ್ಗಾವಣೆ

ಬೆಂಗಳೂರು: ರಾಜ್ಯದ ವಿವಿಧೆಡೆ ಕೆಲಸ ಮಾಡುತ್ತಿದ್ದ 27 ಮಂದಿ ಡಿವೈಎಸ್‌ಪಿಗಳು ಹಾಗೂ ಪೊಲೀಸ್ ಸಿಬ್ಬಂದಿ ಮಂಡಳಿಯ ಸಭೆಯ ನಿರ್ಣಯದಂತೆ 131 ಪೊಲೀಸ್ ಇನ್‌ಸ್ಪೆಕ್ಟರ್‌ಗಳನ್ನು ಪೊಲೀಸ್ ಇಲಾಖೆ ವರ್ಗಾವಣೆ ಮಾಡಿ ಸೋಮವಾರ ರಾತ್ರಿ ಆದೇಶಿಸಿದೆ.

ಎಂಜಿನಿಯರಿಂಗ್ ತರಗತಿ ಆರಂಭ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ವಿದ್ಯಾರ್ಥಿಗಳು ತಮ್ಮಲ್ಲಿರುವ ಶಕ್ತಿ, ಸಾಮರ್ಥ್ಯ ಅರಿತುಕೊಂಡು, ನಿಮ್ಮ ಕ್ಷೇತ್ರವನ್ನು ನೀವೇ ಗುರುತಿಸಿಕೊಂಡು ಯಶಸ್ಸು ಕಾಣಬೇಕು' ಎಂದು ಬೆಂಗಳೂರು ಸಿ- ಡಾಟ್ ಕಂಪನಿಯ ನಿರ್ದೇಶಕ ಡಾ. ದಿಲೀಪ್ ಕೃಷ್ಣಸ್ವಾಮಿ ಹೇಳಿದರು.

ರಾಮಯ್ಯ ಇನ್‌ಸ್ಟಿಟ್ಯೂಟ್ ಆಫ್ ಟೆಕ್ನಾಲಜಿ (ಆರ್‌ಐಟಿ) ಆಯೋಜಿಸಿದ್ದ 2025-26ನೇ ಸಾಲಿನ ಶೈಕ್ಷಣಿಕ ವರ್ಷದ ಮೊದಲ ವರ್ಷದ ಎಂಜಿನಿಯರಿಂಗ್ ವಿದ್ಯಾರ್ಥಿಗಳಿಗೆ ಸ್ವಾಗತ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

'ವಿದ್ಯಾರ್ಥಿಗಳು ಎಲ್ಲರೂ ಕೃತಕ ಬುದ್ಧಿಮತ್ತೆ(ಎಐ) ಮೇಲೆಯೇ ಅವಲಂಬಿತರಾಗಬಾರದು. ಈ ತಂತ್ರಜ್ಞಾನ ಉಪಯೋಗಿಸಿಕೊಂಡು ತಮ್ಮ ಪ್ರತಿಭೆಯನ್ನು ತೋರಿಸಬೇಕು' ಎಂದರು.

ಡಿ.ಎನ್.ವಿ ಬ್ಯುಸಿನೆಸ್ ಅಶ್ಯೂರೆನ್ಸ್ ಕಂಪನಿಯ ಸುಸ್ಥಿರ ಸೇವೆಗಳು ವಿಭಾಗದ ಮುಖ್ಯಸ್ಥ ವಿ.ನಂದಕುಮಾರ್ ಮಾತನಾಡಿ, 'ವಿದ್ಯಾರ್ಥಿಗಳು ಕಾಲೇಜಿನಲ್ಲಿ ಕಲಿಯುವುದರ ಜತೆಗೆ ಹೊರ ಜಗತ್ತಿನಲ್ಲಿ ನಡೆಯುತ್ತಿರುವ ವಿದ್ಯಮಾನಗಳ ಬಗ್ಗೆಯೂ ಅರಿಯಬೇಕು' ಎಂದರು.

'ಎಂಜಿನಿಯರಿಂಗ್ ಕಾಲೇಜು ಆರಂಭವಾದ ಮೇಲೆ ಇದು 64ನೇ ಬ್ಯಾಚ್ ಆಗಿದೆ. ಇಲ್ಲಿ ವ್ಯಾಸಂಗ ಮಾಡಿದ ಬಹುತೇಕ ವಿದ್ಯಾರ್ಥಿಗಳು ಯುಪಿಎಸ್ ಸಿ ಪರೀಕ್ಷೆಯಲ್ಲಿ ಉತ್ತೀರ್ಣರಾಗಿ ಸಮಾಜದಲ್ಲಿ ಒಳ್ಳೆಯ ಸ್ಥಾನ ಅಲಂಕರಿಸಿದ್ದಾರೆ' ಎಂದು ಗೋಕುಲ ಎಜುಕೇಷನ್ ಫೌಂಡೇಷನ್ ಅಧ್ಯಕ್ಷ ಎಂ.ಆರ್. ಸೀತಾರಾಂ ಹೇಳಿದರು.

ಗೋಕುಲ ಎಜುಕೇಷನ್ ಫೌಂಡೇಷನ್ ಉಪಾಧ್ಯಕ್ಷ ಎಂ. ಆರ್. ಜಾನಕಿರಾಮ್, ಕಾರ್ಯದರ್ಶಿ ಎಂ.ಆರ್. ಆನಂದ ರಾಮ್, ನಿರ್ದೇಶಕ ಎಂ.ಆರ್. ಕೋದಂಡ ರಾಮ್, ಆರ್‌ಐಟಿ ಪ್ರಾಂಶುಪಾಲ ಡಾ.ಎನ್.ವಿ.ಆರ್. ನಾಯ್ಡು, ಡಾ.ಎಚ್.ವಿ.ಪಾರ್ಶ್ವನಾಥ್, ಡಾ. ಕರಿಸಿದ್ದಪ್ಪ ಉಪಸ್ಥಿತರಿದ್ದರು.

ರಾಮಯ್ಯ ಇನ್‌ಸ್ಟಿಟ್ಯೂಟ್ ಆಫ್ ಟೆಕ್ನಾಲಜಿಯ 2025–26ನೇ ಸಾಲಿನ ಶೈಕ್ಷಣಿಕ ವರ್ಷದ ಮೊದಲ ವರ್ಷದ ಎಂಜಿನಿಯರಿಂಗ್ ವಿದ್ಯಾರ್ಥಿಗಳಿಗೆ ಸ್ವಾಗತ ಕಾರ್ಯಕ್ರಮದಲ್ಲಿ ತಲ್ಲಂ ವೆಂಕಟೇಶ್, ಡಾ. ಪಾರ್ಶ್ವನಾಥ್, ಎಂ.ಆರ್. ಜಾನಕಿರಾಂ, ದಿಲೀಪ್ ಕೃಷ್ಣಸ್ವಾಮಿ, ಎಂ.ಆರ್. ಸೀತಾರಾಂ, ಎಂ.ಆರ್. ಕೋದಂಡರಾಮ್, ವಿ. ನಂದಕುಮಾರ್, ಎಂ.ಆರ್. ಆನಂದರಾಮ್, ಕರಿಸಿದ್ದಪ್ಪ ಉಪಸ್ಥಿತರಿದ್ದರು

ಹೊಸ ಟೆಂಡರ್ ಕರೆಯಲು ಅನುಮತಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬೆಂಗಳೂರು ಉಪನಗರ ರೈಲು ಯೋಜನೆಯ (ಬಿಎಸ್‌ಆರ್‌ಪಿ) ಕಾರಿಡಾರ್–2ಕ್ಕೆ ಸಂಬಂಧಿಸಿದಂತೆ ಹೊಸದಾಗಿ ಟೆಂಡರ್ ಕರೆಯಲು ಮುಖ್ಯಕಾರ್ಯದರ್ಶಿ ಅವರು ಕರ್ನಾಟಕ ರೈಲು ಮೂಲಸೌಕರ್ಯ ಅಭಿವೃದ್ಧಿ ಎಂಟರ್‌ಪ್ರೈಸರ್ಸ್‌ಗೆ (ಕೆ- ರೈಡ್) ಅನುಮತಿ ನೀಡಿದ್ದಾರೆ. ಎಲ್ ಆ್ಯಂಡ್ ಟಿ ಗುತ್ತಿಗೆ ಕಂಪನಿಯು ಕಾಮಗಾರಿಯನ್ನು ಅರ್ಧದಲ್ಲೇ ನಿಲ್ಲಿಸಿ ಹೊರ ನಡೆದಿರುವುದರಿಂದ ಮೂರು ಪ್ಯಾಕೇಜ್‌ಗಳಲ್ಲಿ ಹೊಸ ಟೆಂಡರ್ ಆಹ್ವಾನಿಸಲು ಕೆ–ರೈಡ್ ಸಿದ್ಧತೆ ಮಾಡಿಕೊಂಡಿದೆ.

ಉಪನಗರ ರೈಲು

ಚಿಕ್ಕಬಾಣಾವರ–ಬೆನ್ನಿಗಾನಹಳ್ಳಿ ನಡುವಿನ ಕಾರಿಡಾರ್–2 ಮಲ್ಲಿಗೆ ಮಾರ್ಗವನ್ನು ಕಾರ್ಯಗತಗೊಳಿಸಲು ಎಲ್ ಆ್ಯಂಡ್ ಟಿ ಕಂಪನಿಯು 2022ರಲ್ಲಿ ಗುತ್ತಿಗೆ ಪಡೆದಿತ್ತು. ಹೀಲಲಿಗೆ- ರಾಜಾನುಕುಂಟೆ ನಡುವಿನ ಕಾರಿಡಾರ್ -4 ಕನಕ ಮಾರ್ಗವನ್ನು ನಿರ್ಮಿಸಲು 2023ರಲ್ಲಿ ಗುತ್ತಿಗೆ ಪಡೆದಿತ್ತು. ಗುತ್ತಿಗೆದಾರರ ಕೋರಿಕೆಯ ಮೇರೆಗೆ ಒಪ್ಪಂದದ ಅವಧಿಯನ್ನು ಕ್ರಮವಾಗಿ ಸೆಪ್ಟೆಂಬರ್ -2026 ಮತ್ತು ಅಕ್ಟೋಬರ್ -2026 ರವರೆಗೆ ವಿಸ್ತರಿಸಲಾಗಿತ್ತು.

ಈ ಮಧ್ಯೆ ಕಳೆದ ಮಾರ್ಚ್‌ನಲ್ಲಿ ಎಲ್ ಆ್ಯಂಡ್ ಟಿ ಕಂಪನಿಯು ಕಾಮಗಾರಿ ಸ್ಥಗಿತಗೊಳಿಸಿತ್ತು. ಗುತ್ತಿಗೆಯನ್ನು ರದ್ದುಗೊಳಿಸಬೇಕು ಎಂದು ಕೋರ್ಟ್ ಮೆಟ್ಟಿಲೇರಿತ್ತು.

ಕೆ–ರೈಡ್ ಮತ್ತು ಎಲ್ ಆ್ಯಂಡ್ ಟಿ ನಡುವೆ ಮಧ್ಯಸ್ಥಿಕೆ ಪ್ರಕ್ರಿಯೆಗಳು ಕೂಡ ಪ್ರಾರಂಭವಾಗಿವೆ. ಮೂರು ಸದಸ್ಯರ ಮಧ್ಯಸ್ಥಿಕೆ ಮಂಡಳಿಗೆ ಹೈಕೋರ್ಟ್, ಸುಪ್ರೀಂಕೋರ್ಟ್‌ನ ನಿವೃತ್ತ ನ್ಯಾಯಮೂರ್ತಿಗಳನ್ನು ನಾಮನಿರ್ದೇಶನ ಮಾಡಲಾಗಿದೆ. ಅಲ್ಲದೇ ಕೆ–ರೈಡ್ ಬ್ಯಾಂಕ್ ಗ್ಯಾರಂಟಿಯನ್ನು ನಗದೀಕರಿಸಲು ವಾಣಿಜ್ಯ ನ್ಯಾಯಾಲಯ ನೀಡಿರುವ ತಡೆಯಾಜ್ಞೆಯನ್ನು ಕೂಡ ಪ್ರಶ್ನಿಸಲಾಗುತ್ತಿದೆ ಎಂದು ಕೆ–ರೈಡ್ ಅಧಿಕಾರಿಗಳು ತಿಳಿಸಿದ್ದಾರೆ.

ಜಿಲ್ಲಾ ಆಸ್ಪತ್ರೆ
ಜಿಲ್ಲಾ ಶಸ್ತ್ರ ಚಿಕಿತ್ಸಕರ ಕಾರ್ಯಾಲಯ, ಬೆಂಗಳೂರು ದಕ್ಷಿಣ ಜಿಲ್ಲೆ. ರಾಮನಗರ – 562 159. ದೂರವಾಣಿ : 080 – 2991 3667, ಇ–ಮೇಲ್ : dsramanagaram@gmail.com
ಸಂಖ್ಯೆ : ಜಿ.ಆ.ರಾ./ಪತ್ರಿಕಾ ಪ್ರಕಟಣೆ/01/2025–26 ದಿನಾಂಕ : 06–10–2025
ಇ-ಪ್ರೊಕ್ಯೂರ್‌ಮೆಂಟ್ ಟೆಂಡರ್ ಪ್ರಕಟಣೆ
ಜಿಲ್ಲಾ ಆಸ್ಪತ್ರೆ, ಬೆಂಗಳೂರು ದಕ್ಷಿಣ ಜಿಲ್ಲೆ ಇಲ್ಲಿನ ಆರೋಗ್ಯ ವಿಭಾಗಕ್ಕೆ 2025–26 ನೇ ಸಾಲಿಗೆ ಅಗತ್ಯವಿರುವ ಇಂಪ್ಲಾಟ್ಸ್ ಮತ್ತು ಇತರೆ ಪರಿಕರಗಳನ್ನು ಖರೀದಿಸಲು ಕೆ.ಟಿ.ಪಿ.ಪಿ. ನಿಯಮಾನುಸಾರ ಅರ್ಹ ಸಂಸ್ಥೆಗಳಿಂದ ಇ–ಪ್ರೊಕ್ಯೂರ್‌ಮೆಂಟ್ ಮೂಲಕ https://kppp.karnataka.gov.in ನಲ್ಲಿ ಅಲ್ಪಾವಧಿ ಇ–ಟೆಂಡರ್ ಆಹ್ವಾನಿಸಲಾಗಿದೆ. ಟೆಂಡರ್‌ನ ಪ್ರಕ್ರಿಯೆಯ ವಿವರ ಈ ಕೆಳಕಂಡಂತಿದೆ.
ಟೆಂಡರ್ ವಿವರ : ಆರ್ಥೋ ವಿಭಾಗದ ಟೆಂಡರ್ ನಂ. DHFWS/2025-26/ IND1864, 1) ಟೆಂಡರ್ ಫಾರಂ ಅನ್ನು ಆನ್‌ಲೈನ್‌ನಲ್ಲಿ ಡೌನ್‌ಲೋಡ್ ಮಾಡುವುದು ದಿನಾಂಕ : 04–10–2025 ರಿಂದ, 2) ಬಿಡ್ ಪೂರ್ವಭಾವಿ ಸಭೆಯ ದಿನಾಂಕ : 08–10–2025 ರ ಮಧ್ಯಾಹ್ನ 3.00 ಗಂಟೆಗೆ, 3) ಆನ್‌ಲೈನ್‌ನಲ್ಲಿ ಟೆಂಡರ್‌ಗಳನ್ನು ಸಲ್ಲಿಸಲು / ಅಪ್‌ಲೋಡ್ ಮಾಡಲು ಕೊನೆಯ ದಿನಾಂಕ : 17–10–2025 ರ ಸಂಜೆ 5.00 ಗಂಟೆಯವರೆಗೆ, 4) ಔಷಧ ಮತ್ತು ಇತರೆ ಸಾಮಗ್ರಿಗಳ ಮಾದರಿ ಸಲ್ಲಿಕೆಯ ದಿನಾಂಕ : 17–10–2025 ಕಛೇರಿ ವೇಳೆಯಲ್ಲಿ, 5) ಆನ್‌ಲೈನ್‌ನಲ್ಲಿ ಸಲ್ಲಿಸಲಾದ ಟೆಂಡರ್‌ಗಳ ಟೆಕ್ನಿಕಲ್ ಬಿಡ್ ತೆರೆಯುವುದು ದಿನಾಂಕ : 18–10–2025 ರ ಸಂಜೆ 5.30 ರ ನಂತರ, 6) ಹಣಕಾಸಿನ ಬಿಡ್ ತೆರೆಯುವುದು ದಿನಾಂಕ : 23–10–2025 ರ ಬೆಳಿಗ್ಗೆ 11.00 ಗಂಟೆಗೆ (ಇ–ಪ್ರೊಕ್ಯೂರ್‌ಮೆಂಟ್ ನಲ್ಲಿ), 7) ಟೆಂಡರ್‌ನ ಅಂದಾಜು ಮೊತ್ತ : ರೂ. 50.00 ಲಕ್ಷಗಳು, 8) ಇ.ಎಂ.ಡಿ. ಮೊತ್ತ (ಇ–ಪೋರ್ಟಲ್ ಮೂಲಕ) : ರೂ. 1,00,000/– (2%).
ಹೆಚ್ಚಿನ ವಿವರಗಳಿಗಾಗಿ ಕಛೇರಿ ವೇಳೆಯಲ್ಲಿ ಸಂಪರ್ಕಿಸಬಹುದಾಗಿದೆ.
ಸಹಿ/– ಜಿಲ್ಲಾ ಶಸ್ತ್ರ ಚಿಕಿತ್ಸಕರು, ಜಿಲ್ಲಾ ಆಸ್ಪತ್ರೆ, ರಾಮನಗರ.
ಡಿಐಪಿಆರ್/ರಾಮನಗರ/375/ಮಣಿಪಾಲ್/2025–26

ಭಾರತ ಸರ್ಕಾರ
ಸಿಬ್ಬಂದಿ, ಸಾರ್ವಜನಿಕ ಕುಂದುಕೊರತೆ ಮತ್ತು ಪಿಂಚಣಿ ಸಚಿವಾಲಯ
ಆಡಳಿತ ಸುಧಾರಣೆಗಳು ಮತ್ತು ಸಾರ್ವಜನಿಕ ಕುಂದುಕೊರತೆಗಳ ಇಲಾಖೆ
ಇ–ಗವರ್ನನ್ಸ್ 2026 : ರಾಷ್ಟ್ರೀಯ ಪ್ರಶಸ್ತಿಗಳು ನಾಮನಿರ್ದೇಶನಗಳಿಗೆ ಆಹ್ವಾನ ಪ್ರಕಟಣೆ
ಇ–ಗವರ್ನನ್ಸ್ ಉಪಕ್ರಮಗಳನ್ನು ಉತ್ತಮವಾಗಿ ಅನುಷ್ಠಾನ ಮಾಡುವಲ್ಲಿನ ಪ್ರಯತ್ನಗಳನ್ನು ಗುರುತಿಸುವ ಮತ್ತು ಆ ಪ್ರಯತ್ನಗಳಲ್ಲಿನ ಉತ್ಕೃಷ್ಟತೆಯನ್ನು ಪ್ರೋತ್ಸಾಹಿಸುವ ನಿಟ್ಟಿನಲ್ಲಿ, ಭಾರತ ಸರ್ಕಾರವು ಪ್ರತಿ ವರ್ಷ ಇ–ಗವರ್ನನ್ಸ್ ಕ್ಷೇತ್ರಕ್ಕೆ ರಾಷ್ಟ್ರೀಯ ಪ್ರಶಸ್ತಿಗಳನ್ನು ನೀಡುತ್ತಲಿದೆ.
ಈ ಪ್ರಶಸ್ತಿ ಯೋಜನೆಗೆ ಸಂಬಂಧಿಸಿದಂತೆ ವಿವರಿಸಲಾಗಿರುವ ಅರ್ಹತಾ ಮಾನದಂಡಗಳ ಪ್ರಕಾರ 7 ಪ್ರವರ್ಗಗಳ ಪರಿಗಣನೆಯ ಮೇರೆಗೆ ಕೇಂದ್ರ ಸಚಿವಾಲಯಗಳಿಂದ, ಇಲಾಖೆಗಳಿಂದ, ರಾಜ್ಯ/ಕೇಂದ್ರಾಡಳಿತ ಸರ್ಕಾರಗಳಿಂದ, ಜಿಲ್ಲೆಗಳಿಂದ, ಸ್ಥಾನಿಕ ಸಂಸ್ಥೆಗಳಿಂದ, ಪಂಚಾಯತಿಗಳಿಂದ, ಕೇಂದ್ರ ಮತ್ತು ರಾಜ್ಯ ಸಾರ್ವಜನಿಕ ಕ್ಷೇತ್ರ ಸಂಸ್ಥೆಗಳಿಂದ, ಶೈಕ್ಷಣಿಕ ಮತ್ತು ಸಂಶೋಧನಾ ಸಂಸ್ಥೆಗಳಿಂದ (ಸರ್ಕಾರಿ ಅಥವಾ ಸರ್ಕಾರೇತರ) ಹಾಗೂ ಸ್ಟಾರ್ಟ್‌ಅಪ್‌ಗಳಿಂದ, 6ನೇ ಅಕ್ಟೋಬರ್, 2025 ರಿಂದ ಜಾರಿಗೊಂಡಂತೆ www.nceg.gov.in ವೆಬ್‌ಸೈಟ್‌ನಲ್ಲಿ ನಾಮನಿರ್ದೇಶನಗಳನ್ನು ಆಹ್ವಾನಿಸಲಾಗಿದೆ.
ಸದರಿ ಯೋಜನೆಗೆ ನಾಮನಿರ್ದೇಶನಗಳನ್ನು ಸಲ್ಲಿಸುವ ನಿಯಮಾವಳಿ, ಮಾರ್ಗಸೂಚಿಗಳು ಮತ್ತು ಇನ್ನಿತರ ವಿವರಗಳು, ಇಲಾಖೆಯ www.darpg.gov.in / www.nceg.gov.in ವೆಬ್‌ಸೈಟ್‌ಗಳಲ್ಲಿ ಲಭ್ಯವಿವೆ. ಪ್ರಶಸ್ತಿ ಯೋಜನೆಯಲ್ಲಿ ನೀಡಲಾಗಿರುವ ವಿವರಗಳ ಪ್ರಕಾರ, ಎಲ್ಲಾ ನಾಮನಿರ್ದೇಶನಗಳನ್ನು ಆನ್‌ಲೈನ್ ವಿಧಾನದಲ್ಲಿ ಸಲ್ಲಿಸತಕ್ಕದ್ದು. ಇಮೇಲ್ ಮೂಲಕ, ಖುದ್ದಾಗಿ, ಅಂಚೆ ಮುಖಾಂತರ, ಕೊರಿಯರ್ ಮೂಲಕ ಅಥವಾ ಫ್ಯಾಕ್ಸ್ ಮಾಧ್ಯಮದಲ್ಲಿ ಸಲ್ಲಿಸಲಾಗುವ ನಾಮನಿರ್ದೇಶನಗಳನ್ನು ಪರಿಗಣಿಸಲಾಗುವುದಿಲ್ಲ. ಅರ್ಜಿ ಸಲ್ಲಿಸುವ ಕೊನೆಯ ದಿನಾಂಕದವರೆಗೆ ತಿದ್ದುಪಡಿ/ಬದಲಾವಣೆಗೆ ಅವಕಾಶವಿರುತ್ತದೆ.
ನಾಮನಿರ್ದೇಶನಗಳನ್ನು ಸಲ್ಲಿಸಲು ಕೊನೆಯ ದಿನಾಂಕ: 30ನೇ ನವಂಬರ್, 2025.
ಸಂಪರ್ಕ ವಿವರಗಳು: ನಿರ್ದೇಶಕರು (ಇ–ಗವರ್ನನ್ಸ್), ಆಡಳಿತ ಸುಧಾರಣೆ ಮತ್ತು ಸಾರ್ವಜನಿಕ ಕುಂದುಕೊರತೆ ಇಲಾಖೆ, 5ನೇ ಮಹಡಿ, ಸರದಾರ್ ಪಟೇಲ್ ಭವನ, ಸಂಸದ ಮಾರ್ಗ, ನವದೆಹಲಿ – 110001. ಇಮೇಲ್: suvasish.das@gov.in ಫೋನ್: 23401457.
CBC 32101/11/0001/2526

ಐಸಿಎಆರ್–ರಾಷ್ಟ್ರೀಯ ಪಶು ಪೋಷಣೆ ಮತ್ತು ಶರೀರ ಕ್ರಿಯಾ ವಿಜ್ಞಾನ ಸಂಸ್ಥೆ
ಆಡುಗೋಡಿ, ಬೆಂಗಳೂರು–560 030
ಕೃಷಿ ಸಂಶೋಧನೆ ಮತ್ತು ಶಿಕ್ಷಣ ಇಲಾಖೆ, ಬಾರತ ಸರ್ಕಾರ
ಎನ್‌ಐಎಎನ್‌ಪಿ/ಎಡಿವಿ–13–ಸಿಡಿಎನ್/2025
ಒಂದು ವರ್ಷದ ಅವಧಿಗೆ ತಾತ್ಕಾಲಿಕ ಆಧಾರದಲ್ಲಿ ಒಂದು ಯಂಗ್ ಪ್ರೊಫೆಷನಲ್ – 1 ಹುದ್ದೆಗೆ ಆಯ್ಕೆ ಮಾಡಿಕೊಳ್ಳಲೆಂದು, ಸದರಿ ಸಂಸ್ಥೆಯಲ್ಲಿ 15.10.2025 (ಬುಧವಾರ) ರಂದು ಬೆಳಗ್ಗೆ 10:30 ಗಂಟೆಗೆ ನೇರ ಸಂದರ್ಶನ ಏರ್ಪಡಿಸಲಾಗಿದೆ. ಕ್ರೋಢಿಕೃತ ಸಂಭಾವನೆ: ಮಾಸಿಕ ರೂ. 30,000/–. ವಿದ್ಯಾರ್ಹತೆ: ಬಿ.ಕಾಂ/ ಬಿಬಿಎ/ ಬಿಬಿಎಸ್. ವಯೋಮಿತಿ: 21 ರಿಂದ 45 ವರ್ಷ. ಆಸಕ್ತಿಯುಳ್ಳ ಅಭ್ಯರ್ಥಿಗಳು, ಸಂದರ್ಶನದ ಸಮಯದಲ್ಲಿ ತಮ್ಮ ಎಲ್ಲಾ ಮೂಲ ದಾಖಲಾತಿಗಳನ್ನು, ಪ್ರಮಾಣಪತ್ರಗಳನ್ನು ಹಾಜರುಪಡಿಸುವುದು ಕಡ್ಡಾಯ. ಅರ್ಜಿ ನಮೂನೆ ಮತ್ತು ವಿವರವಾದ ಜಾಹೀರಾತಿಗಾಗಿ, ದಯವಿಟ್ಟು ಸಂಸ್ಥೆಯ www.nianp.res.in ವೆಬ್‌ಸೈಟ್‌ಗೆ ಭೇಟಿ ಕೊಡಿ.
ಸಹಿ/– ಪ್ರಭಾರಿ ಆಡಳಿತಾಧಿಕಾರಿ

ಉಪನಗರ ವರ್ತುಲ ರಸ್ತೆ (STRR) ಯೋಜನಾ ಪ್ರಾಧಿಕಾರ
ಎಲ್.ಆರ್.ಡಿ.ಇ. ಕಟ್ಟಡ, ನಂ.1, ಆಲಿ ಆಸ್ಕರ್ ರಸ್ತೆ, ಬೆಂಗಳೂರು–560052. ದೂರವಾಣಿ: 080–22263479
ಸಂಖ್ಯೆ: STRRPA/TP/CLU/77/2025-26 ದಿನಾಂಕ: 29–09–2025
ಪ್ರಕಟಣೆ
ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ 1961 ರ ಕಲಂ 14(ಎ) ರ ಅಡಿಯಲ್ಲಿ ಈ ಕೆಳಕಂಡ ಅರ್ಜಿದಾರರು 'ಕೈಗಾರಿಕೆ' ವಲಯದಿಂದ 'ವಸತಿ' ಭೂಉಪಯೋಗಕ್ಕೆ ಭೂಉಪಯೋಗ ಬದಲಾವಣೆ ಕೋರಿ ಅರ್ಜಿ ಸಲ್ಲಿಸಿರುತ್ತಾರೆ. ಭೂಉಪಯೋಗ ಬದಲಾವಣೆ ಪ್ರಸ್ತಾವನೆಯ ವಿವರಗಳು ಈ ಕೆಳಕಂಡಂತೆ ಇರುತ್ತವೆ. ಸದರಿ ಭೂಉಪಯೋಗ ಬದಲಾವಣೆ ಪ್ರಸ್ತಾವನೆಯ ಬಗ್ಗೆ ಯಾವುದೇ ಆಕ್ಷೇಪಣೆಗಳಿದ್ದಲ್ಲಿ, ಈ ಪ್ರಕಟಣೆ ಪ್ರಕಟವಾದ ದಿನಾಂಕದಿಂದ 15 ದಿವಸಗಳೊಳಗಾಗಿ ಆಕ್ಷೇಪಣೆಗಳನ್ನು ಲಿಖಿತವಾಗಿ ಸದಸ್ಯ ಕಾರ್ಯದರ್ಶಿಗಳು, ಉಪನಗರ ವರ್ತುಲ ರಸ್ತೆ (STRR) ಯೋಜನಾ ಪ್ರಾಧಿಕಾರ, ಬೆಂಗಳೂರು ಕಛೇರಿಗೆ ಸಲ್ಲಿಸಲು ತಿಳಿಸಲಾಗಿದೆ. ನಿಗಧಿತ ಅವಧಿಯ ನಂತರ ಬರುವ ಯಾವುದೇ ಆಕ್ಷೇಪಣೆಗಳನ್ನು ಪರಿಗಣಿಸಲಾಗುವುದಿಲ್ಲ.

ಕ್ರ. ಸಂ	ಅರ್ಜಿದಾರರ ಹೆಸರು ಮತ್ತು ವಿಳಾಸ	ತಾಲ್ಲೂಕು	ಹೋಬಳಿ	ಗ್ರಾಮ	ಸ.ನಂ.	ವಿಸ್ತೀರ್ಣ (ಎ–ಗು)	ಅನುಮೋದಿತ ಮಹಾಯೋಜನೆಯಂತೆ ಭೂಉಪಯೋಗ	ಬದಲಾವಣೆ ಕೋರಿರುವ ಭೂಉಪಯೋಗ
1	ಶ್ರೀಮತಿ ಸಾಹಿರದೇವಿ ಕೋಂ. ಶ್ರೀ ಪ್ರತಾಪ್, ಶ್ರೀಮತಿ ಇಂದಿರಾ ಕೋಂ. ಶ್ರೀ ಸುರೇಶ್ ಕುಮಾರ್, ಶ್ರೀ ಬೀರಾರಾಮ್ ಚೌಯಲ್. ಎಂ ಬಿನ್ ಶ್ರೀ ಮಂಗಳ ರಾಮ್, ನಂ. 94, ಬ್ರಾಮಿನ್ಸ್ ಸ್ಟ್ರೀಟ್, ಸರ್ಜಾಪುರ, ಆನೇಕಲ್ ತಾಲ್ಲೂಕು, ಬೆಂಗಳೂರು ನಗರ.	ಆನೇಕಲ್	ಸರ್ಜಾಪುರ	ತಿಂಡ್ಲು	66	0-20	ಕೈಗಾರಿಕೆ	ವಸತಿ
2	ಶ್ರೀ ಹೆಚ್. ಗೋಪಾಲಸ್ವಾಮಿ ಬಿನ್ ಹೆಚ್. ಶ್ರೀನಿವಾಸಯ್ಯ, ನಂ. 94, ಬ್ರಾಮಿನ್ಸ್ ಸ್ಟ್ರೀಟ್, ಸರ್ಜಾಪುರ, ಆನೇಕಲ್ ತಾಲ್ಲೂಕು, ಬೆಂಗಳೂರು ನಗರ.	ಆನೇಕಲ್	ಸರ್ಜಾಪುರ	ತಿಂಡ್ಲು	97	0-19	ಕೈಗಾರಿಕೆ	ವಸತಿ

ಷರಾ:– ಪ್ರಸ್ತಾವನೆಯಲ್ಲಿನ ಪ್ರಶ್ನಿತ ಜಮೀನನ್ನು ವಸತಿ ಉದ್ದೇಶಕ್ಕೆ ಅಭಿವೃದ್ಧಿಪಡಿಸುವುದರಿಂದ ಸುತ್ತಲಿನ ಪ್ರದೇಶ ಅಭಿವೃದ್ಧಿ ಹೊಂದುತ್ತದೆ. ಸ್ಥಳೀಯ ಯುವಕರಿಗೆ, ಕೂಲಿ ಕಾರ್ಮಿಕರಿಗೆ ಉದ್ಯೋಗಾವಕಾಶ ಸೃಷ್ಟಿಯಾಗುತ್ತದೆ. ವಸತಿ ಅವಲಂಬಿತ ಅನ್ಯ ಉದ್ಯಮಗಳು ಅಭಿವೃದ್ಧಿ ಹೊಂದಿ ಹೆಚ್ಚಿನ ಉದ್ಯೋಗಾವಕಾಶಗಳು, ಉದ್ದಿಮೆಗಳು ಸೃಷ್ಟಿಯಾಗುತ್ತವೆ ಎಂಬ ಸಾರ್ವಜನಿಕ ಹಿತಾಸಕ್ತಿ ಅಂಶವನ್ನು ತಿಳಿಸಿರುತ್ತಾರೆ.
ಸಹಿ/–
ಸದಸ್ಯ ಕಾರ್ಯದರ್ಶಿಗಳು ಹಾಗೂ ನಗರ ಮತ್ತು ಗ್ರಾಮಾಂತರ ಯೋಜನಾ ಜಂಟಿ ನಿರ್ದೇಶಕರು, ಉಪನಗರ ವರ್ತುಲ ರಸ್ತೆ (STRR) ಯೋಜನಾ ಪ್ರಾಧಿಕಾರ, ಬೆಂಗಳೂರು.
ವಾಸಾಸಂಇ/ವಾ.ಪ್ರ/3119/ಅಡ್ವರ್ಟೋ/2025–26

ಚಿಟಿಕೆ ಸುದ್ದಿ

ಐವರು ಸಾಧಕರಿಗೆ ವಾಲ್ಮೀಕಿ ಪ್ರಶಸ್ತಿ

ಬೆಂಗಳೂರು: 2025-26ನೇ ಸಾಲಿನ ರಾಜ್ಯ ಮಟ್ಟದ ಮಹರ್ಷಿ ವಾಲ್ಮೀಕಿ ಪ್ರಶಸ್ತಿಗೆ ಐವರನ್ನು ಆಯ್ಕೆ ಮಾಡಲಾಗಿದೆ.

ನಾಗರಾಜು ಗಣಾದ ಹುಣಸೆ, ಬೆಂಗಳೂರು (ಮಾಧ್ಯಮ), ಪಿ.ತಿಪ್ಪೇಸ್ವಾಮಿ, ಚಳ್ಳಕೆರೆ, ಚಿತ್ರದುರ್ಗ ಜಿಲ್ಲೆ (ರಂಗಭೂಮಿ), ಜೆ.ಕೆ.ಮುತ್ತಪ್ಪ, ಚನ್ನಯ್ಯನಕೋಟೆ, ವಿರಾಜಪೇಟೆ ತಾಲ್ಲೂಕು, ಕೊಡಗು ಜಿಲ್ಲೆ (ಸಂಘಟನೆ), ಮಳವಳ್ಳಿ ಲಕ್ಷ್ಮಣ ನಾಯಕೋಡಿ, ವಿಜಯಪುರ (ಸಮಾಜ ಸೇವೆ) ಮತ್ತು ಕೆ.ಉಜ್ಜಿನಪ್ಪ, ಹರಪನಹಳ್ಳಿ, ವಿಜಯನಗರ ಜಿಲ್ಲೆ (ಸಾಮಾಜಿಕ ಸೇವೆ).

ಪ್ರಶಸ್ತಿಯು ಜತೆ ₹5 ಲಕ್ಷ ನಗದು ಮತ್ತು 25 ಗ್ರಾಂ ಚಿನ್ನದ ಪದಕ ನೀಡಲಾಗುವುದು. ಮಂಗಳವಾರ (ಅ.7) ವಾಲ್ಮೀಕಿ ಜಯಂತಿಯ ದಿನ ಪ್ರಶಸ್ತಿ ಪ್ರದಾನ ಮಾಡಲಾಗುವುದು.

‘ರೈತ ಉತ್ಪಾದಕ ಸಂಸ್ಥೆಗಳ ಸಮ್ಮೇಳನ 9ಕ್ಕೆ’

ಆಹಾರ ಸಂಸ್ಕರಣಾ ಉದ್ದಿಮೆಗಳಿಗೆ ₹3 ಕೋಟಿ ಸಹಾಯಧನ: ಶಿವಪ್ರಕಾಶ್

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಪ್ರಧಾನ ಮಂತ್ರಿ ಕಿರು ಆಹಾರ ಸಂಸ್ಕರಣ ಉದ್ದಿಮೆಗಳ ಯೋಜನೆಯಡಿ ರೈತ ಉತ್ಪಾದಕ ಸಂಸ್ಥೆಗಳಿಗೆ ಮೂಲಸೌಕರ್ಯಕ್ಕಾಗಿ ₹3 ಕೋಟಿ ಸಹಾಯಧನ ನೀಡಲಾಗುವುದು’ ಎಂದು ಕರ್ನಾಟಕ ರಾಜ್ಯ ಕೃಷಿ ಉತ್ಪನ್ನಗಳ ಸಂಸ್ಕರಣೆ ಹಾಗೂ ರಫ್ತು ನಿಗಮದ (ಕೆಪೆಕ್) ವ್ಯವಸ್ಥಾಪಕ ನಿರ್ದೇಶಕ ಸಿ.ಎನ್. ಶಿವಪ್ರಕಾಶ್ ತಿಳಿಸಿದರು.

‘ಈ ಬಗ್ಗೆ ಜಾಗೃತಿ ಮೂಡಿಸುವ ಉದ್ದೇಶದಿಂದ ಇದೇ 9ರಂದು ಬೆಂಗಳೂರಿನ ಪುರಭವನದಲ್ಲಿ ಎಫ್‌ಪಿಒಗಳ ಸಮ್ಮೇಳನ ಹಮ್ಮಿಕೊಳ್ಳಲಾಗಿದೆ’ ಎಂದು ಅವರು ಸೋಮವಾರ ಸುದ್ದಿಗೋಷ್ಠಿಯಲ್ಲಿ ಹೇಳಿದರು.

‘ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು 2025–26ನೇ ಸಾಲಿನಲ್ಲಿ ರಾಜ್ಯದಲ್ಲಿ 5 ಸಾವಿರ ಕಿರು ಆಹಾರ ಸಂಸ್ಕರಣ ಘಟಕಗಳನ್ನು ಸ್ಥಾಪಿಸುವಂತೆ ಸೂಚಿಸಿದ್ದಾರೆ. ಬಜೆಟ್‌ನಲ್ಲಿ ಇದಕ್ಕಾಗಿಯೇ ₹206 ಕೋಟಿ ಅನುದಾನ ಒದಗಿಸಲಾಗಿದೆ. ಪಿಎಂಎಫ್‌ಎಂಇ ಯೋಜನೆಯಡಿ ರೈತ ಉತ್ಪಾದಕ ಸಂಸ್ಥೆಗಳು (ಎಫ್‌ಪಿಒ) ಹೆಚ್ಚು ಸೌಲಭ್ಯಗಳನ್ನು ಪಡೆದುಕೊಳ್ಳಬೇಕು ಎಂಬ ಉದ್ದೇಶದಿಂದ ಈ ಸಮ್ಮೇಳನ ಆಯೋಜಿಸಲಾಗುತ್ತಿದೆ. ಕೃಷಿ ಸಚಿವ ಎನ್‌.ಚಲುವರಾಯಸ್ವಾಮಿ ಅವರು ಸಮ್ಮೇಳನ ಉದ್ಘಾಟಿಸಲಿದ್ದಾರೆ.

ಎಫ್‌ಪಿಒ ಪ್ರತಿನಿಧಿಗಳು, ಬ್ಯಾಂಕ್, ನಬಾರ್ಡ್, ಎಸ್‌ಎಲ್‌ಬಿಸಿ ಅಧಿಕಾರಿಗಳು ಭಾಗವಹಿಸಲಿದ್ದಾರೆ’ ಎಂದು ಮಾಹಿತಿ ನೀಡಿದರು.

‘ಎಫ್‌ಪಿಒಗಳು ತಮ್ಮ ಸದಸ್ಯರ ಉತ್ಪನ್ನಗಳನ್ನು ಮೌಲ್ಯವರ್ಧನೆ ಮತ್ತು ಸಂಸ್ಕರಣೆಗೆ ಒಳಪಡಿಸುವ ಮೂಲಕ ಆದಾಯವನ್ನು ಹೆಚ್ಚಿಸಿಕೊಳ್ಳಬಹುದು. ಪಿಎಂಎಫ್‌ಎಂಇ ಯೋಜನೆಯಡಿ ಗರಿಷ್ಠ ₹15 ಲಕ್ಷ ಸಹಾಯ ಧನ ಸಿಗುತ್ತದೆ. ಇದರಲ್ಲಿ ಕೇಂದ್ರ ಸರ್ಕಾರ ₹6 ಲಕ್ಷ ನೀಡಿದರೆ, ರಾಜ್ಯ ಸರ್ಕಾರ ₹9 ಲಕ್ಷ ನೀಡುತ್ತದೆ. ಮೂಲಸೌಕರ್ಯ ಕಲ್ಪಿಸಿಕೊಳ್ಳಲು ಎಫ್‌ಪಿಒಗಳಿಗೆ ಗರಿಷ್ಠ ₹3 ಕೋಟಿವರೆಗೆ ಸಹಾಯಧನ ಸಿಗುತ್ತದೆ. ಉತ್ಪನ್ನಗಳ ಬ್ರ್ಯಾಂಡಿಂಗ್ ಮತ್ತು ಮಾರುಕಟ್ಟೆಗೆ ಶೇ 50ರಷ್ಟು ಸಹಾಯಧನ ನೀಡಲಾಗುತ್ತದೆ’ ಎಂದು ತಿಳಿಸಿದರು.

‘ಸಮ್ಮೇಳನದಲ್ಲಿ ಪಿಎಂಎಫ್‌ಎಂಇ ಯೋಜನೆಯ ಸಮಗ್ರ ಮಾಹಿತಿ, ಎಫ್‌ಪಿಒಗಳು ಬ್ಯಾಂಕ್‌ಗಳಲ್ಲಿ ಸಾಲ ಪಡೆಯಲು ಅನುಸರಿಸಬೇಕಾದ ಕ್ರಮಗಳ ಕುರಿತು ಪ್ರಾತ್ಯಕ್ಷಿಕೆ, ಸಂವಾದ ನಡೆಯಲಿದೆ. ಸಿರಿಧಾನ್ಯಗಳು, ಇತರ ಧಾನ್ಯಗಳು, ಹಣ್ಣು, ತರಕಾರಿ ಮತ್ತು ಪ್ಲಾಂಟೇಷನ್ ಬೆಳೆಗಳು, ಸಾಂಬಾರು ಪದಾರ್ಥಗಳನ್ನು ಮೌಲ್ಯವರ್ಧಿತ ಉತ್ಪನ್ನಗಳನ್ನಾಗಿ ಮಾಡುವ ಕುರಿತು ತಾಂತ್ರಿಕ ಅಧಿವೇಶನಗಳು ನಡೆಯಲಿವೆ’ ಎಂದು ಮಾಹಿತಿ ನೀಡಿದರು.

7,517 ಮಂದಿಗೆ ಸಹಾಯಧನ

ಪಿಎಂಎಫ್‌ಎಂಇ ಯೋಜನೆಯಡಿ ಇದುವರೆಗೂ 7,517 ಫಲಾನುಭವಿಗಳು ಸಹಾಯಧನ ಪಡೆದಿದ್ದಾರೆ. ಈ ವರ್ಷ ಇನ್ನೂ 5 ಸಾವಿರ ಮಂದಿಗೆ ಸಹಾಯಧನ ನೀಡಲು ಗುರಿ ನಿಗದಿಪಡಿಸಲಾಗಿದೆ. ದಸರಾ ಹಾಗೂ ದೀಪಾವಳಿ ಹಬ್ಬದ ಅಂಗವಾಗಿ ಮಹಿಳೆಯರಿಗೆ ವಿಶೇಷ ಅಭಿಯಾನ ನಡೆಯುತ್ತಿದೆ. ಈ ಯೋಜನೆಯಡಿ ಶೇ 47ರಷ್ಟು ಮಹಿಳೆಯರು ಸಹಾಯಧನ ಪಡೆದುಕೊಂಡು ಉದ್ದಿಮೆಗಳನ್ನು ಸ್ಥಾಪಿಸಿಕೊಂಡಿದ್ದಾರೆ. ಇದನ್ನು ಶೇ 75ಕ್ಕೆ ಹೆಚ್ಚಿಸುವ ಉದ್ದೇಶವಿದೆ. ರಾಜ್ಯದಲ್ಲಿ ಒಟ್ಟು 1,400ಕ್ಕೂ ಹೆಚ್ಚು ಎಫ್‌ಪಿಒಗಳಿದ್ದು, ಇದರಲ್ಲಿ ಕೃಷಿ ಇಲಾಖೆಗೆ ಸಂಬಂಧಿಸಿದಂತೆ 160 ಎಫ್‌ಪಿಒಗಳಿವೆ. ಇವು ಈ ಯೋಜನೆಯ ಸೌಲಭ್ಯ ಪಡೆದು ಕೊಳ್ಳಬೇಕು’ ಎಂದು ಸಿ.ಎನ್. ಶಿವಪ್ರಕಾಶ್ ವಿವರಿಸಿದರು.

ಸಿ.ಎನ್. ಶಿವಪ್ರಕಾಶ್

ಕಾರ್ಯಕ್ರಮದಲ್ಲಿ ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷ ಬಿ.ವೈ.ವಿಜಯೇಂದ್ರ ಅವರು ಬಿಜೆಪಿಯ ಕೇಂದ್ರ ಶಿಸ್ತು ಸಮಿತಿ ಅಧ್ಯಕ್ಷ ಓಂ ಪಾಠಕ್ ಅವರನ್ನು ಗೌರವಿಸಿದರು. [illegible] ಸಿ.ಕೆ.ರಾಮಮೂರ್ತಿ, ಛಲವಾದಿ ನಾರಾಯಣಸ್ವಾಮಿ, ಎನ್. ರವಿಕುಮಾರ್ ಪಾಲ್ಗೊಂಡಿದ್ದರು

‘ಮತದಾರರ ಪಟ್ಟಿ ಶುದ್ಧೀಕರಣ ಅತ್ಯಗತ್ಯ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ವಿದೇಶೀಯರು ಒಳನುಸುಳಿ ಭಾರತೀಯ ನಾಗರಿಕರ ರೀತಿಯಲ್ಲಿ ಮತದಾನ ಮಾಡುವುದಕ್ಕೆ ಅವಕಾಶ ಸಿಕ್ಕಿದರೆ ಅವರಿಂದ ದೇಶದ ಏಕತೆ ಮತ್ತು ಸಮಗ್ರತೆಗೆ ಧಕ್ಕೆ ಬರುತ್ತದೆ ಎಂದು ಬಿಜೆಪಿ ಕೇಂದ್ರೀಯ ಶಿಸ್ತು ಸಮಿತಿ ಅಧ್ಯಕ್ಷ ಓಂ ಪಾಠಕ್ ಹೇಳಿದರು.

ಬಿಎಲ್‌ಎ–ಎ1 ರಾಜ್ಯ ಮಟ್ಟದ ಕಾರ್ಯಾಗಾರದಲ್ಲಿ ಭಾಗವಹಿಸಲು ಬಂದಿದ್ದ ಅವರು ಸುದ್ದಿಗಾರರ ಜತೆ ಮಾತನಾಡಿದರು. ದೇಶಾದ್ಯಂತ ಮತದಾರರ ಪಟ್ಟಿಯ ವಿಶೇಷ ಸಮಗ್ರ ಪರಿಶೀಲನೆ (ಎಸ್‌ಐಆರ್) ನಡೆಸಲು ಚುನಾವಣಾ ಆಯೋಗ ನಿರ್ಧರಿಸಿದೆ, ರಾಜ್ಯದಲ್ಲೂ ಇದು ನಡೆಯಲಿದೆ ಎಂದರು.

2004ರವರೆಗೆ ನಿರಂತರವಾಗಿ ಎಸ್‌ಐಆರ್ ನಡೆಯುತ್ತಿತ್ತು. ಕೇಂದ್ರದಲ್ಲಿ ಕಾಂಗ್ರೆಸ್ ಅಧಿಕಾರಕ್ಕೆ ಬಂದ ಬಳಿಕ ಅದನ್ನು ರದ್ದು ಮಾಡಿದ್ದರು. ಮತ್ತೆ ಅದನ್ನು ಆರಂಭಿಸಿರುವುದು ಧನಾತ್ಮಕ ಕ್ರಮ ಎಂದು ಪಾಠಕ್ ಹೇಳಿದರು.

‘ಬಿಹಾರದಲ್ಲಿ ಹೊಸ ಮತ ದಾರರ ಪಟ್ಟಿ ಹೊರಬಿದ್ದಿದೆ. ಮೃತರು, ಸ್ಥಳದಲ್ಲಿ ಇಲ್ಲದವರನ್ನು ಕೈಬಿಡಲಾಗಿದೆ. ಮುಂದಿನ ದಿನಗಳಲ್ಲಿ ನಕಲಿ ಮತದಾರರಿಗೆ ಅವಕಾಶ ಇರುವುದಿಲ್ಲ ಎಂಬ ವಿಶ್ವಾಸ ನಮಗಿದೆ’ ಎಂದರು.

ಜನಸ್ನೇಹಿ ಉತ್ಸವವಾಗಿ ಆಚರಣೆ: ಉಸ್ತುವಾರಿ ಸಚಿವ ಕೃಷ್ಣ ಬೈರೇಗೌಡ ಹೇಳಿಕೆ

ಹಾಸನಾಂಬ: ವಿಐಪಿ ಸಂಸ್ಕೃತಿಗೆ ತೆರೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಇದೇ 9ರಿಂದ 23ರವರೆಗೆ ನಡೆಯುವ ಹಾಸನಾಂಬ ಜಾತ್ರಾ ಮಹೋತ್ಸವವನ್ನು ಜನಸ್ನೇಹಿ ಉತ್ಸವವಾಗಿ ನಡೆಸಲಾಗುವುದು ಮತ್ತು ವಿಐಪಿ ಸಂಪ್ರದಾಯಕ್ಕೆ ತೆರೆ ಎಳೆಯಲಾಗುವುದು ಎಂದು ಹಾಸನ ಜಿಲ್ಲಾ ಉಸ್ತುವಾರಿ ಸಚಿವ ಕೃಷ್ಣ ಬೈರೇಗೌಡ ತಿಳಿಸಿದರು.

ವಿಕಾಸಸೌಧದಲ್ಲಿ ಸೋಮವಾರ ಹಾಸನ ಜಿಲ್ಲಾ ಜನಪ್ರತಿನಿಧಿಗಳ ಜತೆ ಸಭೆ ನಡೆಸಿ ಬಳಿಕ ಅವರು ಸುದ್ದಿಗಾರರಿಗೆ ವಿವರ ನೀಡಿದರು.

ಹಾಸನಾಂಬ ಉತ್ಸವದಲ್ಲಿ ವಿಐಪಿ ಸಂಸ್ಕೃತಿಯಿಂದ ಸ್ಥಳೀಯರು ಬೇಸತ್ತಿದ್ದರು. ಈ ವರ್ಷದಿಂದ ಅದನ್ನು ಸಂಪೂರ್ಣವಾಗಿ ನಿಲ್ಲಿಸಲಾಗುವುದು. ಕಳೆದ ವರ್ಷ ಹಾಸನದಲ್ಲಿ ವಿಐಪಿಗಳ ಎಸ್ಕಾರ್ಟ್‌ಗಳದ್ದೇ ಸದ್ದು ಹೆಚ್ಚಾಗಿತ್ತು. ಆದರೆ ಈ ವರ್ಷ ಅದಕ್ಕೆ ಅವಕಾಶವಿಲ್ಲ. ರಾಜ್ಯಪಾಲರು, ಮುಖ್ಯಮಂತ್ರಿ, ಉಪ ಮುಖ್ಯಮಂತ್ರಿ, ಗೃಹ ಸಚಿವರು, ಹೈಕೋರ್ಟ್, ಸುಪ್ರೀಂ ಕೋರ್ಟ್ ನ್ಯಾಯಮೂರ್ತಿಗಳು ಮತ್ತು ಮಾಜಿ ಪ್ರಧಾನಿಯವರಿಗೆ ಮಾತ್ರ ಎಸ್ಕಾರ್ಟ್ ವ್ಯವಸ್ಥೆ ನೀಡಲಾಗುವುದು ಎಂದರು.

ಶಾಸಕರು, ಸಚಿವರು, ನ್ಯಾಯಾಧೀಶರು, ಕ್ರೀಡಾಪಟುಗಳು, ಸಿನಿಮಾ ತಾರೆಯರು ಸೇರಿ ಉಳಿದ ಗಣ್ಯ ವ್ಯಕ್ತಿಗಳು ತಾವು ದೇವಾಲಯಕ್ಕೆ ಭೇಟಿ ನೀಡುವ ಬಗ್ಗೆ ಇ–ಮೇಲ್ ಅಥವಾ ಫೋನ್ ಕರೆ ಮೂಲಕ ಮೊದಲೇ ತಿಳಿಸಬೇಕು. ಮಾಹಿತಿ ನೀಡುವ ಗಣ್ಯ ವ್ಯಕ್ತಿಗಳನ್ನು ಜಿಲ್ಲಾಡಳಿತ ನಿಯೋಜಿಸುವ ವಾಹನದಲ್ಲಿ ದೇವಾಲಯಕ್ಕೆ ಕರೆ ತಂದು ದೇವರ ದರ್ಶನಕ್ಕೆ ವ್ಯವಸ್ಥೆ ಮಾಡಲಾಗುವುದು. ಗಣ್ಯ ವ್ಯಕ್ತಿಗಳಿಗೆ ತಮ್ಮ ಕುಟುಂಬದ ನಾಲ್ಕು ಜನ ಸದಸ್ಯರನ್ನು ಜತೆಗೆ ಕರೆತರಲು ಅವಕಾಶ ನೀಡಲಾಗಿದೆ. ಆದರೆ, ಖಾಸಗಿ ವಾಹನಗಳ ಮೂಲಕ ದೇವಾಲಯಕ್ಕೆ ಬರಲು ಅವಕಾಶವಿಲ್ಲ ಎಂದರು.

25 ಲಕ್ಷ ಜನ ನಿರೀಕ್ಷೆ: ಹಾಸನಾಂಬ ದೇವಾಲಯಕ್ಕೆ ಈ ವರ್ಷ 25 ಲಕ್ಷ ಜನ ಬರುವ ನಿರೀಕ್ಷೆ ಇದೆ. 2021 ರಲ್ಲಿ 1 ಲಕ್ಷ, 2022 ರಲ್ಲಿ 3 ಲಕ್ಷ, 2023 ರಲ್ಲಿ 6 ಲಕ್ಷ ಮತ್ತು 2024 ರಲ್ಲಿ 20 ಲಕ್ಷ ಭಕ್ತರು ಬಂದಿದ್ದರು. ಈ ಬಾರಿ ಹೆಚ್ಚು ಜನ ಬರುವ ಸಾಧ್ಯತೆ ಇರುವುದರಿಂದ ಎಲ್ಲಾ ಇಲಾಖೆಗಳನ್ನು ಒಳಗೊಂಡು ಸುಗಮ ತಯಾರಿಗೆ ಜಿಲ್ಲಾಡಳಿತ ಎಲ್ಲ ರೀತಿಯ ಸಿದ್ಧತೆ ಮಾಡಿಕೊಂಡಿದೆ ಎಂದು ಕೃಷ್ಣ ಬೈರೇಗೌಡ ತಿಳಿಸಿದರು.

ಜನ ಸಂದಣಿ ನಿಯಂತ್ರಿಸುವ ಸಲುವಾಗಿ 2,000 ಪೊಲೀಸರನ್ನು ನೇಮಕ ಮಾಡಲಾಗಿದೆ. 280ಕ್ಕೂ ಹೆಚ್ಚು ಸಿಸಿಟಿವಿ ಕ್ಯಾಮೆರಾ ಅಳವಡಿಸ ಲಾಗಿದೆ. ಡ್ರೋನ್ ಕ್ಯಾಮೆರಾ ಸಹ ಬಳಸಲಾಗುವುದು. ಎಲ್ಲದಕ್ಕೂ ಎಐ ತಂತ್ರಜ್ಞಾನ ಬಳಸಲಾಗಿದೆ. ಸ್ಥಳದಲ್ಲೇ ನಿಯಂತ್ರಣ ಕೊಠಡಿ ನಿರ್ಮಿಸಿದ್ದು, ಯಾವುದೇ ಅಹಿತಕರ ಘಟನೆ ಗೆ ಆಸ್ಪದ ನೀಡುವುದಿಲ್ಲ ಎಂದರು.

ದೇವರ ದರ್ಶನಕ್ಕೆ ₹1,000 ಪಾಸ್

ದೇವರ ದರ್ಶನಕ್ಕೆ ₹1,000 ಮತ್ತು ₹300ರ ಪಾಸ್‌ಗಳನ್ನು ವಿತರಿಸಲಾಗುವುದು. ಪಾಸ್ ಪಡೆದವರಿಗೆ ದೇವರ ದರ್ಶನದ ಜತೆಗೆ ಪ್ರಸಾದವನ್ನೂ ನೀಡಲಾಗುವುದು ಎಂದು ಕೃಷ್ಣ ಬೈರೇಗೌಡ ಹೇಳಿದರು.

ಒಂದು ಪಾಸ್‌ಗೆ ಒಬ್ಬರಿಗೆ ಮಾತ್ರ ಅವಕಾಶ ಇರಲಿದೆ. ಎಸ್ಕಾರ್ಟ್‌ನಲ್ಲಿ ಬರುವವರಿಗೆ ಬೆಳಿಗ್ಗೆ 10.30 ರಿಂದ ಮಧ್ಯಾಹ್ನ 12.30ರವರೆಗೆ ಅವಕಾಶ ಇರಲಿದೆ. ಪಾಸ್ ಪಡೆದವರಿಗೆ ಬೆಳಿಗ್ಗೆ 7.30ರಿಂದ 10ರ ಅವಧಿಯಲ್ಲಿ ಪ್ರವೇಶ ನೀಡಲಾಗುವುದು. ಒಂದು ದಿನಕ್ಕೆ 1,000 ಪಾಸ್‌ಗಳನ್ನು ಮಾತ್ರ ವಿತರಿಸಲಾಗುವುದು. ಸಮಯ ಮೀರಿ ಬಂದವರಿಗೆ ಅವಕಾಶ ಇರುವುದಿಲ್ಲ ಎಂದರು.

ಕಲಬುರಗಿ: ವಿವಿಧೆಡೆ ಉತ್ತಮ ಮಳೆ

ಕಲಬುರಗಿ: ನಗರ ಸೇರಿದಂತೆ ಜಿಲ್ಲೆಯಲ್ಲಿ ಭಾನುವಾರ ರಾತ್ರಿ ಮಳೆಯಾಗಿದೆ. ಕಾಳಗಿಯಲ್ಲಿ ಸೋಮವಾರ ನಸುಕಿನಜಾವ ಮಳೆಯಾಗಿದೆ.

ಚಿಂಚೋಳಿ ತಾಲ್ಲೂಕಿನಲ್ಲೂ ಭಾರಿ ಮಳೆಯಾದ ಪರಿಣಾಮ ಕಾಳಗಿಯ ರೌದ್ರಾವತಿ ನದಿ ಉಕ್ಕೇರಿ ಐತಿಹಾಸಿಕ ನೀಲಕಂಠ ಕಾಳೇಶ್ವರ ಮಂದಿರಕ್ಕೆ ನುಗ್ಗಿತ್ತು. ಇದರಿಂದ ಏಳೆಂಟು ತಾಸಿನವರೆಗೆ ದೇವರ ದರ್ಶನ ಮತ್ತು ಪೂಜೆಗೆ ಅಡಚಣೆಯಾಯಿತು.

ಕೊಡದೂರ ರಸ್ತೆ ಮಾರ್ಗದ ಹಳೇ ಸೇತುವೆ (ಢೋರ ಹಳ್ಳ) ಜಲಾವೃತವಾಗಿದೆ. ಕುಡಳ್ಳಿ ಗ್ರಾಮದ ನಾಲಾ ಒಡೆದು ಏಳೆಂಟು ಮನೆಗಳಿಗೆ ನೀರು ನುಗ್ಗಿ ದೈನಂದಿನ ಬಳಕೆಯ ವಸ್ತುಗಳನ್ನು ಹಾಳು ಮಾಡಿದೆ. ರಾಜಾಪುರ ಇಂದ ಕಾಳಗಿ –ಕೊಡದೂರ ಸಂಪರ್ಕ ಕಡಿತವಾಗಿದೆ.

ಸೋಮವಾರ ಬೆಳಿಗ್ಗೆ 8.30ಕ್ಕೆ ಕೊನೆಗೊಂಡಂತೆ ಕಳೆದ 24 ಗಂಟೆಗಳಲ್ಲಿ ರಾಜ್ಯದಲ್ಲೇ ಅತ್ಯಧಿಕ ಜಿಲ್ಲೆಯ ಸೇಡಂ ತಾಲ್ಲೂಕಿನ ಆಡಕಿಯಲ್ಲಿ 10.45 ಸೆಂ.ಮೀ ಮಳೆ ಸುರಿದಿದೆ .ಆಳಂದ ತಾಲ್ಲೂಕಿನ ಹಿರೊಳ್ಳಿಯಲ್ಲಿ 9.35 ಸೆಂ. ಮೀ.., ಅಫಜಲಪುರ ತಾಲ್ಲೂಕಿನ ಉಡಚಣದಲ್ಲಿ 8.7 ಸೆಂ.ಮೀ ಮಳೆಯಾದ ಬಗೆಗೆ ವರದಿಯಾಗಿದೆ.

ವಾಲ್ಮೀಕಿ ಸಮಾಜಕ್ಕೆ ಸಚಿವ ಸ್ಥಾನ: ಮನವಿ

ಬೆಳಗಾವಿ: ‘ಖಾಲಿಯಿರುವ ಎರಡು ಸಚಿವ ಸ್ಥಾನಗಳನ್ನು ವಾಲ್ಮೀಕಿ ಸಮಾಜದವರಿಗೆ ನೀಡಲು ಕೋರಿ ವಾಲ್ಮೀಕಿ ಶ್ರೀಗಳ ನೇತೃತ್ವದಲ್ಲಿ ಮಂಗಳವಾರ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರಿಗೆ ಮನವಿ ಮಾಡಲಾಗುವುದು’ ಎಂದು ಸಚಿವ ಸತೀಶ ಜಾರಕಿಹೊಳಿ ಹೇಳಿದರು. ‘ಉಳಿದ ಎರಡೂವರೆ ವರ್ಷ ಯಾರು ಮುಖ್ಯಮಂತ್ರಿ ಎಂಬ ಗೊಂದಲಕ್ಕೆ ತೆರೆ ಬಿದ್ದಿದೆ ಎಂದು ಭಾವಿಸಿದ್ದೇನೆ. ಪಕ್ಷದ ಕೆಲವರಲ್ಲಿನ ಗೊಂದಲವನ್ನು ಹೈಕಮಾಂಡ್ ಸರಿಪಡಿಸಬೇಕು’ ಎಂದು ಸೋಮವಾರ ಸುದ್ದಿಗಾರರಿಗೆ ತಿಳಿಸಿದರು.

ಸಾಮಾಜಿಕ ಮತ್ತು ಶೈಕ್ಷಣಿಕ ಸಮೀಕ್ಷೆಯ ಪ್ರಶ್ನಾವಳಿ ಕುರಿತು ಪ್ರತಿಕ್ರಿಯಿಸಿದ ಅವರು, ‘ಹಲವಾರು ಪ್ರಶ್ನೆಗಳಿಗೆ ಉತ್ತರಿಸಲು ಜನರು ಹಿಂಜರಿಯುತ್ತಾರೆ. ಪ್ರಶ್ನೆಗಳನ್ನು ಕಡಿಮೆಗೊಳಿಸಿದರೆ ಒಳ್ಳೆಯದು’ ಎಂದರು.

ಸಂಕ್ಷಿಪ್ತ ಸುದ್ದಿ

‘ಬಸವೇಶ್ವರರ ಹೆಸರಿನಲ್ಲಿ ಸಮಾಜ ಒಡೆವ ಕೆಲಸ’

ಮಾನ್ವಿ (ರಾಯಚೂರು ಜಿಲ್ಲೆ): ‘ಕೆಲವರು ಬಸವೇಶ್ವರರ ಹೆಸರಿನಲ್ಲಿ ಸಮಾಜ ಒಡೆಯಲು ಮುಂದಾಗಿದ್ದಾರೆ’ ಎಂದು ಬಾಳೆಹೊನ್ನೂರಿನ ರಂಭಾಪುರಿ ಪೀಠದ ವೀರಸೋಮೇಶ್ವರ ರಾಜದೇಶಿಕೇಂದ್ರ ಶಿವಾಚಾರ್ಯರು ಸೋಮವಾರ ಹೇಳಿದರು. ಪಟ್ಟಣದಲ್ಲಿ ಕಲ್ಮಠದ ಸುವರ್ಣ ದಸರಾ ಮಹೋತ್ಸವ ನಿಮಿತ್ತ ಧರ್ಮಸಭೆಯಲ್ಲಿ ಮಾತನಾಡಿದ ಅವರು, ‘ಸಾಮಾಜಿಕ ಹಾಗೂ ಶೈಕ್ಷಣಿಕ ಸಮೀಕ್ಷೆಯ ಮೂಲಕ ಸಮಾಜ ಒಡೆಯಲಾಗುತ್ತಿದೆ’ ಎಂದರು.

‘ಎಲ್ಲರೂ ಒಂದೇ ಎನ್ನುವ ಸಂದೇಶ ನೀಡಿದ್ದ ಬಸವಣ್ಣನವರ ಹೆಸರಿನಲ್ಲಿ ವೀರಶೈವ –ಲಿಂಗಾಯತ ಬೇರೆ ಎನ್ನುವ ಮೂಲಕ ಅವರ ವಿಚಾರಧಾರೆಗಳಿಗೆ ಅಪಚಾರ ಎಸಗಲಾಗುತ್ತಿದೆ’ ಎಂದು ಹೇಳಿದರು.

ರಮಾನಂದ ಬನಾರಿಗೆ ಕೇಶವ ಪ್ರಶಸ್ತಿ

ಉಡುಪಿ: ಸಾಹಿತಿ ಡಾ.ರಮಾನಂದ ಬನಾರಿ ಅವರನ್ನು 2025ನೇ ಸಾಲಿನ ಕೇಶವ ಪ್ರಶಸ್ತಿಗೆ ಆಯ್ಕೆ ಮಾಡಿರುವುದಾಗಿ ರಾಷ್ಟ್ರಕವಿ ಗೋವಿಂದ ಪೈ ಸಂಶೋಧನಾ ಕೇಂದ್ರದ ಆಡಳಿತಾಧಿಕಾರಿ ಬಿ. ಜಗದೀಶ್ ಶೆಟ್ಟಿ ತಿಳಿಸಿದ್ದಾರೆ.

ಪ್ರಶಸ್ತಿ ₹25 ಸಾವಿರ ನಗದು ಒಳಗೊಂಡಿದೆ. ಪ್ರಶಸ್ತಿ ಪ್ರದಾನ ಸಮಾರಂಭ ಇದೇ 18 ರಂದು ಎಂಜಿಎಂ ಕಾಲೇಜಿನಲ್ಲಿ ನಡೆಯಲಿದೆ. ವೈದ್ಯರಾಗಿರುವ ರಮಾನಂದ ಅವರು ತಾಳಮದ್ದಳೆ ಅರ್ಥಧಾರಿಯೂ ಆಗಿದ್ದು, 20ಕ್ಕೂ ಹೆಚ್ಚು ಕೃತಿ ರಚಿಸಿದ್ದಾರೆ.

ಬಿ.ಎ. ವಿವೇಕ ರೈಗೆ ಕಾರಂತ ಪ್ರಶಸ್ತಿ

ಉಡುಪಿ: ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಡಾ.ಶಿವರಾಮ ಕಾರಂತ ಟ್ರಸ್ಟ್‌ನ ಮೊದಲ ಡಾ.ಶಿವರಾಮ ಕಾರಂತ ಪ್ರಶಸ್ತಿಗೆ ವಿಶ್ರಾಂತ ಕುಲಪತಿ ಪ್ರೊ. ಬಿ.ಎ. ವಿವೇಕ ರೈ ಆಯ್ಕೆಯಾಗಿದ್ದಾರೆ.

ಪ್ರಶಸ್ತಿ ₹ 25 ಸಾವಿರ ನಗದು ಒಳಗೊಂಡಿದೆ. ಇದೇ 11ರಂದು ಸಂಜೆ 4 ಗಂಟೆಗೆ ಎಂ.ಜಿ.ಎಂ.ಕಾಲೇಜಿನ ರವೀಂದ್ರ ಕಲಾ ಮಂಟಪದಲ್ಲಿ ಕಾರಂತರ ಜನ್ಮದಿನೋತ್ಸವ, ಸಾಹಿತ್ಯೋತ್ಸವ ಕಾರ್ಯಕ್ರಮದಲ್ಲಿ ಪ್ರಶಸ್ತಿ ಪ್ರದಾನವಾಗಲಿದೆ.

ಆಂಬುಲೆನ್ಸ್ ಚಾಲಕರ ವಿಚಾರಣೆ

ಮಂಗಳೂರು: ಧರ್ಮಸ್ಥಳ ಗ್ರಾಮದಲ್ಲಿ ನಡೆದಿದೆ ಎನ್ನಲಾದ ಅಪರಾಧ ಪ್ರಕರಣಗಳ ತನಿಖೆ ನಡೆಸುತ್ತಿರುವ ವಿಶೇಷ ತನಿಖಾ ತಂಡದ ಅಧಿಕಾರಿಗಳು, ಇಬ್ಬರು ಆಂಬುಲೆನ್ಸ್ ಚಾಲಕರನ್ನು ಸೋಮವಾರವೂ ವಿಚಾರಣೆಗೆ ಒಳಪಡಿಸಿದರು.

ಬೆಳ್ತಂಗಡಿ ಎಸ್‌ಐಟಿ ಕಚೇರಿಗೆ ಹಾಜರಾದ ಜಲೀಲ್ ಹಾಗೂ ಹಮೀದ್ ಅವರು, ಧರ್ಮಸ್ಥಳ ಗ್ರಾಮದಲ್ಲಿ ಪತ್ತೆಯಾದ ಶವಗಳನ್ನು ಸಾಗಿಸಿದ ಕುರಿತು ಎಸ್‌ಐಟಿ ಅಧಿಕಾರಿಗಳು ಕೇಳಿದ ಪ್ರಶ್ನೆಗಳಿಗೆ ಉತ್ತರಿಸಿದರು. ಶನಿವಾರವೂ (ಅ.4) ಇಬ್ಬರ ವಿಚಾರಣೆ ನಡೆದಿತ್ತು.

ನೇತ್ರಾವತಿ ಸ್ನಾನಘಟ್ಟದ ಪಕ್ಕದ ಕಾಡಿನಲ್ಲಿ, ಶವದ ಅವಶೇಷಗಳು ನೆಲದ ಮೇಲೆ ಪತ್ತೆಯಾದ ಪ್ರದೇಶಕ್ಕೆ ಅರಣ್ಯ ಇಲಾಖೆ ಸಿಬ್ಬಂದಿ ತೆರಳಿ ಸೋಮವಾರ ಪರಿಶೀಲನೆ ನಡೆಸಿದರು. ಎಸ್‌ಐಟಿಯ ವಾಹನದಲ್ಲಿ ಸ್ಥಳಕ್ಕೆ ಬಂದ ಅವರು ಕೆಲಹೊತ್ತು ಕಾಡಿನಲ್ಲಿದ್ದು ಮರಳಿದರು. ಅವಶೇಷಗಳು ಪತ್ತೆಯಾದ ಸ್ಥಳವು ಮೀಸಲು ಅರಣ್ಯ ಪ್ರದೇಶವಾಗಿದೆ. ಇದಕ್ಕೆ ಸಂಬಂಧಿಸಿದ ಖಚಿತ ದಾಖಲೆ ಸಲ್ಲಿಸಲು ಪರಿಶೀಲನೆ ನಡೆಸಲುಕಾಡಿಗೆ ತೆರಳಿದ್ದರುಎಂದುಮೂಲಗಳುತಿಳಿಸಿವೆ.

9ರಂದು ಜನಾಗ್ರಹ ದಿನ ಆಚರಣೆ

ಬೆಳ್ತಂಗಡಿ (ದಕ್ಷಿಣ ಕನ್ನಡ): ಸೌಜನ್ಯಾ ಅತ್ಯಾಚಾರ, ಕೊಲೆ ಪ್ರಕರಣಕ್ಕೆ ಅ. 9ರಂದು 13 ವರ್ಷ ತುಂಬುತ್ತಿದ್ದು ಆ ದಿನವನ್ನು ರಾಜ್ಯದಾದ್ಯಂತ ನ್ಯಾಯಕ್ಕಾಗಿ ಜನಾಗ್ರಹ ದಿನವನ್ನಾಗಿ ಆಚರಿಸಲು ‘ಧರ್ಮಸ್ಥಳ ದೌರ್ಜನ್ಯ ವಿರೋಧಿ ವೇದಿಕೆ’ ಕರೆ ನೀಡಿದೆ.

ಅಂದು ತಾಲ್ಲೂಕು, ಜಿಲ್ಲಾ ಮಟ್ಟದಲ್ಲಿ ವಿವಿಧ ಕಾರ್ಯಕ್ರಮಗಳನ್ನು ಹಮ್ಮಿಕೊಂಡು ತಹಶೀಲ್ದಾರ್, ಜಿಲ್ಲಾಧಿಕಾರಿಗಳಿಗೆ ಮನವಿ ಸಲ್ಲಿಸಲಾಗುವುದು. ವೇದವಲ್ಲಿ, ಪದ್ಮಲತಾ, ಆನೆ ಮಾವುತ ನಾರಾಯಣ, ಸಹೋದರಿ ಯಮುನಾ ಮತ್ತು ಸೌಜನ್ಯಾ ಪ್ರಕರಣಗಳಲ್ಲಿ ನ್ಯಾಯ ಸಿಗಬೇಕು. ಎಸ್‌ಐಟಿ ತನಿಖೆ ಸರಿಯಾದ ದಾರಿಯಲ್ಲಿ ಸಾಗಬೇಕು ಒತ್ತಾಯಿಸ ಲಾಗುವುದು ಎಂದು ತಿಳಿಸಲಾಗಿದೆ.

ಬೆಳ್ತಂಗಡಿ ಅಂಬೇಡ್ಕರ್ ಭವನದಲ್ಲಿ ಬೆಳಿಗ್ಗೆ 10ಕ್ಕೆ ‘ಧರ್ಮಸ್ಥಳ ದೌರ್ಜನ್ಯಗಳು: ಇತಿಹಾಸ ಮತ್ತು ವರ್ತಮಾನ' ಎಂಬ ಪುಸ್ತಕ ಬಿಡುಗಡೆ ಆಗಲಿದೆ.

ಜಲಾಶಯಗಳ ನೀರಿನ ಮಟ್ಟ (ಸಮುದ್ರ ಮಟ್ಟದಿಂದ)

ಜಲಾಶಯ	ಗರಿಷ್ಠ ಮಟ್ಟ (ಅಡಿಗಳಲ್ಲಿ)	ಇಂದಿನ ಮಟ್ಟ	ಒಳಹರಿವು (ಕ್ಯೂಸೆಕ್‌ಗಳಲ್ಲಿ)	ಹೊರಹರಿವು (ಕ್ಯೂಸೆಕ್‌ಗಳಲ್ಲಿ)
ಕೆ ಆರ್ ಎಸ್ *	124.80	123.34	5,847	5,909
ಹಾರಂಗಿ	2,859	2,858.5	1,205	1,491
ಕಬಿನಿ	2,284.00	2,283.05	397	1,050
ಹೇಮಾವತಿ	2,922	2,917.68	4,292	6,610
ಲಿಂಗನಮಕ್ಕಿ	1,819	1,816.40	3,212	4,275
ಸೂಪಾ (ಮೀ)	564	559.55	2,362.73	4,674.14
ಮಾಣಿ	595	594.21	406	635
ತುಂಗಭದ್ರಾ	1,633	1,626.06	13,092	12,850
ಮಲಪ್ರಭಾ	2,079.5	2,079.50	394	394
ಘಟಪ್ರಭಾ	2175	2,174.81	2,015	1,541
ಭದ್ರಾ *	186	184.2	3,603	3,904
ಆಲಮಟ್ಟಿ (ಮೀ)	519.6	519.58	35,385	35,385
ನಾರಾಯಣಪುರ (ಮೀ)	492.25	492.24	36,000	36,390

* ನೆಲಮಟ್ಟದಿಂದ

ಸಂವಿಧಾನ: ರಾಜ್ಯಮಟ್ಟದ ಪ್ರಬಂಧ ಸ್ಪರ್ಧೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಸರ್ಕಾರಿ ಕಲಾ ಕಾಲೇಜು ಹಾಗೂ ಸಂವಿಧಾನ ಓದು ಅಭಿಯಾನ–ಕರ್ನಾಟಕದ ವತಿಯಿಂದ ಸಂವಿಧಾನದ ಕುರಿತು ರಾಜ್ಯ ಮಟ್ಟದ ಪ್ರಬಂಧ ಸ್ಪರ್ಧೆಯನ್ನು ಆಯೋಜಿಸಲಾಗಿದೆ.

ಪದವಿ ಓದುತ್ತಿರುವ ವಿದ್ಯಾರ್ಥಿಗಳಿಗೆ, ಬೆಂಗಳೂರಿನಲ್ಲಿರುವ ಸರ್ಕಾರಿ ಕಲಾ ಕಾಲೇಜಿನಲ್ಲಿ ಅಕ್ಟೋಬರ್ 25ರಂದು ಪ್ರಬಂಧ ಸ್ಪರ್ಧೆ ಆಯೋಜಿಸಲಾಗಿದೆ ಎಂದು ಕಾಲೇಜಿನ ಪ್ರಾಂಶುಪಾಲ ಬಿ.ಸಿ. ನಾಗೇಂದ್ರ ಕುಮಾರ್ ತಿಳಿಸಿದ್ದಾರೆ.

ಸಂವಿಧಾನ ಮತ್ತು ಮೂಲಭೂತ ಹಕ್ಕುಗಳು-ಕರ್ತವ್ಯಗಳು, ಸಂವಿಧಾನ ಮತ್ತು ಸಾಮಾಜಿಕ ನ್ಯಾಯ, ಸಂವಿಧಾನ ಮತ್ತು ಮಹಿಳೆ, ಸಂವಿಧಾನ ಮತ್ತು ಒಕ್ಕೂಟ ವ್ಯವಸ್ಥೆ ವಿಷಯಗಳಿವೆ. ವಿದ್ಯಾರ್ಥಿಗಳು ಯಾವುದಾದರೂ ಒಂದು ವಿಷಯವನ್ನು ಆಯ್ದುಕೊಂಡು ಕನ್ನಡ ಅಥವಾ ಇಂಗ್ಲಿಷ್‌ನಲ್ಲಿ ಪ್ರಬಂಧ ಬರೆಯಬಹುದು ಎಂದಿದ್ದಾರೆ.

ಪ್ರಥಮ ಬಹುಮಾನ ₹15 ಸಾವಿರ, ದ್ವಿತೀಯ ಬಹುಮಾನ ₹10 ಸಾವಿರ, ತೃತೀಯ ಬಹುಮಾನ ₹5 ಸಾವಿರವಿದ್ದು, 50 ಮಂದಿಗೆ ತಲಾ ₹1 ಸಾವಿರ ಮೊತ್ತದ ಸಮಾಧಾನಕರ ಬಹುಮಾನ ನೀಡಲಾಗುತ್ತದೆ ಎಂದು ಅಭಿಯಾನದ ಸಂಚಾಲಕ ಬಿ. ರಾಜಶೇಖರ ಮೂರ್ತಿ ತಿಳಿಸಿದ್ದಾರೆ. ಒಂದು ಕಾಲೇಜಿನ ಇಬ್ಬರು ವಿದ್ಯಾರ್ಥಿಗಳಿಗೆ ಮಾತ್ರ ಅವಕಾಶವಿದ್ದು, ಕಾಲೇಜಿನ ಪ್ರಾಂಶುಪಾಲರಿಂದ ಪಡೆದ ದೃಢೀಕರಣ ಪತ್ರವನ್ನು ಅ.20ರೊಳಗೆ ಪ್ರಾಂಶುಪಾಲರು, ಸರ್ಕಾರಿ ಕಲಾ ಕಾಲೇಜು, ಡಾ.ಬಿ.ಆರ್. ಅಂಬೇಡ್ಕರ್ ವೀಧಿ, ಬೆಂಗಳೂರು- 560 001 ಈ ವಿಳಾಸಕ್ಕೆ ಕಳುಹಿಸಿಕೊಡಬೇಕು.

ಪ್ರಬಂಧ ಸ್ಪರ್ಧೆಯ ದಿನ ಕಾಲೇಜಿನ ಗುರುತಿನ ಚೀಟಿಯೊಂದಿಗೆ ಭಾಗವಹಿಸ ಬಹುದು ಎಂದಿದ್ದಾರೆ.

ವಿವರಗಳಿಗೆ: 74839 50580.

ಕರ್ನಾಟಕ ಜೀವವೈವಿಧ್ಯ ಮಂಡಳಿ
(ಅರಣ್ಯ, ಜೀವಿಪರಿಸ್ಥಿತಿ ಮತ್ತು ಪರಿಸರ ಇಲಾಖೆ)
ನೆಲಮಹಡಿ, "ವನವಿಕಾಸ", 18ನೇ ಅಡ್ಡರಸ್ತೆ, ಮಲ್ಲೇಶ್ವರಂ, ಬೆಂಗಳೂರು – 560 003.

2025–26 ನೇ ಸಾಲಿನ ಕರ್ನಾಟಕ ಜೀವವೈವಿಧ್ಯ ಪ್ರಶಸ್ತಿ

ಕ್ರ.ಸಂ.	ಪ್ರಶಸ್ತಿಯ ಹೆಸರು	ಬಹುಮಾನ
1	ಜೀವವೈವಿಧ್ಯತೆ ಸಂರಕ್ಷಣೆ	ಪ್ರತಿ ಪ್ರಶಸ್ತಿಗೆ ರೂ. 50,000/– ಹಾಗೂ ಪ್ರಮಾಣಪತ್ರ ನೀಡಲಾಗುವುದು.
2	ಪಾರಂಪರಿಕ/ಸಾವಯವ ಕೃಷಿ ಪದ್ಧತಿ	
3	ಅತ್ಯುತ್ತಮ ಜೀವವೈವಿಧ್ಯ ನಿರ್ವಹಣಾ ಸಮಿತಿ	
4	ಅತ್ಯುತ್ತಮ ಜೀವವೈವಿಧ್ಯ ಸಾಕ್ಷ್ಯ ಚಿತ್ರ	
5	ವೈದ್ಯ ಶರಣ ಸಂಗಣ್ಣ ಪ್ರಶಸ್ತಿ	

ದಿನಾಂಕ: 31.10.2025 ರ ಸಂಜೆ 5:00 ಗಂಟೆಯೊಳಗಾಗಿ ಮುದ್ದಾಂ ಅಥವಾ ಅಂಚೆ ಮೂಲಕ ಅರ್ಜಿಗಳನ್ನು ಮಂಡಳಿಗೆ ಸಲ್ಲಿಸಬಹುದಾಗಿರುತ್ತದೆ. ಹೆಚ್ಚಿನ ಮಾಹಿತಿಗಾಗಿ ಈ ಕೆಳಗಿನ ವಿಳಾಸಕ್ಕೆ ಸಂಪರ್ಕಿಸಬಹುದಾಗಿದೆ.
ಕರ್ನಾಟಕ ಜೀವವೈವಿಧ್ಯ ಮಂಡಳಿ (ಅರಣ್ಯ, ಜೀವಿಪರಿಸ್ಥಿತಿ ಮತ್ತು ಪರಿಸರ ಇಲಾಖೆ), ನೆಲಮಹಡಿ, "ವನವಿಕಾಸ", 18ನೇ ಅಡ್ಡರಸ್ತೆ, ಮಲ್ಲೇಶ್ವರ, ಬೆಂಗಳೂರು–560003. ದೂರವಾಣಿ ಸಂಖ್ಯೆ: 080–23448783 ಅಂತರ್ಜಾಲ: **kbb.karnataka.gov.in**
ವಾಸಾಸಂಇ/ವಾಪ್ರ/ಜೆಎ/3099/2025–26

ReMS ರಾಷ್ಟ್ರೀಯ ಇ ಮಾರ್ಕೆಟ್ ಸರ್ವೀಸಸ್ ಪ್ರೈ. ಲಿಮಿಟೆಡ್
ನಂ.16, 2ನೇ ರಾಜಭವನ ರಸ್ತೆ, ಬೆಂಗಳೂರು – 560 001
Ph No: 9448188405 ಇ–ಮೇಲ್: krishnamurthy.vremsl.in
ಸಂಖ್ಯೆ: ADM: 04–01/2025–26 ದಿನಾಂಕ: 07.10.2025
ಸಂಕ್ಷಿಪ್ತ ಇ–ಟೆಂಡರ್ ಅಧಿಸೂಚನೆ
ಕರ್ನಾಟಕ ರಾಜ್ಯ ಕೃಷಿ ಮಾರುಕಟ್ಟೆ ಮಂಡಳಿ ಕಟ್ಟಡದ 2ನೇ ಮಹಡಿಯ ನವೀಕರಣಕ್ಕಾಗಿ ರಾಷ್ಟ್ರೀಯ ಇ ಮಾರ್ಕೆಟ್ ಸರ್ವೀಸಸ್ ಪ್ರೈವೇಟ್ ಲಿಮಿಟೆಡ್, ಸಂಕ್ಷಿಪ್ತ ಟೆಂಡರ್ ಆಹ್ವಾನಿಸುತ್ತಿದೆ. ಈ ಕುರಿತು ಹೆಚ್ಚಿನ ಮಾಹಿತಿಯನ್ನು www.kppp.karnataka.gov.in ಪೋರ್ಟಲ್‌ನಲ್ಲಿ ಇಂಡೆಂಟ್ ಸಂಖ್ಯೆ REMSL/2025-26/BD/WORK_INDENT1 ಅಥವಾ www.remsl.in ನಲ್ಲಿ ಪಡೆಯಬಹುದು. ಬಿಡ್‌ಗಳನ್ನು ಸಲ್ಲಿಸಲು ಕೊನೆಯ ದಿನಾಂಕ 23.10.2025.
ಸಹಿ/–
ಹಿರಿಯ ಸಲಹೆಗಾರರು
ರಾಷ್ಟ್ರೀಯ ಇ ಮಾರ್ಕೆಟ್ ಸರ್ವೀಸಸ್ ಪ್ರೈ. ಲಿಮಿಟೆಡ್

ಮಂಗಳೂರು ವಿದ್ಯುಚ್ಛಕ್ತಿ ಸರಬರಾಜು ಕಂಪನಿ ನಿಯಮಿತ
(ಕರ್ನಾಟಕ ಸರ್ಕಾರದ ಸ್ವಾಮ್ಯಕ್ಕೆ ಒಳಪಟ್ಟಿದೆ)
ಕಾರ್ಪೊರೇಟ್ ಕಚೇರಿ, "ಮೆಸ್ಕಾಂ ಭವನ", ಬಿಜೈ, ಮಂಗಳೂರು–575004
ದೂರವಾಣಿ: 0824–2885795 CIN: U40109 KA 2002 SGC 030425
ಕ್ರಮ ಸಂಖ್ಯೆ: E-252880 ದಿನಾಂಕ: 03.10.2025
ಟೆಂಡರು ಪ್ರಕಟಣೆ (ಕೆ.ಪಿ.ಪಿ ಪೋರ್ಟಲ್ ವಿಧಾನದಲ್ಲಿ ಮಾತ್ರ)
ಮವಿಸಕಂ ವ್ಯಾಪ್ತಿಯಲ್ಲಿ ಎರಡು ವರ್ಷದ ಅವಧಿಗೆ ಈ ಕೆಳಕಂಡ ಮಾದರಿಯ ಕಂಬದ ತಯಾರಿಕೆ ಹಾಗೂ ಸರಬರಾಜಿಗಾಗಿ ಟೆಂಡರನ್ನು ಆಹ್ವಾನಿಸುತ್ತಿದೆ:

ಟೆಂಡರು ಸಂಖ್ಯೆ	ಖರೀದಿಸಲು ಉದ್ದೇಶಿಸಿರುವ ಸಾಮಾಗ್ರಿಯ ವಿವರ	ಪ್ರಮಾಣ (ಸಂಖ್ಯೆಗಳು)
MESCOM/2025-26/ IND0138	9.5 ಮೀ ಆರ್.ಸಿ.ಸಿ ಕಂಬ	1000

ಆಸಕ್ತ ಬಿಡ್ಡುದಾರರು www.kppp.karnataka.gov.in ಜಾಲತಾಣಕ್ಕೆ ದಿನಾಂಕ 08.10.2025 ರ ನಂತರ ಲಾಗಾನ್ ಮಾಡಬಹುದಾಗಿದೆ.
ಸಹಿ/–ಅಧೀಕ್ಷಕ ಇಂಜಿನಿಯರ್(ವಿ)(ಖರೀದಿ)
DIPR/DK/KSMCA/888/25-26 dt: 06.10.2025
ವಿದ್ಯುತ್ ಸಂಬಂಧಿತ ದೂರು ಮತ್ತು ಸಹಾಯಕ್ಕಾಗಿ ಉಚಿತ ದೂರವಾಣಿ ಸಂಖ್ಯೆ 1912ಕ್ಕೆ ಕರೆ ಮಾಡಿ

ಮಂಡ್ಯ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ ಮಂಡ್ಯ
(ಕರ್ನಾಟಕ ಸರ್ಕಾರದ ಸ್ವಾಯುತ್ತ ಸಂಸ್ಥೆ)
E-mail Address:mimsmandya@gmail.com,
ದೂ : 08232–222086
ಸಂಖ್ಯೆ:ಮಿಮ್ಸ್/ಸಿಬ್ಬಂದಿ(2)/101/2016–17 ದಿ:04.10.2025
ಪತ್ರಿಕಾ ಪ್ರಕಟಣೆಯ ಅಂತಿಮ ನೋಟಿಸ್
ವಿಷಯ: ಶ್ರೀಮತಿ ಶೈಜಾ ಮ್ಯಾಥ್ಯೂ, ಶುಶ್ರೂಷಾಧಿಕಾರಿ ಇವರು ಕರ್ತವ್ಯಕ್ಕೆ ಅನಧಿಕೃತ ಗೈರು ಹಾಜರಾಗಿರುವ ಬಗ್ಗೆ.
ಉಲ್ಲೇಖ: ಈ ಸಂಸ್ಥೆಯಿಂದ ನೀಡಲಾಗಿರುವ ಸಮ ಸಂಖ್ಯೆಯ ತಿಳುವಳಿಕೆ ಪತ್ರ / ನೋಟಿಸ್‌ಗಳ ದಿ: 19.06.2025. ದಿ:10.07.2025. ದಿ:22.07.2025 ಮತ್ತು ದಿ:25.07.2025.
ಶ್ರೀಮತಿ ಶೈಜಾ ಮ್ಯಾಥ್ಯೂ, ಶುಶ್ರೂಷಾಧಿಕಾರಿ, ಮಂಡ್ಯ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ, ಮಂಡ್ಯ ಆದ ತಾವು ದಿನಾಂಕ:04.10.2024 ರಿಂದ ಪ್ರಸ್ತುತ ದಿನಾಂಕದವರೆವಿಗೂ ಅನಧಿಕೃತ ಗೈರು ಹಾಜರಾಗಿದ್ದು, ಕರ್ನಾಟಕ ನಾಗರೀಕ ಸೇವಾ ನಡತೆ ನಿಯಮಗಳು 2021ರ ನಿಯಮ(3)ನ್ನು ಸ್ಪಷ್ಟವಾಗಿ ಉಲ್ಲಂಘಿಸಿರುತ್ತೀರಿ. ಆದ್ದರಿಂದ ಈ ಪತ್ರಿಕಾ ಪ್ರಕಟಣೆ ಮೂಲಕ ಅಂತಿಮ ನೋಟಿಸ್ ನೀಡಲಾಗುತ್ತಿದ್ದು, ಪತ್ರಿಕಾ ಪ್ರಕಟಣೆ ಹೊರಡಿಸಿದ ದಿನಾಂಕದಿಂದ 15 ದಿನಗಳೊಳಗೆ ಈ ಕಛೇರಿಗೆ ಖುದ್ದು ಹಾಜರಾಗಿ ವರದಿ ನೀಡುವುದು ಅಥವಾ ತಮ್ಮ ಲಿಖಿತ ರೂಪದ ಸಮಜಾಯಿಷಿಯನ್ನು ಈ ಕಛೇರಿಗೆ ಸಲ್ಲಿಸುವುದು. ಇಲ್ಲವಾದಲ್ಲಿ ತಮ್ಮ ಸಮಜಾಯಿಷಿ ಏನು ಇಲ್ಲವೆಂದು ತೀರ್ಮಾನಿಸಿ ನಿಮ್ಮ ಮೇಲೆ ಏಕಪಕ್ಷೀಯವಾಗಿ ಕರ್ನಾಟಕ ನಾಗರೀಕ ಸೇವಾ ನಿಯಮಗಳು, ನಿಯಮ 108 ಮತ್ತು ಕರ್ನಾಟಕ ನಾಗರೀಕ ಸೇವಾ (ವರ್ಗೀಕರಣ, ನಡತೆ, ಅಪೀಲು) ನಿಯಮಗಳು 1957ರನ್ವಯ ದುರ್ನಡತೆ ಎಂದು ಪರಿಗಣಿಸಿ ನಿಮ್ಮನ್ನು ಸೇವೆಯಿಂದ ವಜಾಗೊಳಿಸಲಾಗುವುದು.
ಸಹಿ/–ನಿರ್ದೇಶಕರು, ಮಂಡ್ಯ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ, ಮಂಡ್ಯ.
ವಾಸಾಸಂಇ/ಸನಿ–ಮಂ/ಕೆಎಸ್‌ಎಂಸಿ&ಎ/483/2025–26

OFFICE OF THE PRINCIPAL CHIEF COMMISSIONER OF INCOME TAX
Karnataka & Goa Region, Bengaluru, Central Revenue Building
No. 01, Queens Road, Bengaluru - 560001
EXPRESSION OF INTEREST
The Income Tax Department, Bengaluru invites ‘Expression of Interest’ from Interested Parties, being Public Sector Undertakings set up by the Central or State Government to carry out civil or electrical works or any other Central/State Government Organisation/PSU notified by the Ministry of Urban Development for such purpose, as stipulated in GFR, 2017(amended as on date), for submission of conceptual plans/designs for construction of Residential Quarters for Income Tax Department at Plot No.02, Infantry Road, Bengaluru – 560 001.
Detailed ‘Expression of Interest’ is published in our official website: **www.incometaxkarnatakagoa.gov.in**
Sd/-
Dy. Commissioner of Income Tax (HQ)(Infra.)
For the Pr. Chief Commissioner of Income Tax
Karnataka and Goa region, Bengaluru.

ಕರ್ನಾಟಕ ನೀರಾವರಿ ನಿಗಮ ನಿಯಮಿತ
(ಕರ್ನಾಟಕ ಸರ್ಕಾರದ ಉದ್ಯಮ)
ಕಾರ್ಯಪಾಲಕ ಇಂಜನೀಯರ್ ಕನೀನಿನಿ ರವರ ಕಛೇರಿ, ಕೆ.ಪಿ.ಸಿ. ವಿಭಾಗ ನಂ.2, ಭಾಲ್ಕಿ–585328
NO: EE/KNNL/KPCD-2/Bhalki/PB/TND/2025-26/691 Date:03-10-2025
::ಕೆಪಿಪಿ ಪ್ರೊಕ್ಯೂರಮೇಂಟ್ ಅಲ್ಪಾವಧಿ ಟೆಂಡರ ಪ್ರಕಟಣೆ::
ವ್ಯವಸ್ಥಾಪಕ ನಿರ್ದೇಶಕರು ಕನೀನಿನಿ.ಬೆಂಗಳೂರು ಇವರ ಪರವಾಗಿ ಕೆಳಗೆ ಸಹಿ ಮಾಡಿರುವವರಿಂದ ಕಾರಂಜಾ ಯೋಜನೆ ನಿರ್ಮಾಣ ವಿಭಾಗ ನಂ–2 ಭಾಲ್ಕಿ ಅಡಿಯಲ್ಲಿ 4701 ಲೆಕ್ಕ ಶಿರ್ಷಿಕೆ ಅಡಿಯಲ್ಲಿ ಕಾಮಗಾರಿಗಳಿಗೆ ಅರ್ಹ ಗುತ್ತಿಗೆದಾರರಿಂದ ಕೆಪಿಪಿ ಪ್ರೊಕ್ಯೂರಮೇಂಟ್‌ನಲ್ಲಿ ಶೇಕಡವಾರು ದ್ವಿ–ಲಕೋಟೆಯಲ್ಲಿ ಟೆಂಡರ ಕರೆಯಲಾಗಿದ್ದು, ವಿವರ ಈ ಕೆಳಗಿನಂತಿದೆ.ಈ ಕಾಮಗಾರಿಯ ಟೆಂಡರ್‌ಗಿಟ್ಟ ಮೊತ್ತ **ರೂ.53,10,000/–**(ಐವತ್ತು ಮೂರು ಲಕ್ಷ ಹತ್ತು ಸಾವಿರವರೆಗೆ ಮಾತ್ರ ಇದ್ದು), ಇ.ಎಂ.ಡಿ. ಮೊತ್ತವು ಇ–ಪೋರ್ಟಲ್ ನಲ್ಲಿರುವಂತೆ.
1) ಕೆಪಿಪಿ ಪ್ರೊಕ್ಯೂರಮೇಂಟ್‌ನಲ್ಲಿ kppp.Karnataka.gov.in ಖಾಲಿ ಟೆಂಡರ ಫಾರ್ಮಗೆ work Indent no KNNL /2025-26/SE0254, ವಿನಂತಿ ಮತ್ತು ಪೇಪರಗಳನ್ನು ಡೌನಲೋಡ್ ಮಾಡಿಕೊಳ್ಳುವುದು ಮತ್ತು ಇ–ಪೋರ್ಟಲ್ ಮೂಲಕ ಭರ್ತಿ ಮಾಡಿ ಟೆಂಡರ ಸಲ್ಲಿಸುವ **ದಿನಾಂಕ: 04–10–2025 ರಿಂದ 21–10–2025 ರ ಸಾ:04.30 ಘಂಟೆಯುವರೆಗೆ.** 2) **ದಿನಾಂಕ:23–10–2025 ರಂದು ಸಾ:05.00 ಘಂಟೆಯ ನಂತರ ತೆರೆಯಲಾಗುವುದು.**(ತಾಂತ್ರಿಕ ಬಿಡ್ಡು), **ದಿನಾಂಕ: 27–10–2025 ರಂದು ಸಾ: 05:00 ಘಂಟೆಯ ನಂತರ ತೆರೆಯಲಾಗುವುದು.** (ಆರ್ಥಿಕ ಬಿಡ್ಡು) ಹೆಚ್ಚಿನ ವಿವರಗಳಿಗಾಗಿ ಕೆಳಗೆ ಸಹಿ ಮಾಡಿದವರ ಕಛೇರಿಯಲ್ಲಿ ಕಛೇರಿ ವೇಳೆಯಲ್ಲಿ ಸಂಪರ್ಕಿಸಬಹುದು ದೂರವಾಣಿ ಸಂಖ್ಯೆ:–08484–262257
ಸಹಿ/– ಕಾರ್ಯಪಾಲಕ ಅಭಿಯಂತರರು
ಕನೀನಿನಿ, ಕೆ.ಪಿ.ಸಿ ವಿಭಾಗ ನಂ–2 ಭಾಲ್ಕಿ
ವಾ.ಸಾ.ಸಂ.ಇ/ಬೀದರ/193/ಕೆ.ಎಸ್.ಎಂ.ಸಿ.&ಎ/2025–26

ಪುರಸಭಾ ಕಾರ್ಯಾಲಯ, ಹೊಸದುರ್ಗ–577527
(ಜಿಲ್ಲೆ: ಚಿತ್ರದುರ್ಗ.)
ಫೋನ್ ನಂ. 08199–230221 E-mail:tmchosadurga@yahoo.com
Webist: hosadurgatown.gov.in
ಕ್ರಮಾಂಕ : ತಾ.ಶಾ/ಸಿಆರ್–06/2025–26/05 ದಿನಾಂಕ: 04.10.2025
ಇ–ಪ್ರಕ್ಯೂರ್‌ಮೆಂಟ್ ಟೆಂಡರ್ ಪ್ರಕಟಣೆ
(ಸ್ಟ್ಯಾಂಡರ್ಡ್ ಟೆಂಡರ್ ಡಾಕ್ಯೂಮೆಂಟ್ ನಿಬಂಧನೆಗಳಿಗೊಳಪಟ್ಟು ಟೆಂಡರ್ ಆಹ್ವಾನಿಸಲಾಗಿದೆ.)
ಕರ್ನಾಟಕ ರಾಜ್ಯದ ರಾಜ್ಯಪಾಲರ ಪರವಾಗಿ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ (ತಿದ್ದುಪಡಿ) ಅಧಿನಿಯಮ 2016 ಪ್ರಕಾರ ಹೊಸದುರ್ಗ ಪುರಸಭೆ ವ್ಯಾಪ್ತಿಯಲ್ಲಿ ಕೇಂದ್ರ ಪುರಸ್ಕೃತ ಅಮೃತ್ 2.0 ಯೋಜನೆಯಡಿ ಹಸಿರು ಜಾಗ ಮತ್ತು ಉದ್ಯಾನವನ ಅಭಿವೃದ್ಧಿ ಅನುದಾನದಡಿಯಲ್ಲಿ ಮಂಜೂರಾದ ಈ ಕೆಳಕಂಡ ಕಾಮಗಾರಿಯನ್ನು ಲೋಕೋಪಯೋಗಿ ಇಲಾಖೆಯಲ್ಲಿ ನೋಂದಾಯಿಸಲ್ಪಟ್ಟ ಅರ್ಹ ದರ್ಜೆಯ ಗುತ್ತಿಗೆದಾರರಿಂದ ಕರ್ನಾಟಕ ಪಬ್ಲಿಕ್ ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ ಐಟಂವಾರು ಟೆಂಡರ್‌ಗಳನ್ನು ಆಹ್ವಾನಿಸಲಾಗಿದೆ. ದಿನಾಂಕ 28/10/2025 ರ ಸಂಜೆ 5:00 ಗಂಟೆವರೆಗೆ ಕರ್ನಾಟಕ ಪಬ್ಲಿಕ್ ಪ್ರೊಕ್ಯೂರ್‌ಮೆಂಟ್ ಪೋರ್ಟಲ್ (https://kppp.karnataka.gov.in) ನಲ್ಲಿ ಟೆಂಡರ್‌ಗಳನ್ನು ಡೌನ್‌ಲೋಡ್ ಮಾಡಿಕೊಂಡು ಭರ್ತಿ ಮಾಡಿ ಅಪ್‌ಲೋಡ್ ಮಾಡಬಹುದಾಗಿರುತ್ತದೆ. ಹೆಚ್ಚಿನ ಮಾಹಿತಿಗಾಗಿ ಈ ಕೆಳಕಂಡ ವೆಬ್ ಸೈಟ್‌ನಲ್ಲಿ ವೀಕ್ಷಿಸಬಹುದಾಗಿರುತ್ತದೆ.
www.hosdurgatown.mrc.gov.in ಮತ್ತು https://kppp.karnataka.gov.in ಹಾಗೂ ಕಛೇರಿಯ ಸೂಚನಾ ಫಲಕದಲ್ಲಿ ಹಾಕಲಾಗಿರುರುತ್ತದೆ. ಮತ್ತು ಹೆಚ್ಚಿನ ಮಾಹಿತಿಗಾಗಿ ಕಛೇರಿ ವೇಳೆಯಲ್ಲಿ ತಾಂತ್ರಿಕ ಶಾಖೆಯಲ್ಲಿ ಪಡೆಯಬಹುದು.
ಕಾಮಗಾರಿ ಹೆಸರು:– ಹೊಸದುರ್ಗ ಪುರಸಭಾ ವ್ಯಾಪ್ತಿಯ ಹುಳಿಯಾರ್ ರಸ್ತೆಯಲ್ಲಿ ಬರುವ ಸಿ.ಎಂ. ಕೆ.ಹೆಚ್.ಬಿ. ಕಾಲೋನಿಯ ಉದ್ಯಾನವನ ಅಭಿವೃದ್ಧಿಪಡಿಸುವ ಕಾಮಗಾರಿ. DMA/2025-26/OW /WORK_INDENT49992
ಟೆಂಡರ್‌ಗಿಟ್ಟ ಮೊತ್ತ (ರೂ.ಗಳಲ್ಲಿ)(ಜಿ.ಎಸ್.ಟಿ. ಹೊರತು ಪಡಿಸಿ):–58.45
ಇ.ಎಂ.ಡಿ (ರೂ.ಗಳಲ್ಲಿ):–1,17,000/– ನಿಗಧಿ ಪಡಿಸಿದ ಕಾಲಾವಧಿ:– 6 ತಿಂಗಳು
"ಷರತ್ತುಗಳು":– ಹೆಚ್ಚಿನ ಮಾಹಿತಿಗಾಗಿ ಕಛೇರಿ ವೇಳೆಯಲ್ಲಿ ತಾಂತ್ರಿಕ ವಿಭಾಗದಲ್ಲಿ ಮಾಹಿತಿ ಪಡೆದುಕೊಳ್ಳಬಹುದಾಗಿದೆ ಮತ್ತು ಈ ಪುರಸಭೆಯ ಅಧಿಕೃತ ಅಂತರ್ಜಾಲ ತಾಣ http://www.hosadurgatown.mrc.gov.in ರ Tender ವಿಭಾಗದಲ್ಲೂ ಸಹ ಟೆಂಡರ್ ಪ್ರಕಟಣೆಯನ್ನು ವೀಕ್ಷಿಸಬಹುದಾಗಿದೆ.
ಸಹಿ/– ಅಧ್ಯಕ್ಷರು, ಪುರಸಭೆ, ಹೊಸದುರ್ಗ.
ಸಹಿ/–ಮುಖ್ಯಾಧಿಕಾರಿಗಳು, ಪುರಸಭೆ, ಹೊಸದುರ್ಗ.
DIPR/CTA/KSMCA/407/2025-26

ಕರ್ನಾಟಕ ನೀರಾವರಿ ನಿಗಮ ನಿಯಮಿತ
(ಕರ್ನಾಟಕ ಸರ್ಕಾರದ ಉದ್ಯಮ)
ಕಾರ್ಯಪಾಲಕ ಅಭಿಯಂತರರವರ ಕಛೇರಿ,
ಕ.ನೀ.ನಿ.ನಿ., ನಂ.6, ಕಾಲುವೆ ವಿಭಾಗ, ಬಳ್ಳಾರಿ.
ಟೆಂಡರ್ ಪ್ರಕಟಣೆ
ಉಲ್ಲೇಖ: ಈ ಕಛೇರಿ ಟೆಂಡರ್ ಪ್ರಕಟಣೆ ಸಂಖ್ಯೆ: 1026; ದಿನಾಂಕ:04.10.2025.
ಮಾನ್ಯ ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ನೀರಾವರಿ ನಿಗಮ ನಿಯಮಿತ ಬೆಂಗಳೂರು ರವರ ಪರವಾಗಿ ಕಾರ್ಯನಿರ್ವಾಹಕ ಅಭಿಯಂತರರು ನಂ.6 ಕಾಲುವೆ ವಿಭಾಗ, ಬಳ್ಳಾರಿ ರವರು ತಮ್ಮ ಕಾರ್ಯವ್ಯಾಪ್ತಿಯಲ್ಲಿನ ಲೆಕ್ಕಶೀರ್ಷಿಕೆ **(CEPMIZ-KMERC)** ಅಡಿಯಲ್ಲಿ 02 ಕಾಮಗಾರಿಗಳು **WI.3180 & WI.3181** ಟೆಂಡರ್‌ಗಿಟ್ಟ ಮೊತ್ತ (ಜಿ.ಎಸ್.ಟಿ ಹೊರತುಪಡಿಸಿ) ಕ್ರಮವಾಗಿ ರೂ.37.07 ಕೋಟಿಗಳು & ರೂ.17.07 ಕೋಟಿಗಳು ಇದ್ದು, ಕರ್ನಾಟಕ ಸರ್ಕಾರದ ಲೋಕೋಪಯೋಗಿ ಇಲಾಖೆಯಲ್ಲಿ ನೊಂದಾಯಿಸಲ್ಪಟ್ಟ ಅರ್ಹ ಗುತ್ತಿಗೆದಾರರಿಂದ ಕಾಮಗಾರಿಗಳಿಗೆ ದ್ವಿ–ಲಕೋಟೆ ಪದ್ಧತಿಯಂತೆ, ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳ ಪೋರ್ಟಲ್ ವೇದಿಕೆಯ ಮೂಲಕ ಟೆಂಡರ್‌ಗಳನ್ನು ಆಹ್ವಾನಿಸಿರುವರು.
ಬಿಡ್ಡುದಾರರು ಖಾಲಿ ಟೆಂಡರ್ ಪುಸ್ತಕವನ್ನು ದಿನಾಂಕ: 13.10.2025 ರ ಸಂಜೆ: 4.00 ಗಂಟೆಯಿಂದ ಕೆಪಿಪಿ ಪೋರ್ಟಲ್‌ನ ಮೂಲಕ ಡೌನ್ಲೋಡ್ ಮಾಡಬಹುದಾಗಿದೆ.
ಕಾಮಗಾರಿಗಳ ಟೆಂಡರ್ ಸಲ್ಲಿಸುವ ಕೊನೆಯ ದಿನಾಂಕವನ್ನು 12.11.2025 ರ ಸಂಜೆ: 4.30 ಗಂಟೆಯವರೆಗೆ, ತಾಂತ್ರಿಕ ಬಿಡ್ ತೆರೆಯುವ ದಿನಾಂಕವನ್ನು 13.11.2025 ರಂದು ಸಂಜೆ: 5.00 ಗಂಟೆಗೆ ಮತ್ತು ಆರ್ಥಿಕ ಬಿಡ್ ತೆರೆಯುವ ದಿನಾಂಕವನ್ನು 12.12.2025 ರಂದು ಸಂಜೆ:5.00 ಗಂಟೆಗೆ ಅಥವಾ ತಾಂತ್ರಿಕ ಅನುಮೋದನೆ ನೀಡಿದ ನಂತರ ಆರ್ಥಿಕ ಬಿಡ್‌ನ್ನು ತೆರೆಯಲಾಗುವುದು.
ಸದರಿ ಟೆಂಡರ್‌ಗೆ ಸಂಬಂಧಿಸಿದಂತೆ ಮಾಹಿತಿಯನ್ನು ಅಧಿಕೃತ ಜಾಲತಾಣ **https://kppp.karnataka.gov.in** ದಲ್ಲಿ ಪಡೆಯಬಹುದಾಗಿದೆ. ಕಾರಣಾಂತರಗಳಿಂದಾಗಿ ಈ ಕೆಳಗೆ ತಿಳಿಯಪಡಿಸಿದ ಟೆಂಡರ್ ದಿನಾಂಕಗಳಲ್ಲಿ/ಇನ್ನಿತರ ಬದಲಾವಣೆಗಳಿದ್ದಲ್ಲಿ, ಮರು ಟೆಂಡರ್ ಆಹ್ವಾನಿಸಿದಲ್ಲಿ, ವಿವರಗಳನ್ನು ಬಿಡ್ಡುದಾರರು ಕೆಪಿಪಿ ಪೋರ್ಟಲ್‌ನಲ್ಲಿ ಗಮನಿಸಬಹುದಾಗಿದೆ. ಇದಕ್ಕೆ ಪ್ರತ್ಯೇಕವಾಗಿ ಪ್ರಕಟಣೆ ಹೊರಡಿಸಲಾಗುವುದಿಲ್ಲ.
ಹೆಚ್ಚಿನ ಮಾಹಿತಿ ಬೇಕಾದಲ್ಲಿ ಗುತ್ತಿಗೆದಾರರು ಈ ಕೆಳಗೆ ಸಹಿ ಮಾಡಿದ ಅಧಿಕಾರಿಗಳ ಕಛೇರಿಯಲ್ಲಿ, ಕಛೇರಿ ಕೆಲಸದ ವೇಳೆಯಲ್ಲಿ ಅಥವಾ ತಮ್ಮ ಕೋರಿಕೆಯನ್ನು ವಿಭಾಗ ಕಛೇರಿ ಇಮೇಲ್:**eeno6cdbly@yahoo.in** ವಿಳಾಸಕ್ಕೆ ಸಲ್ಲಿಸಿ ಪಡೆಯಬಹುದಾಗಿದೆ.
ಸಹಿ/–ಕಾರ್ಯಪಾಲಕ ಅಭಿಯಂತರರು, ಕ.ನೀ.ನಿ.ನಿ.,ನಂ.6, ಕಾಲುವೆ ವಿಭಾಗ, ಬಳ್ಳಾರಿ.
ಡಿಐಪಿಆರ್/ಬಳ್ಳಾರಿ/496/ಕೆಎಸ್‌ಎಂಸಿಎ/2025–26

ನಿರಂತರ ವ್ಯಾಯಾಮ, ಪೌಷ್ಟಿಕ ಆಹಾರಸೇವನೆ, ಒತ್ತಡಗಳ ಸರಿಯಾದ ನಿರ್ವಹಣೆ ಇವು – ನರಗಳ ದೌರ್ಬಲ್ಯವನ್ನು ತಗ್ಗಿಸಬಹುದು. ನರಗಳ ದೌರ್ಬಲ್ಯಕ್ಕೆ ಕಾರಣಗಳನ್ನು ಕಂಡುಹಿಡಿಯಲು ಚಿಕಿತ್ಸೆಯನ್ನು ಆರಂಭಿಸಿದರೆ ಹೆಚ್ಚಿನ ಅಪಾಯವನ್ನು ತಪ್ಪಿಸಬಹುದು

ನರಗಳ ದೌರ್ಬಲ್ಯ ನರರಿಗೆ ತಿಳಿದಿರಬೇಕು!

• ಡಾ. ವೀಣಾ ಎನ್. ಸುಳ್ಯ

ನರಗಳು ನಮ್ಮ ದೇಹದಲ್ಲಿ ಎಲ್ಲೆಲ್ಲೂ ವ್ಯಾಪಿಸಿರುವ ಬೆಳ್ಳನೆ ನೂಲಿನಂತೆ ಕಾಣುವ ಒಂದು ಜೀವಂತ ರಚನೆ. ಮಿದುಳು ಮತ್ತು ಮಿದುಳುಬಳ್ಳಿಯಿಂದ ಪ್ರಾರಂಭವಾಗಿ, ಉದ್ದಕ್ಕೆ ಕ್ರಮಿಸುತ್ತ ಪ್ರತಿಯೊಂದು ನರವೂ ಕವಲೊಡೆಯುತ್ತಾ, ಕಿರಿದಾಗುತ್ತಾ ಕೊನೆಗೆ ಯಾವುದಾದರೂ ಗ್ರಂಥಿ, ಮೂಳೆ, ಅಂಗ ಅಥವಾ ಚರ್ಮದ ಬುಡವನ್ನು ಹೊಕ್ಕು ಕಣ್ಮರೆಯಾಗುತ್ತದೆ.

ನರಗಳನ್ನು ಜ್ಞಾನವಾಹಿತಂತುಗಳು ಮತ್ತು ಕ್ರಿಯಾ ವಹಿತಂತುಗಳು ಎಂದು ಕರೆಯಬಹುದು. ಸಂವೇದನೆಗಳನ್ನು ಹೊರವಲಯದಿಂದ ಒಳಗೆ ತೆಗೆದುಕೊಂಡು ಹೋಗುವ (ಸೆನ್ಸರಿ) ಮತ್ತು ಅದಕ್ಕೆ ತಕ್ಕದಾದ ಪ್ರತಿಕ್ರಿಯೆಗಳನ್ನು ನಿರ್ವಹಿಸಲು ಸೂಚನೆಗಳನ್ನು ನಿರ್ದಿಷ್ಟ ಸ್ಥಳಕ್ಕೆ ಒಯ್ಯುವ (ಮೋಟಾರ್) ನರಗಳ ಸಮೂಹದ ಕಟ್ಟುಗಳನ್ನೇ 'ನರಗಳು' ಎಂದು ಕರೆಯುತ್ತೇವೆ.

ನರಗಳ ಕಟ್ಟುಗಳಲ್ಲಿ ಬೇರೆ ಬೇರೆ ಸಂವೇದನೆಗಳನ್ನು ಸಾಗಿಸಲು ಬೇರೆ ಬೇರೆ ನರಗಳು ಇರುತ್ತವೆ. ಉದಾಹರಣೆಗೆ, ಮೃದು ಸ್ಪರ್ಶ/ ಜೋರಾದ ಸ್ಪರ್ಶ, ತಾಪಮಾನಗಳನ್ನು ತಿಳಿಸಲು ತಂಪು/ ಬಿಸಿ, ಕಂಪನ ಮತ್ತು ನೋವನ್ನು ತಿಳಿಸಲು ಬೇರೆ ಬೇರೆ ನರಗಳು ಇರುತ್ತವೆ.

ಈ ನರಗಳಿಗೆ 'ಮೈಲಿನ್ ಶೀತ್' ಎನ್ನುವ ಪೊರೆ ಇರುತ್ತದೆ. ಇದರಿಂದ ಸಂದೇಶಗಳನ್ನು ವೇಗವಾಗಿ ಸಾಗಿಸಲು ಸಾಧ್ಯವಾಗುತ್ತದೆ. ನರಮಂಡಲವನ್ನು ಸ್ಥೂಲವಾಗಿ ಐಚ್ಛಿಕ ನರಮಂಡಲ ಮತ್ತು ಅನೈಚ್ಛಿಕ ನರಮಂಡಲ ಎಂದು ವಿಭಾಗಿಸಬಹುದು. ಸ್ಪಷ್ಟವಾಗಿ ಕಂಡುಬರುವ ದೇಹದ ಎಲ್ಲ ಚಲನೆಗಳು ಐಚ್ಛಿಕ ನರಮಂಡಲದ ವ್ಯಾಪ್ತಿಗೆ ಬರುತ್ತವೆ. ಹೃದಯ, ಶ್ವಾಸಕೋಶ, ಮೂತ್ರನಾಳಗಳು, ಜೀರ್ಣಕ್ರಿಯೆಯ ಅಂಗಗಳು ರಸಗ್ರಂಥಿಗಳು ಇವುಗಳ ಕಾರ್ಯಗಳನ್ನು ನಿಯಂತ್ರಿಸಲು ಸಹಕರಿಸುವ ನರಗಳು ಅನೈಚ್ಛಿಕ.

ನರಗಳ ಕಾರ್ಯನಿರ್ವಹಣೆಗೆ ಅನೇಕ ಅಂಶಗಳು ಮುಖ್ಯವಾಗುತ್ತವೆ. ಖನಿಜಗಳಾದ ಸೋಡಿಯಂ, ಪೊಟ್ಯಾಶಿಯಂ, ಕ್ಯಾಲ್ಸಿಯಂ, ವಿಟಮಿನ್‌ಗಳಾದ B1, B6, B12, ಜೊತೆಗೆ ಆಕ್ಸಿಜನ್–ಗ್ಲುಕೋಸ್ – ಇವು ಅವಶ್ಯಕ ಪ್ರಮಾಣದಲ್ಲಿ ಇದ್ದಾಗ ಮಾತ್ರ ನರಗಳು ತಮ್ಮ ಕೆಲಸವನ್ನು ನಿರ್ವಹಿಸಲು ಸಾಧ್ಯ. ಈ ಅಂಶಗಳಲ್ಲಿ ಏರುಪೇರಾದಾಗ ನರಗಳ ಕಾರ್ಯ ಕುಂಠಿತಗೊಳ್ಳುವುದಲ್ಲದೆ, ಕಾರ್ಯಕ್ಷಮತೆಯಲ್ಲಿ ವ್ಯತ್ಯಾಸವೂ ಉಂಟಾಗುತ್ತದೆ.

ನರದೌರ್ಬಲ್ಯದ ಲಕ್ಷಣಗಳು: ಐಚ್ಛಿಕ ನರಗಳ ದೌರ್ಬಲ್ಯ: ದೇಹ ಜುಮ್ಮೆನ್ನಿಸುವುದು, ಸೂಜಿ ಚುಚ್ಚಿದಂತೆ ಆಗುವುದು; ಕುತ್ತಿಗೆಯಿಂದ ಕೈಗೆ ಹರಡುವ ನೋವು, ಬೆನ್ನಿನಿಂದ ಕಾಲಿಗೆ ಹರಡುವ ನೋವು; ಕೈ–ಕಾಲುಗಳಲ್ಲಿ ಶಕ್ತಿ ಕಡಿಮೆ ಆಗುವುದು; ವಸ್ತುಗಳನ್ನು ಎತ್ತಿಕೊಳ್ಳಲು ಕಷ್ಟವಾಗುವುದು, ಮುಷ್ಟಿಯಲ್ಲಿ ಬಿಗಿತ ಕಡಿಮೆಯಾಗುವುದು, ಬರೆಯಲು, ತಿನ್ನಲು, ನಡೆಯಲು ಕಷ್ಟವಾಗುವುದು, ಹೆಚ್ಚು ಹೊತ್ತು ನಿಲ್ಲಲು ಸಾಧ್ಯವಾಗದಿರುವುದು, ಸಮತೋಲನ ತಪ್ಪುವುದು.

ಅನೈಚ್ಛಿಕ ನರಗಳ ದೌರ್ಬಲ್ಯ: ಹೃದಯ ಬಡಿತದಲ್ಲಿ ಏರುಪೇರು, ನೋವು ಇಲ್ಲದ ಹೃದಯಾಘಾತ; ರಕ್ತದೊತ್ತಡದ ಏರುಪೇರು; ಮೂತ್ರವಿಸರ್ಜನೆಯಲ್ಲಿ ಸಮಸ್ಯೆಗಳು; ಕಣ್ಣಿನ ದೃಷ್ಟಿಯಲ್ಲಿ ಸಮಸ್ಯೆಗಳು; ಲೈಂಗಿಕ ತೊಂದರೆಗಳು (ನಿಮಿರುವಿಕೆಯ ತೊಂದರೆ; ಅತಿಯಾಗಿ ಬೆವರುವುದು; ತಲೆಸುತ್ತು; ಮೂರ್ಛೆ ಹೋಗುವುದು.

ಕಾರಣಗಳು

- ಗಡ್ಡೆಗಳು, ರಕ್ತನಾಳಗಳು, ಮೂಳೆ, ಅಸ್ಥಿರಜ್ಜುಗಳಿಂದ ನರಗಳ ಮೇಲೆ ಒತ್ತಡ; ಮಿದುಳಿನಲ್ಲಿ ಅಥವಾ ಬೆನ್ನುಹುರಿಯಿಂದ ಹೊರಟಿರುವ ನರಗಳ ಮೇಲೆ ಒತ್ತಡ ಬಿದ್ದಾಗ.
- ಸಕ್ಕರೆ ನಿಯಂತ್ರಣದಲ್ಲಿ ಏರುಪೇರಾದಾಗ ನರದ ಜೀವಕೋಶಗಳಿಗೆ, ನರದ ಪದರಗಳಿಗೆ ಹಾನಿ ಉಂಟಾಗುತ್ತದೆ; ಸಣ್ಣ ಸಣ್ಣ ರಕ್ತನಾಳಗಳಲ್ಲಿಯೂ ಉಂಟಾದ ತೊಂದರೆಗಳಿಂದ ನರಗಳ ರಕ್ತಸಂಚಾರದಲ್ಲಿ ವ್ಯತ್ಯಾಸ ಉಂಟಾಗುತ್ತದೆ.
- ಮೋಟಾರ್ ನ್ಯೂರಾನ್ ಡಿಸೀಸ್: ನರದ ಮುಖ್ಯ ಭಾಗವಾದ ನ್ಯೂಕ್ಲಿಯಸ್ ನಿಷ್ಕ್ರಿಯವಾದಾಗ ಆ ನರಗಳಿಗೆ ಸಂಬಂಧಿಸಿದ ಸ್ನಾಯುಗಳು ಕೆಲಸ ಮಾಡಲು ಸಾಧ್ಯವಾಗದೆ ಹೋಗುತ್ತದೆ.
- ವಿಟಮಿನ್ B1, B6, B12 ಕೊರತೆ.
- ಸೀಸ, ತಾಮ್ರ, ಆರ್ಸೆನಿಕ್ ಲೋಹಗಳ ಮಟ್ಟ ದೇಹದಲ್ಲಿ ಹೆಚ್ಚಾಗುವುದು.
- ಸಿಫಿಲಿಸ್ ಹರ್ಪಿಸ್ ಜೋಸ್ಟರ್ (ಸರ್ಪಸುತ್ತು), ಎಚ್‌ಐವಿ.
- ಅತಿಯಾದ ಮದ್ಯಸೇವನೆ.
- ಆನುವಂಶಿಕ ಕಾಯಿಲೆಗಳು.
- ಕಾರ್ಪಲ್ ಟನ್ನೆಲ್ ಸಿಂಡ್ರೋಮ್: ಮಣಿಗಂಟಿನಲ್ಲಿ ನರದ ಮೇಲಿನ ಒತ್ತಡ.
- ಸರಿಯಾಗಿ ಹೊಂದಿಕೊಳ್ಳದ ಬ್ರೇಸ್, ಪ್ಲಾಸ್ಟರ್, ಊರುಗೋಲುಗಳು ನರಗಳ ಮೇಲೆ ಒತ್ತಡ ತರಬಹುದು.

ಚಿಕಿತ್ಸೆ: ನರಗಳ ದೌರ್ಬಲ್ಯಕ್ಕೆ ಕಾರಣಗಳನ್ನು ಕಂಡುಹಿಡಿದು, ತಕ್ಕ ಚಿಕಿತ್ಸೆಯನ್ನು ಕೊಡಬೇಕು. ಸಮಸ್ಯೆಯ ಬಗ್ಗೆ ವಿಸ್ತಾರವಾಗಿ ತಿಳಿದುಕೊಳ್ಳಬೇಕು. ಇದಕ್ಕಾಗಿ ದೈಹಿಕ ಪರೀಕ್ಷೆ, ರಕ್ತಪರೀಕ್ಷೆ, ನರಗಳ ಪರೀಕ್ಷೆ 'NCS' (ನರ್ವ್ ಕಂಡಕ್ಷನ್ ಸ್ಟಡಿ), 'EMG' (ಎಲೆಕ್ಟ್ರೋ ಮಯಾಗ್ರಫಿ), ಮಾಂಸಖಂಡಗಳ ಸಂಕೋಚನ–ವಿಕಚನ ವಿಕಸನಗಳ ಪರೀಕ್ಷೆ, ಎಕ್ಸ್–ರೇ, ಸಿಟಿಸ್ಕ್ಯಾನ್, ಎಂ.ಆರ್.ಐ. (ಇವು ಬೆನ್ನುಮೂಳೆ, ಬೆನ್ನುಹುರಿಗಳ ತೊಂದರೆಗಳನ್ನು ಗಮನಿಸಲು) ಮುಂತಾದವು ನೆರವಾಗುತ್ತವೆ ಮಧುಮೇಹವನ್ನು ನಿಯಂತ್ರಣಕ್ಕೆ ತರಬೇಕು. ವಿಟಮಿನ್ ಔಷಧಗಳ (ನ್ಯೂರೋ ವಿಟಮಿನ್ಸ್) ಸೇವನೆ ಬೇಕಾಗಬಹುದು. ಒತ್ತಡಕ್ಕೆ ಸಿಕ್ಕಿಬಿದ್ದ ನರಗಳ ಒತ್ತಡವನ್ನು ನಿವಾರಿಸಿ, ಹಾನಿಗೊಳಗಾದ ನರಗಳನ್ನು ಸರಿಪಡಿಸಲು ಕೆಲವೊಮ್ಮೆ ಶಸ್ತ್ರಕ್ರಿಯೆ ಬೇಕಾಗಬಹುದು.

ವ್ಯಾಯಾಮಗಳ ಮೂಲಕ ಕೈ–ಕಾಲುಗಳ ಚಲನಶೀಲತೆಯನ್ನು ಹೆಚ್ಚಿಸಬೇಕು; ಮಾನಸಿಕ ಒತ್ತಡ ನಿರ್ವಹಣೆಯಲ್ಲಿ ಯೋಗ, ಪ್ರಾಣಾಯಾಮ, ಧ್ಯಾನಗಳು ನೆರವಾಗಬಲ್ಲವು.

ಆರೋಗ್ಯಕ್ಕೆ ಮಾರಕವಾಗಿರುವ ಜೀವನಶೈಲಿಯಲ್ಲಿ ಬದಲಾವಣೆಗಳನ್ನು ಮಾಡಿಕೊಳ್ಳುವುದು ಅನಿವಾರ್ಯ. ಸಮತೋಲಿತ ಆಹಾರಸೇವನೆ, ನಿಯಮಿತ ನಿದ್ರೆ, ಅಗತ್ಯ ನೀರಿನ ಸೇವನೆ ಮುಖ್ಯ. ಬಾಳೆಹಣ್ಣು, ಕಿತ್ತಳೆ, ದಾಳಿಂಬೆ, ದ್ರಾಕ್ಷಿ, ಹಾಲು, ಸೊಪ್ಪು, ಮೊಟ್ಟೆಗಳಂಥ ಆಹಾರ ಸೇವನೆಯನ್ನು ರೂಢಿಸಿಕೊಳ್ಳಬೇಕು.

❖

ಸಂತೋಷದ ರಹಸ್ಯ ಸಮತೋಲಿತ ಜೀವನ

ಇಂದಿನ ಯುಗದಲ್ಲಿ ಸಮತೋಲನ ಕಳೆದುಕೊಳ್ಳಲು ಕಾರಣಗಳು ಅನೇಕ. ತಂತ್ರಜ್ಞಾನದ ಅತಿಯಾದ ಅವಲಂಬನೆ, ಸಾಮಾಜಿಕಮಾಧ್ಯಮಗಳಲ್ಲಿ ತಪ್ಪು ಹೋಲಿಕೆಗಳು, ಭೌತಿಕ ಸಾಧನಗಳ ಮೇಲಿನ ಅತಿಯಾದ ಗಮನ, ಸದಾ ಬದಲಾಗುವ ಆರ್ಥಿಕ ಮತ್ತು ಸಾಮಾಜಿಕ ನಿಯಮಗಳು, 'ಎಲ್ಲವನ್ನೂ ಸಾಧಿಸಬೇಕು' ಎನ್ನುವ ಒತ್ತಡ ನಮ್ಮ ಮಾನಸಿಕ ಶಾಂತಿಯನ್ನು ಹದಗೆಡಿಸಿದೆ

• ರಘು ವಿ.

ಕೆಜಿ ತರಗತಿಯ ಪುಟ್ಟ ಹುಡುಗನಿಂದ ಪಿಜಿ ವಿದ್ಯಾರ್ಥಿಯವರೆಗೆ, ಬಡಕೂಲಿಕಾರನಿಂದ ಶ್ರೀಮಂತ ಸಿಇಒವರೆಗೆ, ಸಾಮಾನ್ಯ ಗೃಹಿಣಿಯಿಂದ ಸೂಪರ್‌ಸ್ಟಾರ್‌ವರೆಗೆ - ಪ್ರತಿಯೊಬ್ಬರಿಗೂ ಇಂದು ಜೀವನದಲ್ಲಿ ಸಮತೋಲನ ಕಾಯ್ದುಕೊಳ್ಳುವುದೊಂದು ದೊಡ್ಡ ಸವಾಲಾಗಿದೆ. ಯಂತ್ರವೇಗದ ಜೀವನ, ಸ್ಪರ್ಧೆ-ಪ್ರತಿಸ್ಪರ್ಧೆ, ಅಪಾರ ಅಪೇಕ್ಷೆಗಳು ಮತ್ತು ಅಸ್ತವ್ಯಸ್ತವಾದ ದಿನಚರಿ ನಮ್ಮ ಜೀವನದ ಸಮತೋಲನವನ್ನು ತಪ್ಪಿಸಿವೆ. ಆದರೆ, ಜೀವನವೆಂಬುದು ಮೂಲತಃ ಅಸಂಖ್ಯ ಸ್ವರಗಳ ಮೇಳ; ಸಮತೋಲನ ಹೊಂದಿರುವ ಒಂದು ಸಂಗೀತ ಕಛೇರಿ. ಅದು ಒಂದೇ ಸ್ವರದಲ್ಲಿ ನಿಲ್ಲುವುದಿಲ್ಲ, ಹಾಗೆಯೇ ಒಂದೇ ಏಕತಾನದಲ್ಲೂ ನಿಲ್ಲುವುದಿಲ್ಲ.

ನಮ್ಮ ಪುರಾಣಗಳು ಮತ್ತು ಶಾಸ್ತ್ರಗಳು ಜೀವನವನ್ನು ಸುಖ-ದುಃಖಗಳ ಮಿಶ್ರಣ, 'ಅಮೃತ ಮತ್ತು ವಿಷ'ದ ಮಿಶ್ರಣವೆಂದು ವರ್ಣಿಸುತ್ತವೆ. ಜಾಣನಾದವನು ಇವುಗಳಿಂದ ವಿಲಿತನಾಗಬಾರದು. ಶ್ರೀಮದ್ಭಗವದ್ಗೀತೆಯಲ್ಲಿ ಶ್ರೀಕೃಷ್ಣನು ಹೇಳುವಂತೆ 'ದುಃಖದಲ್ಲಿ ಉದ್ವೇಗಿಯಾಗದೆ, ಸುಖದಲ್ಲಿ ಅತ್ಯಾಸಕ್ತನಾಗದೆ, ರಾಗ, ಭಯ, ಕ್ರೋಧಗಳಿಂದ ಮುಕ್ತನಾಗಿರುವವನೇ ಸ್ಥಿತಪ್ರಜ್ಞನು'.

ಜೀವನದಲ್ಲಿ ಸುಖ-ದುಃಖ, ಯಶ-ಅಪಯಶ, ಲಾಭ-ನಷ್ಟ ಎಂಬ ಎರಡು ತಟಗಳೂ ಇದ್ದೇ ಇರುತ್ತವೆ. ಅವೆರಡರ ಮಧ್ಯೆ ಸಮತೂಕ ಸಾಧಿಸುವುದೇ ಬುದ್ಧಿವಂತಿಕೆ. ತಪಸ್ಸಿನ ಕಠೋರ ಮಾರ್ಗವನ್ನು ಅನುಸರಿಸಿ ಜ್ಞಾನ ಸಿಗಲಿಲ್ಲವೆಂದು ಗೊತ್ತಾದಾಗ, ಜ್ಞಾನದ ಸಾಧನೆಗೆ ಬುದ್ಧ ಭಗವಾನ್ 'ಮಧ್ಯಮ ಮಾರ್ಗ'ವನ್ನೇ ಸೂಚಿಸಿದ್ದು. ಯಾವುದರ ಅತಿಯೂ ಒಳ್ಳೆಯದಲ್ಲ, ಎಲ್ಲವೂ ಸಮತೆಯಲ್ಲಿ ಇರಬೇಕು ಎಂಬುದು ಅವರ ಬೋಧನೆಯ ಮರ್ಮವಾಗಿತ್ತು. ಅದೇ ರೀತಿ, ನಮ್ಮ ನಿತ್ಯ ಜೀವನದಲ್ಲೂ ಅತಿ ಆಸಕ್ತಿ, ಅತಿ ಕೆಲಸ, ಅತಿ ವಿಶ್ರಾಂತಿ ಎಲ್ಲವೂ ಸಮತೋಲನವನ್ನು ಕೆಡಿಸುತ್ತವೆ.

ಇಂದಿನ ಯುಗದಲ್ಲಿ ಸಮತೋಲನ ಕಳೆದುಕೊಳ್ಳಲು ಕಾರಣಗಳು ಅನೇಕ. ತಂತ್ರಜ್ಞಾನದ ಅತಿಯಾದ ಅವಲಂಬನೆ, ಸಾಮಾಜಿಕ ಮಾಧ್ಯಮಗಳಲ್ಲಿ ತಪ್ಪು ಹೋಲಿಕೆಗಳು, ಭೌತಿಕ ಸಾಧನಗಳ ಮೇಲಿನ ಅತಿಯಾದ ಗಮನ, ಸದಾ ಬದಲಾಗುವ ಆರ್ಥಿಕ ಮತ್ತು ಸಾಮಾಜಿಕ ನಿಯಮಗಳು, ಮತ್ತು 'ಎಲ್ಲವನ್ನೂ ಸಾಧಿಸಬೇಕು' ಎನ್ನುವ ಒತ್ತಡ – ಇವೆಲ್ಲವೂ ನಮ್ಮ ಮಾನಸಿಕ ಶಾಂತಿಯನ್ನು ಹದಗೆಡಿಸಿದೆ.

❖

ಸಮತೋಲಿತ ಜೀವನಕ್ಕೆ ಐದು ಸರಳ ಹೆಜ್ಜೆಗಳು

1. **ದಿನಚರಿಯಲ್ಲಿ ಏಕಾಗ್ರತೆಯ ಸಮಯ (ಮೈಂಡ್ ಫುಲ್‌ನೆಸ್):** ದಿನದಲ್ಲಿ ಕೇವಲ 15-20 ನಿಮಿಷಗಳನ್ನು ಧ್ಯಾನ, ಪ್ರಾಣಾಯಾಮ ಅಥವಾ ಗಮನಿತ ಶ್ವಾಸೋಚ್ಛ್ವಾಸಕ್ಕಾಗಿ ಮೀಸಲಾಗಿರಿಸಿ. ಇದು ಮನಸ್ಸನ್ನು ಶಾಂತಗೊಳಿಸಿ, ನಿಮ್ಮ ಭಾವನೆಗಳ ಮತ್ತು ಆಲೋಚನೆಗಳ ಮೇಲೆ ನಿಯಂತ್ರಣ ತರುವಲ್ಲಿ ಸಹಾಯ ಮಾಡುತ್ತದೆ.
2. **ದೈಹಿಕ ಚಟುವಟಿಕೆ ಮತ್ತು ಸಮತೋಲಿತ ಆಹಾರ:** ಶರೀರ ಸುಸ್ಥಿತಿಯಲ್ಲಿದ್ದರೆ ಮನಸ್ಸು ಸ್ಥಿರವಾಗಿರುತ್ತದೆ. ನಿಯಮಿತವಾದ ಚಟುವಟಿಕೆ ಹಾಗೂ ಯೋಗಾಸನಗಳನ್ನು ಅಳವಡಿಸಿಕೊಳ್ಳಿ. ನಮ್ಮ ಆಹಾರದಲ್ಲೂ ಷಡ್ರಸಗಳ (ಆರು ರುಚಿ) ಸಮತೋಲನ ಮುಖ್ಯ. ಹಾಗೆಯೇ, ಸಮಯಕ್ಕೆ ಸರಿಯಾಗಿ ಊಟ ಮಾಡುವುದು, ಸಕಾಲಿಕ ನಿದ್ರೆ ಮಾಡುವುದು ಜೀವನದ ಸಮತೋಲನ ರಕ್ಷಿಸುತ್ತದೆ.
3. **ಆಧ್ಯಾತ್ಮಿಕತೆಗೆ ಸ್ಥಾನ:** ನಿಮ್ಮ ನಂಬಿಕೆ ಮತ್ತು ಆಚರಣೆಗಳಿಗೆ ದಿನಚರಿಯಲ್ಲಿ ಸ್ಥಾನ ಮಾಡಿಕೊಡಿ. ಇದು ದೇವರನಾಮ ಸಂಕೀರ್ತನೆಯಾಗಿರಬಹುದು, ಧಾರ್ಮಿಕ ಗ್ರಂಥಗಳ ವಾಚನವಾಗಿರಬಹುದು ಅಥವಾ ಪ್ರಕೃತಿಯ ಸಾನ್ನಿಧ್ಯವಾಗಿರಬಹುದು. ಇವು ಜೀವನಕ್ಕೆ ಒಂದು ದಿಶೆ ಮತ್ತು ಅರ್ಥವನ್ನು ನೀಡುತ್ತವೆ.
4. **ಸೌಹಾರ್ದ ಸಂಬಂಧಗಳು ಮತ್ತು 'ಇಲ್ಲ' ಎನ್ನುವ ಸಾಮರ್ಥ್ಯ:** ಕುಟುಂಬ ಮತ್ತು ಸನ್ಮಿತ್ರರೊಂದಿಗೆ ಸಮಯ ಕಳೆಯಿರಿ. ಅವರೊಂದಿಗೆ ಮಾತನಾಡಿ, ನಿಮ್ಮ ಭಾವನೆಗಳನ್ನು ಹಂಚಿಕೊಳ್ಳಿ. ಅದೇ ಸಮಯದಲ್ಲಿ, ಇತರರ ಅನವಶ್ಯಕ ಅಪೇಕ್ಷೆಗಳನ್ನು ನಿರಾಕರಿಸಲು ಮತ್ತು ನಿಮ್ಮ ಸಾಮರ್ಥ್ಯಕ್ಕಿಂತ ಹೆಚ್ಚಿನ ಕೆಲಸದ ಒತ್ತಡವನ್ನು 'ಇಲ್ಲ' ಎಂದು ನಿರಾಕರಿಸಲು ಕಲಿಯಿರಿ. ಇದು ಮಾನಸಿಕ ಶಕ್ತಿಯನ್ನು ಉಳಿಸಲು ಸಹಾಯ ಮಾಡುತ್ತದೆ.
5. **ಕೃತಜ್ಞತಾ ಭಾವನೆ:** ಪ್ರತಿದಿನ, ನಿಮ್ಮ ಜೀವನದಲ್ಲಿರುವ ಚಿಕ್ಕ-ಚಿಕ್ಕ ಆನಂದಗಳು ಮತ್ತು ಸೌಲಭ್ಯಗಳಿಗೆ ಕೃತಜ್ಞರಾಗಿರುವ ಅಭ್ಯಾಸ ಮಾಡಿ. ಇದು ನಕಾರಾತ್ಮಕತೆಯನ್ನು ಕಡಿಮೆ ಮಾಡಿ, ಜೀವನದ ಪರಿಪೂರ್ಣತೆಯ ಭಾವನೆಯನ್ನು ನೀಡುತ್ತದೆ. ತತ್ವಜ್ಞಾನಿ ಬರ್ಟ್ರಂಡ್ ರಸೆಲ್ ಹೇಳಿದಂತೆ, -'ಸಂತೋಷದ ರಹಸ್ಯವೆಂದರೆ ನಿಮ್ಮ ಆಸಕ್ತಿಗಳನ್ನು ಸಾಧ್ಯವಾದಷ್ಟು ವಿಶಾಲಗೊಳಿಸಿ, ನಿಮಗೆ ಆಸಕ್ತಿ ಇರುವ ವಸ್ತುಗಳು ಮತ್ತು ವ್ಯಕ್ತಿಗಳ ಬಗ್ಗೆ ನಿಮ್ಮ ಪ್ರತಿಕ್ರಿಯೆ, ದ್ವೇಷದ ಬದಲು ಸಾಧ್ಯವಾದಷ್ಟು ಸ್ನೇಹಪರವಾಗಿರಲಿ '(The secret to happiness is this: let your interests be as wide as possible, and let your reactions to the things and persons that interest you be as far as possible friendly rather than hostile).

ಜೀವನದ ಸಮತೋಲನವೆಂಬುದು ಒಮ್ಮೆ ಸಾಧಿಸಿ ಮುಗಿಸುವ ಗುರಿಯಲ್ಲ, ಅದು ನಿತ್ಯದ ಅಭ್ಯಾಸ. ಪ್ರತಿದಿನ ಸ್ವಲ್ಪ ಸ್ವಲ್ಪವಾಗಿ ಈ ಹಂತಗಳನ್ನು ಅನುಸರಿಸಿ, ತಪ್ಪಿದಾಗ ಮತ್ತೆ ಸರಿಪಡಿಸಿಕೊಂಡು ಹೋಗಬೇಕು. ಜೀವನದ ಎಲ್ಲ ಸೊಗಸನ್ನು ಸಮತೋಲನದಿಂದ ಅನುಭವಿಸುವುದೇ ಯಶಸ್ವಿ ಮತ್ತು ಸಂತೋಷಭರಿತ ಜೀವನದ ಗುಟ್ಟು.

ಎಸ್ಸೆಸ್ಸೆಲ್ಸಿ ಪರೀಕ್ಷೆ ದಿಕ್ಸೂಚಿ

ಎಸ್ಸೆಸ್ಸೆಲ್ಸಿ-ಪಿಯುಸಿ ಪರೀಕ್ಷೆ ದಿಕ್ಸೂಚಿ

ಪಿಯುಸಿ ಪರೀಕ್ಷೆ ದಿಕ್ಸೂಚಿ

ಎಸ್ಸೆಸ್ಸೆಲ್ಸಿ ಸಮಾಜ ವಿಷಯದ ಇಂಗ್ಲಿಷ್ ಮಾಧ್ಯಮದ ಪ್ರಶ್ನೋತ್ತರಕ್ಕಾಗಿ ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ

ಮಾಹಿತಿ: ಜ್ಞಾನಭಾರತಿ ಸ್ಪರ್ಧಾತ್ಮಕ ಪರೀಕ್ಷಾ ತರಬೇತಿ ಕೇಂದ್ರ

ಸಮಾಜವಿಜ್ಞಾನ

ಅಧ್ಯಾಯ – 3 ಭಾರತದಲ್ಲಿ ಬ್ರಿಟಿಷ್ ಆಳ್ವಿಕೆಯ ಪರಿಣಾಮಗಳು

13) ಬ್ರಿಟಿಷರ ಕಾಲದಲ್ಲಿದ್ದ ಭಾರತದಲ್ಲಿ ಶಿಕ್ಷಣ ಈ ಬಗ್ಗೆ ವಿವರಿಸಿ

ಉತ್ತರ:– (....ಹಿಂದಿನ ಸಂಚಿಕೆಯಿಂದ)

ಗವರ್ನರ್ ಜನರಲ್‌ನ ಕಾರ್ಯಾಂಗ ಸಭೆಗೆ ಮೆಕಾಲೆಯನ್ನು ಕಾನೂನು ಸದಸ್ಯನನ್ನಾಗಿ ಬೆಂಟಿಂಕ್‌ನು ನೇಮಕ ಮಾಡಿದನು. ಸಾರ್ವಜನಿಕ ಶಿಕ್ಷಣಕ್ಕೆ ಸಂಬಂಧಿಸಿದಂತೆ ನೇಮಕವಾದ ಸಮಿತಿಗೂ ಅಧ್ಯಕ್ಷನನ್ನಾಗಿ ನೇಮಕ ಮಾಡಲಾಯಿತು. 1835ರಲ್ಲಿ ಇಂಗ್ಲಿಷ್ ಶಿಕ್ಷಣಕ್ಕೆ ಸಂಬಂಧಿಸಿದಂತೆ ಮೆಕಾಲೆಯು ಕೊಟ್ಟ ವರದಿಯೆ ಅಧುನಿಕ ಭಾರತದ ಶಿಕ್ಷಣ ವ್ಯವಸ್ಥೆಗೆ ತಳಹದಿಯಾಯಿತು. ಅವನ ಯೋಜನೆಯ ಪ್ರಮುಖ ಅಂಶವೆಂದರೆ; "ರಕ್ತ ಮಾಂಸಗಳಲ್ಲಿ ಭಾರತೀಯರಾಗಿಯೂ ಅಭಿರುಚಿ, ಅಭಿಪ್ರಾಯ, ನೀತಿ ಮತ್ತು ಬುದ್ಧಿವಂತಿಕೆಯಲ್ಲಿ ಇಂಗ್ಲಿಷರಾಗುವ" ಹೊಸ ಭಾರತೀಯ ವಿದ್ಯಾವಂತ ವರ್ಗವನ್ನು ಸೃಷ್ಟಿ ಮಾಡುವುದಾಗಿತ್ತು.

ಭಾರತದ ವಿದ್ಯಾಭ್ಯಾಸದ ಕ್ರಮದಲ್ಲಿ ಇಂಗ್ಲಿಷ್ ಭಾಷೆಯು ಮಾಧ್ಯಮವಾಗಿ ಬಳಕೆಯಾಗಲು ಪ್ರಾರಂಭವಾದದ್ದೇ 1830ರ ದಶಕದ ನಂತರ ಎಂಬುದೇ ವಿಶೇಷ. ಸರ್ ಚಾರ್ಲ್ಸ್ ವುಡ್ಸ್‌ನ (1854) ಆಯೋಗದ ಶಿಫಾರಸ್ಸುಗಳ ಆಧಾರದ ಮೇಲೆ ಅಂದಿನ ಗವರ್ನರ್ ಜನರಲ್ ಆದ ಲಾರ್ಡ್ ಡಾಲ್‌ಹೌಸಿಯು ಕಲ್ಕತ್ತಾ, ಬಾಂಬೆ ಮತ್ತು ಮದರಾಸುಗಳಲ್ಲಿ ನೂತನ ವಿಶ್ವವಿದ್ಯಾನಿಲಯಗಳನ್ನು 1857ರಲ್ಲಿ ಸ್ಥಾಪಿಸಿದನು. ಇಲ್ಲಿಂದ ನಂತರ ಶಿಕ್ಷಣವು ಸಾರ್ವತ್ರೀಕರಣಗೊಳ್ಳತೊಡಗಿತು.

ಹೀಗೆ ಬ್ರಿಟಿಷ್ ಕಾಲದಲ್ಲಿ ಶಿಕ್ಷಣ ವ್ಯವಸ್ಥೆ ರೂಪುಗೊಳ್ಳತೊಡಗಿತು.

15) ಬ್ರಿಟಿಷ್ ಶಿಕ್ಷಣದ ಪರಿಣಾಮಗಳಾವುವು?

ಉತ್ತರ:– ಬ್ರಿಟಿಷ್ ಶಿಕ್ಷಣದ ಪರಿಣಾಮಗಳು:– (1) ಭಾರತೀಯರು ಆಧುನಿಕತೆ, ಜಾತ್ಯತೀತತೆ, ಪ್ರಜಾಪ್ರಭುತ್ವ, ವೈಜ್ಞಾನಿಕ ಆಲೋಚನಾ ಕ್ರಮದ ಜೊತೆಗೆ ರಾಷ್ಟ್ರೀಯವಾದಿ ದೃಷ್ಟಿಕೋನಗಳನ್ನು ಬೆಳೆಸಿಕೊಳ್ಳಲು ಸಾಧ್ಯವಾಯಿತು.

2) ಸ್ಥಳೀಯ ಭಾಷೆಗಳು ಮತ್ತು ಸಾಹಿತ್ಯ ರಚನೆಗಳಿಗೆ ಪ್ರೋತ್ಸಾಹ ದೊರೆಯಿತು. ಇದರಿಂದ ವಿದ್ಯಾವಂತ ವರ್ಗದ ಆಲೋಚನಾ ಕ್ರಮದಲ್ಲೂ ಏಕತೆಯ ಸ್ವರೂಪವನ್ನು ಕಾಣತೊಡಗಿತು.

3) ವೃತ್ತ ಪತ್ರಿಕೆಗಳು ಹುಟ್ಟಿ ಬೆಳೆಯತೊಡಗಿದವು. ವಿಶೇಷವಾಗಿ 19ನೇ ಶತಮಾನದ ಉತ್ತರಾರ್ಧದಲ್ಲಿ ಪತ್ರಿಕೆಗಳಲ್ಲಿ ಸರ್ಕಾರದ ನೀತಿಗಳನ್ನು ವಿಮರ್ಶಿಸುವ ಮೂಲಕ ಭಾರತೀಯರಲ್ಲಿ ಬ್ರಿಟಿಷ್ ಆಡಳಿತದ ಬಗ್ಗೆ ವಿಮರ್ಶಾತ್ಮಕ ಅಭಿಪ್ರಾಯ ಬೆಳೆಯಲು ಸಾಧ್ಯವಾಯಿತು.

4) ಹೊಸ ಸಾಮಾಜಿಕ ಮತ್ತು ಧಾರ್ಮಿಕ ಸುಧಾರಣಾ ಚಳವಳಿಗಳು ಹುಟ್ಟಿಕೊಂಡವು.

5) ಜೆ. ಎಸ್. ಮಿಲ್, ರೂಸೋ, ಮಾಂಟೆಸ್ಕ್ಯೂ ಮುಂತಾದವರ ಚಿಂತನೆಗಳು ಭಾರತೀಯ ವಿದ್ಯಾವಂತರ ಆಲೋಚನಾ ಕ್ರಮದಲ್ಲಿ ನಾವಿನ್ಯತೆಯನ್ನು ತಂದವು.

6) ಜಗತ್ತಿನಾದ್ಯಂತ ನಡೆಯುತ್ತಿದ್ದ ಸ್ವಾತಂತ್ರ್ಯ ಚಳವಳಿಗಳ ಪ್ರಭಾವ ಭಾರತೀಯರ ಮೇಲೂ ಆಯಿತು.

7) ಭಾರತೀಯರು ತಮ್ಮ ಸಮೃದ್ಧ ಸಾಂಸ್ಕೃತಿಕ ಪರಂಪರೆಗಳನ್ನು ಅರಿತುಕೊಳ್ಳಲು ಸಾಧ್ಯವಾಯಿತು. ಹೀಗೆ ಭಾರತದಲ್ಲಿ ಜಾರಿಗೊಂಡ ಪಾಶ್ಚಾತ್ಯ ವಿದ್ಯಾಭ್ಯಾಸದ ಕ್ರಮದಿಂದ ಸೃಷ್ಟಿಯಾದ ಅಭಿರುಚಿ ಮತ್ತು ಆಲೋಚನೆಗಳು ಭಾರತದಲ್ಲಿ ಹೊಸ ಹೊಸ ತಲೆಮಾರುಗಳನ್ನು ಸೃಷ್ಟಿಸುತ್ತಾ ಹೋಯಿತು.

16) ಯಾವ ಹಿನ್ನೆಲೆಯಲ್ಲಿ 1773ರ ರೆಗ್ಯುಲೇಟಿಂಗ್ ಕಾಯ್ದೆ ಜಾರಿಗೊಂಡಿತು

ಉತ್ತರ:– 1765ರಲ್ಲಿ ಜಾರಿಗೊಂಡ ದಿವಾನಿ ಹಕ್ಕಿನ ನಂತರ ಕಂಪನಿ ಅಧಿಕಾರಿಗಳು ಅಪರಿಮಿತ ದುರಾಸೆಗೆ ಒಳಗಾಗಿ ಅಧಿಕಾರವನ್ನು ತಮ್ಮ ವೈಯಕ್ತಿಕ ಶ್ರೀಮಂತಿಕೆಯನ್ನು ಹೆಚ್ಚುಪಡಿಸಿಕೊಳ್ಳಲು ಬಳಸಿಕೊಂಡರು. ಭ್ರಷ್ಟಾಚಾರ ವಿಪರೀತವಾಯಿತು. ಇಂಗ್ಲೆಂಡಿನ ಶಾಸನ ಸಭೆಯ ಸದಸ್ಯನಾದ ಎಡ್ಮಂಡ್ ಬರ್ಕ್‌ನು ವಾರ್ಷಿಕವಾಗಿ ಈಸ್ಟ್ ಇಂಡಿಯಾ ಕಂಪನಿಯಿಂದ ಬ್ರಿಟಿಷ್ ಸರ್ಕಾರ ಪಡೆಯುತ್ತಿದ್ದ ತೆರಿಗೆ ಹಣವನ್ನು 'ಅಪರಾಧ ತೆರಿಗೆ' ಎಂದು ತೀಕ್ಷ್ಣವಾಗಿಯೇ ಟೀಕಿಸಿದನು. ಕಂಪನಿ ಅಧಿಕಾರಿಗಳು ಭಾರತದಲ್ಲಿ ನಡೆಸುತ್ತಿರುವ ಅನೈತಿಕ ವ್ಯವಹಾರಗಳು ಗೊತ್ತಿದ್ದರೂ ಯಾವುದೇ ಕ್ರಮವನ್ನು ಜರುಗಿಸದೇ ಸುಮ್ಮನಿದ್ದುದೇ ಅವನು ಹೀಗೆ ಹೇಳಲು ಕಾರಣವಾಗಿತ್ತು. ಇವರು ಸಂಪಾದಿಸಿದ ಹಣದ ಪ್ರಮಾಣ ಎಷ್ಟಿತ್ತೆಂದರೆ ಇಂಗ್ಲೆಂಡಿನ ರಾಜಕೀಯ ವ್ಯವಸ್ಥೆಯನ್ನು ಬಡುಮೇಲು ಮಾಡಬಹುದೆನ್ನುವ ಆತಂಕ ಇಂಗ್ಲೆಂಡಿನಲ್ಲಿ ಅನೇಕರಿಗಿತ್ತು. ಈ ಹಿನ್ನೆಲೆಯಲ್ಲಿ ರೆಗ್ಯುಲೇಟಿಂಗ್ ಕಾಯ್ದೆ 1773ರಲ್ಲಿ ಜಾರಿಗೊಂಡಿತು.

17) 1773ರ ರೆಗ್ಯುಲೇಟಿಂಗ್ ಕಾಯ್ದೆಯ ಪ್ರಮುಖ ಲಕ್ಷಣಗಳೇನು?

ಉತ್ತರ:– 1773ರ ರೆಗ್ಯುಲೇಟಿಂಗ್ ಕಾಯ್ದೆಯ ಪ್ರಮುಖ ಲಕ್ಷಣಗಳು (1). ಈ ಕಾಯ್ದೆಯು ಜಾರಿಗೆ ಬರುವ ಪೂರ್ವದಲ್ಲಿ ಬ್ರಿಟಿಷರ ಅಧೀನದಲ್ಲಿದ್ದ ಪ್ರಾಂತ್ಯಗಳನ್ನು ಮೂರು ಪ್ರೆಸಿಡೆನ್ಸಿಗಳಾಗಿ ವಿಂಗಡಿಸಲಾಗಿತ್ತು. ಅವುಗಳೆಂದರೆ ಬಂಗಾಳ, ಮುಂಬಯಿ ಮತ್ತು ಮದರಾಸು ಪ್ರೆಸಿಡೆನ್ಸಿಗಳು. ಅವುಗಳು ಪ್ರತ್ಯೇಕವಾಗಿಯೂ ಮತ್ತು ಸ್ವತಂತ್ರವಾಗಿಯೂ ಕಾರ್ಯನಿರ್ವಹಿಸುತ್ತಿದ್ದವು. ಈ ಕಾಯ್ದೆಯ ಪ್ರಕಾರ ಬಂಗಾಳದ ಪ್ರೆಸಿಡೆನ್ಸಿಯು ಉಳಿದ ಎರಡು ಪ್ರೆಸಿಡೆನ್ಸಿಗಳ ಮೇಲೆ ಅಧಿಕಾರವನ್ನು ಪಡೆಯಿತು.

(2). ಬಂಗಾಳದ ಗವರ್ನರನು ಮೂರು ಪ್ರೆಸಿಡೆನ್ಸಿಗಳಿಗೆ ಗವರ್ನರ್ ಜನರಲ್ ಆದನು.

(3). ಗವರ್ನರ್ ಜನರಲ್ಲನಿಗೆ ಬಾಂಬೆ ಮತ್ತು ಮದರಾಸು ಪ್ರೆಸಿಡೆನ್ಸಿಗಳಿಗೆ ನಿರ್ದೇಶಿಸುವ, ನಿಯಂತ್ರಿಸುವ ಮತ್ತು ಮೇಲ್ವಿಚಾರಣೆ ಮಾಡುವ ಅಧಿಕಾರವನ್ನು ಈ ಕಾನೂನು ನೀಡಿತು.

(4) ಬಂಗಾಳ ಸರ್ಕಾರದ ಮತ್ತು ಇಂಗ್ಲೆಂಡಿನ ನಿರ್ದೇಶಕ ಮಂಡಳಿಯ (Court of Directors) ಪೂರ್ವಾನುಮತಿಯಿಲ್ಲದೆ ಬಾಂಬೆ ಮತ್ತು ಮದರಾಸು ಸರ್ಕಾರಗಳು ಯಾರ ಮೇಲೂ ಯುದ್ಧ ಘೋಷಿಸುವಂತಿಲ್ಲ ಅಥವಾ ಶಾಂತಿ ಸಂಧಾನವನ್ನು ನಡೆಸುವಂತಿಲ್ಲ. ತೀರ ತುರ್ತಾದ ಸಂದರ್ಭಗಳಲ್ಲಿ ಮಾತ್ರ ಇಂತಹ ನಿಬಂಧನೆಗಳಿಂದ ವಿನಾಯಿತಿ ಇತ್ತು.

(5). ಕಲ್ಕತ್ತಾದಲ್ಲಿ ಈ ಕಾಯ್ದೆಯ ಮೇರೆಗೆ 'ಸುಪ್ರೀಂ ಕೋರ್ಟ್' ಅನ್ನು ಸ್ಥಾಪಿಸಲಾಯಿತು. ಈ ಕೇಂದ್ರ ನ್ಯಾಯಾಲಯದಲ್ಲಿ ಒಬ್ಬರು ಮುಖ್ಯ ನ್ಯಾಯಾಧೀಶರು ಮತ್ತು ಮೂರು ಜನ ಸಾಮಾನ್ಯ ನ್ಯಾಯಾಧೀಶರು ಕಾರ್ಯನಿರ್ವಹಿಸುತ್ತಿದ್ದರು. ಹೀಗೆ ರೆಗ್ಯುಲೇಟಿಂಗ್ ಕಾಯ್ದೆ, ತನ್ನ ಹೆಸರೇ ಸೂಚಿಸುವಂತೆ ಕಂಪನಿಯನ್ನು ಒಳಗೊಂಡಂತೆ ಒಟ್ಟಾರೆ ಭಾರತದಲ್ಲಿನ ಬ್ರಿಟಿಷ್ ಆಡಳಿತ ವ್ಯವಸ್ಥೆಯನ್ನು ಇಂಗ್ಲೆಂಡಿನ ಸರ್ಕಾರದ ಅಧೀನಕ್ಕೆ ತರುವ ಬಹುದೊಡ್ಡ ನಿರ್ಣಯವಾಗಿತ್ತು

18) 1784ರ ಪಿಟ್ಸ್ ಇಂಡಿಯಾ ಕಾಯ್ದೆ ಬರೆಯಿರಿ

ಉತ್ತರ: 1773ರ ರೆಗ್ಯುಲೇಟಿಂಗ್ ಕಾಯ್ದೆಯಲ್ಲಿ ಕೆಲವು ಅನಿಶ್ಚಿತತೆಗಳು ಇದ್ದವು, ಇವುಗಳನ್ನು ನಿವಾರಿಸುವುದರ ಜೊತೆಗೆ ಬ್ರಿಟಿಷ್ ಸರ್ಕಾರದ ಅಧಿಕಾರವನ್ನು ಮತ್ತು ಕಂಪನಿ ಸರ್ಕಾರಕ್ಕಿದ್ದ ಅಧಿಕಾರದ ಮಿತಿಗಳನ್ನು ಸ್ಪಷ್ಟಪಡಿಸುವುದೇ ಈ ಕಾಯ್ದೆಯ ಪ್ರಮುಖ ಉದ್ದೇಶ. ಇಂಗ್ಲೆಂಡ್‌ನ ಸರ್ಕಾರ ಈ ಕಾಯ್ದೆಯಲ್ಲಿ ಹೊಸ ನಿಬಂಧನೆಗಳನ್ನು ಹೇರುವುದರ ಮೂಲಕ ಭಾರತದಲ್ಲಿ ಕಂಪನಿ ಸರ್ಕಾರವನ್ನು ನಿರ್ಣಾಯಕವಾಗಿ ನಿಯಂತ್ರಿಸಿತು. ಮತ್ತೊಂದು ಪ್ರಮುಖ ಅಂಶವೆಂದರೆ 'ನಿಯಂತ್ರಣ ಮಂಡಳಿ' (Board of Control) ಎನ್ನುವ ಆರು ಜನ ಕಮಿಷನರ್‌ಗಳನ್ನೊಳಗೊಂಡ ಹೊಸ ಸಂಸ್ಥೆಯನ್ನು ಹುಟ್ಟುಹಾಕಲಾಯಿತು. ಇಲ್ಲಿ ಪ್ರಮುಖವಾಗಿ ಗಮನಿಸಬೇಕಾದ ಅಂಶವೆಂದರೆ ಈ ಹಿಂದೆ ಇದ್ದ 'ನಿರ್ದೇಶನ' ಮಂಡಳಿಯ (Court of Directors) ಜಾಗದಲ್ಲಿ ನಿಯಂತ್ರಣ ಮಂಡಳಿ (Board of Control) ಹುಟ್ಟಿಕೊಂಡಿತು. ಈ ಮಂಡಳಿಯು ನಾಗರಿಕ, ಮಿಲಿಟರಿ, ಕಂದಾಯದ ವಿಷಯಗಳಲ್ಲಿ ನಿರ್ದೇಶಿಸುವ, ನಿಯಂತ್ರಿಸುವ ಮತ್ತು ಮೇಲ್ವಿಚಾರಣೆ ನಡೆಸುವ

(ಮುಂದುವರಿಯುವುದು)

PHYSICS

Chapter – 2

ELECTROSTATIC POTENTIAL AND CAPACITANCE

5. If an air capacitor is given a charge of 2 μF, its p.d is raised to 200V. If on inserting a dielectric medium its p.d falls to 50V, what is the dielectric constant of the medium?

(…….Contd)

Soln:- When dielectric is introduced, the p. d between the plates of the capacitor decreases by a factor equal to dielectric constant. Therefore,

$$K=\frac{V}{V'}=\frac{200}{50}=4$$

6. Three capacitors of capacitance of each 2 μF are connected in parallel. Find the resultant capacitance in Farad.

Soln :– Given, 3 capacitors

$$C_1=C_2=C_3=C=2\mu F$$

When they are connected in parallel the capacitance of the resultant capacitor is given by, $C_p = nC = 3x2$

$$\therefore C_p = 6\mu F$$

7. The volumes of the conducting spheres are in the ratio 1: 8. What is the ratio of their capacitance?

Soln :– Ratio of the volumes capacitors are 1:8

$$\Rightarrow \frac{V_1}{V_2}=\frac{r_1^3}{r_2^3}=\frac{1}{8}$$

$$\therefore \frac{r_1}{r_2}=\frac{1}{2}$$

Ratio of the capacitance $\frac{C_1}{C_2}=\frac{r_1}{r_2}=\frac{1}{2}=1:2$

8. Two capacitors of capacity 2 μF and 4 μF are connected in parallel across 20 V supply. The energy stored in the combination is ……

Soln :– Given, $C_1=2\mu F$, $C_2=4\mu F$ & $V=20V$

If U is the energy stored in the combination,

then, $U=\frac{1}{2}C_pV^2 \qquad (C_p=C_1+C_2)$

$$=\frac{1}{2}(2+4)10^{-6}x20^2=1.2x10^{-3}J$$

9. Two capacitors of capacitance of each 2 μF and 6 μF are connected in series. Find the resultant capacitance in Farad.

Soln :– Given, capacitors $C_1=2\mu F$, $C_2=6\mu F$

When they are connected end to end means they are in series.

The capacitance of the resultant capacitor is given by, $\frac{1}{C_s}=\frac{1}{C_1}+\frac{1}{C_2}=\frac{1}{2}+\frac{1}{6}=\frac{2}{3}$

$$\therefore C_s=\frac{3}{2}\mu F=1.5\mu F$$

Answer the following questions:-

33. If an earthed metal plate is brought near a charged spherical conductor mounted on an insulated stand. What happens to the -
(a) p.d of the conductor
(c) charge on the capacitor
(d) capacitance of the conductor

Ans:- If an earthed metal plate is brought near a charged spherical conductor mounted on an insulated stand.
(a) p.d of the conductor decreases
(b) charge on the capacitor is not altered
(c) capacitance of the conductor increases

34. Mention some of the uses of the capacitors.

Ans:- Some of the uses of the capacitors are as follows –
(a) they are used to store the electric charges and energy.
(b) they are used to eliminate sparking as in an induction coil
(c) they are used to deflect the electron beams
(d) they are used in radio circuits for tuning
(e) they are used to reduce pulsations in the electronic power systems
(f) they are used to determine very high resistance say of the order mega ohms
(g) they are used as potential dividers
(h) they are used to separate the radio active radiations
(i) they are used in the generation and detection of the electromagnetic waves
(j) they are used in ignition system of automobile engines.

35. Four capacitors 2μ F, 3μ F, 4μ F and 5μ F are connected in the form of a rectangle ABCD as in the figure.



Calculate the capacitance between the diagonals. Across which diagonal is the effective capacitance more.

Soln:- As per the figure, across AC, the capacitors 2μ F and 3μ F are in series.

The effective capacitance,

$$C_1=\frac{2x3}{2+3}=\frac{6}{5}\mu F$$

and the capacitors 4μ F and 5μ F are in series, therefore the effective capacitance,

$$C_2=\frac{4x5}{4+5}=\frac{20}{9}\mu F$$

(Contd……..)

ಚಿಟಿಕೆ ಸುದ್ದಿ

ಸೂಪರ್ ಮೂನ್
ಸಾಮಾನ್ಯ ದಿನಗಳಲ್ಲಿ ಕಾಣಿಸುವುದಕ್ಕಿಂತ ದೊಡ್ಡದಾಗಿ ಮತ್ತು ಪ್ರಕಾಶಮಾನವಾಗಿ ಚಂದಿರ ಸೋಮವಾರ ರಾತ್ರಿ ಗೋಚರಿಸಿದ್ದು, ಮಂಗಳೂರಿನಲ್ಲಿ ಕ್ಯಾಮೆರಾಕ್ಕೆ ಸೆರೆಯಾಯಿತು
ಚಿತ್ರ: ಫಕ್ರುದ್ದೀನ್ ಎಚ್‌

ಸುರಳ್ಕರ್ ವಿಕಾಸ್ ಶಾಲಾ ಶಿಕ್ಷಣ ಆಯುಕ್ತ

ಬೆಂಗಳೂರು: ಐಎಎಸ್ ಅಧಿಕಾರಿ ಸುರಳ್ಕರ್ ವಿಕಾಸ್ ಕಿಶೋರ್ ಅವರನ್ನು ಶಾಲಾ ಶಿಕ್ಷಣ ಇಲಾಖೆ ಆಯುಕ್ತರ ಹುದ್ದೆಗೆ ವರ್ಗಾವಣೆ ಮಾಡಿದ್ದು, ಈ ಹುದ್ದೆಯಲ್ಲಿದ್ದ ತ್ರಿಲೋಕ್ ಚಂದ್ರ ಕೆ.ವಿ ಅವರನ್ನು ಪ್ರವಾಸೋದ್ಯಮ ಇಲಾಖೆ ಕಾರ್ಯದರ್ಶಿಯಾಗಿ ವರ್ಗಾಯಿಸಲಾಗಿದೆ.

ವಿಕಾಸ್ ಕಿಶೋರ್ ಸುರಳ್ಕರ್

ಅಲ್ಲದೇ, ಸುರಳ್ಕರ್ ವಿಕಾಸ್ ಕಿಶೋರ್ ಅವರಿಗೆ ಗ್ರೇಟರ್ ಬೆಂಗಳೂರು ಪ್ರಾಧಿಕಾರದ (ಆರೋಗ್ಯ ಮತ್ತು ಶಿಕ್ಷಣ) ವಿಶೇಷ ಆಯುಕ್ತ ಹುದ್ದೆಯನ್ನು ಹೆಚ್ಚುವರಿಯಾಗಿ ನೀಡಲಾಗಿದೆ. ಆರೋಗ್ಯ ಇಲಾಖೆ ಆಯುಕ್ತ ಕೆ.ಬಿ. ಶಿವಕುಮಾರ್ ಅವರನ್ನು ಬಿಎಂಟಿಸಿ ವ್ಯವಸ್ಥಾಪಕ ನಿರ್ದೇಶಕ ಹುದ್ದೆಗೆ ವರ್ಗಾಯಿಸಲಾಗಿದೆ.

ಕಾಡಾನೆ ಸೆರೆ

ಚಿಕ್ಕಮಗಳೂರಿನ ನರಸಿಂಹರಾಜಪುರ ತಾಲ್ಲೂಕಿನ ಗುಂಡುವಾನಿ ಬಳಿ ಸೆರೆ ಸಿಕ್ಕಿರುವ ಕಾಡಾನೆ

ನರಸಿಂಹರಾಜಪುರ (ಚಿಕ್ಕಮಗಳೂರು): ತಾಲ್ಲೂಕಿನ ಕಾನೂರು ಗ್ರಾಮ ಪಂಚಾಯಿತಿ ವ್ಯಾಪ್ತಿಯ ಗುಡ್ಡೆಹಳ್ಳ, ಸಂಕ್ಸೆ, ಗುಂಡುವಾನಿ ಗ್ರಾಮಗಳ ವ್ಯಾಪ್ತಿಯಲ್ಲಿ ಬೆಳೆಹಾನಿಗೆ ಕಾರಣವಾಗಿದ್ದ ಒಂಟಿ ಸಲಗವನ್ನು ಅರಣ್ಯ ಇಲಾಖೆ ಕಾರ್ಯಾಚರಣೆ ನಡೆಸಿ ಸೆರೆ ಹಿಡಿದಿದೆ.

ಸಕ್ರೆಬೈಲು ಮತ್ತು ದುಬಾರೆಯಿಂದ 6 ಕುಮ್ಕಿ ಆನೆಗಳನ್ನು ಕರೆಸಿ ಕಾರ್ಯಾಚರಣೆ ನಡೆಸಲಾಗಿತ್ತು. 18ರಿಂದ 20 ವರ್ಷ ವಯಸ್ಸಿನ ಗಂಡಾನೆ ಗುಂಡವಾನೆ ಬಳಿ ಸೆರೆ ಸಿಕ್ಕಿದೆ. ಕಾರ್ಯಾಚರಣೆ ವೇಳೆ ಮಾವುತ ತೌಫೀಕ್ ಎಂಬವರಿಗೆ ಗಾಯವಾಗಿದೆ.

ಯಾದಗಿರಿಯಲ್ಲಿ 18ರಂದು ರೈತ ಸಮಾವೇಶ

ಮೈಸೂರು: ‘ಅತಿವೃಷ್ಟಿ, ಅನಾವೃಷ್ಟಿಯಿಂದ ಸಂಕಷ್ಟಕ್ಕೆ ಒಳಗಾಗಿರುವ ರೈತರ ಬೆಳೆಸಾಲ ಮನ್ನಾ ಮಾಡಬೇಕು ಎಂಬುದು ಸೇರಿ ವಿವಿಧ ಬೇಡಿಕೆಗಳ ಈಡೇರಿಕೆಗೆ ಆಗ್ರಹಿಸಿ ಅ.18ರಂದು ಯಾದಗಿರಿಯಲ್ಲಿ ರೈತ ಸಮಾವೇಶ ನಡೆಯಲಿದೆ.



ಇಲ್ಲಿ ಸೋಮವಾರ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ರಾಜ್ಯ ರೈತ ಸಂಘದ ಅಧ್ಯಕ್ಷ ಬಡಗಲಪುರ ನಾಗೇಂದ್ರ ಅವರು, ‘ಕೇಂದ್ರ ಮತ್ತು ರಾಜ್ಯ ಸರ್ಕಾರದ ಎದುರು ಹಕ್ಕೊತ್ತಾಯಗಳನ್ನು ಮಂಡಿಸಲಾಗುವುದು’ ಎಂದರು.

‘ಬೆಳೆ ಹಾನಿಗೆ ರೈತರಿಗೆ ಪರಿಹಾರ ನೀಡಲು ಪಾಲಿಸುತ್ತಿರುವ ಮಾನದಂಡ ಸರಿ ಇಲ್ಲ. ಎಕರೆಗೆ ₹50 ಸಾವಿರ ಕೊಡಬೇಕು’ ಎಂದು ಒತ್ತಾಯಿಸಿದರು.

ಹುಲಿ ಹತ್ಯೆ ಪ್ರಕರಣ ಆರೋಪಿಗಳು ವಶಕ್ಕೆ

ಹನೂರು (ಚಾಮರಾಜನಗರ ಜಿಲ್ಲೆ): ಮಲೆ ಮಹದೇಶ್ವರ ವನ್ಯಧಾಮದಲ್ಲಿ ಹುಲಿ ಹತ್ಯೆ ಪ್ರಕರಣದ ಆರೋಪಿಗಳನ್ನು ಹೆಚ್ಚಿನ ವಿಚಾರಣೆಗೆ ಅರಣ್ಯಾಧಿಕಾರಿಗಳ ವಶಕ್ಕೆ ನೀಡಲಾಗಿದೆ.

ಕೊಳ್ಳೇಗಾಲದ ಜೆಎಂಎಫ್‌ಸಿ ಕೋರ್ಟ್‌ನಿಂದ ಸೋಮವಾರ ಅನುಮತಿ ಪಡೆದು, ಆರೋಪಿಗಳಾದ ಪಚ್ಚಮಲ್ಲು, ಗಣೇಶ್, ಸಂಪು ಅವರನ್ನು ವಶಕ್ಕೆ ಪಡೆದು ಅಧಿಕಾರಿಗಳು ಸ್ಥಳ ಮಹಜರು ನಡೆಸಿದರು. ತಲೆಮರೆಸಿಕೊಂಡಿರುವ ಇತರರಿಗೆ ಶೋಧ ನಡೆದಿದೆ.

ಈಶ್ವರ ಬಿ.ಖಂಡ್ರೆ

‘ತ್ವರಿತವಾಗಿ ಆರೋಪಪಟ್ಟಿ ಸಲ್ಲಿಸಲು ಸೂಚಿಸಲಾಗಿದೆ. ಸಿಬ್ಬಂದಿ ನಿರ್ಲಕ್ಷ್ಯ ಅಥವಾ ಕರ್ತವ್ಯ ಲೋಪ ಎಸಗಿದ್ದರೆ ನಿರ್ದಾಕ್ಷಿಣ್ಯ ಶಿಸ್ತುಕ್ರಮ ಜರುಗಿಸಲಾಗುವುದು. ಪಿಸಿಸಿಎಫ್ ನೇತೃತ್ವದಲ್ಲಿ ತನಿಖೆ ನಡೆಯುತ್ತಿದೆ’ ಅರಣ್ಯ ಸಚಿವ ಈಶ್ವರ ಬಿ.ಖಂಡ್ರೆ ತಿಳಿಸಿದ್ದಾರೆ.

‘ಕಾಡಿನಂಚು ಮತ್ತು ಕಾಡಿನಲ್ಲಿರುವ ಹಾಡಿಗಳಲ್ಲಿರುವ ಜನರ ಆರ್ಥಿಕ ಅಭಿವೃದ್ಧಿಗೆ ಕ್ರಮವಹಿಸಲು ವನ್ಯಜೀವಿಗಳೊಂದಿಗೆ ಸಹಬಾಳ್ವೆಗೆ ಉತ್ತೇಜನ ಕುರಿತು ಸಭೆ ನಡೆಸುವಂತೆ ಅಧಿಕಾರಿಗಳಿಗೆ ಸೂಚಿಸಲಾಗಿದೆ’ ಎಂದು ಸಚಿವರು ಹೇಳಿದರು.

‘ಆರ್ಥಿಕತೆ ಸದೃಢ: ಚರ್ಚೆಗೆ ಬನ್ನಿ’

ತೆರಿಗೆ ಪಾಲು: ಕೇಂದ್ರದಿಂದ ನಿರಂತರ ಅನ್ಯಾಯ– ಸಿದ್ದರಾಮಯ್ಯ ಆಕ್ರೋಶ

ಪ್ರಜಾವಾಣಿ ವಾರ್ತೆ

ಕೊಪ್ಪಳ: ‘ತೆರಿಗೆ ಪಾಲು ಹಂಚಿಕೆಯಲ್ಲಿ ಕೇಂದ್ರ ಸರ್ಕಾರದ ನಿರಂತರ ಅನ್ಯಾಯದ ನಡುವೆಯೂ ರಾಜ್ಯ ಸರ್ಕಾರ ಆರ್ಥಿಕವಾಗಿ ಸದೃಢವಾಗಿದೆ. ಈ ಕುರಿತು ಬಹಿರಂಗ ಚರ್ಚೆಗೆ ಬಿಜೆಪಿ ಸಿದ್ಧವಿದೆಯೇ’ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಇಲ್ಲಿ ಪ್ರಶ್ನಿಸಿದರು.

‘ಗ್ಯಾರಂಟಿ ಯೋಜನೆಗಳಿಗೆ ಕಳೆದ ಎರಡು ವರ್ಷಗಳಲ್ಲಿ ₹1 ಲಕ್ಷ ಕೋಟಿ ಖರ್ಚು ಮಾಡಿಯೂ ಪ್ರತಿ ಜಿಲ್ಲೆಗಳಿಗೂ ಅಭಿವೃದ್ಧಿಗೆ ಅನುದಾನ ನೀಡಲಾಗುತ್ತಿದೆ’ ಎಂದು ಪ್ರತಿಪಾದಿಸಿದರು.

ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ ಹಾಗೂ ಜಿಲ್ಲಾಡಳಿತ ನಗರದಲ್ಲಿ ಸೋಮವಾರ ಹಮ್ಮಿಕೊಂಡಿದ್ದ ಒಟ್ಟು ₹2,000 ಕೋಟಿ ವೆಚ್ಚದ ಕಾಮಗಾರಿಗಳ ಉದ್ಘಾಟನೆ, ಶಂಕುಸ್ಥಾಪನೆ ಮತ್ತು ಫಲಾನುಭವಿಗಳಿಗೆ ಸರ್ಕಾರಿ ಸವಲತ್ತು ವಿತರಣೆ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದರು.

> **ಬಿಜೆಪಿಯವರು ಅಂದುಕೊಂಡಿರುವಂತೆ ರಾಜ್ಯದ ರಾಜಕಾರಣದಲ್ಲಿ ನವೆಂಬರ್‌ನಲ್ಲಿ ಯಾವ ಕ್ರಾಂತಿಯೂ ನಡೆಯಲ್ಲ. ಯಾವ ಭ್ರಾಂತಿಯೂ ಬೇಡ.**
> **ಸಿದ್ದರಾಮಯ್ಯ,** ಮುಖ್ಯಮಂತ್ರಿ

‘ಸರ್ಕಾರದಲ್ಲಿ ಹಣವಿಲ್ಲ, ಖಜಾನೆ ಖಾಲಿಯಾಗಿದೆ ಎನ್ನುವ ಬಿಜೆಪಿಯವರು ತಮ್ಮ ಅವಧಿಯಲ್ಲಿ ಹಣವಿಲ್ಲದಿದ್ದರೂ ಹೊಸ ಯೋಜನೆಗಳಿಗೆ ಚಾಲನೆ ನೀಡಿ ನಮ್ಮನ್ನು ಸಂಕಷ್ಟಕ್ಕೆ ದೂಡಿದ್ದರು. ನಾವೀಗ ಆರ್ಥಿಕವಾಗಿ ಸದೃಢವಾಗಿದ್ದೇವೆ. ತಲಾ ಆದಾಯದಲ್ಲಿ ರಾಜ್ಯ ಈಗ ದೇಶದಲ್ಲಿಯೇ ಅಗ್ರಸ್ಥಾನದಲ್ಲಿರುವುದು ಇದಕ್ಕೆ ಸಾಕ್ಷಿ’ ಎಂದು ನುಡಿದರು.

ರಾಜ್ಯ ಸರ್ಕಾರದಲ್ಲಿ ಹಣವಿಲ್ಲದಿದ್ದರೆ ಕೊಪ್ಪಳ ಜಿಲ್ಲೆಯಲ್ಲಿ ₹2000 ಕೋಟಿ ಮೊತ್ತದ ಅಭಿವೃದ್ಧಿ ಕಾರ್ಯ ನಡೆಸಲು ಸಾಧ್ಯವಾಗುತ್ತಿತ್ತೇ ಎಂದು ಪ್ರಶ್ನಿಸಿದರು.

ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಕೊಪ್ಪಳದಲ್ಲಿ ಸೋಮವಾರ ಕನಕದಾಸ ಮೂರ್ತಿಯನ್ನು ಲೋಕಾರ್ಪಣೆಗೊಳಿಸಿ ಜನರತ್ತ ಕೈಮುಗಿದರು. ಸಚಿವರಾದ ಡಾ.ಶರಣಪ್ರಕಾಶ್ ಪಾಟೀಲ, ಶಿವರಾಜ ತಂಗಡಗಿ, ಸಂಸದ ರಾಜಶೇಖರ ಹಿಟ್ನಾಳ ಭಾಗವಹಿಸಿದ್ದರು ಪ್ರಜಾವಾಣಿ ಚಿತ್ರ/ ಭರತ್ ಕಂದಕೂರ

‘ಈವರೆಗೂ ಕಲ್ಯಾಣ ಕರ್ನಾಟಕದ ಅಭಿವೃದ್ಧಿಗೆ ₹13 ಸಾವಿರ ಕೋಟಿ ನೀಡಿದ್ದೇನೆ. ಕೃಷ್ಣಾ ಮೇಲ್ದಂಡೆ ಯೋಜನೆ ವಿಚಾರದಲ್ಲಿ ರೈತರಿಗೆ ₹80 ಸಾವಿರ ಕೋಟಿ ಪರಿಹಾರ ಒದಗಿಸಿದ್ದೇನೆ. ಬಿಜೆಪಿಯವರು ನಿತ್ಯ ಹೇಳುವ ಸುಳ್ಳುಗಳಿಗೆ ರಾಜ್ಯದ ಜನ ತಮ್ಮ ಬುದ್ಧಿ ಒತ್ತೆ ಇಡಬಾರದು’ ಎಂದು ಮನವಿ ಮಾಡಿದರು.

ಗ್ಯಾರಂಟಿ ಯೋಜನೆಗಳಿಂದ ಜನರಲ್ಲಿ ಕೊಳ್ಳುವ ಶಕ್ತಿ ಹೆಚ್ಚಾಗಿ ರಾಜ್ಯ ಆರ್ಥಿಕ ಪ್ರಗತಿ ಕಂಡಿದೆ ಎಂದು ಅವರು ಹೇಳಿದರು.

> **ಸಿದ್ದರಾಮಯ್ಯ ಅವರು ಮುಖ್ಯಮಂತ್ರಿಯಾಗಿದ್ದು, ಬದಲಾವಣೆ ಪ್ರಶ್ನೆ ಮೂಡದು. ರಾಯರೆಡ್ಡಿ ಅವರಂತೇ ಅನೇಕರು ಆಕಾಂಕ್ಷಿ ಆಗಿರಬಹುದು. ತೀರ್ಮಾನ ಹೈಕಮಾಂಡ್‌ನದ್ದು**
> **ದಿನೇಶ್ ಗುಂಡೂರಾವ್,**
> ಆರೋಗ್ಯ ಸಚಿವ

> **ರಾಜ್ಯ ಸರ್ಕಾರದ ಇನ್ನುಳಿದ ಅವಧಿಯಲ್ಲೂ ಸಿದ್ದರಾಮಯ್ಯ ನೇತೃತ್ವದಲ್ಲಿ ಅಭಿವೃದ್ಧಿ ಕೆಲಸ ಮಾಡುತ್ತೇವೆ. ಸರ್ಕಾರವನ್ನು ಅಲುಗಾಡಿಸಲು ಯಾರಿಂದಲೂ ಆಗುವುದಿಲ್ಲ**
> **ಬಸವರಾಜ ರಾಯರಡ್ಡಿ,**
> ಮುಖ್ಯಮಂತ್ರಿಗಳ ಆರ್ಥಿಕ ಸಲಹೆಗಾರ

ಬಡ ವಿದ್ಯಾರ್ಥಿಗಳ ₹ 1.20 ಲಕ್ಷ ಶುಲ್ಕ ಪಾವತಿಸಿದ ಗ್ರಾಮಸ್ಥರು

ಪ್ರಜಾವಾಣಿ ವಾರ್ತೆ

ಗುಬ್ಬಿ (ತುಮಕೂರು): ಶುಲ್ಕ ಪಾವತಿಸಲಾಗದೇ ಕಾಲೇಜು ತೊರೆಯಲು ಮುಂದಾಗಿದ್ದ ತಾಲ್ಲೂಕಿನ ಸಿ.ಎಸ್ ಪುರದ ಸರ್ಕಾರಿ ಪ್ರಥಮದರ್ಜೆ ಕಾಲೇಜಿನ 36 ಬಡ ವಿದ್ಯಾರ್ಥಿಗಳ ಬೋಧನಾ ಶುಲ್ಕವನ್ನು ಗ್ರಾಮಸ್ಥರೇ ಪಾವತಿಸಿದ್ದಾರೆ.

ವಿದ್ಯಾರ್ಥಿಗಳ ಆರ್ಥಿಕ ಸಂಕಷ್ಟ ಅರಿತ ಕಾಲೇಜು ಅಭಿವೃದ್ಧಿ ಸಮಿತಿ ಸದಸ್ಯರು, ಗ್ರಾಮ ಪಂಚಾಯಿತಿ ಸದಸ್ಯರು ಹಾಗೂ ಗ್ರಾಮದ ಸಮಾನ ಮನಸ್ಕರು ಸೇರಿ ₹1.20 ಲಕ್ಷ ಸೇರಿಸಿ ಸೋಮವಾರ ಕಾಲೇಜಿಗೆ ಶುಲ್ಕ ಪಾವತಿಸಿದ್ದಾರೆ.

‘ಆರ್ಥಿಕ ಸಂಕಷ್ಟದಲ್ಲಿರುವ ವಿದ್ಯಾರ್ಥಿಗಳಿಗೆ ಅನುಕೂಲ ಮಾಡಿಕೊಡಲು ಶುಲ್ಕ ಪಾವತಿಸಿದ್ದೇವೆ. ಪೋಷಕರ ಸ್ಥಿತಿ ಅರಿತು ವಿದ್ಯಾರ್ಥಿಗಳು ಉತ್ತಮ ಭವಿಷ್ಯ ರೂಪಿಸಿಕೊಂಡರೆ ನಮ್ಮ ಶ್ರಮ ಸಾರ್ಥಕ’ ಎಂದು ಗ್ರಾಮಸ್ಥರು ‘ಪ್ರಜಾವಾಣಿ’ಗೆ ತಿಳಿಸಿದರು. ಗ್ರಾಮಸ್ಥರು ವಿದ್ಯಾರ್ಥಿ ಗಳ ಶುಲ್ಕ ಪಾವತಿಸಿರುವುದು ಉತ್ತಮ ಬೆಳವಣಿಗೆ ಎಂದು ಪ್ರಾಂಶುಪಾಲ ಪುಟ್ಟರಾಜು ಪ್ರತಿಕ್ರಿಯಿಸಿದರು.

ಗುಬ್ಬಿ ತಾಲ್ಲೂಕಿನ ಸಿ.ಎಸ್ ಪುರದ ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನ ಬಡ ವಿದ್ಯಾರ್ಥಿಗಳ ಶುಲ್ಕವನ್ನು ಗ್ರಾಮಸ್ಥರು ಪಾವತಿಸಿದರು

ಒಳ್ಳೆ ಸುದ್ದಿ

ಸಿಡಿಸಿ ಸದಸ್ಯ ನಂಜೇಗೌಡ, ಲಕ್ಷ್ಮಿನರಸೇಗೌಡ, ಸುಶಾಂತ್, ನರಸೇಗೌಡ, ಯೋಗೇಶ್, ರಮೇಶ್, ಲಕ್ಷ್ಮಿ, ರವಿ, ತಿಮ್ಮೇಗೌಡ, ನರಸಿಂಹಮೂರ್ತಿ ಮುಂತಾದವರು ಈ ಕಾರ್ಯಕ್ಕೆ ಕೈಜೋಡಿಸಿದ್ದಾರೆ.

ಚಾಮುಂಡೇಶ್ವರಿ ರಥೋತ್ಸವ

ಪ್ರಜಾವಾಣಿ ಚಿತ್ರ
ಅನೂಪ್ ರಾಘ. ಟಿ.

ಮೈಸೂರಿನ ಚಾಮುಂಡಿ ಬೆಟ್ಟದಲ್ಲಿ ಸೋಮವಾರ ನಡೆದ ಚಾಮುಂಡೇಶ್ವರಿ ದೇವಿಯ ಮಹಾರಥೋತ್ಸವದಲ್ಲಿ ಸಾವಿರಾರು ಭಕ್ತರು ಪಾಲ್ಗೊಂಡರು

ಎಚ್‌.ಕೆ. ಪಾಟೀಲ ನೇತೃತ್ವದಲ್ಲಿ ಸಚಿವ ಸಂಪುಟದ ಉಪ ಸಮಿತಿ ಸಭೆ ಪರಿಶೀಲನೆ

ಸೇವಾ ಭದ್ರತೆ: ಕ್ರಮ ಕುರಿತು ಚರ್ಚೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಹೊರಗುತ್ತಿಗೆ ನೌಕರರಿಗೆ ಸೇವಾ ಭದ್ರತೆ ಒದಗಿಸಲು ಸಹಕಾರ ಸಂಘಗಳನ್ನು ರಚಿಸಬೇಕೇ ಅಥವಾ ಬೇರೆ ಕ್ರಮ ತೆಗೆದುಕೊಳ್ಳಬೇಕೇ ಎಂಬ ಕುರಿತು ನಿರ್ಣಯ ಕೈಗೊಂಡು ಸಚಿವ ಸಂಪುಟಕ್ಕೆ ವರದಿ ನೀಡಲಾಗುವುದು’ ಎಂದು ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವ ಎಚ್‌.ಕೆ. ಪಾಟೀಲ ತಿಳಿಸಿದರು.

ಹೊರಗುತ್ತಿಗೆ ನೌಕರರ ಸೇವಾ ಭದ್ರತೆ ಕುರಿತು ಚರ್ಚಿಸಿ, ಶಿಫಾರಸು ಮಾಡಲು ರಚಿಸಲಾಗಿರುವ ಸಚಿವ ಸಂಪುಟದ ಉಪ ಸಮಿತಿಯ ಸಭೆಯ ಬಳಿಕ ಮಾತನಾಡಿದ ಅವರು, ‘ಹೊರಗುತ್ತಿಗೆ ನೌಕರರಿಗೆ ಸೇವಾ ಭದ್ರತೆ ಒದಗಿಸುವ ಬಗ್ಗೆ ಸುಪ್ರೀಂ ಕೋರ್ಟ್ ಆಗಸ್ಟ್ 19ರಂದು ನೀಡಿದ್ದ ತೀರ್ಪಿನಲ್ಲಿ ಕೆಲವು ಅಂಶಗಳನ್ನು ಗಂಭೀರವಾಗಿ ಉಲ್ಲೇಖಿಸಿದೆ. ಈ ಅಂಶಗಳ ಬಗ್ಗೆ ಸಭೆಯಲ್ಲಿ ಚರ್ಚೆ ನಡೆಸಲಾಗಿದೆ’ ಎಂದರು.

‘ಹೊರಗುತ್ತಿಗೆ ನೌಕರರ ವ್ಯವಸ್ಥೆಯಲ್ಲಿ ಖಾಸಗಿ ಏಜೆನ್ಸಿ ಮೂಲಕ ಶೋಷಣೆ ನಡೆಯುತ್ತಿದೆ. ಈ ನೌಕರರಿಗೆ ಸೇವಾ ಭದ್ರತೆ ಒದಗಿಸುವ ಉದ್ದೇಶದಿಂದ ಬೀದರ್‌ನಲ್ಲಿ ಅಲ್ಲಿನ ಜಿಲ್ಲಾಧಿಕಾರಿಯ ಅಧ್ಯಕ್ಷತೆಯಲ್ಲಿ ಜಿಲ್ಲಾ ಕಾರ್ಮಿಕ ಸೇವೆಗಳ ವಿವಿಧೋದ್ದೇಶ ಸಹಕಾರ ಸಂಘ ರಚಿಸಲಾಗಿದೆ. ಅದೇ ಮಾದರಿಯಲ್ಲಿ ಸಹಕಾರ ಸಂಸ್ಥೆ ಸ್ಥಾಪಿಸಲು ಕಾರ್ಮಿಕ ಇಲಾಖೆ ಆಲೋಚನೆ ಮಾಡಿತ್ತು’ ಎಂದು ಹೇಳಿದರು.

> **ಕಾರ್ಮಿಕ ಕಲ್ಯಾಣವನ್ನು ಲಘುವಾಗಿ ಪರಿಗಣಿಸಬಾರದೆಂದು ಸುಪ್ರೀಂ ಕೋರ್ಟ್ ಮತ್ತು ಹೈಕೋರ್ಟ್ ಈಗಾಗಲೇ ನಿರ್ದೇಶನ ನೀಡಿವೆ. ಈ ಬಗ್ಗೆ ವಿಸ್ತೃತವಾಗಿ ಚರ್ಚೆ ಮಾಡಿದ್ದೇವೆ**
> **ಎಚ್‌.ಕೆ. ಪಾಟೀಲ,** ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವ

ಹೊರ ಗುತ್ತಿಗೆ ನೌಕರರ ವಿಚಾರದಲ್ಲಿ ಸುಪ್ರೀಂ ಕೋರ್ಟ್ ಇದೇ ಆಗಸ್ಟ್ 19ರಂದು ನೀಡಿರುವ ಮತ್ತು 2024ರ ಡಿಸೆಂಬರ್ ತಿಂಗಳಿನಲ್ಲಿ ನೀಡಿರುವ ತೀರ್ಪುಗಳ ಆಧಾರದಲ್ಲಿ ಇಡೀ ವ್ಯವಸ್ಥೆಯನ್ನು ಪುನರ್ ಪರಿಶೀಲಿಸಬೇಕೆ, ಕಾನೂನಿಗೆ ಪೂರಕವಾಗಿ ಈ ವ್ಯವಸ್ಥೆ ಕಾರ್ಯನಿರ್ವಹಿಸುತ್ತದೆಯೇ ಎಂಬ ಬಗ್ಗೆ ಎಲ್ಲ ಇಲಾಖೆಗಳು ಮುಂದಿನ ಸಭೆಗೆ ಅಭಿಪ್ರಾಯ ನೀಡಬೇಕು ಎಂದೂ ಸಮಿತಿ ತಿಳಿಸಿದೆ.

ಸಚಿವ ಲಾಡ್ ಅಸಮಾಧಾನ: ಇಂಧನ ಇಲಾಖೆಯ ಅಡಿಯಲ್ಲಿರುವ ಕೆಪಿಟಿಸಿಎಲ್ ಮತ್ತು ಎಸ್ಕಾಂಗಳಲ್ಲಿರುವ 13 ಸಾವಿರಕ್ಕೂ ಹೆಚ್ಚು ಹೊರ ಗುತ್ತಿಗೆ ನೌಕರರ ಕಾಯಮಾತಿಗೆ ಸಂಬಂಧಿಸಿದಂತೆ ಸರ್ಕಾರದ ಮಟ್ಟದಲ್ಲಿ ನಡೆದ ಚರ್ಚೆ ಮತ್ತು ಕರಡು ಅಧಿಸೂಚನೆ ಕುರಿತಂತೆ ಕೆಪಿಟಿಸಿಎಲ್ ನೀಡಿರುವ ಸ್ಪಷ್ಟನೆಯೂ ಸಭೆಯಲ್ಲಿ ಪ್ರಸ್ತಾಪವಾಯಿತು. ಸ್ಪಷ್ಟನೆ ನೀಡಿರುವ ಕೆಪಿಟಿಸಿಎಲ್‌ನ ನಡೆಗೆ ಸಭೆಯಲ್ಲಿದ್ದ ಕಾರ್ಮಿಕ ಸಚಿವ ಸಂತೋಷ್ ಲಾಡ್ ತೀವ್ರ ಅಸಮಾಧಾನ ವ್ಯಕ್ತಪಡಿಸಿದರು ಎಂದೂ ಗೊತ್ತಾಗಿದೆ.

ಆರ್ಥಿಕ ಇಲಾಖೆಯ ಅಧಿಕಾರಿಗಳು ಹೊರಗುತ್ತಿಗೆ ನೌಕರರ ಸೇವಾ ಭದ್ರತೆ ಕುರಿತು ಸಕಾರಾತ್ಮಕವಾಗಿ ಸ್ಪಂದಿಸಿದರು. ಸುಪ್ರೀಂ ಕೋರ್ಟ್ ತೀರ್ಪನ್ನು ಪರಿಶೀಲಿಸಿ, ಮುಂದಿನ ಸಭೆಗೆ ವಿವರ ನೀಡುವುದಾಗಿ ಅಧಿಕಾರಿಗಳು ತಿಳಿಸಿದರು ಎಂದು ಗೊತ್ತಾಗಿದೆ.

ಗ್ರಾಮೀಣಾಭಿವೃದ್ಧಿ ಸಚಿವ ಪ್ರಿಯಾಂಕ್ ಖರ್ಗೆ, ಕಾರ್ಮಿಕ ಮತ್ತು ಆರ್ಥಿಕ ಇಲಾಖೆಯ ಅಧಿಕಾರಿಗಳು ಸಭೆಯಲ್ಲಿ ಇದ್ದರು.

‘ಮುಂದಿನ ಸಭೆಗೆ ಸಮಗ್ರ ಮಾಹಿತಿ ಸಲ್ಲಿಸಿ’

ಹೊರಗುತ್ತಿಗೆಯಲ್ಲಿ ಕೆಲಸ ಮಾಡುತ್ತಿರುವ ವಿವಿಧ ಕಾರ್ಮಿಕರ ವರ್ಗವಾರು ಸಂಖ್ಯೆ ಮತ್ತು ವಿವರ, ಈ ನೌಕರರನ್ನು ಒದಗಿಸಿರುವ ಏಜನ್ಸಿಗಳಿಗೆ ನೀಡುತ್ತಿರುವ ಸೇವಾ ಶುಲ್ಕ ಮತ್ತು ಜಿಎಸ್‌ಟಿ, ಪ್ರಾಣಾಪಾಯದ ಕೆಲಸ ಮಾಡುವ ನೌಕರರ ವಿವರ (ಪೌರ ಕಾರ್ಮಿಕರು, ಚಾಲಕರು ಮತ್ತು ಇಂಧನ ಇಲಾಖೆಯ ವಿದ್ಯುತ್ ಸಂಬಂಧಿ ಕಾರ್ಯನಿರ್ವಹಿಸುವ ನೌಕರರು, ಆರೋಗ್ಯ ಇಲಾಖೆಯಲ್ಲಿ ಸಾಂಕ್ರಾಮಿಕ ರೋಗಗಳ ಚಿಕಿತ್ಸೆಯಲ್ಲಿ ಕಾರ್ಯನಿರ್ವಹಿಸುವ ಸಿಬ್ಬಂದಿ, ಗಣಿಗಳಲ್ಲಿ ಕೆಲಸ ನಿರ್ವಹಿಸುವ ಕಾರ್ಮಿಕರು ಮತ್ತು ಸಿಬ್ಬಂದಿ), ಈ ಕಾರ್ಮಿಕರು ಎಷ್ಟು ವರ್ಷಗಳಿಂದ ಸೇವೆ ಸಲ್ಲಿಸುತ್ತಿದ್ದಾರೆ ಮುಂತಾದ ಮಾಹಿತಿಯನ್ನು ಮುಂದಿನ ಸಭೆಗೆ ಸಲ್ಲಿಸುವಂತೆ ಕಾರ್ಮಿಕ ಇಲಾಖೆಯ ಅಧಿಕಾರಿಗಳಿಗೆ ಸಮಿತಿಯು ನಿರ್ದೇಶನ ನೀಡಿದೆ.

‘ವೀರಶೈವ- ಲಿಂಗಾಯತಕ್ಕೆ ಪ್ರತ್ಯೇಕ ಧರ್ಮದ ಮಾನ್ಯತೆ ಬೇಕು’

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಪ್ರತ್ಯೇಕ ಧರ್ಮದ ಮಾನ್ಯತೆಯನ್ನು ವೀರಶೈವ-ಲಿಂಗಾಯತ ಧರ್ಮಕ್ಕೆ ನೀಡಬೇಕು ಎಂದು ಅಖಿಲ ಭಾರತ ವೀರಶೈವ-ಲಿಂಗಾಯತ ಮಹಾಸಭಾ ಸ್ವಾತಂತ್ರ್ಯ ಪೂರ್ವದಿಂದ ಪ್ರತಿಪಾದಿಸುತ್ತಾ ಬಂದಿದೆ. ಈಗಲೂ ಅದನ್ನೇ ನಾವು ಪ್ರತಿಪಾದಿಸುತ್ತೇವೆ’ ಎಂದು ಅರಣ್ಯ ಸಚಿವ ಈಶ್ವರ ಬಿ. ಖಂಡ್ರೆ ಹೇಳಿದರು.

ಸುದ್ದಿಗಾರರೊಂದಿಗೆ ಸೋಮವಾರ ಮಾತನಾಡಿದ ಅವರು, ‘ವೀರಶೈವ-ಲಿಂಗಾಯತರನ್ನು ಬೇರೆ ಮಾಡಲು ಯಾವುದೇ ಶಕ್ತಿಗೂ ಸಾಧ್ಯವಿಲ್ಲ. ಇಬ್ಬರೂ ಒಂದೇ ಎಂದು ಲಿಂಗೈಕ್ಯ ಶಿವಕುಮಾರ ಸ್ವಾಮೀಜಿ ಅವರೇ ಪ್ರತಿಪಾದಿಸಿದ್ದಾರೆ’ ಎಂದು ತಿಳಿಸಿದರು.

'ನಾವೆಲ್ಲರೂ ಭೌಗೋಳಿಕವಾಗಿ ಹಿಂದೂಗಳೇ ಆದರೂ ನಮ್ಮ ಆಚಾರ-ವಿಚಾರ ಭಿನ್ನವಾದುದು. ಸಿಖ್, ಪಾರ್ಸಿ, ಜೈನರಿಗೆ ನೀಡಿರುವಂತೆ ಮಾನ್ಯತೆ ನೀಡಬೇಕು. ವೀರಶೈವ-ಲಿಂಗಾಯತ ಸಮಾನಾರ್ಥಕ ಪದಗಳು. ಇಷ್ಟಲಿಂಗ ಪೂಜೆ ಮಾಡುವವರು ಮತ್ತು ಅಷ್ಟಾವರಣ, ಪಂಚಾಚಾರ ಆಚರಣೆ ಮಾಡುವ ಗುರುಗಳು ಮತ್ತು ವಿರಕ್ತರೂ ಇದ್ದಾರೆ. ಹೀಗಾಗಿ ವೀರಶೈವರು ಮತ್ತು ಲಿಂಗಾಯತರು ಒಟ್ಟಿಗೆ ಇರಬೇಕು ಎಂಬುದು ಸಭಾದ ಸ್ಪಷ್ಟ ನಿಲುವಾಗಿದೆ’ ಎಂದರು.

‘ವೀರಶೈವ- ಲಿಂಗಾಯತರು ಸುಧಾರಿಸಿದರೆ ರಾಜ್ಯ ಸುಧಾರಿಸುತ್ತದೆ. ಕೆಟ್ಟರೆ ಇಡೀ ರಾಜ್ಯವೇ ಹಾಳಾಗುತ್ತದೆ ಎಂಬ ಜನಜನಿತ ಹೇಳಿಕೆ ಇದೆ. ನಮ್ಮ ಸಮುದಾಯದ ಒಗ್ಗಟ್ಟಿನಲ್ಲಿ ಬಲವಿದೆ. ವಿಘಟನೆಯಲ್ಲಿ ಸೋಲಿದೆ’ ಎಂದರು.

‘ಪ್ರತ್ಯೇಕ ಧರ್ಮದ ವಿಚಾರಕ್ಕೂ ಸರ್ಕಾರಕ್ಕೂ ಯಾವುದೇ ಸಂಬಂಧವಿಲ್ಲ. ಮುಖ್ಯಮಂತ್ರಿ ಸಿದ್ದರಾಮಯ್ಯ ಜನ ಸಮುದಾಯದ ನಾಯಕರಾಗಿದ್ದಾರೆ. ನಾವೆಲ್ಲ ಒಗ್ಗಟ್ಟಾಗಿ ಹೋಗಿ ಸ್ವತಂತ್ರ ಧರ್ಮದ ಮಾನ್ಯತೆ ಬೇಕು ಎಂದು ಕೇಳಿದರಷ್ಟೇ ಅವರು ನಿರ್ಧಾರ ತೆಗೆದುಕೊಳ್ಳುತ್ತಾರೆ. ಕೆಲವರು ರಾಜಕೀಯ ದುರುದ್ದೇಶದಿಂದ ಅಪಪ್ರಚಾರ ಮಾಡುತ್ತಿದ್ದಾರೆ’ ಎಂದರು.

‘ಪ್ರತ್ಯೇಕ ಧರ್ಮ: ಸಿ.ಎಂ ನಿಲುವು ಬಹಿರಂಗಪಡಿಸಲಿ’

ಬೆಂಗಳೂರು: ‘ವೀರಶೈವ–ಲಿಂಗಾಯತ ಅಥವಾ ಲಿಂಗಾಯತ ಧರ್ಮದ ಕೂಗಿಗೆ ಮತ್ತೆ ಚಾಲನೆ ನೀಡಿದ್ದಾರೆ. ಅದರ ಹಿಂದೆ ಇದ್ದು ಮಾತನಾಡುವವರು ಯಾರೆಂಬ ಅರಿವು ಸಮಾಜಕ್ಕೆ ಇದೆ’ ಎಂದು ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷ ಬಿ.ವೈ.ವಿಜಯೇಂದ್ರ ಹೇಳಿದರು.

ಸುದ್ದಿಗಾರರ ಜತೆ ಮಾತನಾಡಿದ ಅವರು, ‘ಎಲ್ಲ ಸಮಾಜ, ಧರ್ಮಗಳನ್ನು ರಕ್ಷಿಸುವ ಆದ್ಯ ಕರ್ತವ್ಯ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರಿಗೆ ಇರಬೇಕು. ಆದರೆ, ಅವರ ಅಂತರಂಗದಲ್ಲಿ ಏನಿದೆ ಎಂಬುದನ್ನು ಬಹಿರಂಗಪಡಿಸಬೇಕು’ ಎಂದು ಒತ್ತಾಯಿಸಿದರು.

‘ಮೆಟ್ರೊಗೆ ಬಸವಣ್ಣ ಅವರ ಹೆಸರು ಇಡುವುದನ್ನು ಸ್ವಾಗತಿಸುತ್ತೇನೆ. ಆದರೆ, ಅವರು ಬಹಿರಂಗವಾಗಿ ಹೇಳುವುದು ಬೇರೆ; ಮುಖ್ಯಮಂತ್ರಿಯವರ ಅಂತರಂಗದ ಅಪೇಕ್ಷೆ ಏನು’ ಎಂಬುದನ್ನು ಬಹಿರಂಗಪಡಿಸಬೇಕು ಎಂದು ಅವರು ಹೇಳಿದರು.

ವಿಜಯೇಂದ್ರ

‘ನಾವು ಹಿಂದೂ ಧರ್ಮವನ್ನು ರಕ್ಷಿಸಬೇಕಿದೆ. ಧರ್ಮ ಒಡೆಯುವ ದುಸ್ಸಾಹಸವನ್ನೂ ಗಮನಿಸಬೇಕಿದೆ. ಪರಿಶಿಷ್ಟ ಜಾತಿ, ಪಂಗಡ, ಹಿಂದುಳಿದ ಸಮಾಜ, ಒಕ್ಕಲಿಗ, ವೀರಶೈವ–ಲಿಂಗಾಯತ ಸಮಾಜ ಹೀಗೆ ಎಲ್ಲ ಸಮಾಜಗಳಲ್ಲಿಯೂ ಆರ್ಥಿಕ–ಸಾಮಾಜಿಕ–ಶೈಕ್ಷಣಿಕವಾಗಿ ಹಿಂದುಳಿದವರು ಇದ್ದಾರೆ. ಎಲ್ಲ ಸಮಾಜಕ್ಕೂ ನ್ಯಾಯ ಕೊಡುವ ಕೆಲಸ ಆಗಬೇಕಾಗಿದೆ. ಸಿದ್ದರಾಮಯ್ಯನವರಿಗೆ ಆತುರ ಏಕೆ’ ಎಂದು ಪ್ರಶ್ನಿಸಿದರು.

ಬೌದ್ಧಧರ್ಮ ಸೇರಿದ್ದರೆ ಎಸ್‌ಸಿ ಪ್ರಮಾಣಪತ್ರ

ಒಂದನೇ ಪುಟದಿಂದ...

ಆದರೆ, ಹೀಗೆ ಮತಾಂತರಗೊಂಡವರಿಗೆ ಜಾತಿ ಪ್ರಮಾಣಪತ್ರ ನೀಡುವ ವಿಷಯಕ್ಕೆ ಸಂಬಂಧಿಸಿದಂತೆ ಸ್ಪಷ್ಟೀಕರಣ ನೀಡಿ ಆದೇಶ ಹೊರಡಿಸುವಂತೆ ಸಮಾಜ ಕಲ್ಯಾಣ ಇಲಾಖೆಗೆ ಹಲವು ಸಂಘಸಂಸ್ಥೆಗಳು ಮನವಿ ಸಲ್ಲಿಸಿದ್ದವು.

ಈ ಕಾರಣಕ್ಕೆ ಮತ್ತೆ ಆದೇಶ ಹೊರಡಿಸಿರುವ ಇಲಾಖೆ, ‘ಪರಿಶಿಷ್ಟ ಜಾತಿಯಿಂದ ಬೌದ್ಧ ಧರ್ಮಕ್ಕೆ ಮತಾಂತರಗೊಂಡವರು ಜಾತಿ ಪ್ರಮಾಣಪತ್ರ ಪಡೆಯಲು ಸಲ್ಲಿಸುವ ಅರ್ಜಿಗಳಲ್ಲಿ ಧರ್ಮದ ಕಾಲಂನಲ್ಲಿ ‘ಬೌದ್ಧ’ (ಬುದ್ಧಿಸಂ) ಎಂದು ನಮೂದಿಸಲು ಅವಕಾಶ ಕಲ್ಪಿಸಬೇಕು. ಅರ್ಜಿದಾರರು ಅಥವಾ ಪೋಷಕರು ಇಚ್ಛಿಸಿದರೆ ಶಾಲಾ ಶಿಕ್ಷಣ ಇಲಾಖೆಯ ಅಡಿಯಲ್ಲಿರುವ ಸರ್ಕಾರಿ, ಖಾಸಗಿ ಶಾಲೆಗಳು ಮತ್ತು ಇತರ ಎಲ್ಲ ಶೈಕ್ಷಣಿಕ ಸಂಸ್ಥೆಗಳಲ್ಲಿನ ದಾಖಲೆಗಳಲ್ಲಿ ಧರ್ಮದ ಕಾಲಂನಲ್ಲಿಯೂ ಬೌದ್ಧ ಎಂದು ನಮೂದಿಸಲು ಅವಕಾಶ ನೀಡಬೇಕು. ರಾಜ್ಯ ಸರ್ಕಾರದ ಎಲ್ಲ ಇಲಾಖೆಗಳು ನಿಗಮ ಮಂಡಳಿಗಳು, ಇತರ ಸಂಸ್ಥೆಗಳು ಈ ಆದೇಶದಂತೆ ಕ್ರಮ ವಹಿಸಬೇಕು’ ಎಂದು ತಿಳಿಸಿದೆ.

ಸಮೀಕ್ಷೆ ಅವಧಿ ವಿಸ್ತರಣೆ

ಒಂದನೇ ಪುಟದಿಂದ..

ಶಾಲಾ ಅವಧಿ ಬದಲು: ಸಮೀಕ್ಷೆ ಪೂರ್ಣಗೊಳಿಸಲು ಹೆಚ್ಚಿನ ಅವಧಿ ಅಗತ್ಯ ಇರುವ ಬಗ್ಗೆ ಶಾಲಾ ಶಿಕ್ಷಣ ಸಚಿವ ಮಧು ಬಂಗಾರಪ್ಪ ಅವರ ಅಧ್ಯಕ್ಷತೆಯಲ್ಲಿ ಸೆ. 26ರಂದೇ ಸಭೆ ನಡೆಸಿ, ಚರ್ಚಿಸಲಾಗಿತ್ತು. ದಸರಾ ರಜೆ ಅವಧಿಯ ನಂತರವೂ ಸಮೀಕ್ಷೆ ಮುಂದುವರಿಯುವ ಸಾಧ್ಯತೆ ಇದ್ದು, ರಜಾ ಅವಧಿಯ ನಂತರ ಶಾಲೆ ನಡೆಯುವ ಸಮಯವನ್ನು ಬದಲಿಸಲು ಸಭೆಯಲ್ಲಿ ತೀರ್ಮಾನಿಸಲಾಗಿತ್ತು.

‘ವಿದ್ಯಾರ್ಥಿಗಳ ಹಿತದೃಷ್ಟಿಯಿಂದ ಮಧ್ಯವಾರ್ಷಿಕ ರಜಾ ದಿನಗಳ ನಂತರ ಶಾಲಾ ತರಗತಿಗಳು ಸಮೀಕ್ಷೆಯ ಕಾರಣಕ್ಕೆ ಕುಂಠಿತ ಆಗಬಾರದು ಎನ್ನುವ ದೃಷ್ಟಿಯಿಂದ ಈ ಕ್ರಮ ತೆಗೆದುಕೊಳ್ಳಲಾಗಿದೆ. ಎಲ್ಲ ಸರ್ಕಾರಿ, ಅನುದಾನಿತ ಪ್ರಾಥ ಮಿಕ, ಪ್ರೌಢಶಾಲೆಗಳು ಪರಿಷ್ಕೃತ ಸಮಯದಂತೆ ಕಾರ್ಯನಿರ್ವಹಿಸಬೇಕು’ ಎಂದು ಸುರಳ್ಕರ್ ವಿಕಾಸ್ ಕಿಶೋರ್ ತಿಳಿಸಿದ್ದಾರೆ.

‘ಜನರ ನಿಲುವೇ ನನ್ನ ನಿಲುವು’: ಸಮೀಕ್ಷೆಯ ಕುರಿತು ಕೊಪ್ಪಳದಲ್ಲಿ ಸುದ್ದಿಗಾರರ ಜೊತೆ ಸೋಮವಾರ ಮಾತನಾಡಿದ ಮುಖ್ಯಮಂತ್ರಿ ಸಿದ್ದರಾಮಯ್ಯ, ‘ಜನಸ್ವಯಂಪ್ರೇರಣೆಯಿಂದ ತಮ್ಮ ಧರ್ಮವನ್ನು ತಿಳಿಸಿದಂತೆ ಸಮೀಕ್ಷೆ ಮಾಡುವವರು ಬರೆದುಕೊಳ್ಳುತ್ತಾರೆ. ಜನರ ನಿಲುವೇ ನನ್ನ ನಿಲುವು ಕೂಡ ಆಗಿದೆ’ ಎಂದರು.

ಮಂಗಳೂರಿನಲ್ಲಿ ಮಾತನಾಡಿದ ಶಿಕ್ಷಣ ಸಚಿವ ಮಧು ಬಂಗಾರಪ್ಪ, ‘ಶೇ 95ರಷ್ಟು ಶಿಕ್ಷಕರು ತಕರಾರು ತೆಗೆಯದೇ ಸಮೀಕ್ಷೆಗೆ ಸಹಕರಿಸಿ ದ್ದಾರೆ. ಆ್ಯಪ್‌ನಲ್ಲಿ 4–5 ಸಲ ಬದಲಾವಣೆ ಮಾಡಿದ್ದರಿಂದ ಸಮಸ್ಯೆ ಎದುರಾಗಿತ್ತು. ಆ ಸಮಸ್ಯೆಗಳನ್ನುನಿವಾರಿಸಲಾಗಿದೆ. ಈಗ ಪ್ರತಿ ಕುಟುಂಬದ ಸಮೀಕ್ಷೆಗೆ 10 ರಿಂದ 11 ನಿಮಿಷ ಆಗಲಿದೆ’ ಎಂದು ತಿಳಿಸಿದರು. ‘ಸಮೀಕ್ಷೆಗೆ ಸಹಕರಿಸಬಾರದು ಎಂದು ಕೇಂದ್ರ ಸಚಿವ ಪ್ರಲ್ಹಾದ ಜೋಶಿ, ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷ ಬಿ.ವೈ.ವಿಜಯೇಂದ್ರ ಮೊದಲಾದ ಮುಖಂಡರು ಹೇಳಿಕೆ ನೀಡಿದ್ದಾರೆ. ಕೇಂದ್ರ ಮುಂಬರುವ ಮಾರ್ಚ್‌ನಲ್ಲಿ ಜಾತಿಗಣತಿಗೆ ಸಿದ್ಧತೆ ನಡೆಸಿದೆ. ಆಗಲೂ ಇದೇ ರೀತಿ ಅಸಹಕಾರ ನೀಡುತ್ತಾರೆಯೇ. ಆಗ ರಾಜ್ಯದ ಸಹಕಾರವೂ ಬೇಕಾಗುವುದಿಲ್ಲವೇ’ ಎಂದು ಪ್ರಶ್ನಿಸಿದರು.

‘ಕೆಲ ಅಪಾರ್ಟ್‌ಮೆಂಟ್‌ಗಳಲ್ಲಿ ಸಮೀಕ್ಷಕರನ್ನು ಬಿಟ್ಟುಕೊಳ್ಳುತ್ತಿಲ್ಲ ಎಂಬ ದೂರುಗಳಿವೆ. ಈ ರೀತಿ ಮಾಡಿದರೆ ಅವರ ಮೂಲಸೌಕರ್ಯ ಕಡಿತಗೊಳಿಸುವುದಕ್ಕೂ ಅವಕಾಶ ಇದೆ’ ಎಂದರು.

ಗೊಂದಲ, ಸಮಸ್ಯೆ ಬಗೆಹರಿಸಿ: ಮನವಿ

ಒಂದನೇ ಪುಟದಿಂದ..

ಸಚಿವಾಲಯದ ನೌಕರರನ್ನು ಅವರು ಆಯ್ಕೆ ಮಾಡಿಕೊಂಡ 10 ಆದ್ಯತೆಯ ವಾರ್ಡ್‌ಗಳನ್ನು ಹೊರತುಪಡಿಸಿ, 20ರಿಂದ 45 ಕಿ.ಮೀ. ದೂರದ ವಾರ್ಡ್‌ ಗಳಿಗೆ ಸಮೀಕ್ಷೆಗಳಿಗೆ ನಿಯೋಜಿಸ ಲಾಗಿದೆ. ವಾಹನ ದಟ್ಟಣೆಯಲ್ಲಿ ಪ್ರತಿದಿನ 2-3 ಗಂಟೆ ಪ್ರಯಾಣಿಸಿ ಈ ವಾರ್ಡ್‌ಗಳಿಗೆ ತೆರಳಿ ಸಮೀಕ್ಷೆ ನಡೆಸುವುದು ಕಷ್ಟಸಾಧ್ಯವಾಗಿದ್ದು, ಇದರಿಂದ ಸಮೀಕ್ಷೆಯ ಗುರಿ ತಲುಪಲು ಸಾಧ್ಯವಾಗುತ್ತಿಲ್ಲ ಎಂದು ಸಂಘ ತಿಳಿಸಿದೆ.

ರಾಜ್ಯದ ಇತರ ಜಿಲ್ಲೆಗಳಲ್ಲಿ ಒಬ್ಬ ಸಮೀಕ್ಷಕರಿಗೆ 150 ಮನೆಗಳ ಗುರಿ ನೀಡಲಾಗಿದೆ. ಆದರೆ, ಜಿಬಿಎ ವ್ಯಾಪ್ತಿಯಲ್ಲಿ 250 ಮನೆಗಳ ಗುರಿ ನಿಗದಿಪಡಿಸಲಾಗಿದೆ. ಇದು ಸರಿಯಾದ ಕ್ರಮವಲ್ಲ. ಅಲ್ಲದೆ, ಅಂಗವಿಕಲ ನೌಕರರು, ತೀವ್ರ ಅನಾರೋಗ್ಯದಿಂದ ಬಳಲುತ್ತಿರುವವರು, ಒಂಟಿ ಪೋಷಕರು ಮತ್ತು 50 ವರ್ಷ ದಾಟಿದ ನೌಕರರಿಗೆ ಸಮೀಕ್ಷಾ ಕಾರ್ಯದಿಂದ ವಿನಾಯಿತಿ ನೀಡಬೇಕು ಎಂದೂ ಸಂಘ ಆಗ್ರಹಿಸಿದೆ.

ಬೆಂಗಳೂರು–ಚೆನ್ನೈ ಕಾರಿಡಾರ್‌ನ 30 ಎಕರೆ ಪ್ರದೇಶದಲ್ಲಿ ಪ್ರಯಾಣಿಕರಿಗೆ ಸಕಲ ಸೌಲಭ್ಯ

ಬಂಗಾರಪೇಟೆ ಬಳಿ ವೈ-ಸ್ಪೇಸ್ ಮಿನಿ ನಗರ

ಪ್ರಜಾವಾಣಿ ವಾರ್ತೆ

ಕೋಲಾರ: ಬೆಂಗಳೂರು–ಚೆನ್ನೈ ಎಕ್ಸ್‌ಪ್ರೆಸ್ ವೇ ಕಾರಿಡಾರ್‌ನಲ್ಲಿ ಪ್ರಯಾಣಿಕರು ವಿಶ್ರಾಂತಿ ಪಡೆದು ಮುಂದೆ ಸಾಗಲು, ಹೆದ್ದಾರಿ ಮಧ್ಯೆ ಊಟ ತಿಂಡಿ ಸವಿಯಲು, ಆಟ–ಮನರಂಜನೆ ಪಡೆಯಲು ವಿವಿಧ ಸೌಲಭ್ಯಗಳುಳ್ಳ ‘ಮಿನಿ ನಗರ’ ಕೆಲವೇ ತಿಂಗಳಲ್ಲಿ ತಲೆ ಎತ್ತಲಿದೆ.

ಬಂಗಾರಪೇಟೆ ತಾಲ್ಲೂಕಿನ ಐತಾಂಡಹಳ್ಳಿ ಬಳಿ (ಬಂಗಾರಪೇಟೆ–ಕೆಜಿಎಫ್ ನಡುವೆ) ಹಾದು ಹೋಗಿರುವ ಈ ಕಾರಿಡಾರ್‌ನಲ್ಲಿ 30 ಎಕರೆ ಪ್ರದೇಶದಲ್ಲಿ ವೈ–ಸ್ಪೇಸ್ ಸಂಸ್ಥೆಯು ‘ವೇಸೈಡ್ ಫೆಸಿಲಿಟಿ’ ಸ್ಥಾಪಿಸಲಿದ್ದು ಕಾಮಗಾರಿಗೆ ಗಣ್ಯರು ಸೋಮವಾರ ಭೂಮಿಪೂಜೆ ನೆರವೇರಿಸಿದರು.

ಈ ಮಾರ್ಗದಲ್ಲಿ ಆರಾಮದಾಯಕ ಪ್ರಯಾಣ ಕಲ್ಪಿಸಲು ಫುಡ್ ಕೋರ್ಟ್‌ಗಳು, ಫ್ಯಾಕ್ಟರಿ ಔಟ್‌ಲೆಟ್ ಮಾಲ್, ಇಂಧನ ಕೇಂದ್ರ (ಪೆಟ್ರೋಲ್ ಬಂಕ್), ಇ–ಚಾರ್ಜಿಂಗ್ ಕೇಂದ್ರ, ಡ್ರೈವ್–ಥ್ರೂ ರೆಸ್ಟೋರೆಂಟ್, ಮಕ್ಕಳ ಆಟದ ವಲಯ, ಹೋಟೆಲ್, ರೆಸಾರ್ಟ್, ಪಾರ್ಕಿಂಗ್ ಪ್ರದೇಶವನ್ನು ಈ ಕೇಂದ್ರ ಒಳಗೊಂಡಿರಲಿದೆ.

ಮುಖ್ಯಾಂಶಗಳು
- ಐತಾಂಡಹಳ್ಳಿ ಗ್ರಾಮದ ಬಳಿ ನಿರ್ಮಿತವಾಗಲಿದೆ ಕೇಂದ್ರ
- ಮುಂದಿನ ದಸರಾ ಹಬ್ಬದೊಳಗೆ ಕೇಂದ್ರ ಉದ್ಘಾಟನೆ
- ಟೆಂಡರ್ ಪಡೆದು ಕೊಂಡಿರುವ ವೈ–ಸ್ಪೇಸ್ ಸಂಸ್ಥೆಯಿಂದ ನಿರ್ಮಾಣ

ವಿಶ್ವದರ್ಜೆಯ ಸೌಲಭ್ಯಗಳನ್ನು ಒಳಗೊಂಡಂತೆ ಈ ಮಿನಿ ನಗರದ ಸಮಗ್ರ ಅಭಿವೃದ್ಧಿಯನ್ನು ವೈ–ಸ್ಪೇಸ್ ಸಂಸ್ಥೆ ಕೈಗೊಳ್ಳಲಿದೆ.

ಈ ಎಕ್ಸ್‌ಪ್ರೆಸ್‌ವೇ ಕಾರಿಡಾರ್ ಉದ್ದಕ್ಕೂ ಮೂರು ಸ್ಥಳಗಳಲ್ಲಿ ವೇಸೈಡ್ ಸೌಲಭ್ಯಗಳಿಗಾಗಿ ವಿಎಸ್‌ಎಸ್ ಹಾಗೂ ವೈಎಸ್‌ಇಐಎಲ್ ಸಂಸ್ಥೆಗಳು ಭಾರತೀಯ ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರದಿಂದ (ಎನ್‌ಎಚ್‌ಎಐ) ಜಂಟಿ ಟೆಂಡರ್ ಪಡೆದುಕೊಂಡಿವೆ.

ಬೆಂಗಳೂರುಚೆನ್ನೈ ಎಕ್ಸ್‌ಪ್ರೆಸ್ ವೇನಲ್ಲಿ ನಿರ್ಮಾಣವಾಗಲಿರುವ ವಿವಿಧ ಸೌಲಭ್ಯ ಒಳಗೊಂಡಿರುವ ಕೇಂದ್ರದ ನೀಲನಕ್ಷೆ

ತಲಾ 30 ಎಕರೆ ಪ್ರದೇಶದಲ್ಲಿ ಬಂಗಾರಪೇಟೆ, ಚಿತ್ತೂರು ಹಾಗೂ ಕಾಂಚೀಪುರಂನಲ್ಲಿ ವಿವಿಧ ಸೌಲಭ್ಯವಿರುವ ಇಂಥ ಕೇಂದ್ರ ನಿರ್ಮಿಸಲಾಗುತ್ತಿದೆ. ದೇಶದಲ್ಲೇ ಅತಿ ಹೆಚ್ಚು ಎತ್ತರದ (144.9 ಅಡಿ) ಆಂಜನೇಯ ವಿಗ್ರಹ ಕೂಡ ಇಲ್ಲಿ ತಲೆ ಎತ್ತಲಿದೆ. ಈ ಕೇಂದ್ರದ ಆವರಣದಲ್ಲಿ ಸೋಮವಾರ ಭೂಮಿಪೂಜೆ ನಡೆಯಿತು. ಬಳಿಕ ನಡೆದ ವೇದಿಕೆ ಕಾರ್ಯಕ್ರಮಕ್ಕೆ ಹೊಸಕೋಟೆ ಶಾಸಕ ಶರತ್ ಬಚ್ಚೇಗೌಡ ಚಾಲನೆ ನೀಡಿದರು.

ವೇ–ಸ್ಪೇಸ್ ಕಲ್ಪಿಸುತ್ತಿರುವ ಈ ಸೌಲಭ್ಯದಿಂದ ಈ ಭಾಗದ 500ಕ್ಕೂ ಅಧಿಕ ಮಂದಿಗೆ ಉದ್ಯೋಗ ಸಿಗಲಿದೆ. ಮುಂದಿನ ದಸರೆಗೆ ಉದ್ಘಾಟನೆ ಆಗಲಿದೆ. ರಾಜ್ಯ ಸರ್ಕಾರದಿಂದ ಎಲ್ಲಾ ರೀತಿಯ ಸಹಕಾರ ನೀಡಲಾಗುವುದು ಎಂದರು.

ವೈ–ಸ್ಪೇಸ್ ಸಂಸ್ಥೆಯ ಅಧ್ಯಕ್ಷ ಮತ್ತು ವ್ಯವಸ್ಥಾಪಕ ಪಾಲುದಾರ ವೈ.ವಿ.ರತ್ನಕುಮಾರ್, ‘ಈ ಭಾಗದಲ್ಲಿ ಹೋಟೆಲ್, ರೆಸಾರ್ಟ್, ಆಟದ ವಲಯ ಸೇರಿ ಎಲ್ಲ ವ್ಯವಸ್ಥೆ ಇರಲಿದೆ. ಕನ್ಯಾಕುಮಾರಿಯಿಂದ ಕಾಶ್ಮೀರದವರೆಗಿನ ಎಲ್ಲಾ ತಿಂಡಿ ತಿನಿಸು ಸಿಗಲಿವೆ’ ಎಂದರು.

ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರದ ಪ್ರಧಾನ ವ್ಯವಸ್ಥಾಪಕ (ತಂತ್ರಜ್ಞಾನ) ವಿ.ಪಿ.ಬ್ರಹ್ಮಾಂಕರ್, ಎನ್‌ಎಚ್‌ಎಲ್‌ಎಂಎಲ್ ಪ್ರಾದೇಶಿಕ ಅಧಿಕಾರಿ ಎಸ್.ಪಿ.ಸೋಮಶೇಖರ್, ಬೆಂಗಳೂರು–ಚೆನ್ನೈ ಎಕ್ಸ್‌ಪ್ರೆಸ್‌ವೇ ಯೋಜನಾ ನಿರ್ದೇಶಕಿ ಡಿ.ಅರ್ಚನಾ, ಸಂಸ್ಥೆಯ ವೀರ ಸುರಶೇಖರ್ ರೆಡ್ಡಿ, ವೇಮುಲಪಲ್ಲಿ ಶ್ರೀನಿವಾಸಲು, ದಿಲೀಪ್ ಕಾಳಹಸ್ತಿ, ಪ್ರಶಾಂತ್ ಪೋತುರಿ, ವಿಜಯ ಕುಮಾರ್, ಮಲ್ಲಿಕಾರ್ಜುನ, ಶಾಂಬಾಶಿವ ರಾವ್, ಗುರುದತ್, ರಾಮನಾಥ್, ಸೋಮಶೇಖರ್ ರೆಡ್ಡಿ, ದಯಾಕರ್, ರವಿ, ಶ್ರೀನಿವಾಸ್ ಇದ್ದರು.

₹40 ಕೋಟಿ ಆಸ್ತಿ ಇ.ಡಿ ವಶ

ಒಂದನೇ ಪುಟದಿಂದ...

ಏನಿದು ಪ್ರಕರಣ?: ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ಪತ್ನಿ ಪಾರ್ವತಿ ಅವರ ಮಾಲೀಕತ್ವದಲ್ಲಿದ್ದ ಭೂಸ್ವಾಧೀನಕ್ಕೆ ಪರ್ಯಾಯವಾಗಿ ಮುಡಾದಿಂದ ನಿವೇಶನ ಹಂಚಿಕೆ ಮಾಡಲಾಗಿತ್ತು. ಇದರಲ್ಲಿ ಅಕ್ರಮ ನಡೆದಿದೆ ಎಂಬ ಆರೋಪವಿದೆ. ಈ ಪ್ರಕರಣದಲ್ಲಿ ಪಾರ್ವತಿ ಅವರ ವಿರುದ್ಧದ ಇ.ಡಿ. ವಿಚಾರಣೆ ರದ್ದುಗೊಳಿಸಿದ ಹೈಕೋರ್ಟ್ ಆದೇಶವನ್ನು ಸುಪ್ರೀಂ ಕೋರ್ಟ್ ಎತ್ತಿ ಹಿಡಿದಿದೆ. ಈ ಪ್ರಕರಣ ಸಂಬಂಧ ರಾಜ್ಯ ಸರ್ಕಾರ ರಚಿಸಿದ್ದ ನ್ಯಾ.ಪಿ.ಎನ್.ದೇಸಾಯಿ ಆಯೋಗವು ಸಿದ್ಧರಾಮಯ್ಯ ಮತ್ತು ಅವರ ಕುಟುಂಬವನ್ನು ದೋಷಮುಕ್ತಗೊಳಿಸಿದೆ.

ಲೋಕಾಯುಕ್ತ ಪೊಲೀಸರು ಸಹ, ಸಿದ್ದರಾಮಯ್ಯ, ಅವರ ಪತ್ನಿ ಪಾರ್ವತಿ ಸೇರಿ ನಾಲ್ವರ ವಿರುದ್ಧ ಸಾಕ್ಷ್ಯಾಧಾರಗಳ ಕೊರತೆಯಿಂದ ಆರೋಪ ಸಾಬೀತುಪಡಿಸಲು ಸಾಧ್ಯವಾಗಿಲ್ಲ ಎಂದು ಕ್ಲೀನ್ ಚಿಟ್ ನೀಡಿದ್ದರು.

‘ಸಮೀಕ್ಷೆ ವಿರೋಧಿಸಿದರೆ ಧರಣಿ’

ಬೆಂಗಳೂರು: ‘ಸಮೀಕ್ಷಾ ಕಾರ್ಯಕ್ಕೆ ವಿರೋಧ ಪಕ್ಷದ ಕೆಲವು ಮುಖಂಡರು ಅದರಲ್ಲೂ ಪ್ರಬಲ ಜಾತಿಯ ಜನರು ವಿರೋಧ ಮಾಡುತ್ತಿರುವುದಲ್ಲದೇ, ಜಾತಿ ಗಣತಿ ಎಂದು ಜನರಲ್ಲಿ ಗೊಂದಲವನ್ನು ಸೃಷ್ಟಿಸುತ್ತಿರುವುದು ಖಂಡನೀಯ’ ಎಂದು ಕರ್ನಾಟಕ ರಾಜ್ಯ ಹಿಂದುಳಿದ ಜಾತಿಗಳ ಒಕ್ಕೂಟ ಹೇಳಿದೆ.

ಪತ್ರಿಕಾಗೋಷ್ಠಿಯಲ್ಲಿ ಸೋಮವಾರ ಒತ್ತಾಯಿಸಿದ ಒಕ್ಕೂಟದ ಅಧ್ಯಕ್ಷ ಕೆ.ಎಂ. ರಾಮಚಂದ್ರಪ್ಪ ಅವರು, ‘ಪ್ರತಿಪಕ್ಷಗಳ ಮುಖಂಡರ ವಿರೋಧವು ಮುಂದುವರಿದಲ್ಲಿ ವಿರೋಧ ಮಾಡುವವರ ಮನೆಯ ಮುಂದೆ ಹಿಂದುಳಿದ ಜಾತಿಗಳ ಒಕ್ಕೂಟವು ಧರಣಿಯನ್ನು ಮಾಡಬೇಕಾಗುತ್ತದೆ. ಅಂತಹವರು ಪ್ರತಿನಿಧಿಸುವ ಪಕ್ಷಗಳನ್ನು ಮುಂದಿನ ದಿನಗಳಲ್ಲಿ ಬಹಿಷ್ಕರಿಸಬೇಕಾಗುತ್ತದೆ’ ಎಂದು ಎಚ್ಚರಿಸಿದರು.

‘ಹಿಂದುಳಿದ ವರ್ಗಗಳ ಆಯೋಗದ ಕಾರ್ಯಗಳಿಗೆ ಸರ್ಕಾರ, ಅನ್ಯ ಸಂಸ್ಥೆಗಳ ಹಸ್ತಕ್ಷೇಪ, ನಿರ್ದೇಶನ ನೀಡಲು ಅವಕಾಶವಿಲ್ಲ’ ಎಂದರು.

‘ಬೆಂಗಳೂರು ಹೊರತು ಪಡಿಸಿ ಉಳಿದೆಡೆ ಶೇ 80ರಷ್ಟು ಮುಗಿದಿದ್ದು, ಅವಧಿ ವಿಸ್ತರಿಸಬೇಕು. ಆನ್‌ಲೈನ್ ನಲ್ಲಿ ಮಾಹಿತಿ ನೀಡುವ ಪ್ರಕ್ರಿಯೆಗೆ ಅಧಿಕ ಸಮಯ ನೀಡಬೇಕು’ ಎಂದರು.

ಪ್ರಜಾವಾಣಿ ಮಂಗಳವಾರ • ಅಕ್ಟೋಬರ್ 7, 2025

ಅಭಿಮತದ ವಿಳಾಸ: ಸಂಪಾದಕರು, ಅಭಿಮತ ವಿಭಾಗ, ಪ್ರಜಾವಾಣಿ, 75 ಮಹಾತ್ಮ ಗಾಂಧಿ ರಸ್ತೆ, ಬೆಂಗಳೂರು–01 editpage@prajavani.co.in

ಅಭಿಮತ

ಸುಭಾಷಿತ

ಸಂಸ್ಕೃತಿಯೆಂದರೆ ಮನುಷ್ಯರ ಅನ್ಯೋನ್ಯ ಸಂಬಂಧಗಳಲ್ಲಿ ನಯವಿನಯಗಳ ಸೊಬಗು, ಸ್ವಗುಣ ಪರಗುಣಗಳ ಸಮ್ಮಿಶ್ರಿತ ಕಾಂತಿ.

ಡಿ.ವಿ. ಗುಂಡಪ್ಪ

ಸಂಪಾದಕೀಯ

'ಎಸ್‌ಐಆರ್' ಪ್ರಕ್ರಿಯೆ ಮುಕ್ತಾಯ ಬಿಹಾರದ ಅನುಭವ ಪಾಠವಾಗಲಿ

ಬಿಹಾರ ರಾಜ್ಯದ ಮತದಾರರ ಪಟ್ಟಿಯ ವಿಶೇಷ ತೀವ್ರ ಪರಿಷ್ಕರಣೆಯ (ಎಸ್‌ಐಆರ್) ಪ್ರಕ್ರಿಯೆಯು ಕೊನೆಗೊಂಡಿದೆ. ಈ ಪ್ರಕ್ರಿಯೆಯ ಮೂಲಕ ಕಂಡುಕೊಂಡ ಅಂಕಿಗಳ ಬಗ್ಗೆ, ಅವುಗಳ ಪರಿಣಾಮದ ಬಗ್ಗೆ ಚರ್ಚೆಗಳು ಮುಂದೆಯೂ ನಡೆಯುತ್ತವೆ. ಮತದಾರರ ಪಟ್ಟಿಯ ಪರಿಷ್ಕರಣೆಯನ್ನು ಹೇಗೆ ಮಾಡಬಾರದು ಎಂಬ ಪಾಠದ ಬಗ್ಗೆಯೂ ಚರ್ಚೆಗಳು ನಡೆಯಲಿವೆ. ಚುನಾವಣಾ ಆಯೋಗ ಪ್ರಕಟಿಸಿರುವ ಮತದಾರರ ಅಂತಿಮ ಪಟ್ಟಿಯಲ್ಲಿ ಒಟ್ಟು 7.42 ಕೋಟಿ ಹೆಸರುಗಳು ಇವೆ. ಇದು ಜೂನ್‌ನಲ್ಲಿ ಪ್ರಕಟಿಸಿದ್ದ ಪಟ್ಟಿಯಲ್ಲಿ ಇದ್ದ ಸಂಖ್ಯೆಗೆ ಹೋಲಿಸಿದರೆ ಶೇ 6ರಷ್ಟು ಕಡಿಮೆ. ಆಗ ಪ್ರಕಟಿಸಿದ್ದ ಪಟ್ಟಿಯಲ್ಲಿ 7.89 ಕೋಟಿ ಹೆಸರುಗಳು ಇದ್ದವು. ಕರಡು ಪಟ್ಟಿಯಲ್ಲಿ ಇದ್ದ ಸುಮಾರು 65 ಲಕ್ಷ ಹೆಸರುಗಳನ್ನು ಅಂತಿಮ ಪಟ್ಟಿಯಿಂದ ಕೈಬಿಡಲಾಗಿದೆ. ಈ ಹೆಸರಿನ ವ್ಯಕ್ತಿಗಳು ಬೇರೆಡೆಗೆ ವಲಸೆ ಹೋಗಿರಬಹುದು ಅಥವಾ ಮೃತಪಟ್ಟಿರಬಹುದು ಅಥವಾ ಅವರ ಹೆಸರು ಎರಡು ಕಡೆ ಇದ್ದಿರಬಹುದು ಎನ್ನಲಾಗಿದೆ. ಆಗಸ್ಟ್ 1ರಂದು ಪ್ರಕಟವಾದ ಪಟ್ಟಿಯಲ್ಲಿ ಒಟ್ಟು 7.24 ಕೋಟಿ ಮತದಾರರ ಹೆಸರುಗಳು ಇದ್ದವು. ಈ ಪೈಕಿ 3.66 ಲಕ್ಷ ಹೆಸರುಗಳು ಅನರ್ಹವಾಗಿವೆ ಎಂದು ಅವುಗಳನ್ನು ಕೈಬಿಡಲಾಗಿದೆ. 21.53 ಲಕ್ಷ ಹೊಸ ಹೆಸರುಗಳನ್ನು ಸೇರಿಸಲಾಗಿದೆ. ಎಸ್‌ಐಆರ್ ಪ್ರಕ್ರಿಯೆ ಬಗ್ಗೆ ಆರಂಭದಲ್ಲಿ ಭೀತಿ, ಕಳವಳ ವ್ಯಕ್ತವಾಗಿತ್ತಾದರೂ, ಅಂತಿಮವಾಗಿ ಪ್ರಕಟವಾಗಿರುವ ಪಟ್ಟಿಯು ಅಂತಹ ಆತಂಕಗಳ ಅಗತ್ಯ ಇರಲಿಲ್ಲ ಎಂಬುದನ್ನು ತೋರಿಸಿಕೊಟ್ಟಿದೆ ಎಂದು ವಾದಿಸಬಹುದು. ಆದರೆ, ಬೇರೆ ಬೇರೆ ರೀತಿಗಳಲ್ಲಿ ಚುನಾವಣಾ ಆಯೋಗದ ಮೇಲೆ ತಂದ ಒತ್ತಡವು ಈ ಪ್ರಕ್ರಿಯೆಯು ಸರಿಯಾಗಿ ಆಗುವಂತೆ ಮಾಡಿತು, ಪ್ರಕ್ರಿಯೆಯ ಫಲವು ಕೆಡದಂತೆ ಆಯಿತು ಎಂದು ಹೇಳುವುದು ಹೆಚ್ಚು ಸೂಕ್ತವಾಗುತ್ತದೆ.

ಮತದಾರರ ಪಟ್ಟಿಯ ವಿಶೇಷ ತೀವ್ರ ಪರಿಷ್ಕರಣೆ ಬಿಹಾರದಲ್ಲಿ ಕೊನೆಗೊಂಡಿದೆ. ಆ ಪ್ರಕ್ರಿಯೆಯಲ್ಲಿ ಕಲಿತ ಪಾಠಗಳು ಚುನಾವಣಾ ಆಯೋಗದ ಮುಂದಿನ ನಡೆಗಳಿಗೆ ಪಾಠವಾಗಬೇಕು.

ವಿರೋಧ ಪಕ್ಷಗಳು ಆರಂಭಿಸಿದ ಅಭಿಯಾನ, ಎಸ್‌ಐಆರ್ ಪ್ರಕ್ರಿಯೆಯಲ್ಲಿ ಸಮಾಜದ ವಿವಿಧ ಸಂಘಟನೆಗಳು ಪಾಲ್ಗೊಂಡ ಬಗೆ, ಈ ಪ್ರಕ್ರಿಯೆಯ ಮೇಲೆ ಹಲವು ಮಾಧ್ಯಮಗಳು ಹದ್ದಿನ ಕಣ್ಣು ಇರಿಸಿದ್ದುದು, ಇವೆಲ್ಲಕ್ಕಿಂತ ಮಿಗಿಲಾಗಿ ಸುಪ್ರೀಂ ಕೋರ್ಟ್ ಮಹತ್ವದ ಸಂದರ್ಭಗಳಲ್ಲಿ ಮಾಡಿದ ಮಧ್ಯಪ್ರವೇಶ, ಈ ಪ್ರಕ್ರಿಯೆಯಿಂದಾಗಿ ಆಗಬಹುದಾಗಿದ್ದ ಸಮಸ್ಯೆಯನ್ನು ಕಡಿಮೆ ಮಾಡಿದವು. ಎಸ್‌ಐಆರ್ ನಡೆಸಲು ಆಯೋಗವು ನಿಗದಿ ಮಾಡಿದ ಸಮಯವೇ ಪ್ರಶ್ನಾರ್ಹವಾಗಿತ್ತು, ವಿಧಾನಸಭಾ ಚುನಾವಣೆಯು ಬಹಳ ಹತ್ತಿರವಾಗಿದ್ದ ಹೊತ್ತಿನಲ್ಲಿ ಇದನ್ನು ನಡೆಸಲು ತೀರ್ಮಾನಿಸಲಾಯಿತು. ಆದರೆ, ಪ್ರಕ್ರಿಯೆಯನ್ನು ಸರಿಯಾಗಿ ನಡೆಸಲು ಹಾಗೂ ಲೋಪಗಳನ್ನು ಸರಿಪಡಿಸಲು ಹೆಚ್ಚಿನ ಸಮಯವು ಉಳಿಯುತ್ತಿರಲಿಲ್ಲ. ಕೋರ್ಟ್‌ನ ಮಧ್ಯಪ್ರವೇಶದ ಕಾರಣದಿಂದಾಗಿ ಹಲವು ಮಹತ್ವದ ತಿದ್ದುಪಡಿಗಳು ಸಾಧ್ಯವಾದವು. ಇವನ್ನು ಮುಂದಿನ ದಿನಗಳಲ್ಲಿ ಮಾರ್ಗದರ್ಶಿಯಾಗಿ ಪರಿಗಣಿಸಬೇಕು. ಎಸ್‌ಐಆರ್ ನಡೆಸಲು ಚುನಾವಣಾ ಆಯೋಗ ಹೊಂದಿರುವ ಅಧಿಕಾರವನ್ನು ಯಾರೂ ಪ್ರಶ್ನಿಸಿಲ್ಲ. ಆದರೆ ಅದನ್ನು ಸರಿಯಾಗಿ, ನ್ಯಾಯಸಮ್ಮತವಾಗಿ, ಪಾರದರ್ಶಕವಾಗಿ ನಡೆಸಬೇಕು ಎಂದು ಆಗ್ರಹಿಸಿದರು. ಅರ್ಹರನ್ನು ಮತದಾರರ ಪಟ್ಟಿಗೆ ಸಾಧ್ಯವಾದಷ್ಟು ಹೆಚ್ಚಿನ ಸಂಖ್ಯೆಯಲ್ಲಿ ಸೇರಿಸುವುದು ಪರಿಷ್ಕರಣೆಯ ಉದ್ದೇಶವಾಗಿರಬೇಕೇ ವಿನಾ ಎಸ್‌ಐಆರ್ ಮೂಲ ಯೋಜನೆಯಲ್ಲಿ ಇದ್ದಂತೆ ಹೆಸರನ್ನು ತೆಗೆದುಹಾಕುವುದು ಉದ್ದೇಶ ಆಗಿರಬಾರದು ಎಂಬ ಅಂಶವು ಮನ್ನಣೆಗೆ ಬಂತು. ಪೌರತ್ವವನ್ನು ಸಾಬೀತು ಮಾಡಬೇಕಾದ ಹೊಣೆಯನ್ನು ಮತದಾರರ ಮೇಲೆ ಹೊರಿಸಬಾರದು, ಅದು ಪ್ರಭುತ್ವದ ಹೊಣೆ ಎಂಬುದು ಮಾನ್ಯವಾಯಿತು. ಆಧಾರ್ ಸಂಖ್ಯೆಯನ್ನು ಸೂಕ್ತ ದಾಖಲೆ ಎಂದು ಪರಿಗಣಿಸಬೇಕು ಎಂದು ಕೋರ್ಟ್ ಹೇಳಿದ್ದು ಬಹಳ ದೊಡ್ಡ ಪರಿಣಾಮ ಉಂಟುಮಾಡಿತು. ಏಕೆಂದರೆ ಚುನಾವಣಾ ಆಯೋಗ ಹೇಳಿದ್ದ ಬಹುತೇಕ ದಾಖಲೆಗಳನ್ನು ಒದಗಿಸುವುದು ಬಿಹಾರದ ಜನರಿಗೆ ಕಷ್ಟದ ಕೆಲಸವಾಗುತ್ತಿತ್ತು.

ಅಂತಿಮ ಪಟ್ಟಿಯಲ್ಲಿ ಕಂಡಿರುವಂತೆ, ಹೆಸರುಗಳನ್ನು ತೆಗೆದುಹಾಕುವುದಕ್ಕೆ ಮುಖ್ಯ ಕಾರಣಗಳು ಸಾವು, ವಲಸೆ ಹಾಗೂ ಹೆಸರುಗಳ ಪುನರಾವರ್ತನೆ. ಅಕ್ರಮ ವಲಸಿಗರ ಹೆಸರುಗಳು ಹೆಚ್ಚಿನ ಸಂಖ್ಯೆಯಲ್ಲಿ ಇರಲಿಲ್ಲ. ದೇಶದ ಚುನಾವಣೆಗಳಲ್ಲಿ ವಿದೇಶೀಯರು, ನುಸುಳುಕೋರರು ಪ್ರಭಾವ ಬೀರುತ್ತಿದ್ದಾರೆ ಎಂಬ ವಾದವನ್ನು ಇದು ಸುಳ್ಳುಮಾಡುವಂತಿದೆ. ಪ್ರಜೆಗಳ ಹಕ್ಕುಗಳ ಮೇಲೆ ಆಕ್ರಮಣ ನಡೆಯದಂತೆ ನೋಡಿಕೊಳ್ಳುವಲ್ಲಿ ಪ್ರಜಾತಾಂತ್ರಿಕ ಕಣ್ಗಾವಲಿನ ಮಹತ್ವ ಏನು ಎಂಬುದನ್ನು ಬಿಹಾರದ ಎಸ್‌ಐಆರ್ ಪ್ರಕ್ರಿಯೆಯು ಹೇಳಿದೆ. ಚುನಾವಣಾ ಆಯೋಗದಂತಹ ಸಾಂವಿಧಾನಿಕ ಸಂಸ್ಥೆಗಳು ಕೂಡ ತಪ್ಪು ಹೆಜ್ಜೆಯನ್ನು ಇರಿಸಬಹುದು ಎಂಬುದನ್ನು ಇದು ಹೇಳಿದೆ. ಎಸ್‌ಐಆರ್‌ನಂತಹ ಪ್ರಕ್ರಿಯೆಯನ್ನು ದೇಶದ ಇತರೆಡೆಗಳಲ್ಲಿಯೂ ನಡೆಸುವ ಉದ್ದೇಶವು ಆಯೋಗಕ್ಕೆ ಇದ್ದರೆ, ಬಿಹಾರದಲ್ಲಿನ ಅನುಭವದಿಂದ ಅದು ಪಾಠ ಕಲಿತುಕೊಳ್ಳಬೇಕು.

ಚಾಟಿಏಟು

ಬಸವಣ್ಣ ಕ್ಯಾಂಟೀನ್!

ದಾಸೋಹ ತತ್ವ ಪ್ರತಿಪಾದಿಸಿದ ಶರಣರ ನೆನಪಿಗಾಗಿ ರಾಜ್ಯ ಸರ್ಕಾರದ್ದೇ ಆದ ಇಂದಿರಾ ಕ್ಯಾಂಟೀನ್‌ಗೆ ಬಸವಣ್ಣನವರ ಹೆಸರನ್ನು ಇಡುವುದು ಹೆಚ್ಚು ಸೂಕ್ತ. ಒಕ್ಕೂಟ ಸರ್ಕಾರದ ಅನುಮತಿಯೂ ಬೇಕಾಗಿಲ್ಲ.

ಅರುಣ್ ಜಾವಗಲ್, ಕನ್ನಡ ಕಾರ್ಯಕರ್ತ, 'ಎಕ್ಸ್'ನಿಂದ

ಕಿಡಿನುಡಿ

ಮೇಲ್ಜಾತಿಗಳನ್ನು ತುಳಿಯಲು ಸಮೀಕ್ಷೆ ನಡೆಸಲಾಗುತ್ತಿದೆ ಎಂಬ ಕೇಂದ್ರ ಸಚಿವ ಸೋಮಣ್ಣ ಅವರ ಆರೋಪ ಬಾಲಿಶವಾದುದು. ಸಮಸಮಾಜ ನಿರ್ಮಾಣವನ್ನು ವಿರೋಧಿಸುವವರು ಇಂತಹ ಹೇಳಿಕೆಗಳನ್ನು ನೀಡುವ ಮೂಲಕ ಜನರ ದಾರಿ ತಪ್ಪಿಸುತ್ತಿದ್ದಾರೆ. ಸಮೀಕ್ಷೆಯನ್ನು ನಡೆಸದಿದ್ದರೆ, ಸಮಾಜದಲ್ಲಿ ಜನರ ಸ್ಥಿತಿಗತಿ ಬಗ್ಗೆ ಅರಿಯಲು ಸಾಧ್ಯವಿಲ್ಲ.

ಸಿದ್ದರಾಮಯ್ಯ, ಮುಖ್ಯಮಂತ್ರಿ

25 ವರ್ಷಗಳ ಹಿಂದೆ

ಶನಿವಾರ, 7-10-2000

- **ಎಮ್ಮೆ ಮೇಯಿಸಲು ಹೋದ ಮೂವರು ಮಕ್ಕಳ ಜಲಸಮಾಧಿ**

ಶಿರಾ, ಅ. 6- ಎಮ್ಮೆಗಳನ್ನು ಮೇಯಿಸಲು ಹೋದ ಮೂವರು ಮಕ್ಕಳು ಜಲಸಮಾಧಿ ಆಗಿರುವ ದಾರುಣ ಘಟನೆ ಬುಕ್ಕಾಪಟ್ಟಣ ಹೋಬಳಿಯ ಬಾಳಾಪುರ ಎಂಬಲ್ಲಿ ಇಂದು ಸಂಜೆ ಸಂಭವಿಸಿದೆ. ಮಕ್ಕಳು ಬಾಳಾಪುರ ಕೆರೆಯಲ್ಲಿ ಎಮ್ಮೆಗಳಿಗೆ ನೀರು ಕುಡಿಸಲು ಹೋದರು. ಎಮ್ಮೆಗಳು ನೀರಿನಲ್ಲಿ ಎಳೆದುಕೊಂಡು ಹೋಗಿದ್ದರಿಂದ ಮುಳುಗಿ ಮೃತಪಟ್ಟರು ಎಂದು ಪೊಲೀಸ್ ಮೂಲಗಳು ತಿಳಿಸಿವೆ. ಲಕ್ಷ್ಮಮ್ಮ (14), ನಾಗರಾಜು (12) ಮತ್ತು ದೊಡ್ಡಯ್ಯ (12) ಮೃತರು.

- **ವಿದ್ಯುತ್ ಕ್ಷೇತ್ರ ಪುನರ್ ರಚನೆ: ರಾಜ್ಯ ಯೋಜನೆಗೆ ಕೇಂದ್ರ ಅಸ್ತು**

ನವದೆಹಲಿ, ಅ. 6- ಕರ್ನಾಟಕದಲ್ಲಿ ಅನುಷ್ಠಾನಕ್ಕೆ ಬರಲಿರುವ ವಿಶ್ವಬ್ಯಾಂಕ್ ನೆರವಿನ ಸುಮಾರು ಆರು ಸಾವಿರ ಕೋಟಿ ರೂ. ಅಂದಾಜು ವೆಚ್ಚದ ವಿದ್ಯುತ್ ಪುನರ್ ರಚನೆ ಯೋಜನೆಗೆ ಕೇಂದ್ರ ಸರ್ಕಾರ ಅನುಮತಿ ನೀಡಿದೆ.

75 ವರ್ಷಗಳ ಹಿಂದೆ

ಶನಿವಾರ, 7-10-1950

- **ವೈಷಮ್ಯ ತ್ಯಜಿಸಿ ಹೊಣೆ ಹೊರಲು ಸಿದ್ಧರಾಗಿ**

ಹೈದರಾಬಾದ್, ಅ. 6– ಕಾಂಗ್ರೆಸ್ ಕಾರ್ಯಕರ್ತರು ಪರಸ್ಪರ ವೈಷಮ್ಯ ತೊರೆದು, ಆಡಳಿತದ ಹೊಣೆಗಾರಿಕೆಯನ್ನು ಹೊರಲು ಮುಂದೆ ಬರಬೇಕೆಂದು ಭಾರತದ ಉಪ ಪ್ರಧಾನಿ ಸರದಾರ್ ಪಟೇಲರು ಹೈದರಾಬಾದ್ ಸಂಸ್ಥಾನ ಕಾರ್ಯಕರ್ತರುಗಳನ್ನುದ್ದೇಶಿಸಿ ಮಾತನಾಡುತ್ತ ತಿಳಿಸಿದರು.

ಕಾಂಗ್ರೆಸ್ ಸಂಸ್ಥೆಯ ಅನೈಕ್ಯತೆಯು ಸಂಸ್ಥಾನದ ಪ್ರಕ್ಷುಬ್ಧ ಪ್ರದೇಶದ ಅವ್ಯವಸ್ಥೆ ತಡೆಗಟ್ಟಲು ಪ್ರತಿಬಂಧಕವಾಗಿದೆಯೆಂದೂ ಅವರು ಹೇಳಿದರು.

- **ಮೈಸೂರಿಗೆ ಪ್ರತ್ಯೇಕ ಧ್ವಜ ಸಂಕೇತ**

ಬೆಂಗಳೂರು, ಅ. 6: ಭಾರತ ಸರಕಾರದ ಅನುಮತಿಯೊಡನೆ ಮೈಸೂರು ಸರಕಾರ, ಸಂಸ್ಥಾನಕ್ಕೆ ಪ್ರತ್ಯೇಕವಾದ ಧ್ವಜ ಸಂಕೇತವನ್ನು ಇಟ್ಟುಕೊಳ್ಳಲು ನಿರ್ಧರಿಸಿದೆ. ನೂತನ ಸಂಕೇತ ಯುದ್ಧ ಕವಚ ಹಾಗೂ ಅಶೋಕಸ್ತಂಭ ಒಳಗೊಂಡಿರುವುದು.

ರಣಹದ್ದು: ಕಾಣಿಸುತ್ತಿಲ್ಲ ಏಕೆ?

ವಿಶ್ಲೇಷಣೆ

ಅಖಿಲೇಶ್ ಚಿಪ್ಪಳಿ

> ರಣಹದ್ದುಗಳು ಪರಿಸರದ ಸಹಜ ಜಾಡಮಾಲಿಗಳು! ಭಾರತದಲ್ಲಿ, ಎಂಬತ್ತರ ದಶಕದಲ್ಲಿ ನಾಲ್ಕು ಕೋಟಿಯಷ್ಟಿದ್ದ ರಣಹದ್ದುಗಳ ಸಂಖ್ಯೆ ಈಗ ಸಾವಿರಗಳ ಸಂಖ್ಯೆಯಲ್ಲಿದೆ. ನಮ್ಮ ಬದುಕಿನಲ್ಲಿ ಯಂತ್ರಗಳ ಪಾತ್ರ ಹೆಚ್ಚಾಗಿರುವುದು ಹಾಗೂ ರಣಹದ್ದುಗಳ ಸಹಜ ಆವಾಸಸ್ಥಾನ ಕಡಿಮೆ ಆಗಿರುವುದು ಅವುಗಳ ಸಂತತಿಗೆ ಕುತ್ತಾಗಿ ಪರಿಣಮಿಸಿದೆ.

ಮಲೆನಾಡಿನಲ್ಲಿ ಜ್ವರ ಬಂದೋ, ಕಾಲುಬೆಂದೋ ನಡೆಯಲಾಗದೆಯೋ, ಬಾಯಿಬೆಂದೋ ತಿನ್ನಲಾಗದೆಯೋ, ಮಲೆನಾಡು ಗಿಡ್ಡ ದನಗಳು ಸತ್ತುಹೋಗುತ್ತಿದ್ದವು. ಸತ್ತ ದನಗಳನ್ನು ಕೊಟ್ಟಿಗೆಯಿಂದ ಎಳೆದು ಖಾಲಿ ಜಾಗದಲ್ಲಿ ಹಾಕಿ ಬರುತ್ತಿದ್ದರು. ಸ್ವಲ್ಪ ಸಮಯದಲ್ಲೇ ಆಕಾಶದಿಂದ ಸುತ್ತಿ ಸುತ್ತಿ ಇಳಿದು ಬರುತ್ತಿದ್ದ ರಣಹದ್ದುಗಳ ಹಿಂಡು ದನದ ದೇಹವನ್ನು ತಮ್ಮ ಉಕ್ಕಿನಂತಹ ಕೊಕ್ಕಿನಿಂದ ಸೀಳಿ ಮಾಂಸವನ್ನು ತಿನ್ನುತ್ತಿದ್ದವು. ಸೊಪ್ಪಿನಬೆಟ್ಟವನ್ನು ಬಳಸಿಕೊಂಡೇ ಪ್ರಾಥಮಿಕ ಶಾಲೆಗೆ ಹೋಗಬೇಕಾದ ಅನಿವಾರ್ಯ ನಮ್ಮದಾಗಿತ್ತು. ಮಾರುದ್ದ ಎತ್ತರವಿರುವ ರಣಹದ್ದುಗಳು ದನಗಳ ಮಾಂಸವನ್ನು ಹರಿದು ತಿನ್ನುವುದನ್ನು ಕಂಡು ಹೆದರಿಕೊಳ್ಳುತ್ತಿದ್ದೆವು. ಇದು 1970–80ರ ದಶಕದ ಕಥೆ.

1980ರ ದಶಕದಲ್ಲಿ ಭಾರತದಲ್ಲಿ 9 ಜಾತಿಯ ಒಟ್ಟು 4 ಕೋಟಿ ರಣಹದ್ದುಗಳು ಆಕಾಶವನ್ನು ಆಳುತ್ತಿದ್ದವು. ಬರೀ 20 ವರ್ಷಗಳಲ್ಲಿ ಅವುಗಳ ಸಂಖ್ಯೆ ಅವನತಿಯ ಅಂಚಿಗೆ ಬಂದು ನಿಂತಿತು. 'ಬಾಂಬೆ ನ್ಯಾಚುರಲ್ ಹಿಸ್ಟರಿ ಸೊಸೈಟಿ'ಯು, ಅವುಗಳನ್ನು ಉಳಿಸುವ ಪ್ರಯತ್ನ ಪ್ರಾರಂಭಿಸಿತು. ಸತತ ಪರಿಶ್ರಮದ ಸಂರಕ್ಷಣಾ ಕ್ರಮಗಳಿಂದಾಗಿ ದೇಶದಲ್ಲಿ ಈಗ ರಣಹದ್ದುಗಳ ಸಂಖ್ಯೆ 30 ಸಾವಿರಕ್ಕೆ ಏರಿದೆ.

ಬೆಂಗಳೂರಿನಿಂದ 60 ಕಿ.ಮೀ. ದೂರದಲ್ಲಿ ರಾಮದೇವರ ಬೆಟ್ಟವಿದೆ. ಕ್ಷಿಪ್ರವಾದ ಕಲ್ಲುಗುಡ್ಡೆಗಳಿಂದ ಕೂಡಿದ, ಬೆಟ್ಟಶ್ರೇಣಿಗಳಿಗೆ ದುರ್ಗಮವಾದ, ಸುಲಭವಾಗಿ ತಲುಪಲು ಸಾಧ್ಯವಿಲ್ಲದ ರಾಮದೇವರ ಬೆಟ್ಟವನ್ನು ರಣಹದ್ದುಗಳು ತಮ್ಮ ಆವಾಸಸ್ಥಾನವನ್ನಾಗಿ ಮಾಡಿಕೊಂಡಿವೆ. ಕರ್ನಾಟಕ ಸರ್ಕಾರ 2012ರಲ್ಲಿ ರಾಮದೇವರ ಬೆಟ್ಟವನ್ನು ದೇಶದಲ್ಲಿ ಮೊಟ್ಟಮೊದಲ ಬಾರಿಗೆ 'ರಣಹದ್ದು ಅಭಯಾರಣ್ಯ' ಪ್ರದೇಶವೆಂದು ಘೋಷಣೆ ಮಾಡಿತು.

ಭಾರತದಲ್ಲಿ 9 ಪ್ರಬೇಧಗಳ ರಣಹದ್ದುಗಳಿವೆ. ಅವುಗಳಲ್ಲಿ ನಾಲ್ಕು ಪ್ರಬೇಧಗಳಾದ– ಉದ್ದ ಕೊಕ್ಕಿನ ರಣಹದ್ದು, ಬಿಳಿ ಪೃಷ್ಠದ ರಣಹದ್ದು, ಕೆಂಪು ತಲೆಯ ರಣಹದ್ದು ಹಾಗೂ ಈಜಿಪ್ಷನ್ ರಣಹದ್ದುಗಳು ಕರ್ನಾಟಕದಲ್ಲಿ ಕಂಡುಬರುತ್ತವೆ. ಅಪಾಯದ ಅಂಚಿನಲ್ಲಿರುವ ಉದ್ದಕೊಕ್ಕಿನ ರಣಹದ್ದು ಮತ್ತು ಈಜಿಪ್ಷನ್ ರಣಹದ್ದುಗಳು ರಾಮದೇವರ ಬೆಟ್ಟದಲ್ಲಿ ಕಂಡುಬರುವ ಪ್ರಮುಖ ಪ್ರಬೇಧಗಳಾಗಿವೆ.

ಅರಣ್ಯ ಇಲಾಖೆ ಮತ್ತು ಪಕ್ಷಿತಜ್ಞರ ಪ್ರಕಾರ, ಬರೀ ಒಂದು ಜೋಡಿ ಉದ್ದಕೊಕ್ಕಿನ ರಣಹದ್ದು ಮಾತ್ರ ರಾಮದೇವರ ಬೆಟ್ಟದಲ್ಲಿ ಕೆಲವು ವರ್ಷಗಳಿಂದ ಕಂಡುಬರುತ್ತಿದೆ. ಇದರ ಹೊರತಾಗಿ, ಹಿಮಾಲಯನ್ ಮತ್ತು ಯುರೋಪಿಯನ್ ರಣಹದ್ದುಗಳು ಚಳಿಗಾಲದಲ್ಲಿ ವಲಸೆ ಬರುತ್ತವೆ. ಅವುಗಳ ಮೂಲ ಆವಾಸಸ್ಥಾನದಲ್ಲಿ ಕನಿಷ್ಠ ಉಷ್ಣಾಂಶವಿದ್ದಾಗ, ಚಳಿಯಿಂದ ಪಾರಾಗಲು ಕರ್ನಾಟಕದ ರಾಮದೇವರ ಬೆಟ್ಟಕ್ಕೆ ಬರುತ್ತವೆ. ಉದ್ದ ಕೊಕ್ಕಿನ ರಣಹದ್ದಿನ ಒಂದು ಜೋಡಿಯಾದರೂ ಇದೆಯಲ್ಲ ಎಂಬುದೇ ಸಮಾಧಾನದ ಸಂಗತಿ. ರಾಮದೇವರ ಬೆಟ್ಟದಲ್ಲಿ ಕಂಡು ಬರುವ ರಣಹದ್ದುಗಳು, ತಮ್ಮ ಆಹಾರಾನ್ವೇಷಣೆಗೆ ಬಂಡೀಪುರ ಮತ್ತು ನಾಗರಹೊಳೆ ಅಭಯಾರಣ್ಯಗಳನ್ನು ಅವಲಂಬಿಸಿವೆ. ಒಂದು ಜೋಡಿ ರಣಹದ್ದು, ವರ್ಷದಲ್ಲಿ ಒಂದೇ ಮೊಟ್ಟೆಯನ್ನಿಟ್ಟು ಮರಿ ಮಾಡುವುದು ಕೂಡಾ ಅವುಗಳ ಸಂಖ್ಯೆ ಕಡಿಮೆಯಾಗಲು ಕಾರಣವಾಗಿದೆ.

ರಣಹದ್ದಿನ ಮರಿ ಹಾರುವುದನ್ನು ಸಾಮರ್ಥ್ಯ ಪಡೆದ ನಂತರದಲ್ಲಿ, ತಾನು ಹುಟ್ಟಿದ ಜಾಗವನ್ನು ಬಿಟ್ಟು ಬೇರೆಡೆಗೆ ಹಾರಿ ಹೋಗುತ್ತದೆ. ಪ್ರೌಢಾವಸ್ಥೆಗೆ ಬಂದಾಗ ಮತ್ತೆ ತನ್ನ ಹುಟ್ಟಿನ ಜಾಗಕ್ಕೆ ಬಂದು ವಂಶಾಭಿವೃದ್ಧಿಗಾಗಿ ಸಂಗಾತಿಯನ್ನು ಹುಡುಕುತ್ತದೆ. ಹೀಗೆ ಎರಡು ವರ್ಷಗಳ ಹಿಂದೆ ಹುಟ್ಟಿದ ಮರಿಯು ಬೇರೆಡೆ ಹೋಗಿದ್ದು, ಪ್ರೌಢಾವಸ್ಥೆಗೆ ತಲುಪಿ ಮತ್ತೆ ಇಲ್ಲಿಗೆ ಬರುವ ನಿರೀಕ್ಷೆಯಿದೆ ಎಂದು ಅಲ್ಲಿನ ಅರಣ್ಯಾಧಿಕಾರಿ ಹೇಳುತ್ತಾರೆ.

ಯುನೈಟೆಡ್ ಕಿಂಗ್‌ಡಮ್ ಮೂಲದ ರಾಯಲ್ ಸೊಸೈಟಿಯಲ್ಲಿ ಪಕ್ಷಿಗಳ ಕುರಿತಾಗಿ ಸಂಶೋಧನೆ ಮಾಡುತ್ತಿರುವ ಕ್ರಿಸ್ ಬೌಡೇನ್ ಅವರು, ಕಳೆದ ಹತ್ತರಿಂದ ವರ್ಷಗಳಿಂದ ನೈಸರ್ಗಿಕ ಜಾಡಮಾಲಿಯಾದ ರಣಹದ್ದುಗಳ ಕುರಿತಾಗಿ ಕರ್ನಾಟಕದಲ್ಲಿ ಅಧ್ಯಯನ ನಡೆಸುತ್ತಿದ್ದಾರೆ. ರಣಹದ್ದುಗಳ ಸಂರಕ್ಷಣೆಯಲ್ಲಿ ಕರ್ನಾಟಕ ಮುಂಚೂಣಿಯಲ್ಲಿದೆ. ಆದರೂ, ರಣಹದ್ದುಗಳ ಸಂರಕ್ಷಣೆಯ ವಿಷಯದಲ್ಲಿ ನಮ್ಮ ಕ್ರಮ ಸಾಲುತ್ತಿಲ್ಲ. ರಣಹದ್ದುಗಳ ಚಲನವಲನಗಳನ್ನು ಪತ್ತೆ ಮಾಡಿ ದಾಖಲಿಸಲು ನಾವು ತಂತ್ರಜ್ಞಾನದ ಮೊರೆ ಹೋಗಲು ಇದು ಸಕಾಲ ಎಂದು ಕ್ರಿಸ್ ಅಭಿಪ್ರಾಯಪಡುತ್ತಾರೆ. ರಣಹದ್ದುಗಳಲ್ಲಿ ಜಿಪಿಎಸ್ ಅಳವಡಿಸುವುದು ಸುಲಭದ ಕೆಲಸವಲ್ಲ. ಆದರೂ ನಾವು ಆ ಹಂತವನ್ನು ಮೀರಬೇಕಿದೆ ಎನ್ನುತ್ತಾರೆ. ರಣಹದ್ದುಗಳು ಎಲ್ಲಿಗೆ ಹೋಗುತ್ತವೆ? ಏನನ್ನು ತಿನ್ನುತ್ತವೆ? ಆಹಾರಕ್ಕಾಗಿ ಸತ್ತುಹೋದರೆ, ಅದಕ್ಕೆ ಕಾರಣಗಳೇನು? ಮುಂತಾದ ವಿವರಗಳನ್ನು ತಿಳಿಯುವುದು ರಣಹದ್ದುಗಳ ಸಂರಕ್ಷಣೆಯಲ್ಲಿ ಬಹು ಮುಖ್ಯವಾದುದು.

ರಣಹದ್ದುಗಳ ಕ್ಷಿಪ್ರ ಪತನಕ್ಕೆ ಯಾವುದೋ ವೈರಸ್ ಕಾರಣವಿರಬಹುದು ಎಂದು ಮೊದಲು ತರ್ಕಿಸಲಾಗಿತ್ತು. ಅಧ್ಯಯನದಲ್ಲಿ, ಡೈಕ್ಲೋಫಿನಾಕ್ ಎಂಬ ಅಲೋಪತಿ ಮೂಲದ ಔಷಧ ಕಾರಣವೆಂದು ಬೆಳಕಿಗೆ ಬಂತು. ಜಾನುವಾರುಗಳ ಕಾಯಿಲೆಗೆ ಬಳಸುವ ನೋವು ನಿವಾರಕಗಳೇ ರಣಹದ್ದುಗಳಿಗೆ ವಿಷವಾಗಿ ಪರಿಣಮಿಸಿದವು. ಹದ್ದುಗಳು ಕಡಿಮೆಯಾಗಲು ಇದೊಂದೇ ಕಾರಣವಲ್ಲ. ಪಶ್ಚಿಮಘಟ್ಟಗಳಂತಹ ಅಭಿವೃದ್ಧ ಪ್ರದೇಶಗಳಲ್ಲೂ ರಣಹದ್ದುಗಳು ನಿರ್ವಂಶವಾಗಿವೆ. ಅದಕ್ಕೆ ಬೇರೆ ಆಯಾಮವಿದೆ.

ಕಳೆದ ಶತಮಾನದ ಕೊನೆಯ ದಶಕಗಳಲ್ಲಿ (1970–1980) ಹೈನುಗಾರಿಕೆಯನ್ನು ಉತ್ತೇಜಿಸಲು ಹೆಚ್ಚು ಹಾಲು ನೀಡುವ ವಿದೇಶಿ ತಳಿಯ ಜಾನುವಾರುಗಳನ್ನು ಪರಿಚಯಿಸಲಾಯಿತು. ಹೆಚ್ಚು ಹಾಲು ನೀಡುವ ಹೈಬ್ರಿಡ್ ತಳಿಗಳಿಗೆ ಕಾಯಿಲೆಯೂ ಹೆಚ್ಚು, ಹೀಗಾಗಿ ಪಶು ವೈದ್ಯ ಪದ್ಧತಿಯಲ್ಲಿ ಔಷಧಗಳನ್ನು ನೀಡುವ ಅನಿವಾರ್ಯತೆ ಬಂತು. ವಿದೇಶಿ ತಳಿ ಜಾನುವಾರುಗಳು ಮಲೆನಾಡಿನ ಗಿಡ್ಡ ತಳಿಗೆ ಪರ್ಯಾಯವಾಗಲಿಲ್ಲ. ಮಲೆನಾಡು ಗಿಡ್ಡಗಳಿಗೆ ಕಾಯಿಲೆ ಬಂದಾಗ ಸಾಮಾನ್ಯವಾಗಿ ನಾಟಿ ವೈದ್ಯ ಪದ್ಧತಿಯನ್ನು ಅನುಸರಿಸಲಾಗುತ್ತಿತ್ತು. ಕಾಲೊಡೆ ರೋಗಕ್ಕೆ ಒಳ್ಳೆಣ್ಣೆ ಸವರುವುದು, ಬಾಯೊಡೆ ರೋಗಕ್ಕೆ ಬಾಳೆಹಣ್ಣನ್ನು ಒಳ್ಳೆಣ್ಣೆಯಲ್ಲಿ ಅದ್ದಿ ತಿನ್ನಿಸುವುದು, ಗಂಟಲು ರೋಗಕ್ಕೆ ಉಪ್ಪಿನಕಾಯಿ ರಸವನ್ನು ನೆಕ್ಕಿಸುವುದು, ಇತ್ಯಾದಿ.

ಗೋಮಾಂಸ ವ್ಯಾಪಾರ, ಚರ್ಮೋದ್ಯಮಗಳು ಯಾಂತ್ರೀಕರಣ ಆಗುವುದರ ಜೊತೆಗೆ, ನಗರೀಕರಣ ಮತ್ತು ಸ್ವಚ್ಛತಾ ಕ್ರಮಗಳಿಂದಾಗಿ ಸಾಕುಪ್ರಾಣಿಗಳ ಮೃತದೇಹವನ್ನು ಬಯಲಿನಲ್ಲಿ ಹಾಕುವ ಪದ್ಧತಿ ಕುಸಿಯಿತು. ಇದರಿಂದ ಮೃತದೇಹದ ಲಭ್ಯತೆ ಕಡಿಮೆಯಾಯಿತು. ಕೃಷಿಯಲ್ಲಿ ಯಾಂತ್ರಿಕತೆ ಬಂದ ಮೇಲೆ ನಾಟಿ ಮಾಡಲು ಎತ್ತುಗಳ ಬಳಕೆ ಕಡಿಮೆಯಾಯಿತು. 1980ರ ನಂತರದಲ್ಲಿ ಅರಣ್ಯನಾಶದ ಪ್ರಮಾಣ ಹೆಚ್ಚಾಯಿತು. ಮಲೆನಾಡಿನ ಬಲು ಎತ್ತರದ ಮರಗಳ ಮೇಲೆ ಗೂಡು ಕಟ್ಟುತ್ತಿದ್ದ ಹದ್ದುಗಳಿಗೆ ಅಂತಹ ಮರಗಳ ಲಭ್ಯತೆ ಕಡಿಮೆಯಾಯಿತು. ಮಾನವಕೇಂದ್ರಿತ ರಸ್ತೆ ನಿರ್ಮಾಣ, ವಿದ್ಯುತ್ ಉತ್ಪಾದನೆ, ರೈಲು ಮಾರ್ಗಗಳು, ಗಣಿಗಾರಿಕೆ– ಹೀಗೆ, ಅಭಿವೃದ್ಧಿ ಚಟುವಟಿಕೆಗಳಿಂದಾಗಿ ರಣಹದ್ದುಗಳಿಗೆ ಪೂರಕವಾದ ಆವಾಸಸ್ಥಾನದ ಕೊರತೆ ತೀವ್ರವಾಯಿತು. ಒಟ್ಟಾರೆ ಕಾಡಿನ ಶಾಂತ ವಾತಾವರಣ ನಾಶವಾಯಿತು. ವನ್ಯಜೀವಿ ಸಂರಕ್ಷಣೆ ನೆಲೆಗಳಲ್ಲೂ ಅಕ್ರಮ ಬೇಟೆ ಹೆಚ್ಚಾದ ಕಾರಣಕ್ಕೆ, ನೈಸರ್ಗಿಕವಾಗಿ ಸಾಯುತ್ತಿದ್ದ ಕಾಡುಪ್ರಾಣಿಗಳ ಸಂಖ್ಯೆಯೂ ಕುಸಿಯಿತು. ಕಾಡುಪ್ರಾಣಿಗಳಿಗೆ ಹೊಡೆದ ಗುಂಡಿನಲ್ಲಿ ಸೀಸದ ಅಂಶವಿರುತ್ತಿತ್ತು. ಇದನ್ನು ತಿನ್ನುವ ರಣಹದ್ದುಗಳು ಸಾವಿಗೀಡಾಗುತ್ತಿದ್ದವು. ಮೃತದೇಹಗಳನ್ನು ಮಾತ್ರ ತಿನ್ನುವ ರಣಹದ್ದುಗಳು, ಕೃಷಿ ವಿಷ ಸೇವಿಸಿ ಸತ್ತ ಕಾಡುಪ್ರಾಣಿಗಳನ್ನು ತಿಂದು ಅವನತಿಯತ್ತ ಸಾಗಿದವು.

ಮೃತ ಪ್ರಾಣಿಗಳನ್ನು ತಿನ್ನುವುದರ ಮೂಲಕ ವಾತಾವರಣವನ್ನು ಸ್ವಚ್ಛವಿಡುತ್ತಿದ್ದ ರಣಹದ್ದುಗಳು ಈಗ ಅತಿ ವಿರಳವಾಗಿವೆ. ಸಣ್ಣ ಊರುಗಳು ಪಟ್ಟಣಗಳಾಗಿ, ಪಟ್ಟಣಗಳು ನಗರಗಳಾಗಿ, ನಗರಗಳು ಮಹಾನಗರಗಳಾಗಿ ಬದಲಾಗುತ್ತಲೇ ಇರುತ್ತವೆ. ಅಳಿದುಳಿದ ಕಾಡಿನಲ್ಲಿ ಸತ್ತ ಪ್ರಾಣಿಗಳನ್ನು ತಿನ್ನಲು ಬೀದಿನಾಯಿಗಳು ಹೋಗುತ್ತವೆ. ಇದು ಮತ್ತೊಂದು ಪ್ರಮಾದಕ್ಕೆ ಕಾರಣವಾಗುತ್ತಿದೆ. ರಣಹದ್ದುಗಳ ಅವನತಿಯಿಂದ ರೇಬಿಸ್ ರೋಗದ ಪ್ರಮಾಣ ಹೆಚ್ಚಾಗಿ ಇರುವುದನ್ನು ಸಂಶೋಧಕರು ದಾಖಲಿಸಿದ್ದಾರೆ.

ಸಾಕು ಪ್ರಾಣಿಗಳ ಮೃತದೇಹಗಳ ಮೇಲೆ ಅವಲಂಬಿತವಾದ ವರ್ಗವೂ ಒಂದಿತ್ತು. ಇವರಿಗೆ ಜಾನುವಾರು ಸತ್ತ ವಿಷಯ ತಿಳಿಸಿದರೆ ಸಾಕು, ಮೃತ ಜಾನುವಾರುಗಳನ್ನು ಬೆಟ್ಟಕ್ಕೆ ತೆಗೆದುಕೊಂಡು ಹೋಗಿ, ಅದರ ಚರ್ಮವನ್ನು ಸುಲಿದು ತೆಗೆದುಕೊಂಡು ಹೋಗುತ್ತಿದ್ದರು, ಚರ್ಮವನ್ನು ಹದ ಮಾಡಿ ಚಪ್ಪಲಿ ತಯಾರಿಸುತ್ತಿದ್ದರು. ರಣಹದ್ದುಗಳಂತೆ ಈ ವರ್ಗ ನಾಶವಾಗದೇ ಇದ್ದರೂ, ಅವರು ಅವಲಂಬಿಸಿಕೊಂಡಿದ್ದ ಜಾನುವಾರುಗಳ ಮೃತದೇಹದ ಅಲಭ್ಯತೆಯ ಕಾರಣಕ್ಕೆ ಅವರೂ ಬೇರೆ ಬೇರೆ ಉದ್ಯೋಗಗಳನ್ನು ಹುಡುಕಿಕೊಂಡಿರಬಹುದು.

ರಣಹದ್ದುಗಳಿಗೆ ಮಾರಕವಾದ ರಾಸಾಯನಿಕ ಔಷಧಗಳನ್ನು ನಿಷೇಧಗೊಳಿಸುವುದು, ಕೃಷಿ ರಾಸಾಯನಿಕಗಳನ್ನು ಬಳಸದೇ ಇರುವುದು, ಹಾಲಿ ಇರುವ ಅರಣ್ಯ ಪ್ರದೇಶಗಳನ್ನು ಉಳಿಸಿಕೊಳ್ಳುವುದು ಹಾಗೂ ಪಶ್ಚಿಮಘಟ್ಟಗಳಲ್ಲಿ ಅರಣ್ಯ ಪ್ರದೇಶವನ್ನು ಹೆಚ್ಚು ಮಾಡುವುದು, ಇತ್ಯಾದಿ ಉಪಕ್ರಮಗಳಿಂದ ರಣಹದ್ದುಗಳು ಮಲೆನಾಡಿಗೆ ಮರಳಿ ಬರುವ ಕ್ಷೀಣ ಸಾಧ್ಯತೆಯನ್ನು ತಳ್ಳಿಹಾಕುವಂತಿಲ್ಲ.

ಕೃತಕವಾಗಿ ಮರಿ ಮಾಡಿಸುವುದರ ಮೂಲಕ ರಣಹದ್ದುಗಳನ್ನು ಉಳಿಸಿಕೊಳ್ಳಬೇಕೆಂಬ ಯೋಜನೆಯನ್ನು ಕರ್ನಾಟಕ ಅರಣ್ಯ ಇಲಾಖೆ 2022ರಲ್ಲಿ ಪ್ರಾರಂಭಿಸಿತ್ತು. ತಾಂತ್ರಿಕ ಸಮಸ್ಯೆಯಿಂದಾಗಿ ಈ ಮಹತ್ವದ ಯೋಜನೆ ಕುಂಟುತ್ತಲೇ ಇದೆ.

ವಾಚಕರ ವಾಣಿ

ಗಣಿಗಾರಿಕೆ ಸರ್ವೇಕ್ಷಣೆಗೆ ಅನುಮತಿ ಬೇಡ

ಹೊಳಲ್ಕೆರೆ ತಾಲ್ಲೂಕಿನ ಅರಣ್ಯ ಪರಿಸರದಲ್ಲಿ ಗಣಿಗಾರಿಕೆ ಸರ್ವೇಕ್ಷಣೆಗೆ ಅರಣ್ಯ ಇಲಾಖೆ ಅನುಮತಿಸಿರುವುದು ವರದಿಯಾಗಿದೆ (ಪ್ರ.ವಾ.,ಅ. 5). ಇದು ಅಕ್ಷಮ್ಯ. ಇದರಿಂದ, ಬರಪೀಡಿತ ಜಿಲ್ಲೆಯಲ್ಲಿನ ಏಕೈಕ ಹಸಿರು ಪರಿಸರಕ್ಕೆ ಹಾನಿಯೊದಗುವ ಸಂಭವ ಅಧಿಕ. ಪಶ್ಚಿಮ ಘಟ್ಟಗಳ ಆರಂಭಿಕ ಕೊಂಡಿಯಂತಿರುವ ಹಾಗೂ ಹೆಚ್ಚು ಮಳೆ ಸುರಿಯುವ ಈ ಅರೆಮಲೆನಾಡು ಭಾಗದಲ್ಲಿ ಸಾವಿರಾರು ಮರಗಳ ಹನನ, ರಸ್ತೆ ನಿರ್ಮಾಣ ಮುಂತಾದ ಕಾರ್ಯಗಳಿಂದ ಅಲ್ಲಿನ ಜೀವವೈವಿಧ್ಯದ ಪಾರಂಪರಿಕ ಲಯಕ್ಕೆ ಭಂಗವುಂಟಾಗುವುದು. ಅರಣ್ಯ ಇಲಾಖೆ ತಕ್ಷಣವೇ ಈ ಕ್ರಮದಿಂದ ಹಿಂದೆ ಸರಿದು, ಈಗ ನೀಡಿರುವ ಅನುಮತಿ ಹಿಂಪಡೆಯುವುದು ಕ್ಷೇಮಕರ.

ಚಂದ್ರಶೇಖರ ತಾಳ್ಯ, ಹೊಳಲ್ಕೆರೆ

ರಾಜಕೀಯಕ್ಕೆ 'ಆಟ' ಬಲಿಯಾಗದಿರಲಿ

ಐಸಿಸಿ ಮಹಿಳಾ ಏಕದಿನ ವಿಶ್ವಕಪ್ ಪಂದ್ಯದಲ್ಲಿ ಪಾಕಿಸ್ತಾನ ತಂಡದ ಆಟಗಾರ್ತಿಯರೊಂದಿಗೆ ಭಾರತೀಯ ಆಟಗಾರ್ತಿಯರು ಹಸ್ತಲಾಘವ ಮಾಡಲಿಲ್ಲ. ಈ ನಡವಳಿಕೆ ಶೋಭೆ ತರುವಂತಹುದಲ್ಲ. ಏಷ್ಯಾ ಕಪ್ ಕ್ರಿಕೆಟ್ ಪಂದ್ಯಾವಳಿಯಲ್ಲಿ ಪುರುಷ ಆಟಗಾರರೂ ಹೀಗೆಯೇ ಕ್ರೀಡಾಸ್ಫೂರ್ತಿಗೆ ವಿರುದ್ಧವಾಗಿ ವರ್ತಿಸಿದ್ದರು.

ಕಲೆ, ಸಾಹಿತ್ಯ, ಸಂಗೀತ, ಕ್ರೀಡೆಗಳು ಸೀಮಾತೀತವಾಗಿ ಮಾನವೀಯ ಸಂಬಂಧಗಳನ್ನು ಮೌಲ್ಯಾಧಾರಿತವಾಗಿ ಬೆಸೆಯಬೇಕು. ರಾಜಕೀಯದ ವಿಷ(ಯ)ಕ್ಕೆ ಬಲಿಯಾಗದೆ ಉತ್ತಮ ಸಂದೇಶ ನೀಡಬೇಕು.

ಮಹಾಂತೇಶ್ ಬಿ. ನಿಟ್ಟೂರು, ದಾವಣಗೆರೆ

'ಎಐ' ಬಳಕೆಗೆ ಮಾರ್ಗಸೂಚಿ ರಚಿಸಿ

ಕೃತಕ ಬುದ್ಧಿಮತ್ತೆ (ಎಐ) ತಂತ್ರಜ್ಞಾನವು ವಿಶ್ವದಾದ್ಯಂತ ವೇಗವಾಗಿ ಬೆಳೆಯುತ್ತಿದೆ. ಯಂತ್ರಗಳು ಈಗ ಮಾನವರಂತೆ ವರ್ತಿಸುತ್ತಿವೆ, ನಿರ್ಧಾರ ತೆಗೆದುಕೊಳ್ಳುತ್ತಿವೆ ಹಾಗೂ ಕಲೆ ಮತ್ತು ಸಾಹಿತ್ಯವನ್ನೂ ಸೃಷ್ಟಿಸುತ್ತಿವೆ. ಆದರೆ ಈ ಪ್ರಗತಿಗೆ ಕೆಲವು ಅಡೆತಡೆಗಳೂ ಇವೆ. ಉದ್ಯೋಗಗಳ ಮೇಲೆ 'ಎಐ' ಪರಿಣಾಮ ಗಂಭೀರವಾಗಿದೆ. ಅನೇಕ ಮಾನವ ಉದ್ಯೋಗಗಳು ಯಾಂತ್ರಿಕ ವ್ಯವಸ್ಥೆಗಳ ಮೂಲಕ ಬದಲಾಗುತ್ತಿರುವುದರಿಂದ ನಿರುದ್ಯೋಗ ಉಲ್ಬಣಿಸುವ ಆತಂಕ ಎದುರಾಗಿದೆ. ಈ ಹಿನ್ನೆಲೆಯಲ್ಲಿ, ಸರ್ಕಾರಗಳು ಮತ್ತು ಶಿಕ್ಷಣ ಸಂಸ್ಥೆಗಳು 'ಎಐ'ನ ಸಕಾರಾತ್ಮಕ ಬಳಕೆಗೆ ಮಾರ್ಗಸೂಚಿಗಳನ್ನು ರೂಪಿಸಬೇಕು. ಯುವಪೀಳಿಗೆಯು ಈ ತಂತ್ರಜ್ಞಾನವನ್ನು ಮಾನವಹಿತದ ದೃಷ್ಟಿಯಿಂದ ಉಪಯೋಗಿಸುವ ಮನೋಭಾವ ಬೆಳೆಸಬೇಕು.

ಮಲ್ಲಿಕಾರ್ಜುನ ಗೆಡ್ಡೆರ, ತುಮಕೂರು

ಸಮೀಕ್ಷಕರ ಜೊತೆ ಒರಟು ವರ್ತನೆ ಬೇಡ

ಸಾಮಾಜಿಕ ಮತ್ತು ಶೈಕ್ಷಣಿಕ ಸಮೀಕ್ಷೆಗೆ ಕೆಲವರಿಂದ ವಿರೋಧ ಎದುರಾಗುತ್ತಿದೆ. ಸಮೀಕ್ಷಕರ ಜೊತೆ ವಾಗ್ವಾದ ನಡೆಸುವವರ ದೃಶ್ಯಗಳ ತುಣುಕುಗಳು ಸಾಮಾಜಿಕ ಜಾಲತಾಣಗಳಲ್ಲಿ ಹರಿದಾಡುತ್ತಿವೆ. ಇದು ಅನಾಗರಿಕ ಮತ್ತು ಅನವಶ್ಯಕ ನಡವಳಿಕೆ. ಸಮೀಕ್ಷೆಯಲ್ಲಿ ಭಾಗವಹಿಸುವುದು ಕಡ್ಡಾಯವೇನೂ ಅಲ್ಲ. ಇಷ್ಟವಿಲ್ಲದವರು ನಾವು ಸಮೀಕ್ಷೆಯಲ್ಲಿ ಭಾಗವಹಿಸುವುದಿಲ್ಲ ಎಂದು ಸ್ಪಷ್ಟವಾಗಿ ಹೇಳಿದರಾಯಿತು. ಅದು ಬಿಟ್ಟು ಸಮೀಕ್ಷಕರನ್ನು ಪ್ರಶ್ನಿಸುವುದು, ಹೀನಾಯವಾಗಿ ಕಾಣುವುದು ಸಲ್ಲದು. ವಿರೋಧಗಳಿದ್ದರೆ, ಸರ್ಕಾರವನ್ನು ಪ್ರಶ್ನೆ ಮಾಡಬೇಕೇ ಹೊರತು ಅದರ ನೌಕರರನ್ನಲ್ಲ.

ಪ್ರಮೋದ ನಾಯ್ಕ, ಬೆಂಗಳೂರು

'ಶಕ್ತಿ' ದಾಖಲೆ ಅಭಿನಂದನೀಯ, ಆದರೆ...

ಸರ್ಕಾರದ ಮಹಿಳಾ ಸಬಲೀಕರಣ ಕಾರ್ಯಕ್ರಮವಾದ 'ಶಕ್ತಿ' ಯೋಜನೆಯಡಿ ಮಹಿಳೆಯರು ಉಚಿತವಾಗಿ ಪ್ರಯಾಣಿಸಿ ವಿಶ್ವದಾಖಲೆ ನಿರ್ಮಿಸಿರುವುದು ಸಂತೋಷದ ಸಂಗತಿ. 'ಶಕ್ತಿ' ರಾಜ್ಯ ಸರ್ಕಾರದ ಪ್ರಶಂಸನೀಯ ಯೋಜನೆ. ಆದರೆ, ಹಿರಿಯ ನಾಗರಿಕರು, ಅಂಗವಿಕಲರು, ವಿದ್ಯಾರ್ಥಿಗಳು ಹಾಗೂ ಮಕ್ಕಳ ಬಗ್ಗೆಯೂ ಸರ್ಕಾರ ಯೋಚಿಸಬೇಕು. ಸರ್ಕಾರಿ ಬಸ್‌ಗಳ ಸಂಖ್ಯೆ ಹೆಚ್ಚಾಗಿಲ್ಲ; ಪ್ರಯಾಣಿಸುವವರು ಹೆಚ್ಚಾಗಿದ್ದಾರೆ. ಅಧಿಕಾರಿಗಳು ಹಾಗೂ ಸರ್ಕಾರದ ಪ್ರತಿನಿಧಿಗಳು ಸರ್ಕಾರಿ ಬಸ್‌ಗಳಲ್ಲಿ ಸಂಚರಿಸುವ ಮೂಲಕ ಜನರ ಸಮಸ್ಯೆ ಅರಿಯಬೇಕಾಗಿದೆ. ಬಸ್‌ಗಳ ಸಂಖ್ಯೆ ಹೆಚ್ಚಿಸುವ, ಮಹಿಳೆಯರಿಗೆ ಪ್ರತ್ಯೇಕ ಬಸ್ ವ್ಯವಸ್ಥೆ ಕಲ್ಪಿಸುವ ಸಾಧ್ಯತೆಗಳ ಬಗ್ಗೆ ಸರ್ಕಾರ ಚಿಂತನೆ ನಡೆಸಬೇಕು.

ಎಚ್. ದೊಡ್ಡ ಮಾರಯ್ಯ, ಬೆಂಗಳೂರು

ಈ ಇಬ್ಬರ ಸಾವುಗಳು ನ್ಯಾಯವೇ?

ಒಂದೇ ವಾರದ ಅಂತರದಲ್ಲಿ ನಾವು ಇಬ್ಬರು ಸಮವಯಸ್ಸಿನ ಖ್ಯಾತನಾಮರನ್ನು ಕಳೆದುಕೊಂಡಿದ್ದೇವೆ. ಒಬ್ಬರು ಯಶವಂತ ಸರದೇಶಪಾಂಡೆ: ತಮ್ಮದೇ ಆದ ವಿಶಿಷ್ಟ ಬರವಣಿಗೆ, ಮಾತಿನ ಗತ್ತುಗಾರಿಕೆಯಿಂದ ರಂಗಭೂಮಿಗೆ ಹೊಸತನದ ಸ್ಪರ್ಶ ಕೊಟ್ಟವರು. ಇನ್ನೊಬ್ಬರು, ತಮ್ಮದೇ ಆದ ವಿಶಿಷ್ಟ ಕಥೆಗಳಿಂದ ಹೆಸರುವಾಸಿಯಾಗಿದ್ದ ಮೊಗಳ್ಳಿ ಗಣೇಶ್. ಯಶವಂತ ಅವರು ಕನ್ನಡ ರಂಗಭೂಮಿಗೆ ಭವಿಷ್ಯದಲ್ಲಿ ಏನೇನು ಹೊಸ ಐಡಿಯಾ ಕೊಡಾಕ ಹೊಂಟಿದ್ರೊ ಏನೋ? ನಡುದಾರಿಯಲ್ಲೇ ನಿರ್ಗಮಿಸಿದರು. ಮೊಗಳ್ಳಿಯವರು ತಮ್ಮ ಬತ್ತಳಿಕೆಯಲ್ಲಿ ಇನ್ನೂ ಎಂತೆಂಥ ಕಥೆ ಹೆಣೆಯುವ ತಂತ್ರ ರೂಪಿಸಿದ್ದರೋ ಏನೋ? ಮಧ್ಯದಲ್ಲಿಯೇ ಬಿಟ್ಟು ಹೋದರು. ವಿಧಿ ನಿರ್ಣಯ ಘೋರ!

ಅಶೋಕ ಚಿಕ್ಕಪರಪ್ಪಾ, ಬೆಂಗಳೂರು

ವನ್ಯಜೀವಿ ರಕ್ಷಣೆಗೆ ಸರ್ಕಾರ ಮುಂದಾಗಲಿ

ರಾಜ್ಯದಲ್ಲಿ ಇತ್ತೀಚೆಗೆ ವನ್ಯಪ್ರಾಣಿಗಳ ಸಾವು ಅಥವಾ ಹತ್ಯೆ ಹೆಚ್ಚಾಗುತ್ತಿದೆ. ಅರಣ್ಯ ಇಲಾಖೆಯ ಅಧಿಕಾರಿಗಳ ಕರ್ತವ್ಯಲೋಪದ ಜೊತೆಗೆ, ಪ್ರಾಣಿಹಂತಕರೊಡನೆ ಅವರ ಅಕ್ರಮ ಸಂಬಂಧದ ಶಂಕೆ ಇದೆ. ಸರ್ಕಾರ ಕಟ್ಟುನಿಟ್ಟಿನ ಕ್ರಮ ಕೈಗೊಳ್ಳುವ ಮೂಲಕ, ಅಮೂಲ್ಯ ವನ್ಯಜೀವಿಗಳ ರಕ್ಷಣೆ ಮಾಡಬೇಕಾಗಿದೆ.

ಎಸ್.ಎನ್. ರಮೇಶ್, ಸಾತನೂರು

ಚುರುಮುರಿ

ನೇಬರ್ ಅಟ್ಯಾಕ್

• ಲಿಂಗರಾಜು ಡಿ.ಎಸ್.

'ನೋಡ್ಲಾ, ಪ್ರಯತ್ನಕ್ಕೆ ಸೋಲಾದರೂ ಪ್ರಾರ್ಥನೆಗೆ ಸೋಲಾಗಕುಲ್ಲ ಅಂತ ಅಣ್ಣ ಯಥೆ ಪಡದು ನೋಡಕ್ಕಾಯ್ಕಿಲ್ಲ ಕಜಾ' ತುರೇಮಣೆ ನೊಂದ್ಕತಿದ್ರು.

'ಅಣ್ಣಂಗೆ ಕುರ್ಚಿ ಸಿಕ್ಕೇ ಸಿಕ್ತದೆ ಅಂತ ಹಿಂಬಾಲಕರು ಹೇಳಿಕ್ಯಂದು ಬರದೇ ಆಯ್ತು. ಇಕ್ಕಡೆ ಅವರು, ಇನ್ನೂ ನಾನೇ ದಸರಾದೇಲಿ ಪುಸ್ಪಾರ್ಚನೆ ಮಾಡದು. ಅವರ ಜೊತೆಗೆ ಮೂರೂ ಮುಕ್ಕಾಲು ಜನವೇ ಇರದು ಅಂತ ಟಾಂಗು ಕೊಡ್ತರೆ' ನನ್ನ ಅನಿಸಿಕೆ ಹೇಳಿದೆ.

'ದಿಟ ಕಲಾ, ಚೇರು ಚೇರು ಅಂತ ಕನವರಿಸಿಕ್ಯಂದು ಅಣ್ಣನ ಕಣ್ಣುಗುಡ್ಡೆಲ್ಲಾ ಬೆಳ್ಳಗಾಗೋದೊ. ಪಕ್ಸದೊಳಗಿರೋ ನೇಬರುಗಳು ದಾರಿಗೆ ಮುಳ್ಳೆಳೀತಾ ಕೂತವೆ. ದೇವೇಂದ್ರನ ಪೋಸ್ಟಿಗೂ ಒಂದು ಟರ್ಮು ಅಂತ ಅದೆ. ಇಲ್ಲ್ಯಾಕಿಲ್ಲ?' ತುರೇಮಣೆ ವಿಚಾರಿಸಿದರು.

'ಇದಕ್ಕೆಲ್ಲಾ ಪರಿಹಾರ ಅದೆ' ತಿಪ್ಪಣ್ಣ ಸಿಡಿಗುಂಡು ಹಾರಿಸಿದ. ಎಲ್ಲಾರೂ ದಿಕ್ಕೆಟ್ಟು ತಿಪ್ಪಣ್ಣನ ಕಡೆ ನೋಡಿದೋ.

'ಗಾಬರಾಗಬ್ಯಾಡಿ ತುರೇಮಣಣ್ಣೈ. ಅಣ್ಣ ನನ್ನ ತಾವು ಒಂದು ವೆಲ್ಲೈಸಿ ಟರ್ಮು ಇನ್ಸ್ಯೂರೆನ್ಸು ತಕಂಡ್ರೆ ನಷ್ಟ ಪರಿಹಾರ ತುಂಬಿ ಕೊಡಬೈದು' ಅಂತ ವಡಪು ಹಾಕಿದ.

'ಅಯ್ಯೋ ನಿನ್ನಾ, ಅದೇನು ವೆಲ್ಲೈಸಿ ಅಂತ ಸರಿಯಾಗಿ ಹೇಳ್ಲಾ' ಯಂಟಪ್ಪಣ್ಣ ಸಿಟ್ಟಾದ್ರು.

'ಇದು ಪವರ್ ಇನ್ಸ್ಯೂರೆನ್ಸ್. ತಿಂಗಳಿಗಿಷ್ಟು ಅಂತ ವಿಮೆ ತುಂಬಿ ಟರ್ಮು ಮುಗಿದ ಮ್ಯಾಲೂ ಕುರ್ಚಿ ಸಿಗದೇ ಹೋದ್ರೆ ನಾವು ವೆಲ್ಲೈಸಿಯಿಂದ ಪವರ್ ಪರಿಹಾರ ಅಂತ ಕ್ಲೇಮು ಕೊಡ್ತೀವೇಳಿ' ತಿಪ್ಪಣ್ಣ ವಿವರಿಸಿದ.

'ಅಣ್ಣನ ಮನೇ ಮಗ್ಗುಲಗೇ ಇದ್ದೀಯಲ್ಲೋ. ನೀನು ಕ್ಲೇಮು ಸೆಟಲ್ ಮಾಡ್ದೇ ಹೋದ್ರೆ ಅಣ್ಣ ನಿನ್ನ ಬೋಟಿ, ಕಲೇಜಾ ಕಿತ್ತಾಕಿಬುಡ್ತನೆ ಕಲಾ. ಉಸಾರು' ತುರೇಮಣೆ ಎಚ್ಚರಿಸಿದರು.

'ಆಟೊತ್ತಿಗೆ ನಾವೂ ಬೋರ್ಡು ತಿರುವ್ಯಾಕಿ ಎಪ್ಪೆಸ್ ಆಗಿರತೀವಲ್ಲ. ನೈಬರ್ ಅಟ್ಯಾಕ್ ಮಾಡೋ ನಮ್ಮಂತಾ ಕೈನಾತಿಗಳನ್ನ ಎಲ್ಲಿ ಅಂತ ಹುಡುಕ್ಯಾರು?' ತಿಪ್ಪಣ್ಣನ ವೆಲ್ಲೈಸಿ ಪ್ಲಾನಿಗೆ ನಾವು ಚಿತ್ತಾಗಿದ್ದೋ.

ಸಂಗತ

ರಾಮಾಯಣದಲ್ಲಿ 'ಪ್ರಜಾತಂತ್ರ'ದ ಪಥ್ಯಗಳು

ವಾಲ್ಮೀಕಿ ರಾಮಾಯಣವನ್ನು ಆರಾಧನೆಯ ದೃಷ್ಟಿಯಿಂದ ನೋಡುವುದರ ಬದಲು, ಪ್ರಜಾತಂತ್ರದ ಪಥ್ಯದಂತೆ ನೋಡಿದರೆ ಹೆಚ್ಚಿನ ಉಪಯೋಗಗಳಿವೆ.

• ಮಹೇಂದ್ರ ಟಿ.ಎಂ.

ವಾಲ್ಮೀಕಿ ರಾಮಾಯಣದಿಂದ ಇಂದಿಗೂ ಅನುಸರಿಸಬಹುದಾದ ಒಂದು ಮುಖ್ಯ ಸಂಗತಿ 'ಪ್ರಜಾತಂತ್ರ'. ಪ್ರಜಾಪ್ರಭುತ್ವ ರಾಜಪ್ರಭುತ್ವವಾಗಿ ಬದಲಾದಂತೆ ಭಾಸವಾಗುತ್ತಿರುವ ಸಂಕೀರ್ಣ ಸ್ಥಿತಿಯಲ್ಲಿ ಪ್ರಸ್ತುತ ನಾವಿದ್ದೇವೆ. ಹಣ, ಧರ್ಮ, ಇತ್ಯಾದಿಗಳಿಗಾಗಿ ತಮ್ಮ ಮತವನ್ನು ಮಾರಿಕೊಳ್ಳುವವರೇ ಹೆಚ್ಚು. ಇದಕ್ಕೊಂದು ಪರಿಹಾರವನ್ನು ನಾವು ನಡೆದುಬಂದ ಪರಂಪರೆಯಿಂದಲೇ ಹುಡುಕಬೇಕಲ್ಲವೇ?

ವಾಲ್ಮೀಕಿ ವಿರಚಿತ ರಾಮಾಯಣ ಮಹಾಕಾವ್ಯದಲ್ಲಿ ಪ್ರಜಾತಂತ್ರಕ್ಕೆ ಅತ್ಯುತ್ತಮ ನಿದರ್ಶನಗಳಿವೆ. ಪ್ರಜೆಗಳಿಂದ ರಾಜನ ಆಯ್ಕೆ ಎನ್ನುವುದೊಂದು ನ್ಯಾಯಯುತ ರಾಜಕೀಯ ಪರಿಕಲ್ಪನೆ. ವಾಲ್ಮೀಕಿ ರಾಮಾಯಣದಲ್ಲಿ ರಾಮನಿಗೆ ಪಟ್ಟವಾಗುವುದು ಹಿರಿತನದಿಂದ ಸರಿಯಾದುದಾಗಿದ್ದರೂ, ಯುವರಾಜನನ್ನು ಘೋಷಿಸುವಾಗ ಪ್ರಜೆಗಳ ಇಂಗಿತವನ್ನು ಅರಿತೇ ಆಯ್ಕೆ ಮಾಡಲಾಗಿತ್ತು. 'ತಮೇವಂ ವೃತ್ತಸಂಪನ್ನಂ ಅಪ್ರಧೃಷ್ಯಪರಾಕ್ರಮ, ಲೋಕಪಾಲೋಪಮಂ ನಾಥಮಕಾಮಯತ ಮೇದಿನೀ'. ಇಲ್ಲಿ ರಾಜನ ಆಯ್ಕೆ ಜನರ ಇಚ್ಛೆಯಾಗಿದೆ.

ರಾಜ್ಯಕ್ಕೆ ಸಂಬಂಧಿಸಿದ ಹಲವು ವಿಚಾರಗಳನ್ನು ವಿಚಾರ ವಿನಿಮಯ, ಚರ್ಚೆಗಳ ಮೂಲಕವೇ ನಿರ್ಧರಿಸಲಾಗುತ್ತಿತ್ತು ಎನ್ನುವುದಕ್ಕೆ ರಾಮಾಯಣದಲ್ಲಿ ಉದಾಹರಣೆಗಳಿವೆ. ಜನಪ್ರತಿನಿಧಿಗಳು ಮತ್ತು ಸಾಮಂತರ ಎದುರಿಗೆ ವಿಚಾರಗಳನ್ನು ಮಂಡಿಸಿದ ನಂತರವೇ ನಿರ್ಧಾರಗಳನ್ನು ಕೈಗೊಳ್ಳಲಾಗುತ್ತಿತ್ತು. ಅಂತಹ ಮಂಡನೆಗಳನ್ನು ಮಾನ್ಯ ಮಾಡಲೇಬೇಕೆಂಬ ನಿಯಮವಿರಲಿಲ್ಲ. ರಾಮ ಜೇಷ್ಠಪುತ್ರ, ಆದರೂ ದಶರಥ ಲೋಕಸಭೆಯನ್ನು ಕರೆಯುತ್ತಾನೆ, ತನ್ನ ಇಂಗಿತವನ್ನು ಪ್ರಸ್ತಾಪಿಸುತ್ತಾನೆ. ಜನಪ್ರತಿನಿಧಿಗಳಿಗೂ, ಸಾಮಂತರಿಗೂ ನಿರ್ಧಾರ ಕೈಗೊಳ್ಳುವ ಸ್ವಾತಂತ್ರ್ಯ ನೀಡುತ್ತಾನೆ.

'ನಾನು ಹೇಳಿರುವ ಮಾತು ನನಗೆ ಪ್ರಿಯವಾದುದಾಗಿದ್ದರೂ, ನಿಮಗೆ ಅಹಿತವಾಗಿದ್ದರೆ, ಸರಿಯಾದ ನಿರ್ಣಯವನ್ನು ಸೂಚಿಸಬಹುದು. ಈ ವಿಷಯದ ಕುರಿತಂತೆ ಪರಿಶೀಲಿಸಿ ನಿರ್ಣಯ ಕೈಗೊಳ್ಳಲೆಂದೇ ಪ್ರಸ್ತಾಪವನ್ನು ಮಂಡಿಸಿದ್ದೇನೆ' ಎಂದು ದಶರಥ ವಿನಮ್ರವಾಗಿ ಕೇಳಿಕೊಳ್ಳುತ್ತಾನೆ. ಇದು ನಿಜವಾದ ಪ್ರಜಾತಂತ್ರ. ಇಲ್ಲಿ ನಿರಂಕುಶ ಅಧಿಕಾರಕ್ಕೆ ಜಾಗವೇ ಇಲ್ಲ.

ಒಮ್ಮೆ ಮತದಾರರನ್ನು ಮರುಳು ಮಾಡಿ, ಐದು ವರ್ಷ ಜನರನ್ನು ನರಳಿಸುವ ಇಂದಿನ ಪ್ರಜಾತಂತ್ರವನ್ನು ಬದಲಿಸಿ– ಹೊಸ ದೃಷ್ಟಿಕೋನ, ಹೊಸ ಪದ್ಧತಿಯನ್ನು ಅಳವಡಿಸಿಕೊಳ್ಳುವ ಅಗತ್ಯವಿದೆ. ಜಾತಿ, ಧರ್ಮ, ಹಣವನ್ನು ತಿರಸ್ಕರಿಸಿ ಯೋಗ್ಯತೆಯನ್ನೇ ಮುಖ್ಯವಾಗಿರಿಸಿ ಪ್ರಜಾಪ್ರತಿನಿಧಿಗಳನ್ನು ಆರಿಸುವ ತುರ್ತು ಇಂದಿನದು.

'ರಾಮರಾಜ್ಯ' ಎನ್ನುವುದು ಧರ್ಮ ಅಥವಾ ಮತದ ಹಿನ್ನೆಲೆಯುಳ್ಳ ಕಲ್ಪನೆಯಲ್ಲ. ಅದೊಂದು 'ಪ್ರಜಾತಂತ್ರ' ತಳಹದಿಯ ರಾಜಕೀಯ ವ್ಯವಸ್ಥೆ. ಇಂದು ಭಾವಿತವಾಗುತ್ತಿರುವ 'ರಾಮರಾಜ್ಯ'ದ ಕಲ್ಪನೆ ಆ ಹೆಸರಿಗೆ ವಿರುದ್ಧವಾದದ್ದು. ದಶರಥನಂತೆ ವಿನಂತಿಸಿಕೊಳ್ಳುವ, ರಾಮನಂತೆ ಕಾಡಿಗೆ ತೆರಳುವ, ಭರತನಂತೆ ಆಡಳಿತ ನಡೆಸುವ ಮನಃಸ್ಥಿತಿ ಈಗ ಎಲ್ಲಿದೆ? ನಾಗರಿಕತೆಯ ತುತ್ತ ತುದಿಯಲ್ಲಿರುವ ನಾವು ರಾಮಾಯಣ ಕಾಲದ ರಾಜಕೀಯ ತತ್ತ್ವಗಳನ್ನು ಅಳವಡಿಸಿಕೊಳ್ಳುವ, ಮಾನವೀಯರಾಗಬೇಕಿರುವ ಅಗತ್ಯಗಳನ್ನು ಶೋಧಿಸಬೇಕಿದೆ.

ರಾಜಕೀಯ ವ್ಯವಸ್ಥೆಯಲ್ಲಿ ಯಾವುದೋ ಒಂದು ರಾಜತಂತ್ರವೇ ಸರ್ವಶ್ರೇಷ್ಠ ಎಂದು ವೈಭವೀಕರಿಸುವುದಕ್ಕಿಂತ, ಆ 'ರಾಜತಂತ್ರ'ವನ್ನು ನಿಯಂತ್ರಿಸಿ ತನ್ನ ಹಿಡಿತದಲ್ಲಿಟ್ಟುಕೊಳ್ಳಬೇಕಾದ ಅವಶ್ಯಕತೆ ಈಗ ಬಹಳಷ್ಟಿದೆ. ರಾಮಾಯಣದಲ್ಲಿ 'ಶಾಸನಸಂಸ್ಥೆ' ಉಪಜೀವನದ ಮಾರ್ಗವಲ್ಲ, ಅದೊಂದು ನಿಸ್ವಾರ್ಥ ಸೇವೆ, ಬದ್ಧತೆ; ಪ್ರಜೆಗಳನ್ನೇ ಸರ್ವಸಂಪತ್ತೆಂದು ಭಾವಿಸಬೇಕಾಗಿರುವ ಹುದ್ದೆ. ಪ್ರಜೆಗಳಿಗೆ ಯಾವ ನ್ಯಾಯವೋ ರಾಜನಿಗೂ ಅದೇ ನ್ಯಾಯ ಎನ್ನುವುದು ವಾಲ್ಮೀಕಿಯ ನ್ಯಾಯವ್ಯವಸ್ಥೆ! ಹಾಗಾಗಿಯೇ ರಾಮನ ವನವಾಸ, ಸೀತೆಯ ಅಗ್ನಿಪ್ರವೇಶ ಘಟನೆಗಳು ಜರುಗಿದ್ದು. ವಾಲ್ಮೀಕಿ ರಾಮನ ಪಾತ್ರದಲ್ಲಿ ಕಂಡದ್ದು ಆದರ್ಶ ರಾಜನನ್ನು ಎನ್ನುವುದಕ್ಕಿಂತ ಆದರ್ಶ ಪ್ರಜಾಸೇವಕನನ್ನು. ರಾಮಾಯಣ ಮಹಾಕಾವ್ಯವೇ ಮನುಷ್ಯನ ಕರ್ತವ್ಯಪ್ರಜ್ಞೆಯನ್ನು ಜಾಗೃತಗೊಳಿಸುವ ಕಾವ್ಯ. ಕವಿ ವಾಲ್ಮೀಕಿ ಕಂಡ ಕನಸೇ 'ರಾಮರಾಜ್ಯ.'

ಇಂದಿನ ಯುವಜನತೆ, ರಾಮಾಯಣ ಕಾಲದ ಪ್ರಜೆಗಳಂತೆ ಬುದ್ಧಿವಂತಿಕೆಯಿಂದ ನಮ್ಮನಾಳುವವರನ್ನು ಆರಿಸಿ ಕಳಿಸಬೇಕಿದೆ. ಇಲ್ಲವಾದರೆ ನಿರಂಕುಶ ಆಡಳಿತ ಮರಳುವ ದಿನಗಳು ದೂರವೇನಿಲ್ಲ. ತಾನು, ತನ್ನ ಮಗ ಅಥವಾ ಮಗಳು, ತನ್ನ ಕುಟುಂಬ ಇವರೇ ತನ್ನ ಉತ್ತರಾಧಿಕಾರಿಯಾಗಿ ಮುಂದುವರಿಯಬೇಕು ಎನ್ನುವಂತಹ ಧೋರಣೆಗಳನ್ನು ಜನ ಧಿಕ್ಕರಿಸಬೇಕಿದೆ.

ರಾಮಾಯಣ ಏಕಮುಖ ಬೋಧನಾ ಕಾವ್ಯವಲ್ಲ. ರಾಜನಿಗೆ ರಾಜನ ಕಾರ್ಯಗಳನ್ನು, ಕರ್ತವ್ಯಗಳನ್ನು ತಿಳಿಸಿದರೆ, ಪ್ರಜೆಗಳಿಗೆ ಅವರ ಜವಾಬ್ದಾರಿಯನ್ನೂ ನೆನಪಿಸುವ ಕಾವ್ಯ; ವ್ಯಕ್ತಿ–ವ್ಯಕ್ತಿತ್ವಗಳನ್ನು ಸರಿಪಡಿಸಿಕೊಳ್ಳಬಹುದಾದ ಸಾಧ್ಯತೆಗಳಿರುವ ಕಾವ್ಯ. ಹಾಗಾಗಿಯೇ ರಾಮಾಯಣದ ರಾಮ, ಲಕ್ಷ್ಮಣ, ಸೀತೆ, ಭರತನೆಂಬ ಹೆಸರುಗಳು ನಮ್ಮ ಭಾವಕೋಶದ ಭಾಗವಾಗಿವೆ.

ರಾಮನಂತಾಗುವುದು ಸಾಧ್ಯವಾಗದಿರಬಹುದು, ಇತರರಿಗೆ ಕೇಡು ಬಯಸದೇ ಬದುಕುವುದು ಎಲ್ಲರಿಗೂ ಸಾಧ್ಯ. ಅಷ್ಟರಮಟ್ಟಿನ ಪರಿವರ್ತನೆಯಾದರೂ ಸಾಧ್ಯವಾಗದೆ ಹೋದರೆ ನಮ್ಮ ನಾಳಿನ ಬದುಕನ್ನು ಉತ್ತಮಪಡಿಸಿಕೊಳ್ಳಲು ಸಾಧ್ಯವಿಲ್ಲ. ದುರದೃಷ್ಟಕರ ಸಂಗತಿಯೆಂದರೆ, ರಾಮಾಯಣದ ವ್ಯಕ್ತಿತ್ವಗಳು ನೀತಿಪಾಠ ಆಗಬೇಕಿರುವಾಗ ಈ ಕಾಲದಲ್ಲಿ ವ್ಯಕ್ತಿ ವೈಭವೀಕರಣ ಪ್ರಕ್ರಿಯೆ ನಿರಂತರ ಚಾಲ್ತಿಯಲ್ಲಿದೆ. 'ರಾಮ' ದೈವವಾಗಿ ಆರಾಧನೆಗೊಳ್ಳುತ್ತಿದ್ದಾನೆಯೇ ಹೊರತು ವ್ಯಕ್ತಿಯಾಗಿ ಅಲ್ಲ. ಅವನ ವ್ಯಕ್ತಿತ್ವದ ಪಾಲನೆ ಯಾರಿಗೂ ಬೇಡದ ವಿಚಾರ. ಸರ್ವರ ರಾಮ ಆಗಬೇಕಿದ್ದವನು, ಒಂದು ಧರ್ಮದ ರಾಮನಾಗಿ ಮಂದಿರದ ಗರ್ಭಗುಡಿಗೆ ಸೀಮಿತನಾಗಿದ್ದಾನೆ.

ನಮಗಿಂದು ರಾಮ ವೇದ್ಯನಾಗಬೇಕಾಗಿರುವುದು ವ್ಯಕ್ತಿಯಾಗಿ, ವ್ಯಕ್ತಿತ್ವವಾಗಿ ಹಾಗೂ ಮಾರ್ಗದರ್ಶಕನಾಗಿ. ಈ ಅರಿವು ಸಾಮಾಜಿಕ ಸೌಹಾರ್ದಕ್ಕೂ ಪೂರಕವಾದುದು.

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor (Responsible for selection of news under the PRB Act): Praveen Kulkarni. Editorial Office: 75, Mahatma Gandhi Road, Bengaluru-560 001. E-mail: editorpv@prajavani.co.in. Phone: 080-45557333, Editorial: 080-45557251, Circ: 080-45557204, Advt: 080-45557163/080-45557164. Also printed at Hubballi-Dharwad, Mangaluru, Kalaburagi, Davanagere, Mysuru and Hosapete. All rights reserved. Reproduction in whole or in part without permission is prohibited. To know more about The Printers (Mysore) Private Ltd, visit www.printersmysore.com.

ಎನ್‌ಸಿಆರ್‌ಬಿ ವರದಿ –2023: ಇಳಿದ ಕೊಲೆ, ಅತ್ಯಾಚಾರ ಪ್ರಕರಣಗಳು

ಅಪರಾಧ ಹೆಚ್ಚು, ಶಿಕ್ಷೆ ಕಡಿಮೆ

ಪ್ರಜಾವಾಣಿ ವಾರ್ತೆ

ರಾಷ್ಟ್ರೀಯ ಅಪರಾಧ ದಾಖಲೆಗಳ ಬ್ಯೂರೊ (ಎನ್‌ಸಿಆರ್‌ಬಿ) 2023ರ ವಾರ್ಷಿಕ ವರದಿಯನ್ನು ಇತ್ತೀಚೆಗೆ ಬಿಡುಗಡೆ ಮಾಡಿದೆ. ದೇಶದಲ್ಲಿ ಒಟ್ಟಾರೆ ಅಪರಾಧ ಪ್ರಕರಣಗಳು ಹೆಚ್ಚಾಗಿವೆ. ಐಪಿಸಿ (ಭಾರತೀಯ ದಂಡ ಸಂಹಿತೆ) ಮತ್ತು ವಿಶೇಷ ಮತ್ತು ಸ್ಥಳೀಯ ಕಾನೂನುಗಳ (ಎಸ್‌ಎಲ್‌ಎಲ್) ಅಡಿ ದಾಖಲಾಗುತ್ತಿದ್ದ ಪ್ರಕರಣಗಳ ಪ್ರಮಾಣವು ಏರಿಕೆ ಕಂಡಿದೆ. ಹಾಗೆಯೇ ಅಪರಾಧಗಳ ದಾಖಲು ಪ್ರಮಾಣವೂ ಜಾಸ್ತಿಯಾಗಿದೆ; 2022ರಲ್ಲಿ ಈ ಪ್ರಮಾಣ ಒಂದು ಲಕ್ಷ ಜನಸಂಖ್ಯೆಗೆ 422 ಇದ್ದರೆ, 2023ರಲ್ಲಿ ಅದು 448ಕ್ಕೆ ಏರಿದೆ.

ಹಿಂದಿನ ವರ್ಷಕ್ಕೆ ಹೋಲಿಸಿದರೆ ಕೊಲೆ ಮತ್ತು ಅತ್ಯಾಚಾರ ಪ್ರಕರಣಗಳು ಕಡಿಮೆ ಆಗಿದ್ದರೆ, ಅಪಹರಣ ಮತ್ತು ಒತ್ತೆ ಪ್ರಕರಣಗಳು ಜಾಸ್ತಿಯಾಗಿವೆ. ಮಕ್ಕಳು ಮತ್ತು ಮಹಿಳೆಯರ ಮೇಲಿನ ಅಪರಾಧಗಳಲ್ಲಿ ಅಲ್ಪ ಪ್ರಮಾಣದ ಏರಿಕೆ ಕಂಡು ಬಂದಿದೆ. ಈ ಪೈಕಿ 'ಗಂಡ ಅಥವಾ ಸಂಬಂಧಿಗಳಿಂದ ಕ್ರೌರ್ಯ'ಕ್ಕೆ ಸಂಬಂಧಿಸಿದ ಪ್ರಕರಣಗಳ ಪಾಲು (ಶೇ 28) ಹೆಚ್ಚಾಗಿದೆ. ಅಪಹರಣ ಮತ್ತು ಒತ್ತೆ ಪ್ರಕರಣಗಳು (ಶೇ 19.8) ಮತ್ತು ಪೋಕ್ಸೊ ಪ್ರಕರಣಗಳು (14.8) ನಂತರದ ಸ್ಥಾನಗಳಲ್ಲಿವೆ.

ಮಕ್ಕಳ ಮೇಲಿನ ಪ್ರಕರಣಗಳಲ್ಲಿ ಶೇ 9.2ರಷ್ಟು ಹೆಚ್ಚಳವಾಗಿದ್ದು, ಅವುಗಳಲ್ಲಿ ಅಪಹರಣ (ಶೇ 45) ಮತ್ತು ಪೋಕ್ಸೊ ಪ್ರಕರಣಗಳ (ಶೇ 38.2) ಸಂಖ್ಯೆ ಜಾಸ್ತಿ ಇದೆ. ಹಾಗೆಯೇ, ಪರಿಶಿಷ್ಟ ಜಾತಿ ಜನರ (ಎಸ್‌ಸಿ) ಮೇಲಿನ ದೌರ್ಜನ್ಯ ಪ್ರಕರಣಗಳಲ್ಲಿ ಅಲ್ಪ ಪ್ರಮಾಣದ ಹೆಚ್ಚಳವಾಗಿದ್ದರೆ, ಎಸ್‌ಟಿಗಳ ಮೇಲಿನ ದೌರ್ಜನ್ಯ ಪ್ರಕರಣಗಳಲ್ಲಿ (ಶೇ 28.8) ಭಾರಿ ಪ್ರಮಾಣದ ಏರಿಕೆಯಾಗಿದೆ. ಸೈಬರ್ ಅಪರಾಧಗಳು ಗಣನೀಯವಾಗಿ ಜಾಸ್ತಿಯಾಗಿವೆ.

ದೇಶದಲ್ಲಿ 2023ರಲ್ಲಿ 1,59,811 ಪುರುಷರು, 3,24,763 ಮಹಿಳೆಯರು ಮತ್ತು 10 ಮಂದಿ ಲಿಂಗತ್ವ ಅಲ್ಪಸಂಖ್ಯಾತರು ಸೇರಿ ಒಟ್ಟು 4,84,584 ಮಂದಿ ಕಾಣೆಯಾಗಿದ್ದಾರೆ. ಈ ಪಟ್ಟಿಯಲ್ಲಿ ಮಹಿಳೆಯರು ಹೆಚ್ಚಿದ್ದಾರೆ.

ಕಡಿಮೆ ಜನರಿಗೆ ಶಿಕ್ಷೆ: ಬಹುತೇಕ ಎಲ್ಲ ಅಪರಾಧ ಪ್ರಕರಣಗಳಲ್ಲಿ ತಪ್ಪಿತಸ್ಥರಿಗೆ ಶಿಕ್ಷೆಯಾಗುತ್ತಿರುವ ಪ್ರಮಾಣ ಕಡಿಮೆ. ಅದರಲ್ಲೂ ಮಹಿಳೆಯರ ಮೇಲಿನ ಅಪರಾಧ ಪ್ರಕರಣಗಳಲ್ಲಿ ಈ ಪ್ರಮಾಣ ತುಂಬಾ ಕಡಿಮೆ ಇದೆ.

ಉತ್ತರ ಪ್ರದೇಶದಲ್ಲಿ ಪ್ರಕರಣ ಹೆಚ್ಚು

ರಾಜ್ಯಗಳ ಪೈಕಿ ಉತ್ತರ ಪ್ರದೇಶದಲ್ಲಿ ಅತಿ ಹೆಚ್ಚು ಅಪರಾಧ ಪ್ರಕರಣಗಳು ವರದಿಯಾಗಿವೆ. ಮಹಿಳೆಯರ ವಿರುದ್ಧದ ಪ್ರಕರಣಗಳು ಉತ್ತರ ಪ್ರದೇಶದಲ್ಲಿ ಹೆಚ್ಚಿವೆ. ಕೇರಳದಲ್ಲಿ ಅಪರಾಧ ಪ್ರಮಾಣವು (crime rate) ಹೆಚ್ಚಾಗಿರುವುದು ವರದಿಯಲ್ಲಿ ಉಲ್ಲೇಖವಾಗಿದೆ. ನಾಗಾಲ್ಯಾಂಡ್‌ನಲ್ಲಿ ಅತಿ ಕಡಿಮೆ ಪ್ರಮಾಣ ದಾಖಲಾಗಿದೆ.

ಅಪರಾಧ ಪ್ರಕರಣಗಳು (ಐಪಿಸಿ ಮತ್ತು ಎಸ್‌ಎಲ್‌ಎಲ್ ಸೇರಿ)

ಭಾರತ

2022	58,24,946
2023	62,41,569

↑ 7.2%

2023ರಲ್ಲಿ ದೇಶದಲ್ಲಿ 12 ನಿಮಿಷಕ್ಕೊಂದು ಅಪರಾಧ ಪ್ರಕರಣ ವರದಿಯಾಗಿದೆ

ಕರ್ನಾಟಕ

2022	1,80,742
2023	2,14,234

↑ 18.5%

ರಾಜ್ಯದಲ್ಲಿ 2023ರಲ್ಲಿ ಪ್ರತಿ 2.45 ನಿಮಿಷಕ್ಕೊಂದು ಅಪರಾಧ ನಡೆದಿದೆ

ಸೈಬರ್ ಅಪರಾಧ

2022	2023
31,516	86,420

↑ 31.2%

ದೇಶದಲ್ಲಿ 2023ರಲ್ಲಿ ಪ್ರತಿ 6 ನಿಮಿಷಕ್ಕೊಮ್ಮೆ ಸೈಬರ್ ಅಪರಾಧ ವರದಿಯಾಗಿದೆ

ಅಪಹರಣ ಮತ್ತು ಒತ್ತೆ

2022	2023
1,07,588	1,13,564

↑ 5.6%

2023ರಲ್ಲಿ ದೇಶದಲ್ಲಿ ಪ್ರತಿ 5 ನಿಮಿಷಕ್ಕೊಂದು ಅಪಹರಣ ಮತ್ತು ಒತ್ತೆ ಪ್ರಕರಣ ದಾಖಲಾಗಿದೆ

ಎಸ್‌ಸಿ: ದೌರ್ಜನ್ಯ ಹೆಚ್ಚಳ

2023ರಲ್ಲಿ ಪರಿಶಿಷ್ಟ ಜಾತಿಯವರ ಮೇಲೆ ನಡೆದ ಅಪರಾಧ ಪ್ರಕರಣಗಳ ಸಂಖ್ಯೆ ಶೇ 0.4ರಷ್ಟು ಹೆಚ್ಚಾಗಿದೆ. 2022ರಲ್ಲಿ 57,582 ದೂರುಗಳು ದಾಖಲಾಗಿದ್ದರೆ, 2023ರಲ್ಲಿ ಈ ಸಂಖ್ಯೆ 57,789ಕ್ಕೆ ಜಾಸ್ತಿಯಾಗಿದೆ. ಪರಿಶಿಷ್ಟ ಜಾತಿಯವರ ಮೇಲೆ ನಡೆದ ಅಪರಾಧ ಪ್ರಮಾಣ 2022ರಲ್ಲಿ 28.6ರಷ್ಟು ಇತ್ತು, ಮರು ವರ್ಷ ಇದು 28.7ಕ್ಕೆ ಏರಿಕೆ ಕಂಡಿದೆ.

ಕೊಲೆ ಪ್ರಕರಣ

2022	2023
28,522	27,721

↓ 2.8%

2023ರಲ್ಲಿ ದೇಶದಲ್ಲಿ ಪ್ರತಿ 19 ನಿಮಿಷಕ್ಕೆ ಒಂದರಂತೆ ಕೊಲೆ ಪ್ರಕರಣ ವರದಿಯಾಗಿದೆ

ಮಹಿಳೆಯರ ಮೇಲಿನ ದೌರ್ಜನ್ಯ

2022	4,45,256
2023	4,48,211

↑ 0.7%

2023ರಲ್ಲಿ ಮಹಿಳೆಯರ ವಿರುದ್ಧದ ಅಪರಾಧ ಪ್ರಕರಣಗಳು ಪ್ರತಿ 1.2 ನಿಮಿಷಕ್ಕೆ ಒಂದರಂತೆ ದಾಖಲಾಗಿವೆ

ಅತ್ಯಾಚಾರ ಪ್ರಕರಣ

2022	31,516
2023	29,670

↓ 5.9%

2023ರಲ್ಲಿ ದೇಶದಲ್ಲಿ ಪ್ರತಿ 18 ನಿಮಿಷಕ್ಕೆ ಒಂದು ಅತ್ಯಾಚಾರ ಪ್ರಕರಣ ವರದಿಯಾಗಿದೆ

ಮಕ್ಕಳ ಮೇಲಿನ ದೌರ್ಜನ್ಯ

2022	1,62,449
2023	1,77,335

↑ 9.2%

2023ರಲ್ಲಿ ಪ್ರತಿ 3 ನಿಮಿಷಕ್ಕೆ ಒಂದರಂತೆ ಮಕ್ಕಳ ವಿರುದ್ಧದ ಅಪರಾಧ ಪ್ರಕರಣ ದಾಖಲಾಗಿದೆ

ರಾಜ್ಯದಲ್ಲೂ ಹೆಚ್ಚಳ

2022ರ ಅಂಕಿ ಅಂಶಗಳಿಗೆ ಹೋಲಿಸಿದರೆ ಕರ್ನಾಟಕದಲ್ಲಿ 2023ರಲ್ಲಿ ದಾಖಲಾದ ಒಟ್ಟು ಅಪರಾಧ ಪ್ರಕರಣಗಳ ಸಂಖ್ಯೆಯಲ್ಲಿ ಶೇ 18.5ರಷ್ಟು ಹೆಚ್ಚಳವಾಗಿದೆ. ನಿಮಿಷಗಳ ಲೆಕ್ಕಾಚಾರದಲ್ಲಿ ಹೇಳುವುದಾದರೆ ಪ್ರತಿ 2.45 ನಿಮಿಷಕ್ಕೊಂದರಂತೆ ಅಪರಾಧ ಪ್ರಕರಣಗಳು ವರದಿಯಾಗಿವೆ.

ಮಹಿಳೆಯರು ಮತ್ತು ಮಕ್ಕಳ ಮೇಲಿನ ಅಪರಾಧ ಪ್ರಕರಣಗಳು ಕ್ರಮವಾಗಿ ಶೇ 14 ಮತ್ತು ಶೇ 11.7ರಷ್ಟು ಜಾಸ್ತಿಯಾಗಿರುವುದನ್ನು ಅಂಕಿ ಅಂಶಗಳು ಹೇಳುತ್ತಿವೆ.

ಸೈಬರ್ ಅಪರಾಧ ಪ್ರಕರಣಗಳು ಶೇ 74ರಷ್ಟು ಹೆಚ್ಚಳ ಕಂಡಿದೆ. ಕೊಲೆ ಪ್ರಕರಣ ಶೇ 5.8ರಷ್ಟು ಇಳಿಕೆಯಾಗಿದ್ದರೆ, ಅತ್ಯಾಚಾರ ಪ್ರಕರಣಗಳು ಶೇ 10ರಷ್ಟು ಹೆಚ್ಚಾಗಿದೆ.

ಸೈಬರ್ ಅಪರಾಧ

2022	2023
12,556	21,889

↑ 74%

ಕೊಲೆ ಪ್ರಕರಣ

2022	2023
1,404	1,322

↓ 5.8%

ಬೆಂಗಳೂರಿನಲ್ಲಿ...

ರಾಜಧಾನಿ ಬೆಂಗಳೂರಿನಲ್ಲೂ ಅಪರಾಧ ಪ್ರಕರಣಗಳು ಜಾಸ್ತಿಯಾಗಿವೆ. 2022ರಲ್ಲಿ 46,187 ಪ್ರಕರಣಗಳು ದಾಖಲಾಗಿದ್ದರೆ, 2023ರ ಹೊತ್ತಿಗೆ ಇದು 68,520ಕ್ಕೆ ಏರಿದೆ.

ಕಳ್ಳತನದ ಪ್ರಕರಣಗಳಲ್ಲಿ ಬೆಂಗಳೂರು (10,438) ಎರಡನೇ ಸ್ಥಾನದಲ್ಲಿದೆ. ದೆಹಲಿ ಮೊದಲ ಸ್ಥಾನದಲ್ಲಿದೆ.

ಮಕ್ಕಳ ಮೇಲಿನ ದೌರ್ಜನ್ಯ

2022	2023
7,988	8,929

↑ 11%

ಅಪಹರಣ ಮತ್ತು ಒತ್ತೆ

2022	2023
3,365	3,744

↑ 11%

ಅತ್ಯಾಚಾರ

2022	2023
595	656

↑ 10%

ಮಹಿಳೆಯರ ಮೇಲಿನ ದೌರ್ಜನ್ಯ

2022	2023
17,813	20,336

↑ 14%

ಶಿಕ್ಷೆಯಾಗುವುದು ಕಡಿಮೆ

ಮಹಿಳೆಯರ ಮೇಲಿನ ಅಪರಾಧ ಪ್ರಕರಣಗಳಲ್ಲಿ ಸಂತ್ರಸ್ತರಿಗೆ ನ್ಯಾಯ ಸಿಕ್ಕಿರುವ ಪ್ರಮಾಣ ಕಡಿಮೆ ಇದೆ. ಮಹಿಳೆಯರ ಮೇಲೆ ನಡೆದ ಅಪರಾಧಕ್ಕೆ ಸಂಬಂಧಿಸಿದಂತೆ (ರಾಜ್ಯಗಳು/ಕೇಂದ್ರಾಡಳಿತ ಪ್ರದೇಶಗಳು ಸೇರಿ) ದಾಖಲಾದ ಒಟ್ಟು ಪ್ರಕರಣಗಳಲ್ಲಿ ಪೊಲೀಸರು ತನಿಖೆ ನಡೆಸಿದ 6,35,159 ಪ್ರಕರಣಗಳ ಪೈಕಿ 4,48,211 ಪ್ರಕರಣಗಳು 2023ರದ್ದು. 1,85,961 ಅದಕ್ಕೂ ಹಿಂದಿನ ವರ್ಷದ ಬಾಕಿ ಪ್ರಕರಣಗಳು. ಅವುಗಳ ಜತೆಗೆ, 987 ವರ್ಗಾವಣೆಯಾದಂಥವು. ಈ ಪೈಕಿ ಶೇ 77.6ರಷ್ಟು ಪ್ರಕರಣಗಳಲ್ಲಿ ಆರೋಪಪಟ್ಟಿ ಸಲ್ಲಿಸಲಾಗಿದ್ದರೆ, ಶೇ 28.7ರಷ್ಟು ಬಾಕಿ ಇವೆ.

ನ್ಯಾಯಾಲಯದಲ್ಲಿ 2023ರ 3,50,937 ಪ್ರಕರಣಗಳ ಜತೆಗೆ ಅದಕ್ಕೂ ಹಿಂದಿನ ವರ್ಷಗಳ 21,84,756 ಪ್ರಕರಣಗಳು, 6,276 ಮತ್ತೆ ಆರಂಭಿಸಲಾದ ಪ್ರಕರಣಗಳು ಸೇರಿ ಒಟ್ಟು 25,35,693 ಪ್ರಕರಣಗಳನ್ನು ಇತ್ಯರ್ಥಪಡಿಸಲಾಗಿದೆ. 23,03,657 (ಶೇ 90.8) ಪ್ರಕರಣಗಳು ಬಾಕಿ ಇವೆ. ಮಹಿಳೆಯರ ಮೇಲಿನ ಪ್ರಕರಣಗಳಲ್ಲಿ ಶಿಕ್ಷೆಯಾದವರ ಪ್ರಮಾಣವು ಶೇ 21.3 ಮಾತ್ರ.

ರಾಜ್ಯದಲ್ಲಿ ಶೇ 3.2: ಕರ್ನಾಟಕದ ನ್ಯಾಯಾಲಯಗಳಲ್ಲಿ ಹಿಂದಿನ ವರ್ಷಗಳ 72,455 ಪ್ರಕರಣಗಳು, 2023ರ 16,888 ಪ್ರಕರಣಗಳು ಸೇರಿ ಒಟ್ಟು 89,343 ಪ್ರಕರಣಗಳನ್ನು ಇತ್ಯರ್ಥಪಡಿಸಲಾಗಿದೆ. ಇವುಗಳಲ್ಲಿ 428 ಪ್ರಕರಣಗಳಲ್ಲಿ ತಪ್ಪಿತಸ್ಥರಿಗೆ ಶಿಕ್ಷೆ ವಿಧಿಸಲಾಗಿದ್ದು, 18 ಪ್ರಕರಣಗಳು ಮುಕ್ತಾಯಗೊಂಡಿವೆ. 12,760 ಪ್ರಕರಣಗಳಲ್ಲಿ ಆರೋಪಿಗಳನ್ನು ಖುಲಾಸೆ ಮಾಡಲಾಗಿದೆ. ಶೇ 3.2 ಪ್ರಕರಣಗಳಲ್ಲಿ ಮಾತ್ರ ತಪ್ಪಿತಸ್ಥರಿಗೆ ಶಿಕ್ಷೆ ಆಗಿದ್ದು, ಶೇ 84.6 ಪ್ರಕರಣಗಳು ವಿಚಾರಣೆಗೆ ಬಾಕಿ ಇವೆ.

ಬದುಕಿಗೊಂದು ಗುರಿ ಬೇಕು

ನುಡಿ ಬೆಳಗು



ದೀಪಾ ಹಿರೇಗುತ್ತಿ

ಇರುವೆಯೊಂದು ತನಗಿಂತ ದೊಡ್ಡದಾದ ಕಾಳೊಂದನ್ನು ಹೊರಲಾರದೇ ಹೊತ್ತುಕೊಂಡು ಹೋಗುತ್ತಿತ್ತು. ಬಹಳ ದೂರದಿಂದ ಅದು ಆ ಕಾಳನ್ನು ತರುತ್ತಿತ್ತು. ಇರುವೆಗೆ ಸುಸ್ತಾಗಿಹೋಗಿತ್ತು. ಕಷ್ಟಪಟ್ಟು ಹಾಗೆಯೇ ಹೋಗುತ್ತಿರುವಾಗ ಒಂದು ಹಕ್ಕಿಯ ಗರಿಯೊಂದು ಹಾರಿ ಬಂದು ಇರುವೆಯ ಪಕ್ಕ ಬಿದ್ದಿತು. ಗಾಳಿಯಲ್ಲಿ ತೇಲಿ ಬಂದು ನೆಲದ ಮೇಲೆ ಬಿದ್ದ ಆ ಗರಿಯನ್ನು ನೋಡಿ ಇರುವೆಗೆ ಸ್ವಲ್ಪ ಅಸೂಯೆಯಾಯಿತು. ಅಲ್ಲ, ನಾನು ನೋಡಿದರೆ ಹೀಗೆ ನನ್ನ ಆಹಾರವನ್ನು ಎಳೆದುಕೊಂಡು ಹೋಗುತ್ತಿದ್ದೇನೆ. ಈ ಗರಿ ನೋಡು ಹೇಗೆ ಆರಾಮಾಗಿ ಎಲ್ಲ ಕಡೆ ಹಾರಿಕೊಂಡು ಹೋಗುತ್ತಿದೆ ಅಂದುಕೊಂಡಿತು. ಮತ್ತು ಅದನ್ನೇ ಆ ಗರಿಗೆ ಹೇಳಿತು, 'ನೀನೆಷ್ಟು ಹಗುರ, ನಿನಗೆ ಯಾವುದೇ ನಿರ್ಬಂಧಗಳಿಲ್ಲ, ನೀನೇ ಅದೃಷ್ಟವಂತ'.

ಆಗ ಆ ಗರಿ ಜೋರಾಗಿ ನಕ್ಕು ಹೇಳಿತು, 'ನೀನು ಹೇಳಿದ್ದು ಸರಿ, ಆದರೆ ಗಾಳಿ ಮನಸ್ಸಿಗೆ ಬಂದ ಕಡೆ ನನ್ನನ್ನು ತೆಗೆದುಕೊಂಡು ಹೋಗಿ ಬಿಸಾಕುತ್ತದಲ್ಲ... ನಾನೆಲ್ಲಿಗೆ ಹೋಗಬೇಕು ಅನ್ನುವುದನ್ನು ನಿರ್ಧರಿಸುವ ಸ್ವಾತಂತ್ರ್ಯ ನನಗಿಲ್ಲವಲ್ಲ. ನೀನೇ ಅದೃಷ್ಟವಂತೆ, ನಿನಗೆ ನಿನ್ನದೇ ಆದ ಮನೆ ಇದೆ. ಕಷ್ಟಪಟ್ಟು ಆಹಾರ ಸಂಗ್ರಹಿಸುತ್ತೀ, ಮಳೆಗಾಲದಲ್ಲಿ ಬೆಚ್ಚಗೆ ನಿನ್ನ ಗೂಡೊಳಗೆ ಕೂತು ತಿನ್ನುತ್ತೀ, ವಿಶ್ರಾಂತಿ ಪಡೆಯುತ್ತೀ. ಆದರೆ ನಾನು? ನನಗೆ ನನ್ನದೇ ಆದ ಮನೆಯೂ ಇಲ್ಲ, ಗುರಿಯೂ ಇಲ್ಲ. ಗಾಳಿ ಕೊಂಡೊಯ್ದತ್ತ ಹೋಗುತ್ತ ಇರುವುದು, ನನ್ನ ಮುಂದಿನ ನಿಲ್ದಾಣ ಯಾವುದೆಂಬ ಊಹೆಯೂ ನನಗಿಲ್ಲ'. ಮತ್ತೇನನ್ನೋ ಹೇಳಲಿಕ್ಕೆ ಹೊರಟಿತ್ತು ಅಷ್ಟು ಹೊತ್ತಿಗೆ ಬಲವಾದ ಗಾಳಿ ಬೀಸಿ ಗರಿಯನ್ನು ಹಾರಿಸಿಕೊಂಡು ಹೋಗಿ ದೂರದ ಒಂದು ಮುಳ್ಳಿನ ಪೊದೆಯ ಮೇಲೆ ಬೀಳಿಸಿತು. ಇರುವೆ ರಸ್ತೆ ಬದಿಯಲ್ಲಿ ತನ್ನ ಪ್ರಯಾಣ ಮುಂದುವರಿಸಿತು.

ನಿಜ, ಬದುಕಿಗಾಗಿ ಕಷ್ಟಪಡುವುದು, ಒತ್ತಡ ಅನುಭವಿಸುವುದು ಇದ್ದೇ ಇರುತ್ತದೆ. ಆದರೆ ಗುರಿಯಿಲ್ಲದ ಸ್ವಾತಂತ್ರ್ಯ ನಮ್ಮನ್ನು ಸಂಕಷ್ಟಕ್ಕೆ ಸಿಲುಕಿಸುತ್ತದೆ. ಸ್ವಚ್ಛಂದವಾಗಿ ವಿಹರಿಸುತ್ತಿರುವಂತೆ ಕಂಡ ಗರಿಗೆ ತನ್ನ ದಾರಿಯನ್ನಾಗಲೀ ಗುರಿಯನ್ನಾಗಲೀ ನಿರ್ಧರಿಸುವ ಸ್ವಾತಂತ್ರ್ಯವಿಲ್ಲ... ಇರುವೆ ಕಷ್ಟಪಡುತ್ತಿದ್ದರೂ ಅದಕ್ಕೊಂದು ಗುರಿಯಿದೆ, ಅದರದ್ದೇ ಆದ ಒಂದು ಬದುಕಿದೆ. ಸ್ವಾತಂತ್ರ್ಯವೆಂದರೆ ಬೇಕಾಬಿಟ್ಟ ಇರುವುದಲ್ಲ, ಬದುಕಿಗೊಂದು ಗಮ್ಯವಿರಬೇಕು. ಅದನ್ನು ಸಾಧಿಸಲು ಶಿಸ್ತಿರಬೇಕು, ಸತತ ಪ್ರಯತ್ನವಿರಬೇಕು.

ಯಾರದ್ದೋ ಬದುಕು ಸುಲಭ ಎಂದುಕೊಂಡು ನಮ್ಮ ಬದುಕನ್ನು ನೋಡಿ ಅಳುತ್ತ ಕೂರುವುದು ಮೂರ್ಖತನ. ಹಗುರವಾಗಿ ಹಾರುವ ಆ ಪುಟ್ಟ ರೆಕ್ಕೆಯ ಬದುಕಿನಂತೆ ಸುಖಿಗಳೆಂದು ಕಾಣುವ ಜನರ ಬದುಕಿನಲ್ಲಿ ನಡೆಯುತ್ತಿರುವ ತಲ್ಲಣಗಳು ಬೇರೆಯವರಿಗೆ ಕಾಣುವುದಿಲ್ಲ. ಹೀಗಾಗಿ ನಮ್ಮ ಬದುಕನ್ನು ಬೇರೆಯವರಿಗೆ ಹೋಲಿಸಿಕೊಳ್ಳದೇ ಸವಾಲುಗಳನ್ನು ಎದುರಿಸುತ್ತ, ಸಂತೃಪ್ತಿಯಿಂದ ಮುನ್ನಡೆಯುವುದು ಅತ್ಯುತ್ತಮ ಆಯ್ಕೆ.

ಗುಂಡಣ್ಣ

ರಾಷ್ಟ್ರೀಯ

ದಲಿತ ವ್ಯಕ್ತಿ ಹತ್ಯೆ: ಐವರ ಸೆರೆ

ರಾಯ್‌ಬರೇಲಿ/ಲಖನೌ (ಪಿಟಿಐ): ಕಳ್ಳನೆಂದು ಭಾವಿಸಿ ದಲಿತ ವ್ಯಕ್ತಿಯನ್ನು ಗ್ರಾಮಸ್ಥರು ಹೊಡೆದು ಕೊಂದ ಘಟನೆ ಉತ್ತರ ಪ್ರದೇಶದ ರಾಯ್‌ಬರೇಲಿಯಲ್ಲಿ ನಡೆದಿದೆ ಎಂದು ಪೊಲೀಸರು ಸೋಮವಾರ ತಿಳಿಸಿದರು.

ಮೃತ ವ್ಯಕ್ತಿಯನ್ನು ಫತೇಹ್‌ಪುರದ ನಿವಾಸಿ ಹರಿ ಓಂ ಎಂದು ಗುರುತಿಸಲಾಗಿದೆ.

'ಮನೆಗಳ ಕಳ್ಳತನಕ್ಕಾಗಿ ಗುಂಪೊಂದು ಡ್ರೋನ್ ಬಳಕೆ ಮಾಡುತ್ತಿದೆ ಎಂಬ ವದಂತಿ ಹಬ್ಬಿದ್ದ ಕಾರಣ 40 ವರ್ಷದ ದಲಿತ ವ್ಯಕ್ತಿಯನ್ನು ತಪ್ಪಾಗಿ ತಿಳಿದು ಬಡಿದು ಕೊಲ್ಲಲಾಗಿದೆ ಎಂದು ಹೇಳಿದರು.

ಪ್ರಕರಣಕ್ಕೆ ಸಂಬಂಧಿಸಿದಂತೆ ಐವರನ್ನು ಬಂಧಿಸಲಾಗಿದೆ, ಮೂವರು ಪೊಲೀಸ್ ಸಿಬ್ಬಂದಿಯನ್ನು ಅಮಾನತು ಮಾಡಲಾಗಿದೆ. ಆರೋಪಿಗಳಲ್ಲಿ ದಲಿತರು, ಹಿಂದುಳಿದ ವರ್ಗದರೂ ಸೇರಿದ್ದಾರೆ ಎಂದು ತಿಳಿಸಿದರು.

ಕಳ್ಳರ ಗುಂಪಿನ ಬಗ್ಗೆ ವದಂತಿ ಹಬ್ಬಿದ್ದರಿಂದ ಕೆಲ ಗ್ರಾಮಸ್ಥರು ರಾತ್ರಿ ಹೊತ್ತು ಕಾವಲು ಕಾಯುತ್ತಿದ್ದರು. ಸಂತ್ರಸ್ತ ಹರಿ ಓಂ ಅವರು ಬುಧವಾರ ರಾತ್ರಿ ಗ್ರಾಮದಲ್ಲಿ ಹೋಗುತ್ತಿದ್ದ ವೇಳೆ ಗ್ರಾಮಸ್ಥರು ತಡೆದು ಬಡಿಗೆಗಳಿಂದ ಮನಬಂದಂತೆ ಥಳಿಸಿದ್ದಾರೆ ಎಂದು ಮಾಹಿತಿ ನೀಡಿದರು.

ಈ ವಿಡಿಯೊ ಸಾಮಾಜಿಕ ಜಾಲತಾಣಗಳಲ್ಲಿ ಹರಿದಾಡುತ್ತಿದೆ. ಗುಂಪು 'ಬಾಬಾವಾಲೆ' ಎಂದು ಹೇಳುವಂತೆ ಒತ್ತಾಯಿಸಿದರೂ ಸಂತ್ರಸ್ತ ಯುವಕ ರಾಹುಲ್ ಗಾಂಧಿ ಅವರ ಹೆಸರನ್ನು ಪದೇ ಪದೇ ಹೇಳುತ್ತಿರುವ ದೃಶ್ಯ ವಿಡಿಯೊದಲ್ಲಿದೆ.

ಹರಿ ಓಂ ಅವರ ಮೃತದೇಹವು ಗುರುವಾರ ಬೆಳಿಗ್ಗೆ ಸಮೀಪದ ರೈಲು ಹಳಿ ಪಕ್ಕ ಪತ್ತೆಯಾಗಿದೆ. ಅವರ ಬಟ್ಟೆ ಹರಿದಿತ್ತು, ಮೈಮೇಲೆ ಗಾಯದ ಗುರುತುಗಳಿದ್ದವು ಎಂದರು.

ಘಟನೆ ಸಂಬಂಧಿಸಿದಂತೆ ಕೊಲೆ ಪ್ರಕರಣವನ್ನು ದಾಖಲಿಸಲಾಗಿದೆ ಎಂದು ಹೆಚ್ಚುವರಿ ಪೊಲೀಸ್ ವರಿಷ್ಠಾಧಿಕಾರಿ ಸಂಜೀವ್ ಕುಮಾರ್ ಸಿನ್ಹಾ ಅವರು ತಿಳಿಸಿದರು.

ಯೋಗಿ ರಾಜೀನಾಮೆಗೆ ಕಾಂಗ್ರೆಸ್ ಆಗ್ರಹ

ಲೋಕಸಭೆಯ ವಿರೋಧ ಪಕ್ಷದ ನಾಯಕ ರಾಹುಲ್ ಗಾಂಧಿ ಅವರ ಕ್ಷೇತ್ರವಾದ ರಾಯ್‌ಬರೇಲಿಯಲ್ಲಿ ದಲಿತ ಯುವಕನನ್ನು ಬಡಿದುಕೊಂದ ಪ್ರಕರಣವು ರಾಜಕೀಯ ವಿವಾದದ ಸ್ವರೂಪ ಪಡೆದುಕೊಂಡಿದೆ.

'ಉತ್ತರ ಪ್ರದೇಶದಲ್ಲಿ ಕಾನೂನು ಸುವ್ಯವಸ್ಥೆ ಸಂಪೂರ್ಣ ಕುಸಿದುಬಿದ್ದಿದೆ. ಮುಖ್ಯಮಂತ್ರಿ ಯೋಗಿ ಆದಿತ್ಯನಾಥ ಅವರು ಕೂಡಲೇ ರಾಜೀನಾಮೆ ನೀಡಬೇಕು. ಪ್ರಕರಣದ ತನಿಖೆಯ ಹೊಣೆಯನ್ನು ವಿಶೇಷ ತನಿಖಾ ದಳಕ್ಕೆ (ಎಸ್‌ಐಟಿ) ವಹಿಸಬೇಕು' ಎಂದು ಆಗ್ರಹಿಸಿದೆ.

ಸಂತ್ರಸ್ತನ ಕುಟುಂಬಸ್ಥರಿಗೆ ₹1 ಕೋಟಿ ಪರಿಹಾರ ಮತ್ತು ಸರ್ಕಾರಿ ಉದ್ಯೋಗ ನೀಡಬೇಕು ಎಂದು ಒತ್ತಾಯಿಸಿದೆ.

ಈ ಮಧ್ಯೆ ಹತ್ಯೆಯು ಬಿಜೆಪಿಯ 'ದಲಿತ ವಿರೋಧಿ ಮನಸ್ಥಿತಿ'ಯ ಸಂಕೇತ ಎಂದು ಬಿಂಬಿಸಲು ಕಾಂಗ್ರೆಸ್ ಯೋಜನೆ ರೂಪಿಸುತ್ತಿದೆ. ರಾಜ್ಯ ಸರ್ಕಾರವನ್ನು ಇಕ್ಕಟ್ಟಿಗೆ ಸಿಲುಕಿಸುವ ಉದ್ದೇಶದಿಂದ ರಾಜ್ಯದಾದ್ಯಂತ ಪ್ರತಿಭಟನೆ ಆರಂಭಿಸಿದೆ.

ರಾಹುಲ್ ಗಾಂಧಿ ಮತ್ತು ರಾಜ್ಯ ಕಾಂಗ್ರೆಸ್ ಅಧ್ಯಕ್ಷ ಅಜಯ್ ರಾಯ್ ಅವರು ಸಂತ್ರಸ್ತನ ಕುಟುಂಬಸ್ಥರೊಂದಿಗೆ ಮಾತನಾಡಿ, ಎಲ್ಲ ರೀತಿಯ ನೆರವು ನೀಡುವುದಾಗಿ ಭರವಸೆ ನೀಡಿದ್ದಾರೆ.

ಅಪಘಾತ: ವಿಜಯ್ ದೇವರಕೊಂಡ ಪಾರು



ವಿಜಯ್ ದೇವರಕೊಂಡ

ಹೈದರಾಬಾದ್ (ಪಿಟಿಐ): ವಿಜಯ್ ದೇವರಕೊಂಡ ಅವರು ಪ್ರಯಾಣಿಸುತ್ತಿದ್ದ ಕಾರು ಸೋಮವಾರ ಅಪಘಾತಕ್ಕೀಡಾಗಿದೆ. ಅದೃಷ್ಟವಶಾತ್ ನಟ ಕೂದಲೆಳೆಯ ಅಂತರದಲ್ಲಿ ಅಪಾಯದಿಂದ ಪಾರಾಗಿದ್ದಾರೆ ಎಂದು ಪೊಲೀಸರು ತಿಳಿಸಿದ್ದಾರೆ.

ತೆಲಂಗಾಣದ ಜೋಗುಳಂಬ ಗದ್ವಾಲ್ ಜಿಲ್ಲೆಯ ಉಂಡವಲ್ಲಿಯಲ್ಲಿ ಎನ್‌ಎಚ್ -44ನಲ್ಲಿ (ಹೈದರಾಬಾದ್-ಬೆಂಗಳೂರು ಹೆದ್ದಾರಿ) ಈ ಘಟನೆ ಸಂಭವಿಸಿದೆ.

ಪುಟ್ಟಪರ್ತಿಯ ಶ್ರೀ ಸತ್ಯಸಾಯಿ ಬಾಬಾ ದೇವಾಲಯಕ್ಕೆ ಭಾನುವಾರ ಭೇಟಿ ನೀಡಿದ್ದ ಅವರು ಹೈದರಾಬಾದ್‌ಗೆ ಪ್ರಯಾಣಿಸುತ್ತಿದ್ದ ವೇಳೆ ಮಧ್ಯಾಹ್ನ 3 ಗಂಟೆ ವೇಳೆ ಬೊಲೆರೊ ಕಾರು ಏಕಾಏಕಿ ಬಲಕ್ಕೆ ತಿರುಗಿಸಿದ ವೇಳೆ ವಿಜಯ್ ಪ್ರಯಾಣಿಸಿದ್ದ 'ಲೆಕ್ಸಸ್' ಕಾರು ಡಿಕ್ಕಿ ಹೊಡೆದಿದೆ. ಈ ಬಗ್ಗೆ ವಿಜಯ್ ಅವರ ಅವರ ಕಾರು ಚಾಲಕ ಸ್ಥಳೀಯ ಪೊಲೀಸರಿಗೆ ದೂರು ನೀಡಿದ್ದಾರೆ. ಪ್ರಕರಣ ದಾಖಲಿಸಿಕೊಂಡ ಪೊಲೀಸರು ತನಿಖೆ ಆರಂಭಿಸಿದ್ದಾರೆ. ಬಳಿಕ ವಿಜಯ್ ದೇವರಕೊಂಡ ಕೂಡ ಸುರಕ್ಷಿತವಾಗಿ ಹೈದರಾಬಾದ್ ತಲುಪಿದ್ದಾರೆ.

ಈ ಕುರಿತು 'ಎಕ್ಸ್'ನಲ್ಲಿ ಮಾಹಿತಿ ನೀಡಿರುವ ಅವರು 'ನನ್ನ ಕಾರು ಅಪಘಾತಕ್ಕೀಡಾಯಿತು. ನಾವೆಲ್ಲರೂ ಅಪಾಯದಿಂದ ಪಾರಾಗಿದ್ದೇವೆ. ಈಗ ಮನೆಗೆ ತಲುಪಿದ್ದೇವೆ. ನೀವೂ ಈ ಸುದ್ದಿಯಿಂದ ಆತಂಕಕ್ಕೆ ಒಳಗಾಗಬೇಡಿ' ಎಂದು ತಿಳಿಸಿದ್ದಾರೆ.

ಪದಬಂಧ 6186

ವಿದ್ಯಾ ವಿನಯ್

ಎಡದಿಂದ ಬಲಕ್ಕೆ

1.ಸಾಧಕನಿಗುಂಟಾದ ಅಡ್ಡಿ! (3)
3.ಕೊನೆಗೆ ಬೆಲೆಯಿಟ್ಟಾಗಲೇ ಮಡಿಕೆ ಕಂಡೀತು (3)
5.ಪದಾತಿ ಹತ್ತಿರವಿರುವ ಗಂಡ (2)
6.ತರ್ಕ ಮಾಡುತ್ತಿರುವ ವ್ಯಾಪಾರಿ (3)
7.ನೆನಪಲ್ಲೇ ಇರುವ ಕಾರಣ (2)
9.ವಸತಿ ಹತ್ತಿರ ಕಾಣಿಸಿದ ತರುಣಿ (3)
10.ತಾಂಬೂಲವಿಲ್ಲಿ ಉಲ್ಟಾಪಲ್ಟಾ ಆಗಿದೆ (3)
11.ಹರಕೆ ಹೊತ್ತಿರುವವನ ಮೆಟ್ಟು (2)
13.ಹೆಣ್ಣಿಗೆ ಬೇಕಾಗಿರುವ ಬಾಚಣಿಕೆ (3)
15.ಮಾವನ ಮರ್ಯಾದೆ (2)
16.ಪೈರು ಕೊಯ್ಯುವುದು (3)
17.ಲೋಭಿ ಇಲ್ಲಿದ್ದಾನೆ (3)

ಮೇಲಿಂದ ಕೆಳಕ್ಕೆ

1.ಹೆರಿಗೆಯಾದ ಹೆಂಗಸು (3)
2.ಕಕ್ಕಾಬಿಕ್ಕಿಯಾಗಿ ನಿಂತಿರುವ ಪೆದ್ದ! (3)
3.ಪದ ಹೇಳಿದ್ದಕ್ಕೆ ಬಹುಮಾನವಾಗಿ ಸಿಕ್ಕ ಬಿಲ್ಲೆ (3)
4.ಸಾಗಿಸುವಿಕೆಗೊಂದು ಪರ್ಯಾಯ ಪದ (3)
5.ಹಿಂದಿನಿಂದ ಉಳಿದು ಬಂದ ಪ್ರಾಣಿ ಪಕ್ಷಿಗಳ ಅವಶೇಷ (5)
8.ವಿದ್ಯಾರ್ಹತೆಯ ಪ್ರಶಸ್ತಿಯನ್ನು ನೀಡುವುದು (5)
12.ಅಗಸ ಇಲ್ಲಿದ್ದಾನೆ (3)
13.ಧಾನ್ಯಗಳನ್ನು ತುಂಬಿಡುವ ಕಣಜ (3)
14.ಮರಮಟ್ಟುಗಳನ್ನು ತಿಂದು ಮಣ್ಣುಮಾಡುವ ಹುಳು (3)
15.ತಿಂಗಳಿಗೊಮ್ಮೆ ಜರುಗುವಂಥದ್ದು (3)



6185ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ:

2.ಬಳಸುಮಾತು 4.ಬಸವಣ್ಣ 6.ಅಂಗ
7.ಅವಿನಾಭಾವಸಂಬಂಧ
10.ಕೂಡಲಸಂಗಮದೇವ 13.ಕಸು
14.ನಳಪಾಕ 16.ಜಲತರಂಗ

ಮೇಲಿಂದ ಕೆಳಕ್ಕೆ:

1.ಮಾಸ 2.ಬಣ್ಣ 3.ತುರಗ
4.ಬಡವಿ 5.ಚಿಸಂ 6.ಅಂಧ
7.ಅಕ್ಕ 8.ವಭಸಂ
9.ಭಾವ 10.ಕೂಸು
11.ಲಕ್ಷ 12.ದೇಶಿಕ
13.ಕಣಜ 14.ನಗ 15.ಪಾದ್ಯ

ಸುಡೊಕು 6570

ಆಡುವುದು ಹೀಗೆ: ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

3		1		7		6		2
	6	5	2		9		8	1
2				1			9	
	5		7			8		
				8		5		9
8		6		9				
6				5		9		7
		8					5	
5		3		6		1		8

6569 ಸುಡೊಕು

9	2	1	6	5	7	8	4	3
8	5	7	3	4	9	6	2	1
6	4	3	2	1	8	9	5	7
1	3	2	5	9	4	7	8	6
5	8	6	1	7	2	3	9	4
7	9	4	8	3	6	2	1	5
3	1	8	9	6	5	4	7	2
2	7	5	4	8	3	1	6	9
4	6	9	7	2	1	5	3	8

ದಿನ ಭವಿಷ್ಯ

ವಿದ್ಯಾಶಂಕರ ಸೋಮಯಾಜಿ, ಕಮ್ಮರಡಿ

07 ಅಕ್ಟೋಬರ್ 2025 ಮಂಗಳವಾರ, ಶ್ರೀ ವಿಶ್ವಾವಸು ನಾಮ ಸಂವತ್ಸರ ದಕ್ಷಿಣಾಯನ ಶರತ್ ಋತು ತಿಥಿ: ಆಶ್ವಯುಜ ಶುಕ್ಲ ಪೂರ್ಣಿಮಾ ಗಂ. 9-18 ನಂತರ ಆಶ್ವಯುಜ ಕೃಷ್ಣ ಪ್ರತಿಪದ್ ಗಂ. 29-54 ನಕ್ಷತ್ರ: ರೇವತಿ ಗಂ. 25-28, ಯೋಗ: ಧ್ರುವ ಗಂ. 9-31 ಕನ್ಯಾ ಮಾಸದ 20 ನೇ ದಿನ. ಮಳೆ ನಕ್ಷತ್ರ : ಹಸ್ತಾ 3 ನೇ ಪಾದ. ರಾಹುಕಾಲ: ಮಧ್ಯಾಹ್ನ 03-00 04-30 ಸೂರ್ಯೋದಯ : 06-24 ಸೂರ್ಯಾಸ್ತ : 06-13, ಮುಸ್ಲಿಂ ದಿನಾಂಕ : 14 ರಬಿಯುಸ್ಸಾನಿ , ದಿನ ವಿಶೇಷ : ಮಹರ್ಷಿ ವಾಲ್ಮೀಕಿ ಜನ್ಮದಿನ, ಅದೃಷ್ಟ ಸಂಖ್ಯೆ : 5, 9

ಮೇಷ: ಉಳಿತಾಯದ ಹೆಸರಲ್ಲಿ ದೊಡ್ಡ ಮೇಳಗಳಲ್ಲಿ ಖರೀದಿ ಮಾಡಲು ಹೋಗಿ ಮೋಸ ಹೋಗದಿರಿ. ತೈಲ ವ್ಯಾಪಾರಿಗಳು ಲಾಭ ಪಡೆಯುವಲ್ಲಿ ಯಶಸ್ವಿಯಾಗುವಿರಿ. ನಿರುದ್ಯೋಗಿಗಳಿಗೆ ದೇವತಾರಾಧನೆ ಮುಖ್ಯ.

ವೃಷಭ: ಆದಾಯದಲ್ಲಿ ಕೊರತೆ, ಅಧಿಕ ಖರ್ಚು-ವೆಚ್ಚಗಳು ನಿದ್ದೆಯನ್ನು ಕೆಡಿಸುತ್ತದೆ. ಕೃಷಿಕರ ಉಲ್ಲಾಸ ಜೀವನಕ್ಕೆ ಸಣ್ಣ-ಪುಟ್ಟ ಅಡೆತಡೆಗಳು ಉಂಟಾಗಬಹುದು. ಬಾಲ್ಯದ ಕಹಿ ಘಟನೆ ಮರುಕಳಿಸುವ ಸಾಧ್ಯತೆ ಇದೆ.

ಮಿಥುನ: ಕಂಕಣ ಭಾಗ್ಯ ಅರಸಿ ಬಂದಾಗ ನಿರಾಕರಿಸುವಂಥ ಮೂರ್ಖತನದ ಕೆಲಸಗಳನ್ನು ಮಾಡಬೇಡಿ. ಕಾರ್ಯವನ್ನು ಶುರು ಮಾಡಿದ ನಂತರ ಪದೇ ಪದೇ ನಿಲ್ಲಿಸುವಂಥ ಸನ್ನಿವೇಶಗಳು ಎದುರಾಗುತ್ತಲೇ ಇರುವ ಸಾಧ್ಯತೆಗಳಿವೆ.

ಕರ್ಕಾಟಕ: ಬಂಗಾರದ ಬೆಲೆಯ ಹಾವು ಏಣಿ ಆಟವು ಒಂದು ರೀತಿಯ ಪರಿಣಾಮವನ್ನು ಉಂಟುಮಾಡುವ ಸಾಧ್ಯತೆಗಳಿವೆ. ಮನಸ್ಸು ಕೆಟ್ಟ ಆಲೋಚನೆ ಹಾಗೂ ವಂಚನೆ ಮಾಡದಂತೆ ತಡೆಯೊಡ್ಡಿ.

ಸಿಂಹ: ಸ್ಟಾರ್ಟಪ್‌ಗಳನ್ನು ಪ್ರಾರಂಭ ಮಾಡಬೇಕೆಂದು ಯೋಜನೆ ಹೊಂದಿರುವವರು ಸಮಾನ ಮನಸ್ಕರೊಂದಿಗೆ ಕೂತು ಸಮಾಲೋಚನೆ ನಡೆಸಿ. ಹಲವು ಪ್ರಶ್ನೆಗಳಿಗೆ ನಿಮ್ಮದೇ ಧಾಟಿಯಲ್ಲಿ ಹಾರಿಕೆಯ ಉತ್ತರ ನೀಡುವಿರಿ.

ಕನ್ಯಾ: ಗೃಹ ಹಾಗೂ ಕಟ್ಟಡ ನಿರ್ಮಾಣ ಕಾರ್ಯಗಳಂಥ ದೊಡ್ಡ ಕಾರ್ಯಗಳ ಮೇಲೆ ಗಮನ ಹರಿಸಿದರೆ ಕೆಲಸವು ಬೇಗ ಪೂರ್ಣವಾಗುವ ಸಾಧ್ಯತೆಗಳಿವೆ ಆತ್ಮೀಯರನ್ನು ಭೇಟಿ ಮಾಡಲಿದ್ದೀರಿ.

ತುಲಾ: ಕನ್ಯಾನ್ವೇಷಣೆಯ ಹಂತದಲ್ಲಿರುವ ಯೋಗ್ಯ ಹುಡುಗನಿಗೆ ಅನುರೂಪ ಕನ್ಯೆಯು ಲಭ್ಯವಾಗುವ ಸಂಭವವಿದೆ. ವಿದ್ಯಾರ್ಥಿಗಳು ವಿದ್ಯಾಭ್ಯಾಸದಲ್ಲಿ ಶ್ರದ್ಧೆ ವಹಿಸಿದರೆ ಗೆಲುವು, ಯಶಸ್ಸು ಇರುತ್ತದೆ.

ವೃಶ್ಚಿಕ: ಮಾರ್ಗಮಧ್ಯದಲ್ಲಿ ಎದುರಾದ ಸಮಸ್ಯೆಯನ್ನು ಪರಿಹರಿಸಲು ಬಾಲ್ಯದ ಸ್ನೇಹಿತನ ಸಹಾಯ ಕೇಳಿದರೆ ಪರಿಹಾರವಾಗುವುದು. ಯಾವ ಯೋಚನೆಯೂ ಮಾಡದೆ ಶ್ರೀವಿಷ್ಣುಸಹಸ್ರನಾಮ ಪಠಿಸಿ.

ಧನು: ಅತೀಂದ್ರಿಯಗಳ ಶಕ್ತಿಯೋ ಎಂಬಂತೆ ಗೃಹದ ಪಾಯಗಳಾಗುವ ಸಂಭವ ವಿದ್ದಲ್ಲಿ ಅವುಗಳ ಮುನ್ಸೂಚನೆಗಳು ದೊರೆಯುತ್ತವೆ. ದೀರ್ಘಕಾಲಿಕ ಅನಾರೋಗ್ಯದ ಸಮಸ್ಯೆಗಳಿಗೆ ಮಗಳಿಂದ ಪರಿಹಾರದ ದಾರಿಗಳು ಕಾಣುತ್ತದೆ.

ಮಕರ: ದೇವಸ್ಥಾನಗಳನ್ನು ಭೇಟಿ ಮಾಡುವ ನೆಪದಲ್ಲಿ ಕದಡಿದ ಮನಸ್ಸು ತಿಳಿಯಾಗುವುದು. ಸಹೋದರರ ಜೊತೆಗೆ ಮಾಡಿಕೊಂಡ ವ್ಯಾಜ್ಯವನ್ನು ಮೂರನೆ ವ್ಯಕ್ತಿಗಳು ಆಡಿಕೊಳ್ಳುವುದಕ್ಕಿಂತ ಮುಂಚೆ ಪರಿಹರಿಸಿಕೊಳ್ಳಿ

ಕುಂಭ: ಮನೆಯಲ್ಲಿ ನಡೆಯುವ ಶುಭ ಕಾರ್ಯಗಳಲ್ಲಿ ಅನಿವಾರ್ಯವಾಗಿ ಗೈರಾಗುವ ಸಂದರ್ಭ ಬರಲಿದೆ. ಉತ್ತಮ ವ್ಯಕ್ತಿಗಳ ಜತೆ ಉತ್ತಮ ವಿಷಯಗಳ ವಿನಿಮಯವು ಮನಸ್ಸನ್ನು ಪ್ರಫುಲ್ಲವಾಗಿರಿಸುತ್ತದೆ.

ಮೀನ: ಸಾಹಸ ಮಾಡಿ ಪಡೆದ ವಸ್ತುವನ್ನು ಸಾಹಸ ಮಾಡಿಯೇ ಉಳಿಸಿಕೊಳ್ಳ-ಬೇಕಾದ ಪರಿಸ್ಥಿತಿ ಎದುರಾಗುತ್ತದೆ. ಇತರರಿಗೆ ಸಲಹೆ ಕೊಡುವಾಗ ಸೂಕ್ಷ್ಮವಾಗಿ ಇರುವ ಮತಿಯು ನಿಮ್ಮದೆ ಸಮಸ್ಯೆಗಳಿಗೆ ಕೈಕೊಡುವುದು.

ಷೇರುಪೇಟೆ ವಹಿವಾಟು



ಎನ್‌ಎಸ್‌ಇ ನಿಫ್ಟಿ
ಹಿಂದಿನ ಅಂತ್ಯ: 24,894
ಇಂದಿನ ಅಂತ್ಯ: 25,077
ದಿನದ ಗರಿಷ್ಠ: 25,095
183

ಮೊಟ್ಟೆ ಧಾರಣೆ (ಎನ್‌ಇಸಿಸಿ)
ಬೆಂಗಳೂರು: 100 ಕ್ಕೆ ₹560; 12 ಕ್ಕೆ ₹75
ಮೈಸೂರು: 100 ಕ್ಕೆ ₹570

ರಾಮನಗರ ರೇಷ್ಮೆಗೂಡು
ಮಿಶ್ರತಳಿ (ಪ್ರ.ಕೆ.ಜಿ) ₹355-642
ದ್ವಿತಳಿ (ಬಿ.ವಿ) ₹412-823

ಎನ್.ಆರ್.ಪುರ ರಬ್ಬರ್ (ಪ್ರತಿ ಕೆ.ಜಿ)
ಆರ್‌ಎಸ್‌ಎಸ್-4 ₹182
ಆರ್‌ಎಸ್‌ಎಸ್-5 ₹177
ಗುಡ್ ಲಾಟ್ ₹164

ಮುಂಬೈ ಖಾದ್ಯ ತೈಲ (ಆವರಣದಲ್ಲಿ ಹಿಂದಿನ ವಹಿವಾಟಿನ ದರ)
ಶೇಂಗಾ (ರಿಫೈನ್ಡ್) ₹1350 (1330)
ಸೋಯಾ (ರಿಫೈನ್ಡ್) ₹1280 (1275)
ಸೂರ್ಯಕಾಂತಿ (ರಿಫೈನ್ಡ್) ₹1440 (1425)
ಪಾಮೋಲಿನ್ ₹1275 (1270)

ಮುದ್ರೆಮನೆ ಕಾಫಿ
ಎಪಿ ₹30000
ಎಪಿ ₹15400
ಆರ್‌ಪಿ ₹20250
ಆರ್‌ಸಿ ₹11350

5 ಲಕ್ಷ ವಾಹನ ತಯಾರಿಸಿದ ಏಥರ್

ಪ್ರಜಾವಾಣಿ ವಾರ್ತೆ

ಬೆಂಗಳೂರು: ವಿದ್ಯುತ್ ಚಾಲಿತ ದ್ವಿಚಕ್ರ ವಾಹನಗಳ ತಯಾರಿಕಾ ಕಂಪನಿ ಏಥರ್, 5 ಲಕ್ಷ ವಾಹನ ತಯಾರಿಸಿದ ದಾಖಲೆ ಬರೆದಿರುವುದಾಗಿ ಹೇಳಿದೆ.

ತಮಿಳುನಾಡಿನ ಹೊಸೂರಿನಲ್ಲಿರುವ ತಯಾರಿಕಾ ಘಟಕದಲ್ಲಿ ಇ.ವಿ. ಸ್ಕೂಟರ್ ರಿಜ್ಟಾವನ್ನು ಗ್ರಾಹಕರಿಗೆ ಹಸ್ತಾಂತರಿಸುವ ಮೂಲಕ 5 ಲಕ್ಷ ವಾಹನಗಳ ತಯಾರಿಕೆಯ ಮೈಲಿಗಲ್ಲು ಕ್ರಮಿಸಲಾಗಿದೆ ಎಂದು ಕಂಪನಿ ತಿಳಿಸಿದೆ. ಈ ದ್ವಿಚಕ್ರ ವಾಹನವು ಕಂಪನಿ ತಯಾರಿಸಿದ 5 ಲಕ್ಷದ ವಾಹನವಾಗಿದೆ ಎಂದು ಹೇಳಿದೆ.

'5 ಲಕ್ಷ ವಿದ್ಯುತ್ ಚಾಲಿತ ದ್ವಿಚಕ್ರ ವಾಹನಗಳ ತಯಾರಿಕೆಯ ಗಡಿ ದಾಟಿರುವುದು ಏಥರ್‌ಗೆ ಬಹುದೊಡ್ಡ ಮೈಲುಗಲ್ಲು' ಎಂದು ಕಂಪನಿಯ ಸಹ ಸಂಸ್ಥಾಪಕ ಮತ್ತು ಸಿಟಿಒ ಸ್ವಪ್ನಿಲ್ ಜೈನ್ ಹೇಳಿದ್ದಾರೆ.

'ಪೆಟ್ರೋಲ್ ವಾಹನದ ಸಮಕ್ಕೆ ಇ.ವಿ ದರ'

ದೇಶದ ವಾಹನೋದ್ಯಮದ ಗಾತ್ರ ₹22 ಲಕ್ಷ ಕೋಟಿ
ಐದು ವರ್ಷದಲ್ಲಿ ಜಗತ್ತಿನಲ್ಲಿ ಮೊದಲ ಸ್ಥಾನಕ್ಕೇರಿಸಲು ಗುರಿ: ಗಡ್ಕರಿ

ನವದೆಹಲಿ (ಪಿಟಿಐ): 'ಮುಂದಿನ ನಾಲ್ಕರಿಂದ ಆರು ತಿಂಗಳಲ್ಲಿ ವಿದ್ಯುತ್ ಚಾಲಿತ ವಾಹನಗಳ (ಇ.ವಿ) ಬೆಲೆಯು ಪೆಟ್ರೋಲ್ ವಾಹನಗಳ ಬೆಲೆಗೆ ಸಮನಾಗುವ ನಿರೀಕ್ಷೆ ಇದೆ' ಎಂದು ಕೇಂದ್ರ ರಸ್ತೆ ಸಾರಿಗೆ ಮತ್ತು ಹೆದ್ದಾರಿ ಸಚಿವ ನಿತಿನ್ ಗಡ್ಕರಿ ಹೇಳಿದ್ದಾರೆ.

ಮುಂದಿನ ಐದು ವರ್ಷದೊಳಗೆ ದೇಶದ ವಾಹನೋದ್ಯಮವನ್ನು ಜಗತ್ತಿನಲ್ಲಿ ಮೊದಲ ಸ್ಥಾನಕ್ಕೆ ತರುವ ಗುರಿ ಹೊಂದಲಾಗಿದೆ ಎಂದು ಸೋಮವಾರ ನಡೆದ 'ಫಿಕ್ಕಿ ಉನ್ನತ ಶಿಕ್ಷಣ ಶೃಂಗಸಭೆ–2025'ರಲ್ಲಿ ಹೇಳಿದ್ದಾರೆ.

'ನಾನು ಸಾರಿಗೆ ಸಚಿವನಾಗಿ ಅಧಿಕಾರ ಸ್ವೀಕರಿಸಿದಾಗ, ದೇಶದ ವಾಹನೋದ್ಯಮದ ಗಾತ್ರ ₹14 ಲಕ್ಷ ಕೋಟಿಯಷ್ಟಿತ್ತು. ಅದು ಈಗ ₹22 ಲಕ್ಷ ಕೋಟಿಗೆ ಹೆಚ್ಚಳವಾಗಿದೆ' ಎಂದು ಹೇಳಿದ್ದಾರೆ.

ಪ್ರಸ್ತುತ ಅಮೆರಿಕದ ವಾಹನೋದ್ಯಮದ ಗಾತ್ರ ₹78 ಲಕ್ಷ ಕೋಟಿಯಷ್ಟಿದ್ದು, ಜಗತ್ತಿನಲ್ಲಿ ಮೊದಲ ಸ್ಥಾನದಲ್ಲಿದೆ. ಚೀನಾದ ವಾಹನೋದ್ಯಮದ ಗಾತ್ರವು ₹47 ಲಕ್ಷ ಕೋಟಿಯಷ್ಟಿದ್ದು, ಎರಡನೇ ಸ್ಥಾನದಲ್ಲಿದ್ದರೆ, ಭಾರತ ₹22 ಲಕ್ಷ ಕೋಟಿ ಗಾತ್ರದ ವಾಹನೋದ್ಯಮ ಹೊಂದಿದ್ದು, ಮೂರನೇ ಸ್ಥಾನದಲ್ಲಿದೆ. ರೈತರು, ಮೆಕ್ಕೆಜೋಳದಿಂದ ಎಥೆನಾಲ್ ತಯಾರಿಸುವ ಮೂಲಕ ₹45 ಸಾವಿರ ಕೋಟಿ ಹೆಚ್ಚುವರಿ ವರಮಾನ ಗಳಿಸಿದ್ದಾರೆ ಎಂದು ಗಡ್ಕರಿ ತಿಳಿಸಿದ್ದಾರೆ.

ಪಳೆಯುಳಿಕೆ ಇಂಧನ ಬಳಕೆಯಿಂದ ದೇಶಕ್ಕೆ ಆರ್ಥಿಕವಾಗಿ ಹೊರೆಯಾಗುವುದು ಮಾತ್ರವಲ್ಲದೇ, ಇಂಧನ ಆಮದಿಗೆ ವಾರ್ಷಿಕ ₹22 ಲಕ್ಷ ಕೋಟಿ ಖರ್ಚಾಗುತ್ತಿದೆ. ಪರಿಸರಕ್ಕೆ ಈ ಇಂಧನ ಬಳಕೆಯು ಹಾನಿ ಉಂಟು ಮಾಡುತ್ತದೆ ಎಂದಿದ್ದಾರೆ.



2027ರ ವೇಳೆಗೆ ಘನ ತ್ಯಾಜ್ಯವನ್ನು ರಸ್ತೆ ನಿರ್ಮಾಣದಲ್ಲಿ ಬಳಸುವ ಗುರಿಯನ್ನು ಹೊಂದಲಾಗಿದೆ. ಈ ಮೂಲಕ ಕಸದಿಂದ ರಸ ಸೃಷ್ಟಿಸುವ ಉದ್ದೇಶ ಇದೆ

ನಿತಿನ್ ಗಡ್ಕರಿ, ಕೇಂದ್ರ ರಸ್ತೆ ಸಾರಿಗೆ ಮತ್ತು ಹೆದ್ದಾರಿ ಸಚಿವ

25 ಸಾವಿರ ಚಾರ್ಜಿಂಗ್ ಕೇಂದ್ರ: ಟಾಟಾ

ಬೆಂಗಳೂರು: ದೇಶದ ಮುಂಚೂಣಿ ವಾಹನ ತಯಾರಿಕಾ ಕಂಪನಿ ಟಾಟಾ ಮೋಟರ್ಸ್ 25 ಸಾವಿರಕ್ಕೂ ಹೆಚ್ಚು ಸಾರ್ವಜನಿಕ ಚಾರ್ಜಿಂಗ್ ಕೇಂದ್ರಗಳನ್ನು ಸ್ಥಾಪಿಸಿರುವುದಾಗಿ ಹೇಳಿದೆ.

ಬೆಂಗಳೂರು, ದೆಹಲಿ–ಎನ್‌ಸಿಆರ್, ಮುಂಬೈ, ಚೆನ್ನೈ, ಹೈದರಾಬಾದ್ ಸೇರಿ 150ಕ್ಕೂ ಹೆಚ್ಚು ನಗರಗಳಲ್ಲಿ ಈ ಚಾರ್ಜಿಂಗ್ ಕೇಂದ್ರಗಳನ್ನು ಸ್ಥಾಪಿಸಲಾಗಿದೆ. ವಿದ್ಯುತ್ ಚಾಲಿತ ಸಣ್ಣ ವಾಣಿಜ್ಯ ವಾಹನಗಳನ್ನು (ಎಸ್‌ಸಿವಿ) ಹೊಂದಿರುವ ಗ್ರಾಹಕರಿಗೆ ಇದರಿಂದ ಹೆಚ್ಚು ಅನುಕೂಲ ಆಗಲಿದೆ ಎಂದು ಕಂಪನಿ ಹೇಳಿದೆ.

ಮುಂದಿನ 12 ತಿಂಗಳಿನಲ್ಲಿ 25 ಸಾವಿರಕ್ಕೂ ಹೆಚ್ಚು ಸಾರ್ವಜನಿಕ ಚಾರ್ಜಿಂಗ್ ಕೇಂದ್ರಗಳನ್ನು ಸ್ಥಾಪಿಸಲು ಮತ್ತು ನಿರ್ವಹಿಸಲು 13 ಚಾರ್ಜಿಂಗ್ ಪಾಯಿಂಟ್ ಆಪರೇಟರ್‌ಗಳೊಂದಿಗೆ ಒಡಂಬಡಿಕೆಗೆ ಸಹಿ ಹಾಕಲಾಗಿದೆ ಎಂದು ಕಂಪನಿಯ ಪ್ರಕಟಣೆ ತಿಳಿಸಿದೆ.

ಸುದ್ದಿ 2 ನಿಮಿಷ

ಸೇವಾ ವಲಯ ಪ್ರಗತಿ ಇಳಿಕೆ

ನವದೆಹಲಿ (ಪಿಟಿಐ): ದೇಶದ ಸೇವಾ ವಲಯದ ಚಟುವಟಿಕೆ ಸೆಪ್ಟೆಂಬರ್ ತಿಂಗಳಿನಲ್ಲಿ ಇಳಿಕೆಯಾಗಿದೆ ಎಂದು ಮಾಸಿಕ ಸಮೀಕ್ಷೆಯ ವರದಿಯೊಂದು ಸೋಮವಾರ ತಿಳಿಸಿದೆ.

ಎಚ್‌ಎಸ್‌ಬಿಸಿ ಇಂಡಿಯಾ ಸರ್ವಿಸಸ್ ಪಿಎಂಐ ಬ್ಯುಸಿನೆಸ್ ಆ್ಯಕ್ಟಿವಿಟಿ ಸೂಚ್ಯಂಕವು ಸೆಪ್ಟೆಂಬರ್‌ನಲ್ಲಿ 60.9 ದಾಖಲಾಗಿದೆ. ಇದು ಆಗಸ್ಟ್‌ನಲ್ಲಿ 62.9ರಷ್ಟಿತ್ತು. ಆಗಸ್ಟ್ ಮಟ್ಟವು 15 ವರ್ಷಗಳ ಗರಿಷ್ಠವಾಗಿತ್ತು.

ಪಿಎಂಐ ಸೂಚ್ಯಂಕವು 50ಕ್ಕಿಂತ ಹೆಚ್ಚಿನ ಮಟ್ಟದಲ್ಲಿ ಇದ್ದರೆ ಅದನ್ನು ಬೆಳವಣಿಗೆ ಎಂದು ಗುರುತಿಸಲಾಗುತ್ತದೆ.

'ದೇಶದ ಸೇವಾ ವಲಯದ ಚಟುವಟಿಕೆಗೆ ಅಂತರರಾಷ್ಟ್ರೀಯ ಮಾರುಕಟ್ಟೆಯಲ್ಲಿ ಬೇಡಿಕೆಯು ತೀವ್ರವಾಗಿಯೇ ಹೆಚ್ಚುತ್ತಿಲ್ಲ. ಹೀಗಾಗಿ ಆಗಸ್ಟ್ ತಿಂಗಳಿಗೆ ಹೋಲಿಸಿದರೆ ಸೆಪ್ಟೆಂಬರ್‌ನಲ್ಲಿ ಸೂಚ್ಯಂಕವು ಇಳಿಕೆ ಕಂಡಿದೆ' ಎಂದು ಎಚ್‌ಎಸ್‌ಬಿಸಿ ಇಂಡಿಯಾದ ಮುಖ್ಯ ಅರ್ಥಶಾಸ್ತ್ರಜ್ಞೆ ಪ್ರಾಂಜುಲ್ ಭಂಡಾರಿ ಹೇಳಿದ್ದಾರೆ.

ಹಿಮಪಾತದಲ್ಲಿ ಸಿಲುಕಿದ 200 ಜನ

ಬೀಜಿಂಗ್ (ಪಿಟಿಐ): ಮೌಂಟ್ ಎವರೆಸ್ಟ್‌ನ ಟಿಬೆಟ್ ಭಾಗದ ಪೂರ್ವ ಇಳಿಜಾರಿನಲ್ಲಿ ಸಿಲುಕಿದ್ದವರಲ್ಲಿ 350 ಮಂದಿಯನ್ನು ರಕ್ಷಿಸಲಾಗಿದ್ದು, ಇನ್ನೂ 200 ಜನ ಸಂಕಷ್ಟದಲ್ಲಿದ್ದಾರೆ.

ಶುಕ್ರವಾರದಿಂದ ಹಿಮಪಾತವಾಗುತ್ತಿರುವುದರಿಂದ ರಸ್ತೆಗಳು ಮುಚ್ಚಿಹೋಗಿವೆ. ನೂರಾರು ಮಂದಿ ಸ್ಥಳೀಯರು ಮತ್ತು ರಕ್ಷಣಾ ಸಿಬ್ಬಂದಿ ನೆರವು ನೀಡುತ್ತಿದ್ದಾರೆ.

ಮೌಂಟ್ ಎವರೆಸ್ಟ್‌ನಲ್ಲಿ ಸಾವಿರ ಜನ ಸಿಲುಕಿಕೊಂಡಿದ್ದಾರೆ ಎಂದು ಭಾನುವಾರ ವರದಿಯಾಗಿತ್ತು.

ಅಲ್ಲಿಂದ ಮರಳಿದ ಜನರು ಸಾಮಾಜಿಕ ಜಾಲತಾಣದಲ್ಲಿ ಪೋಸ್ಟ್ ಮಾಡಿರುವ ವಿಡಿಯೊಗಳ ಪ್ರಕಾರ, ಹಿಮಗಾಳಿಯು ಭಾನುವಾರ ಬಲವಾಗಿ ಅಪ್ಪಳಿಸಿದೆ. ರಸ್ತೆಗಳು ಹಿಮಾವೃತಗೊಂಡಿವೆ.

ಮುಂಬೈ ಧಾರಣೆ (ಶೇಂಗಾ)

06-10-2025	
ಜಾವಾ 70/80(ಹೊಸ)	10400-10500
ಜಾವಾ 80/90(ಹೊಸ)	9700-9800
ದಪ್ಪ ಮಧ್ಯಪ್ರದೇಶ (ಹೊಸ)	7600-7700
ದಪ್ಪ ಗುಜರಾತ್ (ಹೊಸ)	8500-8600
ಶೇಂಗಾ ಎಣ್ಣೆ (10 ಕೆಜಿಗೆ)	
ಕಚ್ಚಾ (ತೆರಿಗೆ ಬಿಟ್ಟು)	1360 (1340)
ಒಂದು ವಾರದ ಡೆಲಿವರಿ	1355 (1335)
ಪಾಮ್ ವಾರದ ಡೆಲಿವರಿ	1273 (1268)
ಸೂರ್ಯಕಾಂತಿ ಎಣ್ಣೆ ಕಚ್ಚಾ	1400 (1365)
ಚಿನ್ನ- ಬೆಳ್ಳಿ (ಜಿಎಸ್‌ಟಿ ಸೇರಿಲ್ಲ)	
ಅಪರಂಜಿ ಚಿನ್ನ 10 ಗ್ರಾಂ	1,18,900 (1,17,350)
ಬೆಳ್ಳಿ ಕೆ.ಜಿಗೆ	1,49,200 (1,47,700)

ಆವರಣದಲ್ಲಿ ಹಿಂದಿನ ವಹಿವಾಟಿನ ಧಾರಣೆ

ಕೊಬ್ಬರಿ ಧಾರಣೆ (ಕ್ವಿಂಟಲ್‌ಗೆ)

ಅರಸೀಕೆರೆ	₹19000-22577
ಬೆಂಗಳೂರು	₹28000-30000
ತಿಪಟೂರು	₹26000-27800

ಚಿನ್ನದ ಧಾರಣೆ ₹2,700ರಷ್ಟು ಏರಿಕೆ

ಬೆಳ್ಳಿಯ ಬೆಲೆಯಲ್ಲಿಯೂ ಏರಿಕೆ, ಸುರಕ್ಷಿತ ತಾಣ ಅರಸುತ್ತಿರುವ ಹೂಡಿಕೆದಾರರು

ನವದೆಹಲಿ (ಪಿಟಿಐ): ಚಿನ್ನದ ಬೆಲೆಯು ಇಲ್ಲಿನ ಚಿನಿವಾರ ಪೇಟೆಯಲ್ಲಿ ಸೋಮವಾರದ ವಹಿವಾಟಿನಲ್ಲಿ 10 ಗ್ರಾಂಗೆ ₹2,700ರಷ್ಟು ಹೆಚ್ಚಳ ಕಂಡಿದೆ. ಶೇಕಡ 99.9ರಷ್ಟು ಪರಿಶುದ್ಧತೆಯ 10 ಗ್ರಾಂ ಚಿನ್ನದ ಬೆಲೆಯು ದಾಖಲೆಯ ₹1,23,300ಕ್ಕೆ ತಲುಪಿದೆ.

ವಿದೇಶಿ ಮಾರುಕಟ್ಟೆಗಳಲ್ಲಿ ಚಿನ್ನದ ಖರೀದಿ ಹೆಚ್ಚಳ ಹಾಗೂ ಭಾರತದ ರೂಪಾಯಿ ಮೌಲ್ಯವು ಕುಸಿತ ಕಂಡಿದ್ದುದು ಬೆಲೆ ಏರಿಕೆಗೆ ಕಾರಣ ಎಂದು ವರ್ತಕರು ತಿಳಿಸಿದ್ದಾರೆ.

ಶುಕ್ರವಾರದ ವಹಿವಾಟಿನ ಅಂತ್ಯಕ್ಕೆ 10 ಗ್ರಾಂ ಚಿನ್ನದ ಬೆಲೆಯು ₹1,20,600 ಆಗಿತ್ತು ಎಂದು ಅಖಿಲ ಭಾರತ ಸರಾಫ್ ಒಕ್ಕೂಟ ಹೇಳಿದೆ.

ಸ್ಥಳೀಯ ಮಾರುಕಟ್ಟೆಯಲ್ಲಿ ಶೇ 99.5ರಷ್ಟು ಪರಿಶುದ್ಧತೆಯ ಆಭರಣ ಚಿನ್ನದ ಬೆಲೆಯು 10 ಗ್ರಾಂಗೆ ₹2,700ರಷ್ಟು ಹೆಚ್ಚಾಗಿ ₹1,22,700ಕ್ಕೆ ತಲುಪಿದೆ.

'ಚಿನ್ನದ ಬೆಲೆಯು ದಾಖಲೆಯ ಮಟ್ಟವನ್ನು ತಲುಪಿದ್ದರೂ ಹೂಡಿಕೆದಾರರಿಗೆ ಚಿನ್ನ ಬೇಕಾಗಿದೆ. ಹೀಗಾಗಿ ಸೋಮವಾರದ ವಹಿವಾಟಿನಲ್ಲಿ ಚಿನ್ನದ ಬೆಲೆಯು ಇನ್ನಷ್ಟು ಹೆಚ್ಚಳ ಕಂಡಿದೆ. ಚಿನ್ನದ ಬೆಲೆಯು ಮತ್ತಷ್ಟು ಹೆಚ್ಚಬಹುದು ಎಂಬುದು ಅವರಲ್ಲಿನ ನಿರೀಕ್ಷೆ' ಎಂದು ಎಚ್‌ಡಿಎಫ್‌ಸಿ ಸೆಕ್ಯುರಿಟೀಸ್‌ನ ಸರಕುಗಳ ವಿಭಾಗದ ಹಿರಿಯ ವಿಶ್ಲೇಷಕ ಸೌಮಿಲ್ ಗಾಂಧಿ ಹೇಳಿದ್ದಾರೆ.

ಅಮೆರಿಕದಲ್ಲಿ ಸರ್ಕಾರದ ಚಟುವಟಿಕೆಗಳು ಸ್ಥಗಿತಗೊಂಡಿರುವುದು ದೀರ್ಘಾವಧಿಗೆ ಮುಂದುವರಿಯಬಹುದು, ಇದರ ಪರಿಣಾಮವು ಆರ್ಥಿಕ ಚಟುವಟಿಕೆಗಳ ಮೇಲೆಯೂ ಆಗಬಹುದು ಎಂಬ ಕಳವಳಗಳು ಸುರಕ್ಷಿತ ಹೂಡಿಕೆಯಾಗಿರುವ ಚಿನ್ನಕ್ಕೆ ಬೇಡಿಕೆ ಹೆಚ್ಚಾಗಲು ಒಂದು ಕಾರಣ ಎಂದು ಸೌಮಿಲ್ ಗಾಂಧಿ ಅಂದಾಜಿಸಿದ್ದಾರೆ.

ಸೋಮವಾರದ ವಹಿವಾಟಿನಲ್ಲಿ ಬೆಳ್ಳಿಯ ಬೆಲೆ ಕೂಡ ಹೆಚ್ಚಳವಾಗಿದೆ. ಕೆ.ಜಿ. ಬೆಳ್ಳಿ ಬೆಲೆಯು ₹7,400ರಷ್ಟು ಹೆಚ್ಚಳ ಆಗಿದ್ದು ₹1,57,400ಕ್ಕೆ ತಲುಪಿದೆ.

'ಡಾಲರ್ ದುರ್ಬಲ ಆಗುತ್ತಿರುವುದು, ಜಗತ್ತಿನ ವಿವಿಧ ಕೇಂದ್ರೀಯ ಬ್ಯಾಂಕ್‌ಗಳು ಚಿನ್ನವನ್ನು ಹೆಚ್ಚಿನ ಪ್ರಮಾಣದಲ್ಲಿ ಖರೀದಿಸುತ್ತಿರುವುದು, ಚಿನ್ನದ ಇಟಿಎಫ್‌ಗಳಿಗೆ ಬೇಡಿಕೆ ಹೆಚ್ಚಳ, ಸಣ್ಣ ಹೂಡಿಕೆದಾರರು ಚಿನ್ನದ ಮೇಲೆ ಹೆಚ್ಚು ಹಣ ತೊಡಗಿಸುತ್ತಿರುವುದು ಚಿನ್ನದ ಬೇಡಿಕೆ ಹೆಚ್ಚಾಗುವುದಕ್ಕೆ ಕಾರಣ' ಎಂದು ಆಗ್‌ಮಾಂಟ್ ಸಂಸ್ಥೆಯ ಸಂಶೋಧನಾ ವಿಭಾಗದ ಮುಖ್ಯಸ್ಥೆ ರೆನಿಶಾ ಚೈನಾನಿ ಹೇಳಿದ್ದಾರೆ.

ಫ್ರಾನ್ಸ್ ಪ್ರಧಾನಿ ರಾಜೀನಾಮೆ

ಪ್ಯಾರಿಸ್ (ಎಪಿ): ತಮ್ಮ ಸಚಿವ ಸಂಪುಟವನ್ನು ಘೋಷಣೆ ಮಾಡಿದ ಮರುದಿನ ಮತ್ತು ಅಧಿಕಾರ ಸ್ವೀಕರಿಸಿದ ಒಂದು ತಿಂಗಳು ಪೂರ್ವವೇ ಫ್ರಾನ್ಸ್‌ನ ನೂತನ ಪ್ರಧಾನಿ ಸೆಬಾಸ್ಟಿಯನ್ ಲೆಕೋರ್ನು ಸೋಮವಾರ ತಮ್ಮ ಸ್ಥಾನಕ್ಕೆ ರಾಜೀನಾಮೆ ನೀಡಿದ್ದಾರೆ.

ಅಧ್ಯಕ್ಷ ಎಮ್ಯಾನುಯೆಲ್ ಮ್ಯಾಕ್ರನ್ ಅವರು ಪ್ರಧಾನಿಯ ರಾಜೀನಾಮೆ ಅಂಗೀಕರಿಸಿದ್ದಾರೆ ಎಂದು ಫ್ರಾನ್ಸ್ ಅಧ್ಯಕ್ಷರ ಕಚೇರಿಯ ಪ್ರಕಟಣೆ ತಿಳಿಸಿದೆ.

ಸಚಿವರ ಆಯ್ಕೆಗೆ ಸಂಬಂಧಿಸಿದಂತೆ ಲೆಕೋರ್ನು ವ್ಯಾಪಕ ಟೀಕೆಗೆ ಗುರಿಯಾಗಿದ್ದರು. ಅದರಲ್ಲೂ ಹಣಕಾಸು ಖಾತೆಯ ಮಾಜಿ ಸಚಿವೆ ಬ್ರೂನೊ ಲಿ ಮೇರಿ ಅವರನ್ನು ರಕ್ಷಣಾ ಸಚಿವೆಯಾಗಿ ಮರು ಆಯ್ಕೆ ಮಾಡಿದ್ದು ವಿರೋಧಕ್ಕೆ ಕಾರಣವಾಗಿತ್ತು.

ಅಡಿಕೆ ಧಾರಣೆ

ಕುಮಟಾ	
ಚಿಪ್ಪು	27029-34029
ಕೋಕ	9099-28099
ಫ್ಯಾಕ್ಟರಿ	6089-26899
ಹಳೆಚಾಲಿ	39999-45319
ಹೊಸಚಾಲಿ	38699-45399
ಪುತ್ತೂರು	
ಕೋಕ	18000-28500
ಹೊಸತು	26000-35000
ಹಳತು	37500-52500
ಸಾಗರ	
ಬಿಳಿಗೋಟು	11219-31299
ಚಾಲಿ	34099-41199
ಕೋಕ	10599-32109
ಕೆಂಪುಗೋಟು	26369-38009
ರಾಶಿ	40209-65670
ಸಿಪ್ಪೆಗೋಟು	10100-22625
ಶಿವಮೊಗ್ಗ	
ಬೆಟ್ಟೆ	65200-68799
ಗೊರಬಲು	19010-43666
ಹೊಸತು	58336-63501
ರಾಶಿ	49009-64599
ಸಿದ್ದಾಪುರ	
ಬಿಳಿಗೋಟು	25018-33870
ಚಾಲಿ	36619-43899
ಕೋಕ	20619-30700
ಕೆಂಪುಗೋಟು	28369-31000
ರಾಶಿ	46899-56300
ತಟ್ಟಿಬೆಟ್ಟೆ	33699-48099
ಶಿರಸಿ	
ಬೆಟ್ಟೆ	34989-49861
ಬಿಳಿಗೋಟು	30169-38678
ಚಾಲಿ	40508-45699
ಕೆಂಪುಗೋಟು	28109-33123
ರಾಶಿ	49001-55399
ಯಲ್ಲಾಪುರ	
ಬಿಳಿಗೋಟು	18899-36869
ಚಾಲಿ	37502-45830
ಕೋಕ	11099-27699
ಕೆಂಪುಗೋಟು	30399-32106
ರಾಶಿ	50001-60009
ತಟ್ಟಿಬೆಟ್ಟೆ	38769-45169

ಇಸ್ರೇಲ್: ಗ್ರೆಟ್ಟಾ ಸೇರಿ 171 ಜನರ ಗಡಿಪಾರು

ಜೆರುಸಲೇಂ (ಎಪಿ): ಗಾಜಾಕ್ಕೆ ನೆರವು ಸಾಮಾಗ್ರಿ ತಂದಿದ್ದ ಹಡಗುಗಳಲ್ಲಿದ್ದ ಸ್ವೀಡನ್‌ನ ಹೋರಾಟಗಾರ್ತಿ ಗ್ರೆಟ್ಟಾ ಥುನ್‌ಬರ್ಗ್ ಸೇರಿದಂತೆ 171 ಜನರ ಮತ್ತೊಂದು ತಂಡವನ್ನು ಗ್ರೀಸ್ ಮತ್ತು ಸ್ಲೋವಾಕಿಯಾಕ್ಕೆ ಗಡಿಪಾರು ಮಾಡಲಾಗಿದೆ ಎಂದು ಇಸ್ರೇಲ್ ಅಧಿಕಾರಿಗಳು ಸೋಮವಾರ ತಿಳಿಸಿದ್ದಾರೆ.

ಗ್ರೆಟ್ಟಾ ಥುನ್‌ಬರ್ಗ್

'ಗಡಿಪಾರಿಗೆ ಒಳಗಾದವರಲ್ಲಿ ಗ್ರೀಸ್, ಇಟಲಿ, ಫ್ರಾನ್ಸ್, ಐರ್ಲೆಂಡ್, ಸ್ವೀಡನ್, ಪೋಲೆಂಡ್, ಜರ್ಮನಿ, ಬಲ್ಗೇರಿಯ, ಲಿಥುವೇನಿಯ, ಆಸ್ಟ್ರಿಯ, ಲಕ್ಸಂಬರ್ಗ್, ಫಿನ್ಲೆಂಡ್, ಡೆನ್ಮಾರ್ಕ್, ಸ್ಲೊವಾಕಿಯ, ಸ್ವಿಜರ್ಲೆಂಡ್, ನಾರ್ವೆ, ಇಂಗ್ಲೆಂಡ್, ಸರ್ಬಿಯ ಮತ್ತು ಅಮೆರಿಕದ ಪ್ರಜೆಗಳು ಇದ್ದಾರೆ' ಎಂಬ ಮಾಹಿತಿಯೊಂದಿಗೆ ಇಸ್ರೇಲ್‌ನ ವಿದೇಶಾಂಗ ಸಚಿವಾಲಯ ಎಕ್ಸ್‌ನಲ್ಲಿ ಗ್ರೇಟಾ ಸೇರಿದಂತೆ ಇತರ ಹೋರಾಟಗಾರರ ಚಿತ್ರಗಳನ್ನು ಪೋಸ್ಟ್ ಮಾಡಿದೆ.

ಬೆಲೆ ಕುಸಿತ: ರಸ್ತೆಗೆ ಹೂವು ಸುರಿದ ರೈತರು

ಪ್ರಜಾವಾಣಿ ವಾರ್ತೆ

ಬಂಗಾರಪೇಟೆ: ಏಕಾಏಕಿ ಹೂವಿನ ಬೆಲೆ ಕುಸಿತದಿಂದ ಬೇಸತ್ತ ರೈತರು ಸೋಮವಾರ ಬಂಗಾರಪೇಟೆ ಮತ್ತು ಕೋಲಾರದ ಮುಖ್ಯರಸ್ತೆ ಬದಿಯಲ್ಲಿ ಹೂಗಳನ್ನು ಸುರಿದಿದ್ದಾರೆ.

ಶ್ರಾವಣ ಮಾಸದ ಹಬ್ಬಗಳು ಮುಗಿದ ನಂತರ ಹೂವಿಗೆ ಬೇಡಿಕೆ ಕಡಿಮೆಯಾಗಿತ್ತು. ಅಕ್ಟೋಬರ್‌ನಲ್ಲಿ ಹೆಚ್ಚಿನ ಪ್ರಮಾಣದಲ್ಲಿ ಹೂವು ಕಟಾವಿಗೆ ಬಂದಿದ್ದು, ಮಾರುಕಟ್ಟೆಗೂ ಭಾರಿ ಪ್ರಮಾಣದಲ್ಲಿ ಹೂವು ಬರುತ್ತಿದೆ. ಹಾಗಾಗಿ ಬೇಡಿಕೆ ಮತ್ತು ಬೆಲೆ ಕುಸಿದಿದೆ ಎನ್ನುವುದು ವರ್ತಕರ ವಿಶ್ಲೇಷಣೆ.

ಸೋಮವಾರ ಮಾರುಕಟ್ಟೆಗೆ ತಂದಿದ್ದ ರಾಶಿ, ರಾಶಿ ಚೆಂಡು ಹೂವು, ಸೇವಂತಿ ಹೂವಿಗೆ ಸರಿಯಾದ ಬೆಲೆ ಸಿಗದ ಕಾರಣ ಹತಾಶರಾದ ರೈತರು ಹೂವುಗಳನ್ನು ರಸ್ತೆ ಬದಿ ಸುರಿದು ಹೋಗಿದ್ದಾರೆ. ಕೆ.ಜಿ ಚೆಂಡು ಹೂ ₹10, ಸೇವಂತಿ ₹40 ಮತ್ತು ಗುಲಾಬಿ ₹50ರಂತೆ ಮಾರಾಟವಾಗುತ್ತಿವೆ.

ಬಂಗಾರಪೇಟೆ ಮತ್ತು ಕೋಲಾರ ಮುಖ್ಯರಸ್ತೆ ಬದಿಯಲ್ಲಿ ರೈತರು ಸುರಿದು ಹೋಗಿರುವ ಚೆಂಡು ಹೂವಿನ ರಾಶಿಯಿಂದ ಹೂವು ತುಂಬಿಕೊಳ್ಳುತ್ತಿರುವ ಸಾರ್ವಜನಿಕರು

ಹಾಕಿದ ಬಂಡವಾಳ ಮರಳುವುದು ದೂರದ ಮಾತು. ಹೂ ಕಟಾವು ಕೂಲಿ, ಮಾರುಕಟ್ಟೆಗೆ ಸಾಗಿಸಲು ತಗಲುವ ವೆಚ್ಚ ಕೂಡ ಸಿಗುತ್ತಿಲ್ಲ.

ಜಿಲ್ಲೆಯಲ್ಲಿ ಕೆಲವು ದಿನಗಳಿಂದ ಮೋಡ ಮುಸುಕಿದ ವಾತಾವರಣ ಮತ್ತು ಜಿಟಿ ಮಳೆಯಾಗುತ್ತಿದೆ. ಹೀಗಾಗಿ ಅನೇಕ ಬೆಳೆಗಾರರು ಹೂವು ಕೊಯ್ಲು ಮಾಡದೆ ತೋಟದಲ್ಲೇ ಬಿಟ್ಟಿದ್ದಾರೆ ಎಂದು ರೈತರು ನೋವು ತೋಡಿಕೊಂಡರು.

ಮೂವರಿಗೆ ವೈದ್ಯಕೀಯ ಕ್ಷೇತ್ರದ ನೊಬೆಲ್

ಸ್ಟಾಕ್‌ಹೋಮ್ (ಎಪಿ): ರೋಗನಿರೋಧಕ ಶಕ್ತಿ ಹೆಚ್ಚಳಕ್ಕೆ ಸಂಬಂಧಿಸಿದ ಸಂಶೋಧನೆಗಾಗಿ ವಿಜ್ಞಾನಿಗಳಾದ ಅಮೆರಿಕದ ಮೇರಿ ಈ. ಬ್ರಂಕೋ, ಫ್ರೆಡ್ ರಾಮ್ಸ್‌ಡೆಲ್ ಹಾಗೂ ಜಪಾನ್‌ನ ಶಿಮೋನ್ ಸಕಾಗುಚಿ ಅವರಿಗೆ 2025ನೇ ಸಾಲಿನ ವೈದ್ಯಕೀಯ ಕ್ಷೇತ್ರದ ನೊಬೆಲ್ ಪ್ರಶಸ್ತಿ ಘೋಷಿಸಲಾಗಿದೆ.

ಸ್ಟಾಕ್‌ಹೋಮ್‌ನ ಕರೊಲಿನ್ಸ್ಕಾ ಇನ್‌ಸ್ಟಿಟ್ಯೂಟ್‌ನಲ್ಲಿ ವೈದ್ಯಕೀಯ ನೊಬೆಲ್ ಪುರಸ್ಕೃತರ ಹೆಸರುಗಳನ್ನು ಸೋಮವಾರ ಪ್ರಕಟಿಸುವುದರೊಂದಿಗೆ ಈ ವರ್ಷದ ನೊಬೆಲ್ ಪುರಸ್ಕಾರ ಘೋಷಣೆಗೆ ಚಾಲನೆ ಸಿಕ್ಕಂತಾಗಿದೆ.

ಕ್ಯಾನ್ಸರ್‌ಗೆ ಹೊಸ ವಿಧಾನದಲ್ಲಿ ಚಿಕಿತ್ಸೆ ನೀಡಲು ಸಾಧ್ಯವಾಗಬಲ್ಲ 'ಮೈಕ್ರೋಆರ್‌ಎನ್‌ಎ' ಆವಿಷ್ಕಾರಕ್ಕಾಗಿ ಅಮೆರಿಕದ ವಿಕ್ಟರ್ ಆ್ಯಂಬ್ರೋಸ್ ಮತ್ತು ಗ್ಯಾರಿ ರುವ್ಕನ್ ಅವರಿಗೆ ಕಳೆದ ವರ್ಷ ವೈದ್ಯಕೀಯ ಕ್ಷೇತ್ರದ ನೊಬೆಲ್ ಪುರಸ್ಕಾರ ದೊರೆತಿತ್ತು.

ವೈದ್ಯಕೀಯ ಕ್ಷೇತ್ರದ ನೊಬೆಲ್ ಪ್ರಶಸ್ತಿ ಪುರಸ್ಕೃತರಾದ ಮೇರಿ ಈ. ಬ್ರಂಕೋ, ಫ್ರೆಡ್ ರಾಮ್ಸ್‌ಡೆಲ್ ಹಾಗೂ ಶಿಮೋನ್ ಸಕಾಗುಚಿ ಎಎಫ್‌ಪಿ ಚಿತ್ರ

ಭೌತವಿಜ್ಞಾನ, ರಸಾಯನ ವಿಜ್ಞಾನ ಕ್ಷೇತ್ರಗಳ ಪ್ರಶಸ್ತಿ ವಿಜೇತರ ಹೆಸರನ್ನು ಕ್ರಮವಾಗಿ ಮಂಗಳವಾರ ಹಾಗೂ ಬುಧವಾರ ಪ್ರಕಟಿಸಲಾಗುತ್ತದೆ.

ಸಾಹಿತ್ಯ ಕ್ಷೇತ್ರದ ಪುರಸ್ಕಾರವನ್ನು ಗುರುವಾರ ಹಾಗೂ ನೊಬೆಲ್ ಶಾಂತಿ ಪ್ರಶಸ್ತಿಯನ್ನು ಶುಕ್ರವಾರ ಘೋಷಿಸಲಾಗುತ್ತದೆ. ಅ.13ರಂದು ಅರ್ಥಶಾಸ್ತ್ರ ನೊಬೆಲ್ ಪುರಸ್ಕಾರ ಘೋಷಿಸಲಾಗುತ್ತದೆ. ಡಿಸೆಂಬರ್ 10ರಂದು ನಡೆಯುವ ಕಾರ್ಯಕ್ರಮದಲ್ಲಿ ಪ್ರಶಸ್ತಿ ಪ್ರದಾನ ಮಾಡಲಾಗುತ್ತದೆ.

ಇಸ್ರೇಲ್–ಹಮಾಸ್ ಮಾತುಕತೆ ಆರಂಭ

ಕೈರೊ (ಎಪಿ): ಯುದ್ಧ ಅಂತ್ಯಗೊಳಿಸಲು ಅಮೆರಿಕವು ಸಿದ್ಧಪಡಿಸಿದ ಶಾಂತಿ ಯೋಜನೆ ಕುರಿತು ಇಸ್ರೇಲ್ ಹಾಗೂ ಹಮಾಸ್ ಬಂಡುಕೋರ ಸಂಘಟನೆಯ ನಿಯೋಗಗಳು ಈಜಿಪ್ಟ್‌ನ ರೆಸಾರ್ಟ್‌ವೊಂದರಲ್ಲಿ ಸೋಮವಾರ ಮಧ್ಯಾಹ್ನದಿಂದ ಮಾತುಕತೆ ಆರಂಭಿಸಿವೆ. ಈಜಿಪ್ಟ್ ಹಾಗೂ ಕತಾರ್ ಮಾತುಕತೆಯ ಮಧ್ಯಸ್ಥಿಕೆ ವಹಿಸಿವೆ.

ಯುದ್ಧವು ಆರಂಭಗೊಂಡು ಅ.7ಕ್ಕೆ ಎರಡು ವರ್ಷ ಪೂರೈಸಲಿದೆ. ಈ ಸಭೆಯಲ್ಲಿ ಅಮೆರಿಕದ ಮಧ್ಯಪ್ರಾಚ್ಯದ ರಾಯಭಾರಿ ಸ್ಟೀವ್ ವಿಟ್‌ಆಫ್ ಮತ್ತು ಅಮೆರಿಕದ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಅವರ ಅಳಿಯ ಜರೆಡ್ ಕುಶ್ನರ್ ಅವರೂ ಭಾಗಿಯಾಗಲಿದ್ದಾರೆ.

ಮೊದಲ ಹಂತದಲ್ಲಿ ಯಾವ ರೀತಿಯಲ್ಲಿ ಕದನವಿರಾಮ ಇರಬೇಕು ಎನ್ನುವ ಕುರಿತು ಚರ್ಚೆ ನಡೆಯಲಿದೆ. ಗಾಜಾ ಪಟ್ಟಿಯಿಂದ ಇಸ್ರೇಲ್ ಸೇನೆಯು ಭಾಗಶಃ ವಾಪಸಾಗಬೇಕು. ಇಸ್ರೇಲ್ ವಶದಲ್ಲಿರುವ ಪ್ಯಾಲೆಸ್ಟೀನ್‌ನ ಕೈದಿಗಳ ಬಿಡುಗಡೆಗೆ ಪ್ರತಿಯಾಗಿ ಹಮಾಸ್ ವಶದಲ್ಲಿ ಇರುವ ಇಸ್ರೇಲ್ ಒತ್ತೆಯಾಳುಗಳು ಬಿಡುಗಡೆ ಮಾಡುವುದರ ಕುರಿತೂ ಮಾತುಕತೆ ನಡೆಯಲಿದೆ.

2 ಸಿರಪ್ ಮಾದರಿ ಪರೀಕ್ಷೆಗೆ: ಸಚಿವ ದಿನೇಶ್

ಪ್ರಜಾವಾಣಿ ವಾರ್ತೆ

ಹಾಸನ: 'ರಾಜ್ಯದಲ್ಲಿ ಮಾರಾಟ ಆಗುತ್ತಿರುವ ಕೆಮ್ಮಿನ ಸಿರಪ್‌ನ ಗುಣಮಟ್ಟ ಕಳಪೆ ಆಗಿರುವುದರ ಮಾಹಿತಿ ಬಂದಿದ್ದು, ತಪಾಸಣೆಗೆ ಮಾದರಿಯನ್ನು ಕಳುಹಿಸಲಾಗಿದೆ. ಇಲಾಖೆ ಅಗತ್ಯ ಎಚ್ಚರಿಕೆ ವಹಿಸಿದೆ' ಎಂದು ಆರೋಗ್ಯ ಸಚಿವ ದಿನೇಶ್ ಗುಂಡೂರಾವ್ ಸೋಮವಾರ ಹೇಳಿದರು.

ವಿಶೇಷವಾಗಿ 5 ವರ್ಷಕ್ಕಿಂತ ಕಡಿಮೆ ವಯಸ್ಸಿನ ಮಕ್ಕಳಿಗೆ ಸಿರಪ್ ನೀಡುವ ಮೊದಲು ವೈದ್ಯರ ಸಲಹೆ ಅವಶ್ಯ

ದಿನೇಶ್ ಗುಂಡೂರಾವ್, ಆರೋಗ್ಯ ಸಚಿವ

ಜಿಲ್ಲೆಯ ಚನ್ನರಾಯಪಟ್ಟಣದಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿ, 'ಕೆಮ್ಮಿನ ಸಿರಪ್ ಕುರಿತು ಸಾರ್ವಜನಿಕರು ವಹಿಸ ಬೇಕಾದ ಜಾಗ್ರತೆ ಕುರಿತು ಮಾರ್ಗಸೂಚಿ ನೀಡಲಾಗಿದೆ' ಎಂದರು.

'ಕೆಮ್ಮಿನ ಭಿನ್ನ ಸಿರಪ್‌ಗಳ ಮಾದರಿಗಳ ಸಂಗ್ರಹಿಸಿ ತಪಾಸಣೆ ನಡೆದಿದೆ. ಶೀಘ್ರ ವರದಿ ಬರಲಿದೆ. ರಾಜ್ಯದಲ್ಲಿ ಯಾವುದೇ ಅಸುರಕ್ಷಿತ ಸಿರಪ್ ಮಾರುಕಟ್ಟೆಗೆ ಬಾರದಂತೆ ಕ್ರಮಕೈಗೊಳ್ಳುತ್ತಿದ್ದೇವೆ' ಎಂದರು.

'ಔಷಧಗಳ ವ್ಯವಹಾರದಲ್ಲಿ ಪಾರದರ್ಶಕತೆ ತರಲು ಕೇಂದ್ರಕ್ಕೂ ಪತ್ರ ಬರೆಯಲಾಗಿದೆ. ಸಿರಪ್ ತಯಾರಿಕಾ ಘಟಕಗಳು ಮತ್ತು ಸರಬರಾಜುದಾರರ ಸಂವಹನದ ಕೊರತೆ ಹಾಗೂ ನಿರ್ಲಕ್ಷ್ಯದಿಂದ ಇಂಥ ಅವಘಡ ನಡೆಯುತ್ತಿವೆ' ಎಂದರು.

'ಮಧ್ಯಪ್ರದೇಶದಲ್ಲಿ ಬಳಕೆಯಾದ ಕೆಮ್ಮಿನ ಸಿರಪ್ ರಾಜ್ಯದಲ್ಲಿ ಸರಬರಾಜಾಗಿಲ್ಲ. ತಮಿಳುನಾಡು ಸೇರಿ ವಿವಿಧೆಡೆ ಬಳಸಿರುವ ಮಾಹಿತಿ ಇದೆ. ಈ ಸಿರಪ್‌ಗಳಲ್ಲಿ ಡೈ ಎಥಿಲಿನ್ ಗ್ಲೈಕಾಲ್ ಎಂಬ ಹಾನಿಕರ ರಾಸಾಯನಿಕ ಅಂಶ ಬಳಕೆಯಾಗಿದೆ' ಎಂದು ಹೇಳಿದರು.

ಮಕ್ಕಳಲ್ಲಿ ಕೆಮ್ಮಿನ ಔಷಧಿಗಳ ಬಳಕೆಯ ಅಧ್ಯಯನಕ್ಕೆ ತಜ್ಞರ ಸಮಿತಿ ರಚಿಸಿದ ಕೇರಳ ಸರ್ಕಾರ

3 ರಾಜ್ಯಗಳಿಗೆ ಎನ್‌ಎಚ್‌ಆರ್‌ಸಿ ನೋಟಿಸ್

ನವದೆಹಲಿ (ಪಿಟಿಐ): ಕೆಮ್ಮಿನ ಸಿರಪ್ ಸೇವನೆಯಿಂದ ಮಕ್ಕಳು ಮೃತಪಟ್ಟಿದ್ದಾರೆ ಎಂಬ ಆರೋಪಗಳಿಗೆ ಸಂಬಂಧಿಸಿ ರಾಷ್ಟ್ರೀಯ ಮಾನವಹಕ್ಕುಗಳ ಆಯೋಗವು (ಎನ್‌ಎಚ್‌ಆರ್‌ಸಿ) ಮಧ್ಯಪ್ರದೇಶ, ರಾಜಸ್ಥಾನ ಮತ್ತು ಉತ್ತರ ಪ್ರದೇಶ ಸರ್ಕಾರಗಳಿಗೆ ನೋಟಿಸ್ ನೀಡಿದೆ.

ಮಕ್ಕಳ ಸಾವಿನ ಬಗ್ಗೆ ತನಿಖೆ ನಡೆಸುವಂತೆ ಮತ್ತು ಕಲಬೆರಕೆ ಔಷಧಗಳ ಮಾರಾಟವನ್ನು ತಕ್ಷಣದಿಂದಲೇ ನಿಷೇಧಿಸುವಂತೆ ನಿರ್ದೇಶಿಸಿದೆ.

ಕಲಬೆರಕೆ ಔಷಧಗಳ ಪೂರೈಕೆ ಬಗ್ಗೆಯೂ ತನಿಖೆ ನಡೆಸಲು ಆದೇಶಿಸುವಂತೆ ಹಾಗೂ ಅಂತಹ ಔಷಧಗಳ ಮಾದರಿಗಳನ್ನು ಸಂಗ್ರಹಿಸಿ, ಪರೀಕ್ಷಾ ವರದಿ ನೀಡಲು ಎಲ್ಲ ಪ್ರಾದೇಶಿಕ ಪ್ರಯೋಗಾಲಯಗಳಿಗೆ ಸೂಚನೆ ನೀಡಲು, ಭಾರತೀಯ ಔಷಧ ನಿಯಂತ್ರಣ ವಿಭಾಗ, ಕೇಂದ್ರ ಔಷಧ ಗುಣಮಟ್ಟ ನಿಯಂತ್ರಣ ಸಂಸ್ಥೆ ,ಆರೋಗ್ಯ ಸೇವೆಗಳ ಮಹಾನಿರ್ದೇಶನಾಲಯ ಮತ್ತು ಕೇಂದ್ರ ಆರೋಗ್ಯ ಸಚಿವಾಲಯಕ್ಕೆ ಎನ್‌ಎಚ್‌ಆರ್‌ಸಿ ಆದೇಶಿಸಿದೆ.

ಕಲಬೆರಕೆ ಔಷಧಿಗಳನ್ನು ನಿಷೇಧಿಸಿರುವ ಕುರಿತು ವರದಿ ನೀಡಲು ಮೂರು ರಾಜ್ಯಗಳ ಮುಖ್ಯ ಔಷಧ ನಿಯಂತ್ರಕರಿಗೆ ಆದೇಶ ನೀಡುವಂತೆಯೂ ಸೂಚಿಸಿದೆ.

ಮಕ್ಕಳ ದುರಂತ ಸಾವಿಗೆ ಕಾರಣರಾದವರ ವಿರುದ್ಧ ಕಠಿಣ ಕ್ರಮ ಕೈಗೊಳ್ಳಲಾಗುವುದು. ನಿರ್ಲಕ್ಷ್ಯವನ್ನು ಸಹಿಸುವುದಿಲ್ಲ

ಮೋಹನ್ ಯಾದವ್, ಮುಖ್ಯಮಂತ್ರಿ, ಮಧ್ಯಪ್ರದೇಶ

ಔಷಧ ನಿಯಂತ್ರಕರ ವರ್ಗಾವಣೆ (ಛಿಂದ್ವಾಢ ವರದಿ): ಕೆಮ್ಮಿನ ಸಿರಪ್ ಸೇವನೆ ಬಳಿಕ ಮೂತ್ರಪಿಂಡ ವೈಫಲ್ಯದಿಂದ 14 ಮಕ್ಕಳು ಮೃತಪಟ್ಟ ಪ್ರಕರಣದ ತನಿಖೆ ನಡೆದಿರುವಾಗಲೇ, ರಾಜ್ಯದ ಔಷಧ ನಿಯಂತ್ರಕರಾದ ದಿನೇಶ್ ಮೌರ್ಯ ಅವರನ್ನು ಮಧ್ಯಪ್ರದೇಶ ಸರ್ಕಾರ ವರ್ಗಾಯಿಸಿದೆ.

ಛಿಂದ್ವಾಢದಲ್ಲಿ ಡ್ರಗ್ ಇನ್‌ಸ್ಪೆಕ್ಟರ್ ಆಗಿದ್ದ ಗೌರವ್ ಶರ್ಮಾ, ಜಬಲ್‌ಪುರದಲ್ಲಿ ಡ್ರಗ್ ಇನ್‌ಸ್ಪೆಕ್ಟರ್ ಆಗಿದ್ದ ಶರದ್ ಕುಮಾರ್ ಜೈನ್ ಹಾಗೂ ಆಹಾರ ಮತ್ತು ಔಷಧ ಆಡಳಿತದ ಉಪ ನಿರ್ದೇಶಕ ಶೋಭಿತ್ ಕೋಸ್ಟಾ ಅವರನ್ನು ಅಮಾನತುಗೊಳಿಸಲಾಗಿದೆ ಎಂದು ಅಧಿಕಾರಿಯೊಬ್ಬರು ತಿಳಿಸಿದ್ದಾರೆ.

ಎಸ್‌ಐಟಿ ರಚನೆ: ಪ್ರಕರಣದ ತನಿಖೆಗಾಗಿ ಮಧ್ಯಪ್ರದೇಶ ಪೊಲೀಸರು ವಿಶೇಷ ತನಿಖಾ ತಂಡ (ಎಸ್‌ಐಟಿ) ರಚಿಸಿದ್ದಾರೆ.

'ವೈದ್ಯರು ಶಿಫಾರಸಿಗೆ ಮಾತ್ರ ಔಷಧಿ ಕೊಡಿ'

ತಿರುವನಂತಪುರ (ಪಿಟಿಐ): ವೈದ್ಯರು ಶಿಫಾರಸು ಮಾಡಿದರೆ ಮಾತ್ರ 12 ವರ್ಷದ ಒಳಗಿನ ಮಕ್ಕಳಿಗೆ ಔಷಧ ನೀಡಬೇಕು ಎಂದು ಕೇರಳ ಆರೋಗ್ಯ ಇಲಾಖೆ ಸೋಮವಾರ ಆದೇಶಿಸಿದೆ.

ಮಕ್ಕಳಲ್ಲಿ ಕೆಮ್ಮಿನ ಔಷಧಿಗಳ ಬಳಕೆಯ ಅಧ್ಯಯನ ಮಾಡಲು ಮೂವರು ತಜ್ಞರ ಸಮಿತಿ ರಚಿಸಿದ್ದು, ತುರ್ತು ವರದಿ ಸಲ್ಲಿಸುವಂತೆಯೂ ಸೂಚಿಸಲಾಗಿದೆ ಎಂದು ಆರೋಗ್ಯ ಸಚಿವೆ ವೀಣಾ ಜಾರ್ಜ್ ಅವರು ಉನ್ನತ ಮಟ್ಟದ ಸಭೆಯ ನಂತರ ಇಲ್ಲಿ ತಿಳಿಸಿದರು. ರಾಜ್ಯ ಔಷಧ ನಿಯಂತ್ರಕ, ಮಕ್ಕಳ ಆರೋಗ್ಯ ನೋಡಲ್ ಅಧಿಕಾರಿ ಮತ್ತು ಭಾರತೀಯ ಮಕ್ಕಳ ತಜ್ಞರ ಅಕಾಡೆಮಿಯ ರಾಜ್ಯ ಘಟಕದ ಅಧ್ಯಕ್ಷರು ಸಮಿತಿಯ ಸದಸ್ಯರಾಗಿದ್ದಾರೆ.

ಈ ಸಮಿತಿ ನೀಡುವ ವರದಿಯು ಮಕ್ಕಳಲ್ಲಿ ಕೆಮ್ಮು ಸಿರಪ್ ಬಳಕೆಗೆ ಹೊಸ ಮಾರ್ಗಸೂಚಿ ರೂಪಿಸಲು ಸಹಾಯ ಮಾಡಲಿದೆ ಎಂದು ಸಚಿವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

'ವೈದ್ಯರು ಈ ಹಿಂದೆಯೇ ನೀಡಿದ್ದ ಔಷಧ ಸಲಹಾ ಚೀಟಿಗಳನ್ನು ಬಳಸಿಕೊಂಡು ಔಷಧಿಗಳನ್ನು ವಿತರಿಸಬಾರದು. ಈ ಕುರಿತಂತೆ ಔಷಧ ನಿಯಂತ್ರಕರಿಗೆ ನಿರ್ದೇಶನ ನೀಡಲಾಗಿದೆ' ಎಂದೂ ವೀಣಾ ಹೇಳಿದ್ದಾರೆ.

ಎಸ್‌ಆರ್–13 ಬ್ಯಾಚ್‌ನ ಕೋಲ್ಡ್ರಿಫ್ ಸಿರಪ್ ಸೇವಿಸಿದ ಕೆಲವು ಮಕ್ಕಳು ಬೇರೆ ರಾಜ್ಯಗಳಲ್ಲಿ ಮೃತಪಟ್ಟಿದ್ದರಿಂದ, ಡ್ರಗ್ಸ್ ನಿಯಂತ್ರಣ ಇಲಾಖೆಯು ರಾಜ್ಯದಲ್ಲಿ ಅದರ ಮಾರಾಟವನ್ನು ಸ್ಥಗಿತಗೊಳಿಸಿದೆ.

ಜನರಲ್ಲಿ ಜಾಗೃತಿ ಮೂಡಿಸಿ (ಹೈದರಾಬಾದ್ ವರದಿ): ವಿಷಕಾರಿ ಅಂಶವನ್ನು ಹೊಂದಿರುವ ಕೋಲ್ಡ್ರಿಫ್ ಕಂಪನಿಯ ಕೆಮ್ಮಿನ ಸಿರಪ್ ಬಗ್ಗೆ ಸಾರ್ವಜನಿಕರಿಗೆ ಎಚ್ಚರಿಕೆ ನೀಡುವಂತೆ ತೆಲಂಗಾಣ ಸರ್ಕಾರವು ಆರೋಗ್ಯ ಇಲಾಖೆಯ ಅಧಿಕಾರಿಗಳಿಗೆ ನಿರ್ದೇಶಿಸಿದೆ.

ಮಹಾರಾಷ್ಟ್ರ, ಜಾರ್ಖಂಡ್‌ನಲ್ಲೂ ಸಿರಪ್ ಬಳಕೆ ನಿಷೇಧಿಸಲಾಗಿದೆ.

ಒಡಿಶಾದ ಬರಗಡ ಜಿಲ್ಲೆಯಲ್ಲಿ ಕಾರ್ಯಾಚರಣೆ ನಡೆಸಿದ ಪೊಲೀಸರು ನಕಲಿ ಸಿರಪ್ ಹಾಗೂ ಶಸ್ತ್ರಾಸ್ತ್ರ ಕಳ್ಳ ಸಾಗಣೆ ಮಾಡುತ್ತಿದ್ದ 15 ಅಂತರರಾಜ್ಯ ಕಳ್ಳರನ್ನು ಸೋಮವಾರ ಬಂಧಿಸಿದ್ದಾರೆ.

ವಾಲ್ಮೀಕಿ ಕೊಟ್ಟ ಧರ್ಮದ ಬೆಳಕು

• ಎಸ್. ಸೂರ್ಯಪ್ರಕಾಶ ಪಂಡಿತ್

ರಾಮಾಯಣ ನಮಗೆ ಆದಿಕಾವ್ಯ. ಇಂದಿನ ಕವಿಗಳ ಕಾವ್ಯಗಳನ್ನು ಗಮನದಲ್ಲಿಟ್ಟುಕೊಂಡು ಆದಿಕಾವ್ಯವನ್ನು ಅರ್ಥಮಾಡಿಕೊಳ್ಳುವುದು ವಿಪರೀತ ಸಾಹಸವಾಗುತ್ತದೆ. ಆದಿಕಾವ್ಯದ ಹುಟ್ಟಿಗೆ ಕಾರಣವಿದೆ. ಅದಕ್ಕೂ, ಅದರ ಕವಿ ವಾಲ್ಮೀಕಿಗಳಿಗೂ ನೇರವಾದ ನಂಟೂ ಇದೆ. ಈ ಕಾರಣದ ಮೂಲ ವೈಯಕ್ತಿಕ ಸ್ತರದ್ದಾದರೂ, ಅದರ ಗುರಿ ಮಾತ್ರ ವೈಶ್ವಿಕ ಸ್ತರದ್ದು. ಇಂಥ ದಾರ್ಶನಿಕತೆಯ ನೆಲೆ ಇರುವುದರಿಂದಲೇ ವಾಲ್ಮೀಕಿ ಕೇವಲ ಕವಿ ಎನಿಸಿಕೊಳ್ಳಲಿಲ್ಲ, ಮಹರ್ಷಿಗಳೂ ಆದರು. ಅವರ ಕೃತಿ ಕೇವಲ ಕಾವ್ಯ ಎನಿಸಿಕೊಳ್ಳಲಿಲ್ಲ; ಆದಿಕಾವ್ಯ ಎನಿಸಿ, ವೇದಕ್ಕೆ ಸಮವಾಗಿ ಸ್ಥಿರವಾಯಿತು. ರಾಮಾಯಣವನ್ನೂ ವಾಲ್ಮೀಕಿಗಳನ್ನೂ ಸ್ತುತಿಸುವ ಹಲವು ಶ್ಲೋಕಗಳಲ್ಲಿ ಇದೂ ಒಂದು:



ವಾಲ್ಮೀಕಿಗಿರಿ ಸಂಭೂತಾ
ರಾಮಸಾಗರಗಾಮಿನೀ |
ಪುನಾತಿ ಭುವನಂ ಪುಣ್ಯಾ
ರಾಮಾಯಣ ಮಹಾನದೀ ||

'ರಾಮಾಯಣ ಎಂಬುದು ಮಹಾನದಿ. ಇದರ ಉಗಮಸ್ಥಾನವೇ ವಾಲ್ಮೀಕಿ ಎಂಬ ಗಿರಿ. ಈ ನದಿಯು ಹರಿಯುತ್ತಿರುವುದು ರಾಮ ಎಂಬ ಸಾಗರವನ್ನು ಸೇರಲು. ಹೀಗೆ ಈ ನದಿ ಪ್ರವಹಿಸುತ್ತ ಇಡಿಯ ಲೋಕವನ್ನೆಲ್ಲ ಪವಿತ್ರ ಮಾಡುತ್ತಿದೆ.'

ಪ್ರಪಂಚದ ಬಹುಪಾಲು ಸಂಸ್ಕೃತಿಗಳು ಅರಳಿರುವುದು ನದಿಗಳ ದಡಗಳಲ್ಲಿಯೇ. ನದಿ, ಎಂದರೆ ನೀರಿಲ್ಲದೆ ನಮ್ಮ ಜೀವನವಿಲ್ಲ. ನಮ್ಮ ಜೀವನ ಅರಳಬೇಕಾದರೆ 'ಜೀವನ'ದ ಸಾಮೀಪ್ಯ ಬೇಕೇ ಬೇಕು (ನೀರಿಗೆ 'ಜೀವನ' ಎಂದೂ ಹೆಸರಿದೆ). ರಾಮಾಯಣ ಎಂಬ ಮಹಾನದಿಯ ದಡಗಳಲ್ಲಿ ಸಂಸ್ಕೃತಿ ಮಾತ್ರವೇ ಅರಳಿಲ್ಲ, ಆ ಸಂಸ್ಕೃತಿಯನ್ನು ಪವಿತ್ರವನ್ನಾಗಿಯೂ ಮಾಡಿದೆ ಎಂಬುದು ಇಲ್ಲಿಯ ಇಂಗಿತ. ಹೀಗೆ ಸಂಸ್ಕೃತಿಪೋಷಕವಾದ ನದಿ ಹುಟ್ಟಿರುವುದು ವಾಲ್ಮೀಕಿ ಎಂಬ ಗಿರಿಯಲ್ಲಿ.

ರಾಮಾಯಣ ಎಂಬ ಮಹಾನದಿ ಯಾವುದೇ ಉದ್ದೇಶವಿಲ್ಲದೆಯೆ, ಹುಟ್ಟಿದ್ದಲ್ಲ. ಅದು ವಾಲ್ಮೀಕಿ ಎಂಬ 'ಗಿರಿ'ಯಲ್ಲಿ ಹುಟ್ಟಿದ್ದು ದಿಟ. ಆದರೆ ವಾಲ್ಮೀಕಿ ಮಹರ್ಷಿಗಳು ತಪಸ್ಸಿನಲ್ಲಿದ್ದಾಗ, ಧರ್ಮದ ಹುಡುಕಾಟದಲ್ಲಿದ್ದಾಗ ತೋರಿಕೊಂಡದ್ದು ರಾಮಾಯಣ.

ಲೋಕವನ್ನು ಕಾಪಾಡಬಲ್ಲ ಧರ್ಮದ ಮೂರ್ತರೂಪವಾಗಿ ಶ್ರೀರಾಮನು ವಾಲ್ಮೀಕಿಗಳಿಗೆ ಒದಗಿದ. ಅವರಿಗೆ ರಾಮನ ವ್ಯಕ್ತಿತ್ವ ಪ್ರತಿಫಲವಾದದ್ದು ಕೂಡ ನೀರಿನಲ್ಲಿಯೇ! ನದಿಯ ಸ್ವಚ್ಛವಾದ ನೀರಿನಲ್ಲಿ ಅವರಿಗೆ ರಾಮನ ಚಾರಿತ್ರ್ಯದ ಮಹಾದರ್ಶನವಾಯಿತು. 'ಸಜ್ಜನರ ಮನಸ್ಸಿನಂತೆ ನೀರು ತಿಳಿಯಾಗಿದೆ' ಎಂದು ಉದ್ಗರಿಸಿದಾಗ ಅದು ರಾಮನ ಮನಸ್ಸಿನ ಲಕ್ಷಣವೂ ಆಗಿತ್ತು, ಧರ್ಮದ ಲಕ್ಷಣವೂ ಆಗಿತ್ತು; ಎರಡೂ ಕೂಡಿಕೊಂಡು ರಾಮಾಯಣ ಎಂಬ ಮಹಾನದಿಯು ವಾಲ್ಮೀಕಿಗಳಲ್ಲಿ ಪ್ರವಹಿಸಿತು!

ಹೀಗಾಗಿ ರಾಮಾಯಣದ ಅಂತಃಸ್ರೋತವೇ ಧರ್ಮವಾಯಿತು. ಇದರ ಉಗಮಕ್ಕೆ ಕಾರಣವಾದದ್ದು ವಾಲ್ಮೀಕಿಗಳ ತಪಸ್ಸು; ಜಗತ್ತಿಗೆ ಧರ್ಮದ ಬೆಳಕನ್ನು ಕಾಣಿಸಬೇಕೆಂಬ ತಪಸ್ಸು. ಈ ಕಾರಣದಿಂದಲೇ ರಾಮಾಯಣ ಕೇವಲ ಕಾವ್ಯವಾಗಿ ಒದಗಲಿಲ್ಲ; ಅದು ಧರ್ಮದ ನಡೆ–ನುಡಿಗಳ ಕಾಣ್ಕೆಯೂ ಆಯಿತು. ಧರ್ಮದ ಮೂರ್ತರೂಪವಾದ ರಾಮನ ನಡೆಯನ್ನು ಲೋಕಕ್ಕೆ ವಾಲ್ಮೀಕಿ ಮಹರ್ಷಿಗಳ ನುಡಿ ಕಂಡರಿಸಿಕೊಟ್ಟಿತು. ರಾಮಾಯಣದುದ್ದಕ್ಕೂ ನಾವು ಕಾಣುವುದು 'ಮಾತು' ಧರ್ಮವಾಗುವ ಬಗೆಯನ್ನೇ.

ಇಂದು ನಾವು ಮಾತನ್ನು ತುಂಬ ಅಪವ್ಯಯ ಮಾಡುತ್ತಿದ್ದೇವೆ. ನಮ್ಮ ಕಪಟಗಳನ್ನು ಮಾತಿನ ನೆರವಿನಿಂದ ಮುಚ್ಚಿಡಲು ಪ್ರಯತ್ನಿಸುತ್ತಿರುತ್ತೇವೆ; ಕಾವ್ಯದ ಹೆಸರಿನಲ್ಲಿ ಮಾತನ್ನು ಕೆಡಿಸುತ್ತಿದ್ದೇವೆ. ಮಾತಿಗೂ ಧರ್ಮಕ್ಕೂ ಇರುವ ನಂಟನ್ನು ರಾಮಾಯಣ ತುಂಬ ಸೊಗಸಾಗಿ ಸ್ಥಾಪಿಸುತ್ತದೆ. ಧರ್ಮವನ್ನು ಮಾತಿನಲ್ಲಿ ವಿವರಿಸುವುದು ಸುಲಭವಲ್ಲ. ಆದರೆ ವಾಲ್ಮೀಕಿಗಳು ರಾಮನ ಗುಣಗಳನ್ನು ವರ್ಣಿಸುತ್ತ ಧರ್ಮದ ವ್ಯಾಪ್ತಿಯನ್ನೂ ಲಕ್ಷಣವನ್ನೂ ಸೊಗಸನ್ನೂ ಕಾಣಿಸಿದ್ದಾರೆ. ಕಾವ್ಯವು ಮಾಡಬೇಕಾದ ಕೆಲಸ ಇದೇ; ಮಾತಿಗೆ ನಿಲುಕದ ಬೆಳಕಿನ ತಂಪನ್ನು ಹೃದಯಕ್ಕೆ ತಲಪಿಸುವುದು. ಅಂತೆಯೇ ಧರ್ಮದ ನೆಮ್ಮದಿಯನ್ನು ವಾಲ್ಮೀಕಿಗಳು ರಾಮಾಯಣದ ಮೂಲಕ ನಮಗೆ ಒದಗಿಸಿದ್ದಾರೆ.

ಪ್ರಜಾವಾಣಿ
ಕ್ಲಾಸಿಫೈಡ್ಸ್
ಪ್ರತಿಯೊಬ್ಬರಿಗೂ ಉಪಯುಕ್ತ

ಉದ್ಯೋಗಾವಕಾಶ

General

✓ ಉದ್ಯೋಗಾವಕಾಶಗಳು TVS ಬ್ರಿಟಾನಿಯಾ, ವಿಡಿಯೋಕಾನ್, ಹಿಮಾಲಯ ಕಂಪನಿಗಳಿಗೆ 7th, PUC, ITI, Degree. ಸಂಬಳ 16,000-86,000/- (ವಿದ್ಯಾರ್ಹತೆಯಿಲ್ಲದವರಿಗೂ) ವಸತಿಯೂಟವಿರುತ್ತದೆ. 9035710381

ಕಂಪನಿಗಳಿಗೆ ಬೇಕಾಗಿದ್ದಾರೆ. ಟಯೋಟಾ, TVS,ಹಿಮಾಲಯಾ, ಬ್ರಿಟಾನಿಯಾಗಳಿಗೆ SSLC, PUC,Degree, ITI, Diplomaದವರು.18,000/-ದಿಂದ 86,000/- .(ವಿದ್ಯಾರ್ಹತೆಯಿಲ್ಲದವರಿಗೂ) ವಸತಿಯೂಟವಿದೆ. 9035075571

Part-Time Jobs

ಮನೆಯಲ್ಲೇ ಕುಳಿತು ನಾವು ಕೊಡುವ ಪುಸ್ತಕ ಬರೆಯುವ ಹಾಗೂ ಫಾರಂತುಂಬುವ ಮೂಲಕ,ತಿಂಗಳಿಗೆ, 15,000.ರಿಂದ 20,000. ಸಂಪಾದಿಸಿ.'ಕೊರಿಯರ್ ಸೌಲಭ್ಯವಿದೆ. 8884777503, 8884777502.

ರಿಯಲ್ ಎಸ್ಟೇಟ್ ಸೆಲ್ಲಿಂಗ್

Residential/ Commercial

General

ONLY 10 Sites Remaining near Ranibennur, on NH48 Pune -Blr 7019251118

ಪ್ರವಾಸ

Travel

03.11.2025 ಭುವನೇಶ್ವರ್, ಕೊಲ್ಕತ್ತಾ, 25.11.2025 ನೈಮಿಶರಣ್ಯ, ಅಯೋಧ್ಯಾ, ಪ್ರಯಾಗ್‌ರಾಜ್, ಗಯಾ,ಕಾಶಿ, 01.12.2025 ಗುಜರಾತ್, ಮಧ್ಯಪ್ರದೇಶ್ (4ಜ್ಯೋತಿರ್ಲಿಂಗ) ಕರ್ನಾಟಕ ಹೆರಿಟೇಜ್ ಟೂರ್ಸ್ (ಹನುಮಂತನಗರ). 9845035349, 9482435755

ಓದುಗರ ಗಮನಕ್ಕೆ
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಾರ್ಹವಾದವು. ಆದರೆ, ಅದರಲ್ಲಿ ಪ್ರತಿಪಾದಿತವಾದ ವಸ್ತು, ವಿಷಯ, ವಿಚಾರಗಳು ಜಾಹೀರಾತುದಾರರ ಅಭಿಪ್ರಾಯ ಆಗಿರುತ್ತವೆಯೇ ಹೊರತು ಪತ್ರಿಕೆಯ ಅಭಿಪ್ರಾಯವಾಗಿರುವುದಿಲ್ಲ. ಈ ಅಭಿಪ್ರಾಯಗಳಿಗೆ ಪತ್ರಿಕೆ ಯಾವುದೇ ರೀತಿಯಿಂದ ಹೊಣೆಯಲ್ಲ.
ಜಾಹೀರಾತು ವ್ಯವಸ್ಥಾಪಕರು, ದಿ ಪ್ರಿಂಟರ್ಸ್ (ಮೈಸೂರು) ಪ್ರೈವೇಟ್ ಲಿ. ಬೆಂಗಳೂರು

ಚಿತ್ರಮಂದಿರ ತುಂಬಿದ 'ಕಾಂತಾರ'

50 ಲಕ್ಷಕ್ಕೂ ಅಧಿಕ ಟಿಕೆಟ್ ಮಾರಾಟ

ಅ.2ರಂದು ತೆರೆಕಂಡಿದ್ದ ರಿಷಬ್ ಶೆಟ್ಟಿ ನಟಿಸಿ, ನಿರ್ದೇಶಿಸಿರುವ 'ಕಾಂತಾರ: ಒಂದು ದಂತಕಥೆ, ಚಾಪ್ಟರ್–1' ಸಿನಿಮಾ ಚಿತ್ರಮಂದಿರಗಳತ್ತ ಪ್ರೇಕ್ಷಕರನ್ನು ಸೆಳೆಯುತ್ತಿದೆ. ಕಳೆದ ನಾಲ್ಕೈದು ದಿನಗಳಲ್ಲಿ ಮಾರಾಟವಾದ ಟಿಕೆಟ್ ಸಂಖ್ಯೆಯೇ ಇದಕ್ಕೆ ಸಾಕ್ಷಿ.

'ಬುಕ್‌ಮೈ ಶೋ' ಮೂಲಕವೇ 50 ಲಕ್ಷಕ್ಕೂ ಅಧಿಕ ಟಿಕೆಟ್‌ಗಳು ಮಾರಾಟವಾಗಿವೆ ಎಂದು ಹೊಂಬಾಳೆ ಫಿಲ್ಮ್ಸ್ ತಿಳಿಸಿದೆ. ಸಿನಿಮಾ ಬಿಡುಗಡೆಯಾದ ದಿನವೇ ಸಿನಿಮಾದ 12 ಲಕ್ಷಕ್ಕೂ ಅಧಿಕ ಟಿಕೆಟ್‌ಗಳು ಮಾರಾಟ ಆಗಿದ್ದವು. ಪ್ರತಿ ದಿನ 10 ಲಕ್ಷ ಟಿಕೆಟ್‌ಗಳು 'ಬುಕ್‌ಮೈಶೋ' ಮುಖಾಂತರ ಬಿಕರಿಯಾಗುತ್ತಿವೆ. ಸೋಮವಾರವೂ ಕೆಲ ಮಲ್ಟಿಪ್ಲೆಕ್ಸ್‌ಗಳು 20–23 ತೆರೆಗಳನ್ನು ಈ ಸಿನಿಮಾಗಾಗಿ ನೀಡಿದೆ. ದೇಶದಾದ್ಯಂತ ಏಳು ಸಾವಿರಕ್ಕೂ ಅಧಿಕ ತೆರೆಗಳಲ್ಲಿ ಬಿಡುಗಡೆಯಾಗಿದ್ದ ಈ ಸಿನಿಮಾ ವಿದೇಶಗಳಲ್ಲೂ ಭರ್ಜರಿಯಾದ ಕಲೆಕ್ಷನ್ ಮಾಡಿದೆ. ಉತ್ತರ ಅಮೆರಿಕದಲ್ಲಿ ಸಿನಿಮಾ ಇಲ್ಲಿಯವರೆಗೆ ₹17 ಕೋಟಿಗೂ ಅಧಿಕ ಹಣ ಗಳಿಸಿದೆ. ಆಸ್ಟ್ರೇಲಿಯಾ, ನ್ಯೂಜಿಲೆಂಡ್‌ನಲ್ಲಿ ಸಿನಿಮಾ ₹63 ಲಕ್ಷಕ್ಕೂ ಅಧಿಕ ಹಣ ಗಳಿಸಿದೆ.

ಇದೇ ಸಂದರ್ಭದಲ್ಲಿ ತಮ್ಮ ನಿರ್ದೇಶನದ ಚೊಚ್ಚಲ ಸಿನಿಮಾ 'ರಿಕ್ಕಿ' ಬಿಡುಗಡೆಯಾದ ದಿನಗಳನ್ನು ರಿಷಬ್ ಶೆಟ್ಟಿ ನೆನಪಿಸಿಕೊಂಡಿದ್ದಾರೆ. '2016ರಲ್ಲಿ ಒಂದು ಪ್ರದರ್ಶನಕ್ಕಾಗಿ ಒದ್ದಾಡಿದ ದಿನದಿಂದ, 5000ಕ್ಕೂ ಹೆಚ್ಚು ಹೌಸ್‌ಫುಲ್ ಶೋಗಳ ಈ ಅದ್ಭುತ ಪಯಣ. ಇದು ಸಾಧ್ಯವಾಗಿದ್ದು ನಿಮ್ಮ ಪ್ರೀತಿ ಮತ್ತು ಬೆಂಬಲದಿಂದ ಮಾತ್ರ. ಇದಕ್ಕಾಗಿ ನಾನು ನಿಮಗೆ ಸದಾ ಋಣಿ' ಎಂದಿದ್ದಾರೆ. 'ರಿಕ್ಕಿ' ಸಿನಿಮಾ 2016ರ ಜ.22ರಂದು ತೆರೆಕಂಡಿತ್ತು. ಆ ಸಂದರ್ಭದಲ್ಲಿ ಟ್ವೀಟ್ ಒಂದನ್ನು ಮಾಡಿದ್ದ ರಿಷಬ್, 'ಅಂತು ಇಂತು ಅವರಿವರ ಕೈಕಾಲು ಹಿಡಿದು ಮಂಗಳೂರಿನ ಬಿಗ್ ಸಿನಿಮಾಸ್‌ನಲ್ಲಿ ಒಂದು ಶೋ ಸಿಕ್ತು' ಎಂದು ಉಲ್ಲೇಖಿಸಿದ್ದರು.

ಟಿಕೆಟ್ ಜೋಪಾನ

ಸಿನಿಮಾ ಟಿಕೆಟ್ ದರವನ್ನು ಗರಿಷ್ಠ ₹200ಕ್ಕೆ ನಿಗದಿಪಡಿಸಿ ಗೃಹ ಇಲಾಖೆ ಹೊರಡಿಸಿರುವ ಅಧಿಸೂಚನೆಗೆ ಹೈಕೋರ್ಟ್ ಮಧ್ಯಂತರ ತಡೆ ನೀಡಿದೆ. ಹೈಕೋರ್ಟ್‌ನಲ್ಲಿ ಸರ್ಕಾರದ ನಿರ್ಣಯದ ಪರವಾಗಿ ತೀರ್ಪು ಬಂದರೆ ಹೆಚ್ಚುವರಿಯಾಗಿ ಪಾವತಿಸಿದ ಹಣ ವಾಪಸ್ ಸಿಗಲಿದೆ ಎಂದು ಸರ್ಕಾರ ತಿಳಿಸಿದೆ. ಸಿನಿಮಾ ವೀಕ್ಷಣೆ ಬಳಿಕ ಟಿಕೆಟ್ ಎಸೆಯದೆ ಭದ್ರವಾಗಿರಿಸಿಕೊಳ್ಳಿ. ಮಲ್ಟಿಪ್ಲೆಕ್ಸ್ ಚಿತ್ರಮಂದಿರಗಳ ಮಾಲೀಕರಿಗೆ ಟಿಕೆಟ್ ಮಾರಾಟದ ದಾಖಲೆ ನಿರ್ವಹಣೆಗೆ ಸೂಚಿಸಲಾಗಿದೆ ಎಂದು ಸರ್ಕಾರ ತಿಳಿಸಿದೆ.

'KD'ಯಲ್ಲಿ ಧ್ರುವ ಸರ್ಜಾ ಲುಕ್

ಧ್ರುವ ಸರ್ಜಾ

2025ರ ಬಹುನಿರೀಕ್ಷಿತ ಸಿನಿಮಾಗಳಲ್ಲಿ ಒಂದಾದ ಪ್ರೇಮ್ ನಿರ್ದೇಶನದ, ಧ್ರುವ ಸರ್ಜಾ ನಟನೆಯ 'KD' ಸಿನಿಮಾ ತೆರೆಗೆ ಬರಲು ಸಜ್ಜಾಗುತ್ತಿದೆ. ಧ್ರುವ ಸರ್ಜಾ ಜನ್ಮದಿನದಂದು (ಅ.6) ಅವರ ಪಾತ್ರದ ಹೊಸ ಪೋಸ್ಟರ್ ಬಿಡುಗಡೆಯಾಗಿದ್ದು, ರಗಡ್ ಲುಕ್‌ನಲ್ಲಿ ಬಿರಿಯಾನಿ ತಿನ್ನುತ್ತಾ ಧ್ರುವ ಕಾಣಿಸಿಕೊಂಡಿದ್ದಾರೆ.

ಚಿತ್ರತಂಡ ಬಿಡುಗಡೆ ದಿನಾಂಕವನ್ನು ಇನ್ನಷ್ಟೇ ಘೋಷಿಸಬೇಕಿದ್ದು, ಕನ್ನಡ ಸೇರಿದಂತೆ ಐದು ಭಾಷೆಗಳಲ್ಲಿ ಸಿನಿಮಾ ತೆರೆಕಾಣಲಿದೆ. ಸಿನಿಮಾದಲ್ಲಿ ಸುದೀಪ್ ಅವರೂ ಪಾತ್ರವೊಂದನ್ನು ನಿರ್ವಹಿಸಿದ್ದಾರೆ. 'ಏಕ್ ಲವ್ ಯಾ' ಸಿನಿಮಾ ನಂತರ ಪ್ರೇಮ್ ನಿರ್ದೇಶನದ ಪ್ಯಾನ್ ಇಂಡಿಯಾ ಚಿತ್ರ ಇದಾಗಿದ್ದು, ಧ್ರುವ ಸರ್ಜಾ, ರೀಷ್ಮಾ ನಾಣಯ್ಯ, ಸಂಜಯ್ ದತ್, ರವಿಚಂದ್ರನ್, ಶಿಲ್ಪಾ ಶೆಟ್ಟಿ, ರಮೇಶ್ ಅರವಿಂದ್ ಚಿತ್ರದ ತಾರಾಬಳಗದಲ್ಲಿದ್ದಾರೆ. 'KD'–ಕಾಳಿದಾಸ ಸಿನಿಮಾವನ್ನು ಕೆವಿಎನ್ ಪ್ರೊಡಕ್ಷನ್ಸ್ ನಿರ್ಮಾಣ ಮಾಡಿದೆ. 1970-75ರ ಸಮಯದಲ್ಲಿ ನಡೆದ ನೈಜಘಟನೆ ಆಧಾರಿತ ಗ್ಯಾಂಗ್‌ಸ್ಟರ್ ಕಥೆ ಈ ಚಿತ್ರಲ್ಲಿದೆ. ಚಿತ್ರಕ್ಕಾಗಿ ಸುಮಾರು 180 ದಿನ ಚಿತ್ರೀಕರಣ ನಡೆಸಿದ್ದ ಚಿತ್ರತಂಡ ಹಂಗರಿ ರಾಜಧಾನಿ ಬುಡಾಪೆಸ್ಟ್‌ನಲ್ಲಿ ಚಿತ್ರದ ಬ್ಯಾಗ್ರೌಂಡ್ ಸ್ಕೋರ್ ಕೆಲಸವನ್ನು ನಡೆಸಿತ್ತು.

ಸುಖ್ವಿಂದರ್, ಧನಂಜಯ

ಡಾಲಿ ಧನಂಜಯ ಜೊತೆ ಸುಖ್ವಿಂದರ್ ಸಿಂಗ್

'ಕವಲುದಾರಿ', 'ಸಪ್ತಸಾಗರದಾಚೆ ಎಲ್ಲೋ' ಸಿನಿಮಾ ನಿರ್ದೇಶಕ ಹೇಮಂತ್ ಎಂ.ರಾವ್ ನಿರ್ದೇಶನದ '666 ಆಪರೇಷನ್ ಡ್ರೀಮ್ ಥಿಯೇಟರ್' ಸಿನಿಮಾದ ಶೂಟಿಂಗ್ ಬೆಂಗಳೂರಿನಲ್ಲಿ ನಡೆಯುತ್ತಿದೆ. ಇದೀಗ ಈ ಸಿನಿಮಾ ಅಂಗಳಕ್ಕೆ ಡಬ್ಲ್ಯು-ಡಬ್ಲ್ಯುಇ ಸೂಪರ್‌ಸ್ಟಾರ್ ಸುಖ್ವಿಂದರ್ ಸಿಂಗ್ ಗ್ರೆವಾಲ್ ಪ್ರವೇಶಿಸಿದ್ದಾರೆ.

7.2 ಅಡಿ ಎತ್ತರವಿರುವ ಸುಖ್ವಿಂದರ್, ನಟ ಶಾರುಖ್ ಖಾನ್ ನಟನೆಯ 'ಜವಾನ್' ಹಾಗೂ ಆರ್ಯನ್ ಖಾನ್ ನಿರ್ದೇಶನದ 'ಬ್ಯಾಡ್ಸ್ ಆಫ್ ಬಾಲಿವುಡ್'ನಲ್ಲಿ ನಟಿಸಿದ್ದಾರೆ. ಇದೀಗ ಸ್ಯಾಂಡಲ್‌ವುಡ್‌ಗೆ ಹೆಜ್ಜೆ ಇಟ್ಟಿದ್ದಾರೆ. ಸಿನಿಮಾದ ಎರಡನೇ ಹಂತದ ಚಿತ್ರೀಕರಣ ಬಿರುಸಿನಿಂದ ನಡೆಯುತ್ತಿದ್ದು, ಸುಖಿ ಪಾತ್ರದ ಬಗ್ಗೆ ಮಾತನಾಡಿರುವ ಹೇಮಂತ್, 'ನಮಗೆ ಭಯಾನಕವಾಗಿ ಕಾಣುವ ವ್ಯಕ್ತಿತ್ವದ ಪಾತ್ರಧಾರಿ ಬೇಕಿತ್ತು. ದೊಡ್ಡ ಪರದೆಯನ್ನೂ ಚಿಕ್ಕದಾಗಿ ಕಾಣುವಂತೆ ಮಾಡಿದ ವ್ಯಕ್ತಿ ಇವರು. ಅವರು ನೋಡಲಷ್ಟೇ ದೈತ್ಯ. ಅತ್ಯಂತ ಸೌಮ್ಯ ಸ್ವಭಾವದ ವ್ಯಕ್ತಿಗಳಲ್ಲಿ ಅವರೂ ಒಬ್ಬರು' ಎಂದಿದ್ದಾರೆ.

'ದಕ್ಷಿಣದ ಚಿತ್ರೋದ್ಯಮದ ಬಗ್ಗೆ ಬಹಳಷ್ಟು ಕೇಳಿದ್ದೇನೆ. ಇದೀಗ ಧನಂಜಯ ಮತ್ತು ಶಿವರಾಜ್‌ಕುಮಾರ್ ಜೊತೆಗೆ ಕೆಲಸ ಮಾಡುವ ಅವಕಾಶ ಸಿಕ್ಕಿರುವುದು ಗೌರವ. ಕನ್ನಡ ಪ್ರೇಕ್ಷಕರ ಪ್ರತಿಕ್ರಿಯೆಯನ್ನು ಎದುರು ನೋಡುತ್ತಿದ್ದೇನೆ. ಬೆಂಗಳೂರಿನ ವಾತಾವರಣವನ್ನು ನಾನು ಹೆಚ್ಚು ಆನಂದಿಸಿದೆ. ನಾನು ನಗರವನ್ನು ಹೆಚ್ಚು ನೋಡಿಲ್ಲ, ಆದರೆ ಇಲ್ಲಿನ ಆಹಾರವನ್ನು ಆನಂದಿಸಿದೆ. ಅದಕ್ಕಾಗಿಯೇ ನಾನು ಜಿಮ್‌ನಲ್ಲಿ ಹೆಚ್ಚು ಸಮಯ ಕಳೆಯಬೇಕಾಯಿತು' ಎಂದಿದ್ದಾರೆ ಸುಖ್ವಿಂದರ್.

ಈಗಾಗಲೇ ಸುಖ್ವಿಂದರ್ ಅವರ ಪಾತ್ರದ ಭಾಗದ ಆ್ಯಕ್ಷನ್ ಸೀಕ್ವೆನ್ಸ್ ಮುಕ್ತಾಯಗೊಂಡಿದೆ. ವೈಶಾಖ್ ಜೆ.ಗೌಡ ಅವರ 'ವೈಶಾಖ್ ಜೆ.ಫಿಲ್ಮ್ಸ್' ಬ್ಯಾನರ್ ಅಡಿಯಲ್ಲಿ ಈ ಸಿನಿಮಾ ನಿರ್ಮಾಣವಾಗುತ್ತಿದೆ. ರೆಟ್ರೋ ಶೈಲಿಯಲ್ಲಿ ಈ ಸಿನಿಮಾವಿದ್ದು, ಚರಣ್ ರಾಜ್ ಸಂಗೀತ ನಿರ್ದೇಶನ ಚಿತ್ರಕ್ಕಿದೆ.

ಚುನಾವಣೆ ಘೋಷಣೆಗೆ ಮುನ್ನ ₹1 ಲಕ್ಷ ಕೋಟಿಗೂ ಅಧಿಕ ಮೊತ್ತದ ಕಾಮಗಾರಿಗಳಿಗೆ ಚಾಲನೆ

ಬಿಹಾರ–ಯಾರಿಗೆ ಗೆಲುವಿನ ಹಾರ?

ಪ್ರಜಾವಾಣಿ ವಾರ್ತೆ

ನವದೆಹಲಿ: ಬಿಹಾರ ಚುನಾವಣೆಯಲ್ಲಿ ಕಳೆದ ಎರಡು ದಶಕಗಳಲ್ಲಿ ಯಾವುದೇ ಪಕ್ಷವು ಸ್ವತಂತ್ರವಾಗಿ ಅಧಿಕಾರದ ಚುಕ್ಕಾಣಿ ಹಿಡಿದಿಲ್ಲ. ಈ ಅವಧಿಯಲ್ಲಿ ಮಿತ್ರರು ಶತ್ರುಗಳಾಗಿದ್ದಾರೆ, ಶತ್ರುಗಳು ಮಿತ್ರರಾಗಿದ್ದಾರೆ. ಮೈತ್ರಿಕೂಟದಲ್ಲಿದ್ದರೂ ವಿಧಾನಸಭೆಯ ಅತೀ ದೊಡ್ಡ ಪಕ್ಷವಾಗಿ ಹೊರಹೊಮ್ಮಲು ಹೋರಾಟ ನಡೆಸಿವೆ. 2025ರ ಚುನಾವಣೆ ಇದಕ್ಕಿಂತ ಭಿನ್ನವಾಗಿರಲಿದೆಯಾ?

ರಾಜ್ಯದಲ್ಲಿ ಹೆಚ್ಚುತ್ತಿರುವ ನಿರುದ್ಯೋಗ ಸಮಸ್ಯೆ, ಬಿಹಾರಕ್ಕೆ ವಿಶೇಷ ಸ್ಥಾನಮಾನದ ಬೇಡಿಕೆ, ಮತದಾರರ ಪಟ್ಟಿಯ ವಿಶೇಷ ಸಮಗ್ರ ಪರಿಷ್ಕರಣೆ (ಎಸ್‌ಐಆರ್) ಹಾಗೂ ಜಾತಿ ಆಧಾರಿತ ಮೀಸಲಾತಿ ವಿಷಯಗಳು ಚುನಾವಣೆಯಲ್ಲಿ ಪ್ರಮುಖ ಪಾತ್ರ ವಹಿಸಲಿವೆ.

ಚುನಾವಣೆ ಘೋಷಣೆಗೆ ಮುನ್ನ ಮೈತ್ರಿಸರ್ಕಾರವು ಒಂದು ಲಕ್ಷ ಕೋಟಿಗೂ ಅಧಿಕ ಮೊತ್ತದ ಅಭಿವೃದ್ಧಿ ಹಾಗೂ ಕಲ್ಯಾಣ ಕಾರ್ಯಕ್ರಮಗಳಿಗೆ ಚಾಲನೆ ನೀಡಿದೆ. ಸುಶಾಸನ ಹಾಗೂ ಹಿಂದುತ್ವ ಪ್ರತಿಪಾದಿಸುತ್ತಾ ಪ್ರಧಾನಿ ನರೇಂದ್ರ ಮೋದಿ ಹಾಗೂ ಮುಖ್ಯಮಂತ್ರಿ ನಿತೀಶ್ ಕುಮಾರ್ ಅವರ ವರ್ಚಸ್ಸನ್ನು ನೆಚ್ಚಿಕೊಂಡಿದೆ.

2000ರಿಂದ ಈಚೆಗೆ ಯಾವುದೇ ಪಕ್ಷವು ಸ್ವತಂತ್ರವಾಗಿ ಅಧಿಕಾರದ ಚುಕ್ಕಾಣಿ ಹಿಡಿದ ಉದಾಹರಣೆ ಇಲ್ಲ. ಕಳೆದೆರಡು ದಶಕಗಳಿಂದ ಬಿಹಾರ ರಾಜಕಾರಣದಲ್ಲಿ ನಿತೀಶ್ ಕುಮಾರ್ 'ಕಿಂಗ್ ಮೇಕರ್' ಆಗಿದ್ದಾರೆ. ಪದೇ ಪದೇ ಮೈತ್ರಿಕೂಟ ಬದಲಿಸಿದ್ದಾರೆ. ಮರೆಗುಳಿತನದಿಂದ ಬಳಲುತ್ತಿರುವ ಅವರು ಈ ಸಲ ನಿಸ್ತೇಜರಾಗಿರುವಂತೆ ತೋರುತ್ತಿದೆ. ಜತೆಗೆ, ಎನ್‌ಡಿಎ ಮಿತ್ರ ಪಕ್ಷದ ನಾಯಕರಾದ ಚಿರಾಗ್ ಪಾಸ್ವಾನ್ ಅವರು ನಿತೀಶ್ ವಿರುದ್ಧವೇ ಕತ್ತಿ ಮಸೆಯುತ್ತಿದ್ದಾರೆ. ಈ ಚುನಾವಣೆಯಲ್ಲಿ ನಿತೀಶ್ ಅವರನ್ನು ಮತ್ತಷ್ಟು ದುರ್ಬಲಗೊಳಿಸಿ ರಾಜ್ಯ ರಾಜಕಾರಣದಲ್ಲಿ ಅವರನ್ನು ಅಪ್ರಸ್ತುತಗೊಳಿಸುವುದು ಅವರ ಕಾರ್ಯತಂತ್ರ. ಇದಕ್ಕೆ ಬಿಜೆಪಿ ನಾಯಕರ ಪರೋಕ್ಷ ಚಿತಾವಣೆಯೂ ಇದೆ. ಈ ಮೂಲಕ, ರಾಜ್ಯದಲ್ಲಿ ಅತಿ ದೊಡ್ಡ ರಾಜಕೀಯ ಪಕ್ಷವಾಗಿ ಹೊರಹೊಮ್ಮುವುದು ಕಮಲ ಪಾಳಯದ ಹಂಬಲ. 2020ರ ಚುನಾವಣೆಯಲ್ಲಿ ಮಿತ್ರರನ್ನು ನಿತೀಶ್ ವಿರುದ್ಧ ಎತ್ತಿ ಕಟ್ಟುವ ಮೂಲಕ ಬಿಜೆಪಿ ಭಾಗಶಃ ಯಶಸ್ಸು ಸಾಧಿಸಿತ್ತು.

ಇನ್ನೊಂದೆಡೆ, ಆರ್‌ಜೆಡಿ–ಕಾಂಗ್ರೆಸ್ ನೇತೃತ್ವದ ಮಹಾಘಟಬಂಧನ್ 'ಮತ ಕಳವು' ಹಾಗೂ ಮತದಾರರ ಪಟ್ಟಿ ಪರಿಷ್ಕರಣೆಯನ್ನೇ ಪ್ರಮುಖ ಚುನಾವಣಾ ವಿಷಯವನ್ನಾಗಿ ಮಾಡಿಕೊಂಡಿದೆ. ರಾಹುಲ್ ಗಾಂಧಿ–ತೇಜಸ್ವಿ ಯಾದವ್ ಜೋಡಿಯ ಮ್ಯಾಜಿಕ್‌ನಿಂದ ಅಧಿಕಾರದ ಗದ್ದುಗೆ ಹಿಡಿಯಬಹುದು ಎಂಬುದು ಮೈತ್ರಿಕೂಟದ ನಾಯಕರ ವಿಶ್ವಾಸ.

ಮೈತ್ರಿಕೂಟವು ಶೇ 30ರಷ್ಟಿರುವ ಮುಸ್ಲಿಂ–ಯಾದವ ಮತದಾರರನ್ನು ನೆಚ್ಚಿಕೊಂಡಿದೆ. ಮಂಡಲ್– ಕಮಂಡಲ ಚಳವಳಿಯ ಬಳಿಕ ಪಕ್ಷವು ರಾಜ್ಯದಲ್ಲಿ ನಿಸ್ತೇಜಗೊಂಡಿತ್ತು. 2020ರ ಚುನಾವಣೆಯಲ್ಲಿ ಮೈತ್ರಿಕೂಟವು ಅಧಿಕಾರದಿಂದ ಗಾವುದ ದೂರ ಉಳಿಯಲು ಕಾಂಗ್ರೆಸ್‌ನ ಕಳಪೆ ಪ್ರದರ್ಶನವು ಪ್ರಮುಖ ಕಾರಣ.

ಈಚಿನ ವರ್ಷಗಳಲ್ಲಿ ಕಾಂಗ್ರೆಸ್‌ನ ರಾಜ್ಯ ಉಸ್ತುವಾರಿಗಳು ಹಾಗೂ ರಾಜ್ಯ ಘಟಕದ ಅಧ್ಯಕ್ಷರು ಆರ್‌ಜೆಡಿ ವರಿಷ್ಠ ಲಾಲೂ ಪ್ರಸಾದ್ ಆಣತಿಯಂತೆ ಕಾರ್ಯನಿರ್ವಹಿಸಿದ್ದೇ ಹೆಚ್ಚು. ಚುನಾವಣೆಗೆ ಆರು ತಿಂಗಳು ಇರುವಾಗ ಇಂತಹ ನಾಯಕರನ್ನು ಹುದ್ದೆಯಿಂದ ಮುಕ್ತಗೊಳಿಸಲಾಗಿದೆ. ಈ ಜಾಗಕ್ಕೆ ರಾಹುಲ್ ಗಾಂಧಿ ಆಪ್ತರನ್ನು ಕೂರಿಸಲಾಗಿದೆ. ರಾಹುಲ್ ಗಾಂಧಿ ನಡೆಸಿದ ಮತ ಅಧಿಕಾರ ಯಾತ್ರೆಯು ಪಕ್ಷದಲ್ಲಿ ಹೊಸ ಸಂಚಲನ ಸೃಷ್ಟಿಸಿದೆ. ಕಾರ್ಯಕರ್ತರಲ್ಲಿ ಕಸುವು ತುಂಬಿದೆ.

ಬಿಹಾರ ವಿಧಾನಸಭೆ ಬಲಾಬಲ; 25 ವರ್ಷಗಳ ಹಾದಿ...



ಬಿಹಾರ
ಪ್ರಜಾಮತ
ಜನತಂತ್ರದ ಹಬ್ಬ
ವಿಧಾನಸಭಾ ಚುನಾವಣೆ - 2025

ಬಿಹಾರ 'ಮತ'ಕ್ಕೆ ಮುಹೂರ್ತ

ಒಂದನೇ ಪುಟದಿಂದ...

ಮೊದಲ ಹಂತದಲ್ಲಿ 121 ಸ್ಥಾನಗಳಿಗೆ, 2ನೇ ಹಂತದಲ್ಲಿ 122 ವಿಧಾನಸಭಾ ಕ್ಷೇತ್ರಗಳಲ್ಲಿ ಮತದಾನ ನಡೆಯಲಿದೆ.

ವೇಳಾಪಟ್ಟಿಯ ಘೋಷಣೆಯ ಬೆನ್ನಲ್ಲೇ, ಎನ್‌ಡಿಎ ಮತ್ತು ಇಂಡಿಯಾ ಬಣದಲ್ಲಿ ಸೀಟು ಹಂಚಿಕೆ ಮಾತುಕತೆಗೆ ವೇಗ ದೊರಕಿದೆ. ಸಿಪಿಐಎಂಎಲ್ (ಎಲ್), ವಿಐಪಿ, ಎಲ್‌ಜೆಪಿ (ಆರ್‌ವಿ), ಎಚ್‌ಎಎಂನಂತಹ ಸಣ್ಣ ಪಕ್ಷಗಳು ಮೈತ್ರಿಕೂಟದ ನಾಯಕರೊಂದಿಗೆ ಚೌಕಾಶಿಯಲ್ಲಿ ತೊಡಗಿವೆ.

ಚುನಾವಣಾ ಆಯೋಗವು ನಡೆಸಿದ ವಿವಾದಾತ್ಮಕ ಎಸ್‌ಐಆರ್ ರಾಜ್ಯದಲ್ಲಿ ಮತದಾರರ ಸಂಖ್ಯೆಯನ್ನು 7.49 ಕೋಟಿಯಿಂದ 7.43 ಕೋಟಿಗೆ ಇಳಿಸಿದೆ. ಈ ಚುನಾವಣೆಯು ಬಿಜೆಪಿ ಅಂತಿಮವಾಗಿ ಜೆಡಿಯು ನೆರಳಿನಿಂದ ಹೊರಬರುತ್ತದೆಯೇ ಎಂಬುದನ್ನು ಸಹ ನಿರ್ಧರಿಸಲಿದೆ. ಚುನಾವಣಾ ತಂತ್ರಜ್ಞ-ರಾಜಕಾರಣಿ ಪ್ರಶಾಂತ್ ಕಿಶೋರ್ ಅವರ ಜನ್ ಸುರಾಜ್ ಪಕ್ಷದ ಸಾಮರ್ಥ್ಯವನ್ನು ಚುನಾವಣೆ ಪರೀಕ್ಷಿಸಲಿದೆ. ಮುಂದಿನ ದಿನಗಳಲ್ಲಿ, ನಿತೀಶ್ ಅವರ ಮಗ ನಿಶಾಂತ್ ಚುನಾವಣಾ ಕಣಕ್ಕೆ ಇಳಿಯುತ್ತಾರೆಯೇ ಎಂಬುದೂ ಗೊತ್ತಾಗಲಿದೆ.

'243 ಸದಸ್ಯ ಬಲದ ವಿಧಾನಸಭೆ ಅವಧಿ ನ.22ರಂದು ಕೊನೆಗೊಳ್ಳಲಿದೆ' ಎಂದು ಜ್ಞಾನೇಶ್ ಕುಮಾರ್ ತಿಳಿಸಿದರು.

ಸಿಜೆಐ ಮೇಲೆ ಶೂ ಎಸೆಯಲು ಯತ್ನ

ಒಂದನೇ ಪುಟದಿಂದ...

ಆಗಿದ್ದೇನು?: ವಿಚಾರಣೆ ಆರಂಭವಾಗುತ್ತಿದ್ದಂತೆಯೇ ರಾಕೇಶ್ ಅವರು ಸಿಜೆಐ ಗವಾಯಿ ಅವರಿದ್ದ ಪೀಠದ ಬಳಿ ಬಂದರು. ತಕ್ಷಣವೇ ತಮ್ಮ ಸ್ಪೋರ್ಟ್ಸ್ ಶೂ ಅನ್ನು ಬಿಚ್ಚಲು ಮುಂದಾದರು. ಇದನ್ನು ಗಮನಿಸಿದ ಭದ್ರತಾ ಸಿಬ್ಬಂದಿ ತಕ್ಷಣವೇ ರಾಕೇಶ್ ಅವರನ್ನು ತಡೆದರು. ಸಿಜೆಐ ಗವಾಯಿ ಅವರೊಂದಿಗೆ ನ್ಯಾಯಮೂರ್ತಿ ಕೆ. ವಿನೋದ್ ಚಂದ್ರನ್ ಅವರೂ ಪೀಠದಲ್ಲಿದ್ದರು.

ಅಮಾನತು: ದೆಹಲಿಯ ಮಯೂರ್ ವಿಹಾರದ ನಿವಾಸಿಯಾಗಿರುವ ರಾಜೇಶ್ ಅವರು ದೆಹಲಿ ವಕೀಲರ ಪರಿಷತ್ತಿನ ಸದಸ್ಯರಾಗಿದ್ದಾರೆ. ಭಾರತೀಯ ವಕೀಲರ ಪರಿಷತ್ತು ರಾಕೇಶ್ ಅವರನ್ನು ಶೂ ಎಸೆಯಲು ಯತ್ನಿಸಿದ ಬಳಿಕ ವಕೀಲಿಕೆ ನಡೆಸುವುದರಿಂದ ಅಮಾನತು ಮಾಡಿದೆ.

ಖಂಡನೆ: ಘಟನೆಯನ್ನು ವಿವಿಧ ವಕೀಲರ ಸಂಘಟನೆಗಳು ಖಂಡಿಸಿವೆ. ಸುಪ್ರೀಂ ಕೋರ್ಟ್‌ನ ವಕೀಲರ ಸಂಘವು ಈ ಬಗ್ಗೆ ಪ್ರತಿಕ್ರಿಯೆ ನೀಡಿದ್ದು, 'ಇದೊಂದು ಆಘಾತಕಾರಿಯಾದ ಖಂಡಿಸಲೇಬೇಕಾದ ಕೃತ್ಯವಾಗಿದೆ. ವಕೀಲರೊಬ್ಬರು ಮಾಡುವಂಥ ಕೆಲಸ ಇದಲ್ಲ. ಪೀಠ ಮತ್ತು ವಕೀಲರ ಮಧ್ಯೆ ಇರುವ ಪರಸ್ಪರ ಗೌರವಪೂರ್ಣ ಸಂಬಂಧದ ಮೂಲಾಧಾರದ ಮೇಲೆಯೇ ಈ ಕೃತ್ಯವು ದಾಳಿ ನಡೆಸಿದೆ' ಎಂದಿದೆ.

'ನಿಮ್ಮ ದೇವರಲ್ಲಿಯೇ ಪ್ರಾರ್ಥಿಸಿ'

'ಇದೊಂದು ಪ್ರಚಾರ ಹಿತಾಸಕ್ತಿ ಮೊಕದ್ದಮೆ... ಏನಾದರೂ ಮಾಡುವಂತೆ ಹೋಗಿ, ನಿಮ್ಮ ದೇವರಲ್ಲಿಯೇ ಕೇಳಿಕೊಳ್ಳಿ. ನೀವು ವಿಷ್ಣುವಿನ ಪರಮ ಭಕ್ತ ಎಂದು ಹೇಳಿಕೊಂಡಿದ್ದೀರಿ. ಆದ್ದರಿಂದ ನೀವೇ ಹೋಗಿ ದೇವರಲ್ಲಿ ಪ್ರಾರ್ಥಿಸಿ. ಇದು ಪುರಾತತ್ವ ಇಲಾಖೆಗೆ ಸೇರಿದ ಜಾಗ. ಇದಕ್ಕೆ ಇಲಾಖೆ ಅನುಮತಿ ನೀಡಬೇಕು' ಎಂದು ಸಿಜೆಐ ಗವಾಯಿ ಅವರು ಅರ್ಜಿಯೊಂದರ ವಿಚಾರಣೆ ವೇಳೆ ಇತ್ತೀಚೆಗೆ ಹೇಳಿದ್ದರು.

'ಸಿಜೆಐ ಅವರ ಹೇಳಿಕೆಯಿಂದ ನನಗೆ ಅಸಮಾಧಾನವಾಗಿತ್ತು' ಎಂದು ತನಿಖೆ ವೇಳೆ ರಾಕೇಶ್ ಅವರು ಪೊಲೀಸರಿಗೆ ಸೋಮವಾರ ಹೇಳಿದ್ದಾರೆ. ಗವಾಯಿ ಅವರ ಹೇಳಿಕೆಯು ಸಾಮಾಜಿಕ ಜಾಲತಾಣಗಳಲ್ಲಿ ವ್ಯಾಪಕವಾಗಿ ಹರಿದಾಡಿ, ವಿವಾದದ ಸ್ವರೂಪವನ್ನು ಪಡೆದುಕೊಂಡಿತ್ತು.

ಜಾಲತಾಣಗಳ ಆಕ್ರೋಶಕ್ಕೆ ಪ್ರತಿಕ್ರಿಯಿಸಿದ್ದ ಗವಾಯಿ ಅವರು, 'ನಾನು ಎಲ್ಲ ಧರ್ಮಗಳನ್ನೂ ಗೌರವಿಸುತ್ತೇನೆ. ಇವೆಲ್ಲವೂ ಸಾಮಾಜಿಕ ಜಾಲತಾಣಗಳ ಸೃಷ್ಟಿ' ಎಂದಿದ್ದರು. 'ಯಾವುದೇ ಹೇಳಿಕೆಯನ್ನು ಅತಿರಂಜಿತವಾಗಿ ಬಿಂಬಿಸಿ ಜಾಲತಾಣಗಳಲ್ಲಿ ಹಂಚಿಕೊಳ್ಳಲಾಗುತ್ತದೆ' ಎಂದು ತುಷಾರ್ ಮೆಹ್ತಾ ಹೇಳಿದ್ದರು.

ಯುನೆಸ್ಕೊದ ವಿಶ್ವ ಪಾರಂಪರಿಕ ಪಟ್ಟಿಯಲ್ಲಿರುವ ಮಧ್ಯ ಪ್ರದೇಶದ ಖಜುರಾಹೋದ ಜಾವರಿ ದೇವಾಲಯದಲ್ಲಿನ 7 ಅಡಿ ಎತ್ತರ ವಿಷ್ಣು ಮೂರ್ತಿಯ ತಲೆಯ ಭಾಗವು ನಾಶವಾಗಿತ್ತು. ಈ ಮೂರ್ತಿಯನ್ನು ಮರುನಿರ್ಮಿಸಿ, ದೇವಾಲಯದಲ್ಲಿ ಮರುಸ್ಥಾಪಿಸಬೇಕು ಎಂದು ಕೋರಿ ಸುಪ್ರೀಂ ಕೋರ್ಟ್‌ನಲ್ಲಿ ಅರ್ಜಿ ಸಲ್ಲಿಸಲಾಗಿತ್ತು. ಇದನ್ನು ಸಿಜೆಐ ವಜಾ ಮಾಡಿದ್ದರು.

'ಎಚ್ಚರಿಕೆ ಕೊಟ್ಟು ಕಳುಹಿಸಿ'

ರಾಕೇಶ್ ಅವರನ್ನು ಸಭಾಂಗಣದಿಂದ ಹೊರಗೆ ಕರೆದೊಯ್ಯುತ್ತಿದ್ದಂತೆಯೇ ಸಿಜೆಐ ಗವಾಯಿ, 'ಇದನ್ನು ನಿರ್ಲಕ್ಷಿಸಿ ಬಿಡಿ. ವಕೀಲನಿಗೆ ಎಚ್ಚರಿಕೆ ಕೊಟ್ಟು ಕಳುಹಿಸಿಕೊಡಿ' ಎಂದು ನ್ಯಾಯಾಲಯದ ಅಧಿಕಾರಿಗಳು, ಭದ್ರತಾ ಸಿಬ್ಬಂದಿಗೆ ಸೂಚಿಸಿದರು.

ದೂರು ದಾಖಲಾಗದ ಕಾರಣ ದೆಹಲಿ ಪೊಲೀಸರು ರಾಕೇಶ್ ಅವರನ್ನು ಮಧ್ಯಾಹ್ನ 2ರ ಸುಮಾರಿಗೆ ಮನೆಗೆ ಕಳುಹಿಸಿದರು. ಅವರ ಶೂ ಅನ್ನು ವಾಪಸು ನೀಡಿದರು. 'ಅವರ ಬಳಿ ಸುಪ್ರೀಂ ಕೋರ್ಟ್‌ನ ವಕೀಲರ ಸಂಘಟದ ಸದಸ್ಯತ್ವ ಚೀಟಿ ಇತ್ತು. ಜೊತೆಗೆ, ಸನಾತನ ಧರ್ಮಕ್ಕೆ ಮಾಡುವ ಅವಮಾನವನ್ನು ಹಿಂದೂಸ್ತಾನ ಸಹಿಸುವುದಿಲ್ಲ' ಎಂಬ ಬರವಣಿಗೆ ಇದ್ದ ಕಾಗದವೂ ಇತ್ತು.

'ಮನುವಾದಿ ಮನಸ್ಸಿನ ಪ್ರತಿಬಿಂಬ'

ಬೆಂಗಳೂರು: 'ಮುಖ್ಯ ನ್ಯಾಯಮೂರ್ತಿ ಬಿ.ಆರ್. ಗವಾಯಿ ಅವರ ಮೇಲಿನ ಕೃತ್ಯವು, ಸಂವಿಧಾನ ಜಾರಿಗೆ ಬಂದ 75 ವರ್ಷಗಳ ನಂತರವೂ ಮನುವಾದಿಗಳ ಮನಸ್ಸಲ್ಲಿ ಜಾತಿ ಮೂಲದ ಅಸಮಾನತೆ ಮತ್ತು ಅಸಹನೆ ಭದ್ರವಾಗಿ ಉಳಿದುಕೊಂಡಿದೆ ಎನ್ನುವುದಕ್ಕೆ ಸಾಕ್ಷಿ' ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಅಭಿಪ್ರಾಯಪಟ್ಟಿದ್ದಾರೆ.

ತಮ್ಮ 'ಎಕ್ಸ್' ಖಾತೆಯಲ್ಲಿ ಪ್ರತಿಕ್ರಿಯಿಸಿರುವ ಅವರು, 'ದಲಿತ ಸಮುದಾಯಕ್ಕೆ ಸೇರಿರುವ ಗವಾಯಿ ಅವರು ಸಾಮಾಜಿಕ ಪ್ರತಿರೋಧಗಳನ್ನು ಎದುರಿಸಿ ಅರ್ಹತೆ ಮತ್ತು ಸಾಧನೆ ಮೂಲಕ ಉನ್ನತ ಸ್ಥಾನಕ್ಕೇರಿದವರು. ಅವರು ಒಬ್ಬಂಟಿಯಲ್ಲ. ಪ್ರಜಾಪ್ರಭುತ್ವ ಮತ್ತು ಸಂವಿಧಾನದ ಮೇಲೆ ನಂಬಿಕೆ ಇಟ್ಟಿರುವ ಕೋಟ್ಯಂತರ ಜಾತ್ಯತೀತ ಮನಸ್ಸುಗಳು ಅವರ ಬೆಂಬಲಕ್ಕೆ ಇವೆ ಎನ್ನುವುದನ್ನು ಅವರ ಗಮನಕ್ಕೆ ತರಬಯಸುತ್ತೇನೆ' ಎಂದಿದ್ದಾರೆ.

ಯಾರು ಏನೆಂದರು?

ಸುಪ್ರೀಂ ಕೋರ್ಟ್‌ನ ಯಾವುದೇ ನ್ಯಾಯಮೂರ್ತಿಯ ವಿರುದ್ಧ ಇಂಥ ಕೃತ್ಯ ಎಸಗುವುದು ನ್ಯಾಯಾಂಗದ ಸ್ವಾತಂತ್ರ್ಯದ ಮೇಲೆ ನಡೆಸುವ ನೇರ ದಾಳಿಯಾಗಿದೆ. ಜಾತ್ಯತೀತ, ಏಕತೆ ಮತ್ತು ಭ್ರಾತೃತ್ವದ ತತ್ವಗಳನ್ನು ಸಂಘವು ಎತ್ತಿಹಿಡಿಯುತ್ತದೆ

ಸುಪ್ರೀಂ ಕೋರ್ಟ್ ಅಡ್ವೊಕೇಟ್ ಆನ್ ರೆಕಾರ್ಡ್ ಅಸೋಸಿಯೇಷನ್

ಈ ಘಟನೆಯು ಸಾಮಾಜಿಕ ಜಾಲತಾಣಗಳಲ್ಲಿ ಹರಡುವ ಸುಳ್ಳು ಸುದ್ದಿಗಳ ಪರಿಣಾಮ. ಸಿಜೆಐ ಅವರು ಉದಾತ್ತವಾಗಿ ಪ್ರತಿಕ್ರಿಯಿಸಿದ್ದಾರೆ. ಆದರೆ, ಇದನ್ನು ಸಾಂವಿಧಾನಿಕ ಸಂಸ್ಥೆಯ ದೌರ್ಬಲ್ಯ ಎಂದು ಪರಿಗಣಿಸಬಾರದು. ಗವಾಯಿ ಅವರು ಬಹಳ ಗೌರವದಿಂದ ಎಲ್ಲ ಧರ್ಮಗಳ ಧಾರ್ಮಿಕ ಸ್ಥಳಗಳಿಗೆ ಹೋಗುವುದನ್ನು ವೈಯಕ್ತಿಕವಾಗಿ ನಾನೇ ನೋಡಿದ್ದೇನೆ. ಪ್ರಚಾರ ಗಿಟ್ಟಿಸಿಕೊಳ್ಳುವ ಅತೀ ಕೆಟ್ಟ ಯತ್ನ ಇದು ಎಂದು ಅನಿಸುತ್ತಿದೆ

ತುಷಾರ್ ಮೆಹ್ತಾ, ಸಾಲಿಸಿಟರ್ ಜನರಲ್

ಜಾತಿವಾದಿ ಮನಃಸ್ಥಿತಿಯ ವ್ಯಕ್ತಿಯೊಬ್ಬರ ಪ್ರತಿಕ್ರಿಯೆ ಇದು. ಇದು ಸಿಜೆಐ ಮೇಲಿನ ದಾಳಿ ಅಷ್ಟೇ ಅಲ್ಲ. ಇದು ನ್ಯಾಯಾಂಗ ವ್ಯವಸ್ಥೆ ಮೇಲಿನ ದಾಳಿ

ಇಂದಿರಾ ಜೈಸ್ವಾಲ್, ಹಿರಿಯ ವಕೀಲೆ

ರಾಜಸ್ಥಾನ: ಆಸ್ಪತ್ರೆಯಲ್ಲಿ ಬೆಂಕಿ: 8 ರೋಗಿಗಳು ಸಾವು

ಜೈಪುರ (ಪಿಟಿಐ): ಇಲ್ಲಿನ ಸವಾಯಿ ಮಾನ್ ಸಿಂಗ್ (ಎಸ್‌ಎಂಎಸ್) ಆಸ್ಪತ್ರೆಯ ಟ್ರಾಮಾ ಸೆಂಟರ್‌ನಲ್ಲಿ ಭಾನುವಾರ ತಡರಾತ್ರಿ ಬೆಂಕಿ ಅವಘಡ ಸಂಭವಿಸಿದೆ. ಘಟನೆಯಲ್ಲಿ ಎಂಟು ರೋಗಿಗಳು ಮೃತಪಟ್ಟಿದ್ದಾರೆ.

ಟ್ರಾಮಾ ಸೆಂಟರ್ ಉಸ್ತುವಾರಿ ಡಾ.ಅನುರಾಗ್ ಧಾಕಡ್ ಈ ಬಗ್ಗೆ ಮಾಹಿತಿ ನೀಡಿದ್ದು, 'ತೀವ್ರ ನಿಗಾ ಘಟಕದಲ್ಲಿ ಒಟ್ಟು 11 ಮಂದಿ ರೋಗಿಗಳನ್ನು ದಾಖಲಿಸಲಾಗಿತ್ತು. ಐಸಿಯು ವಾರ್ಡ್‌ನ ಸ್ಟೋರ್ ರೂಂನಲ್ಲಿ ಬೆಂಕಿ ಕಾಣಿಸಿಕೊಂಡು, ಇಡೀ ವಾರ್ಡ್‌ಗೆ ವ್ಯಾಪಿಸಿದ್ದರಿಂದ ಎಂಟು ರೋಗಿಗಳು ಮೃತಪಟ್ಟಿದ್ದಾರೆ. ಈ ಪೈಕಿ ಮೂವರು ಮಹಿಳೆಯರು' ಎಂದು ಹೇಳಿದ್ದಾರೆ.

ಶಾರ್ಟ್ ಸರ್ಕಿಟ್‌ನಿಂದ ಈ ಅವಘಡ ಸಂಭವಿಸಿರುವ ಸಾಧ್ಯತೆ ಇದೆ ಎಂದೂ ಡಾ. ಅನುರಾಗ್ ತಿಳಿಸಿದ್ದಾರೆ. ಜತೆಗೆ ಬೆಂಕಿ ಅವಘಡದಿಂದ ರೋಗಿಗಳು– ಅವರ ಕುಟುಂಬಸ್ಥರು ಹಾಗೂ ಆಸ್ಪತ್ರೆ ಸಿಬ್ಬಂದಿ ಕೂಡ ಭಯಭೀತರಾಗಿದ್ದರು. ಆದರೂ, ಇತರೆ ಐಸಿಯು ವಾರ್ಡ್‌ಗಳಲ್ಲಿದ್ದ 13 ರೋಗಿಗಳನ್ನು ಸುರಕ್ಷಿತ ಜಾಗಕ್ಕೆ ಸ್ಥಳಾಂತರಿಸಲಾಗಿದೆ ಎಂದೂ ತಿಳಿಸಿದ್ದಾರೆ.

ಪ್ರವಾಹ: ಮೃತರ ಸಂಖ್ಯೆ 28ಕ್ಕೆ ಏರಿಕೆ

ಡಾರ್ಜಿಲಿಂಗ್/ಸಿಲಿಗುರಿ/ಕೋಲ್ಕತ್ತ/ (ಪಿಟಿಐ): ಪಶ್ಚಿಮ ಬಂಗಾಳದಲ್ಲಿ ಸಂಭವಿಸಿದ ಭೂಕುಸಿತ ಹಾಗೂ ಪ್ರವಾಹದಿಂದ ಮೃತಪಟ್ಟವರ ಸಂಖ್ಯೆ 28ಕ್ಕೆ ಏರಿಕೆಯಾಗಿದೆ.

ವಿಪತ್ತು ನಿರ್ವಹಣಾ ಸಿಬ್ಬಂದಿ ರಕ್ಷಣಾ ಕಾರ್ಯಾಚರಣೆಯನ್ನು ಸೋಮವಾರವೂ ಮುಂದುವರಿಸಿದ್ದಾರೆ. ಅನೇಕರು ನಾಪತ್ತೆಯಾಗಿದ್ದು, ಸಾವಿರಾರು ಜನರು ವಿವಿಧ ಪ್ರದೇಶಗಳಲ್ಲಿ ಸಿಲುಕಿದ್ದಾರೆ.

ಸಂಸದ, ಶಾಸಕರ ಮೇಲೆ ದಾಳಿ: ಜಲಪೈಗುರಿ ಜಿಲ್ಲೆಯ ನಾಗರಾಕಾಟಾದ ದೋರ್ಸ್ ಪ್ರದೇಶಕ್ಕೆ ಸೋಮವಾರ ಭೇಟಿ ನೀಡಿದ ಬಿಜೆಪಿ ಸಂಸದ ಖಗೇನ್ ಮುರ್ಮು, ಶಾಸಕ ಶಂಕರ್ ಘೋಷ್ ಅವರ ಮೇಲೆ ಗುಂಪೊಂದು ದಾಳಿ ನಡೆಸಿದೆ.

ಡಾರ್ಜಿಲಿಂಗ್‌ನಲ್ಲಿ ಉಂಟಾದ ಭೂಕುಸಿತದಿಂದಾಗಿ ದುಧಿಯಾ ಕಬ್ಬಿಣ ಸೇತುವೆ ಕುಸಿದಿದೆ —ಪಿಟಿಐ ಚಿತ್ರ

ಕಾರ್ಮಿಕನಿಗೆ ₹25 ಕೋಟಿ ಲಾಟರಿ

ಪ್ರಜಾವಾಣಿ ವಾರ್ತೆ/ಪಿಟಿಐ

ತಿರುವನಂತಪುರ: ಕೇರಳ ಸರ್ಕಾರದ ತಿರುಓಣಂ ಬಂಪರ್ ಲಾಟರಿಯಲ್ಲಿ ಪೇಂಟ್ ಅಂಗಡಿಯ ಕಾರ್ಮಿಕರೊಬ್ಬರು ಬರೋಬ್ಬರಿ ₹25 ಕೋಟಿ ಬಹುಮಾನವನ್ನು ಪಡೆದಿದ್ದಾರೆ.

ಆಲಪ್ಪುಳ ನಿವಾಸಿ, ಕೊಚ್ಚಿಯ ಪೇಂಟ್ ಅಂಗಡಿಯೊಂದರಲ್ಲಿ ಕೆಲಸ ಮಾಡುತ್ತಿರುವ ಶರತ್ ಎಸ್.ನಾಯರ್ ಅವರು ₹500 ಕೊಟ್ಟು ಖರೀದಿಸಿದ ಲಾಟರಿ ಟಿಕೆಟ್, ಅವರನ್ನು ಕೋಟ್ಯಧಿಪತಿಯನ್ನಾಗಿಸಿದೆ. ಶನಿವಾರ ಬಹುಮಾನ ಘೋಷಣೆಯಾಗಿದ್ದು, ಶರತ್ ಅವರು ಸೋಮವಾರ ಬ್ಯಾಂಕ್‌ನಲ್ಲಿ ಚೆಕ್ ಜಮೆ ಮಾಡಿದರು.

ಚಿನ್ನ ನಾಪತ್ತೆ: ಎಸ್‌ಐಟಿ ರಚನೆಗೆ ನಿರ್ದೇಶನ

ಪ್ರಜಾವಾಣಿ ವಾರ್ತೆ/ಪಿಟಿಐ

ತಿರುವನಂತಪುರ/ಕೊಚ್ಚಿ: ಶಬರಿಮಲೆ ದೇವಸ್ಥಾನದ ದ್ವಾರಪಾಲಕ ಮೂರ್ತಿಗಳ ಚಿನ್ನ ಲೇಪಿತ ತಾಮ್ರದ ಕವಚದಲ್ಲಿನ ತೂಕ ಕಡಿಮೆಯಾದ ಪ್ರಕರಣದ ತನಿಖೆಗೆ ವಿಶೇಷ ತನಿಖಾ ತಂಡ (ಎಸ್‌ಐಟಿ) ರಚಿಸುವಂತೆ ಕೇರಳ ಹೈಕೋರ್ಟ್ ನಿರ್ದೇಶನ ನೀಡಿದೆ.

ತಿರುವಾಂಕೂರು ದೇವಸ್ವಂ ಮಂಡಳಿಯ (ಟಿಡಿಬಿ) ಜಾಗೃತ ದಳವು ಪ್ರಾಥಮಿಕ ತನಿಖೆಯ ಮಧ್ಯಂತರ ವರದಿಯನ್ನು ಸಲ್ಲಿಸಿದ ಬಳಿಕ, ನ್ಯಾಯಮೂರ್ತಿಗಳಾದ ರಾಜಾ ವಿಜಯರಾಘವನ್ ವಿ. ಹಾಗೂ ಕೆ.ವಿ.ಜಯಕುಮಾರ್ ಅವರಿದ್ದ ಪೀಠವು ಈ ನಿರ್ದೇಶನ ನೀಡಿದೆ.

ಎಸ್‌ಪಿ ಎಸ್. ಶಶಿಧರನ್ ಅವರು ಎಸ್‌ಐಟಿ ನೇತೃತ್ವ ವಹಿಸಲಿದ್ದು, ಎಡಿಜಿಪಿ ಎಚ್. ವೆಂಕಟೇಶ್ ಮೇಲ್ವಿಚಾರಣೆ ನಡೆಸಲಿದ್ದಾರೆ. ಸೈಬರ್ ಪೊಲೀಸ್ ಅಧಿಕಾರಿಗಳು ಸಹ ಈ ತಂಡದಲ್ಲಿ ಇರಲಿದ್ದಾರೆ.

ಸಚಿವರ ರಾಜೀನಾಮೆಗೆ ಆಗ್ರಹ: ಶಬರಿಮಲೆ ದೇಗುಲದ ಚಿನ್ನ ನಾಪತ್ತೆ ವಿಚಾರವಾಗಿ ವಿರೋಧ ಪಕ್ಷವಾದ ಕಾಂಗ್ರೆಸ್ ನೇತೃತ್ವದ ಯುನೈಟೆಡ್ ಡೆಮಾಕ್ರಟಿಕ್ ಫ್ರಂಟ್ (ಯುಡಿಎಫ್) ಶಾಸಕರು ಸೋಮವಾರ ಕೇರಳ ವಿಧಾನಸಭೆ ಕಲಾಪದಲ್ಲಿ ತೀವ್ರ ಪ್ರತಿಭಟನೆ ನಡೆಸಿದ್ದರಿಂದ ಗದ್ದಲದ ವಾತಾವರಣ ಉಂಟಾಗಿತ್ತು.

ವಿರೋಧಪಕ್ಷದ ಶಾಸಕರು ಸಭಾಧ್ಯಕ್ಷರ ಪೀಠದ ಎದುರು ಬ್ಯಾನರ್‌ಗಳನ್ನು ಹಿಡಿದು, 'ಸರ್ಕಾರವು ಅಯ್ಯಪ್ಪನ ಚಿನ್ನವನ್ನು ಕದ್ದಿದೆ. ದೇವಸ್ವಂ ಸಚಿವ ವಿ.ಎನ್.ವಾಸವನ್ ರಾಜೀನಾಮೆ ನೀಡಬೇಕು' ಎಂದು ಆಗ್ರಹಿಸಿ ಗದ್ದಲ ಆರಂಭಿಸಿದರು. ಇದರಿಂದ, ಸಭಾಧ್ಯಕ್ಷ ಎ.ಎನ್. ಶಂಶೀರ್ ಅವರು ಕಲಾಪವನ್ನು ಮಂಗಳವಾರಕ್ಕೆ ಮುಂದೂಡಿದರು.

ಹರಿಣಗಳ ಗೆಲುವಿನಲ್ಲಿ ಮಿಂಚಿದ ಬ್ರಿಟ್ಸ್

ಸ್ಪಿನ್ನರ್ ಮ್ಲಾಬಾಗೆ ನಾಲ್ಕು ವಿಕೆಟ್ • ನ್ಯೂಜಿಲೆಂಡ್‌ಗೆ ಎರಡನೇ ಸೋಲು

ಐಸಿಸಿ ಮಹಿಳಾ ಏಕದಿನ ವಿಶ್ವಕಪ್

ಇಂದಿನ ಪಂದ್ಯ
ಬಾಂಗ್ಲಾದೇಶ Vs ಇಂಗ್ಲೆಂಡ್ — ಮಧ್ಯಾಹ್ನ 3
ಲೈವ್: ಸ್ಟಾರ್ ಸ್ಪೋರ್ಟ್ಸ್

ಇಂದೋರ್ (ಪಿಟಿಐ): ಆರಂಭಿಕ ಆಟಗಾರ್ತಿ ತಾಝ್ಮಿನ್ ಬ್ರಿಟ್ಸ್ ಅವರು ಕೊನೆಯ ಐದು ಪಂದ್ಯಗಳಲ್ಲಿ ನಾಲ್ಕನೇ ಶತಕ ಸಿಡಿಸಿದರು. ಅವರ ಶತಕದ ಜೊತೆಗೆ ನೊನ್‌ಕುಲುಲೆಕೊ ಮ್ಲಾಬಾ ಪಡೆದ ನಾಲ್ಕು ವಿಕೆಟ್‌ಗಳ ನೆರವಿನಿಂದ ದಕ್ಷಿಣ ಆಫ್ರಿಕಾ ತಂಡ ಮಹಿಳಾ ಏಕದಿನ ವಿಶ್ವಕಪ್ ಪಂದ್ಯದಲ್ಲಿ ಸೋಮವಾರ ನ್ಯೂಜಿಲೆಂಡ್ ತಂಡದ ಮೇಲೆ ಆರು ವಿಕೆಟ್‌ಗಳ ಸುಲಭ ಗೆಲುವು ದಾಖಲಿಸಿತು.

ಮೊದಲ ಪಂದ್ಯದಲ್ಲಿ ಇಂಗ್ಲೆಂಡ್ ವಿರುದ್ಧ 69 ರನ್ನಿಗೆ ಉರುಳಿದ್ದ ಹರಿಣಗಳ ಪಡೆ, ಎರಡನೇ ಪಂದ್ಯದಲ್ಲಿ ಟಿ20 ವಿಶ್ವ ಚಾಂಪಿಯನ್ ತಂಡವಾದ ನ್ಯೂಜಿಲೆಂಡ್ ವಿರುದ್ಧ ಸರ್ವಾಂಗೀಣ ಆಟದ ಪ್ರದರ್ಶನ ನೀಡಿತು. ಬೌಲರ್‌ಗಳ ಮತ್ತು ಕ್ಷೇತ್ರರಕ್ಷಕರ ಶ್ರಮ ವ್ಯರ್ಥವಾಗದಂತೆ ಅಗ್ರ ಕ್ರಮಾಂಕದ ಬ್ಯಾಟರ್‌ಗಳು ಉತ್ತಮವಾಗಿ ಆಡಿದರು.

ಟಾಸ್ ಗೆದ್ದು ಬ್ಯಾಟ್ ಮಾಡಲು ನಿರ್ಧರಿಸಿದ ನ್ಯೂಜಿಲೆಂಡ್ ತಂಡ, ಎಡಗೈ ಸ್ಪಿನ್ನರ್ ಮ್ಲಾಬಾ (40ಕ್ಕೆ4) ಅವರ ಶಿಸ್ತುಬದ್ಧ ಬೌಲಿಂಗ್ ಪ್ರದರ್ಶನಕ್ಕೆ ಸಿಲುಕಿ 47.5 ಓವರುಗಳಲ್ಲಿ 231 ರನ್‌ಗಳಿಗೆ ಉರುಳಿತು. ಒಂದು ರನ್‌ಔಟ್‌ಗೂ ಕಾರಣರಾದ ಅವರು ನಾಯಕಿ ಸೋಫಿ ಡಿವೈನ್ (85, 98ಎ, 4x9) ಮತ್ತು ಅಪಾಯಕಾರಿಯಾಗಿ ಕಾಣುತ್ತಿದ್ದ ಬ್ರೂಕ್ ಹ್ಯಾಲಿಡೆ (45, 37ಎ, 4x6) ಅವರ ವಿಕೆಟ್‌ಗಳನ್ನು ಕಬಳಿಸಿ ನ್ಯೂಜಿಲೆಂಡ್ ಮಧ್ಯಮ ಸರದಿಯ ಕುಸಿತಕ್ಕೆ ಕಾರಣರಾದರು. ಹೀಗಾಗಿ 250 ರನ್ ದಾಟುವ ಕಿವೀಸ್ ಪಡೆಯ ಗುರಿ ಈಡೇರಲಿಲ್ಲ. ಮ್ಲಾಬಾ ಎರಡನೇ ಸ್ಪೆಲ್‌ನಲ್ಲಿ 5 ಓವರುಗಳಲ್ಲಿ 18 ರನ್ನಿತ್ತು 4 ವಿಕೆಟ್ ಪಡೆದಿದ್ದು ನಿರ್ಣಾಯಕವಾಯಿತು.

ಇದರ ನಂತರ ಬ್ರಿಟ್ಸ್ ಅಧಿಕಾರಯುತವಾಗಿ ಬ್ಯಾಟಿಂಗ್ ಮಾಡಿ 89 ಎಸೆತಗಳಲ್ಲಿ 101 ರನ್ ಹೊಡೆದರು. ಇದರಲ್ಲಿ ಒಂದು ಸಿಕ್ಸರ್, 15 ಬೌಂಡರಿಗಳಿದ್ದವು. ಇದು ಏಕದಿನ ಪಂದ್ಯಗಳಲ್ಲಿ ಅವರ ಏಳನೇ ಶತಕ ಹಾಗೂ ವಿಶ್ವಕಪ್‌ನಲ್ಲಿ ಮೊದಲನೆಯದ್ದು. ಅನುಭವಿ ಸುನೆ ಲೂಸ್ ಇನಿಂಗ್ಸ್‌ಗೆ ಲಂಗರು ಹಾಕಿ 114 ಎಸೆತಗಳಲ್ಲಿ 81 ರನ್ ಗಳಿಸಿ ಅಜೇಯರಾಗುಳಿದರು. ಬ್ರಿಟ್ಸ್ ಮತ್ತು ಸುನೆ ಲೂಸ್ ನಡುವಣ ಎರಡನೇ ವಿಕೆಟ್ ಜೊತೆಯಾಟದಲ್ಲಿ 159 ರನ್‌ಗಳು ಹರಿದುಬಂದು ಹರಿಣಗಳ ಗೆಲುವನ್ನು ಸುಲಭಗೊಳಿಸಿತು. ತಂಡ 55 ಎಸೆತಗಳು ಬಾಕಿವುಳಿದಿರುವಂತೆ ಗುರಿಮುಟ್ಟಿತು.

ಈ ಗೆಲುವು ದಕ್ಷಿಣ ಆಫ್ರಿಕಾ ತಂಡಕ್ಕೆ ಇದೇ 9ರಂದು ವಿಶಾಖಪಟ್ಟಣದಲ್ಲಿ ಆತಿಥೇಯ ಭಾರತ ಎದುರಿನ ಪಂದ್ಯಕ್ಕೆ ಆತ್ಮವಿಶ್ವಾಸದಿಂದ ಸಜ್ಜಾಗಲು ನೆರವಾಯಿತು. -3.773 ನೆಟ್ ರನ್‌ರೇಟ್ ಮೂಲಕ ತಳದಲ್ಲಿದ್ದ ದಕ್ಷಿಣ ಆಫ್ರಿಕಾ ಈ ಗೆಲುವಿನ ಮೂಲಕ -1.424 ನೆಟ್ ರನ್ ರೇಟ್ ದಾಖಲಿಸಿ ಐದನೇ ಸ್ಥಾನಕ್ಕೆ ಜಿಗಿಯಿತು. ಇನ್ನೊಂದೆಡೆ ನ್ಯೂಜಿಲೆಂಡ್ ಎರಡನೇ ಸೋಲಿನೊಡನೆ ಎಂಟು ತಂಡಗಳ ಟೂರ್ನಿಯಲ್ಲಿ ತಳಕ್ಕೆ ಸರಿಯಿತು.

300ನೇ ಅಂತರರಾಷ್ಟ್ರೀಯ ಪಂದ್ಯ ಆಡಿದ ನಾಯಕಿ ಸೋಫಿ ಡಿವೈನ್ ಇದಕ್ಕೆ ಮೊದಲು ಒತ್ತಡದ ನಡುವೆಯೂ ಕೌಶಲಯುತವಾಗಿ ಆಡಿ 98 ಎಸೆತಗಳಲ್ಲಿ 85 ರನ್ ಬಾರಿಸಿದ್ದರು. ಇದು ಅವರಿಗೆ ಏಕದಿನ ಪಂದ್ಯಗಳಲ್ಲಿ 17ನೇ ಅರ್ಧ ಶತಕ. ಅವರು 9 ಬೌಂಡರಿಗಳನ್ನು ಬಾರಿಸಿದರು. ಅವರು ಬ್ರೂಕ್ ಹ್ಯಾಲಿಡೆ ಜೊತೆ ನಾಲ್ಕನೇ ವಿಕೆಟ್‌ಗೆ 86 ರನ್ ಸೇರಿಸಿದರು.

ಸಂಕ್ಷಿಪ್ತ ಸ್ಕೋರು: ನ್ಯೂಜಿಲೆಂಡ್: 47.5 ಓವರುಗಳಲ್ಲಿ 231 (ಜಾರ್ಜಿಯಾ ಪ್ಲಿಮ್ಮರ್ 31, ಸೋಫಿ ಡಿವೈನ್ 85, ಬ್ರೂಕ್ ಹ್ಯಾಲಿಡೆ 45; ನೊನ್‌ಕುಲುಲೆಕೊ ಮ್ಲಾಬಾ 40ಕ್ಕೆ4); ದಕ್ಷಿಣ ಆಫ್ರಿಕಾ: 40.5 ಓವರುಗಳಲ್ಲಿ 4ಕ್ಕೆ 234 (ತಾಝ್ಮಿನ್ ಬ್ರಿಟ್ಸ್ 101, ಸುನೆ ಲೂಸ್ ಔಟಾಗದೇ 83; ಅಮೇಲಿಯಾ ಕೆರ್ 62ಕ್ಕೆ2).

ಪಂದ್ಯದ ಆಟಗಾರ್ತಿ: ತಾಝ್ಮಿನ್ ಬ್ರಿಟ್ಸ್

ಶತಕ ದಾಖಲಿಸಿ ಸಂಭ್ರಮಿಸಿದ ತಾಝ್ಮಿನ್ ಬ್ರಿಟ್ಸ್ 'ಎಕ್ಸ್' ಚಿತ್ರ

ಪಾಕ್ ಆಟಗಾರ್ತಿ ಸಿದ್ರಾಗೆ ವಾಗ್ದಂಡನೆ

ಕೊಲಂಬೊ (ಪಿಟಿಐ): ಭಾರತ ವಿರುದ್ಧ ಮಹಿಳಾ ಏಕದಿನ ವಿಶ್ವಕಪ್ ಕ್ರಿಕೆಟ್ ಪಂದ್ಯದಲ್ಲಿ ನೀತಿಸಂಹಿತೆ ಉಲ್ಲಂಘಿಸಿದ ಕಾರಣ ಪಾಕಿಸ್ತಾನ ತಂಡದ ಬ್ಯಾಟರ್ ಸಿದ್ರಾ ಅಮಿನ್ ಅವರಿಗೆ ವಾಗ್ದಂಡನೆ ವಿಧಿಸಲಾಗಿದೆ. ಅವರ ಶಿಸ್ತಿನ ದಾಖಲೆಗೆ ಒಂದು ಡಿಮೆರಿಟ್ ಪಾಯಿಂಟ್ ಸಹ ಸೇರ್ಪಡೆ ಮಾಡಲಾಗಿದೆ.

ಕೊಲಂಬೊದ ಪ್ರೇಮದಾಸ ಕ್ರೀಡಾಂಗಣದಲ್ಲಿ ಭಾನುವಾರ ನಡೆದ ಈ ಪಂದ್ಯದಲ್ಲಿ ಸಿದ್ರಾ ಏಕಾಂಗಿಯಾಗಿ ಹೋರಾಡಿ 81 ರನ್ ಗಳಿಸಿದ್ದರು. ಆದರೆ ಪಂದ್ಯವನ್ನು ಪಾಕಿಸ್ತಾನ 88 ರನ್‌ಗಳಿಂದ ಸೋತಿತ್ತು. ಗುರಿ ಬೆನ್ನಟ್ಟುವ ವೇಳೆ, 40ನೇ ಓವರಿನಲ್ಲಿ ಸಿದ್ರಾ ಅವರು ಸ್ನೇಹ ರಾಣಾ ಬೌಲಿಂಗ್‌ನಲ್ಲಿ ಔಟ್ ಆಗಿದ್ದರು. ಆಗ ಅವರು ಹತಾಶೆಯಿಂದ ಬ್ಯಾಟನ್ನು ಪಿಚ್‌ಗೆ ಜೋರಾಗಿ ಹೊಡೆದಿದ್ದರು.

'ವಾಗ್ದಂಡನೆ ಜೊತೆ ಅವರ ಶಿಸ್ತಿನ ದಾಖಲೆಗೆ ಡಿಮೆರಿಟ್ ಪಾಯಿಂಟ್ ಸಹ ಸೇರ್ಪಡೆಗೊಳಿಸಲಾಗಿದೆ. ಇದು ಅವರ ಮೊದಲ ತಪ್ಪು ಆಗಿದೆ' ಎಂದು ಐಸಿಸಿ ತಿಳಿಸಿದೆ. ಮ್ಯಾಚ್ ರೆಫ್ರಿ ಶಾಂಡ್ರೆ ಫ್ರಿಟ್ಝ್ ಅವರು ನಿರ್ಧಾರವನ್ನು ಸಿದ್ರಾ ಒಪ್ಪಿಕೊಂಡಿದ್ದಾರೆ. ಹೀಗಾಗಿ ಪ್ರತ್ಯೇಕ ವಿಚಾರಣೆ ಅಗತ್ಯವಿಲ್ಲ' ಎಂದು ಪ್ರಕಟಣೆ ತಿಳಿಸಿದೆ.

ಭಾರತ ಶುಭಾರಂಭ

ಗುವಾಹಟಿ (ಪಿಟಿಐ): ಆತಿಥೇಯ ಭಾರತ ತಂಡವು ಸೋಮವಾರ ಆರಂಭಗೊಂಡ ಬಿಡಬ್ಲ್ಯುಎಫ್ ವಿಶ್ವ ಜೂನಿಯರ್ ಬ್ಯಾಡ್ಮಿಂಟನ್ ಚಾಂಪಿಯನ್ ಷಿಪ್‌ನಲ್ಲಿ ನೇಪಾಳ ವಿರುದ್ಧ ಗೆದ್ದು ಶುಭಾರಂಭ ಮಾಡಿತು.

ಎರಡನೇ ಶ್ರೇಯಾಂಕದ ಭಾರತ ಇಲ್ಲಿನ ರಾಷ್ಟ್ರೀಯ ಶ್ರೇಷ್ಠತಾ ಕೇಂದ್ರದಲ್ಲಿ ನಡೆಯುತ್ತಿರುವ ಟೂರ್ನಿಯ ಎಚ್ ಗುಂಪಿನ ಪಂದ್ಯದಲ್ಲಿ 45-18, 45-17ರಿಂದ ನಿರಾಯಾಸವಾಗಿ ನೇಪಾಳ ತಂಡವನ್ನು ಮಣಿಸಿತು.



ಭಾರತದ ಏಕದಿನ ಕ್ರಿಕೆಟ್‌ನ ಯಶಸ್ವಿ ನಾಯಕನಾಗಿ ರೋಹಿತ್ ಶರ್ಮಾರವರ ಅವಧಿ ಅಂತ್ಯಗೊಂಡಿದೆ!

ರಣಜಿ ತಂಡ: ಮರಳಿದ ಕರುಣ್

ಮಯಂಕ್‌ಗೆ ಮತ್ತೆ ನಾಯಕತ್ವ: ಶಿಖರ್ ಹೊಸಮುಖ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಸೌರಾಷ್ಟ್ರ ವಿರುದ್ಧ ಇದೇ 15ರಿಂದ 18ರವರೆಗೆ ರಾಜಕೋಟ್‌ನಲ್ಲಿ ರಣಜಿ ಟ್ರೋಫಿ ಪಂದ್ಯ ಆಡಲಿರುವ ಕರ್ನಾಟಕ ತಂಡವನ್ನು ಸೋಮವಾರ ಪ್ರಕಟಿಸಲಾಗಿದ್ದು, ಮಯಂಕ್ ಅಗರವಾಲ್ ಅವರು ನಾಯಕರಾಗಿ ಮುಂದುವರಿದಿದ್ದಾರೆ.

ಕಳೆದ ಎರಡು ಋತುವಿನಲ್ಲಿ ವಿದರ್ಭ ತಂಡಕ್ಕೆ ಆಡಿದ್ದ ಕರುಣ್ ನಾಯರ್ ಅವರು ರಾಜ್ಯ ತಂಡದಲ್ಲಿ ನಿರೀಕ್ಷೆಯಂತೆ ಸ್ಥಾನ ಪಡೆದಿದ್ದಾರೆ. 33 ವರ್ಷ ವಯಸ್ಸಿನ ಕರುಣ್ ಅವರು ಕಳೆದ ಋತುವಿನಲ್ಲಿ ವಿದರ್ಭ ತಂಡ ರಣಜಿ ಟ್ರೋಫಿ ಗೆಲುವಿನಲ್ಲಿ ಪ್ರಮುಖ ಪಾತ್ರ ವಹಿಸಿದ್ದರು. ಕಳೆದ ಆವೃತ್ತಿಯಲ್ಲಿ 53.93 ಸರಾಸರಿಯಲ್ಲಿ 863 ರನ್ ಗಳಿಸಿದ್ದರು.

20 ವರ್ಷ ವಯಸ್ಸಿನ ಎಡಗೈ ಸ್ಪಿನ್ನರ್ ಶಿಖರ್ ಶೆಟ್ಟಿ 15 ಆಟಗಾರರ ತಂಡಕ್ಕೆ ಆಯ್ಕೆಯಾಗಿರುವ ಏಕೈಕ ಹೊಸಮುಖ. ಅವರು ಇತ್ತೀಚೆಗಷ್ಟೇ ಕ್ಯಾಪ್ಟನ್ ತಿಮ್ಮಪ್ಪಯ್ಯ ಸ್ಮಾರಕ ಟ್ರೋಫಿ ಟೂರ್ನಿಯಲ್ಲಿ ಕೆಎಸ್‌ಸಿಎ ಕಾರ್ಯದರ್ಶಿ ಇಲೆವೆನ್ ತಂಡದಲ್ಲಿ ಮಿಂಚಿದ್ದರು. ಕಳೆದ ಋತುವಿನಲ್ಲಿ ಆಡಿದ್ದ ಎಡಗೈ ಸ್ಪಿನ್ನರ್ ಹಾರ್ದಿಕ್ ರಾಜ್ ಅವರು ಸ್ಥಾನ ಕಳೆದುಕೊಂಡಿದ್ದಾರೆ.

ದುಲೀಪ್ ಟ್ರೋಫಿ ಫೈನಲ್‌ನಲ್ಲಿ ದಕ್ಷಿಣ ವಲಯ ತಂಡದಲ್ಲಿ ದೇವದತ್ತ ಪಡಿಕ್ಕಲ್ ಬದಲಿಗೆ ಸ್ಥಾನ ಪಡೆದಿದ್ದ ಆರ್.ಸ್ಮರಣ್ ತಂಡದಲ್ಲಿ ಸ್ಥಾನ ಪಡೆದಿದ್ದಾರೆ. ಯುವ ಪ್ರತಿಭೆಗಳಾದ ಕೆ.ವಿ. ಅನೀಶ್, ಅಭಿಲಾಷ್ ಶೆಟ್ಟಿ ಮತ್ತು ವಿಕೆಟ್ ಕೀಪರ್- ಬ್ಯಾಟರ್ ಕೆ.ಎಲ್.ಶ್ರೀಜಿತ್ ಅವರೂ ತಂಡದಲ್ಲಿದ್ದಾರೆ.

ಎಂಟು ಬಾರಿಯ ಚಾಂಪಿಯನ್ ಕರ್ನಾಟಕ ತಂಡಕ್ಕೆ ದಶಕದಿಂದ ರಣಜಿ ಟ್ರೋಫಿ ಗೆಲ್ಲಲು ಸಾಧ್ಯವಾಗಿಲ್ಲ. ಮಯಂಕ್ ನಾಯಕತ್ವದ ತಂಡವು ಈ ಬಾರಿ ಉತ್ತಮ ಪ್ರದರ್ಶನ ತೋರುವ ವಿಶ್ವಾಸದಲ್ಲಿದೆ.

ತಂಡ ಹೀಗಿದೆ: ಮಯಂಕ್ ಅಗರವಾಲ್ (ನಾಯಕ), ಕರುಣ್ ನಾಯರ್, ಸ್ಮರಣ್ ಆರ್, ಶ್ರೀಜಿತ್ ಕೆ.ಎಲ್. (ವಿಕೆಟ್ ಕೀಪರ್), ಶ್ರೇಯಸ್ ಗೋಪಾಲ್, ವೈಶಾಖ್ ವಿಜಯಕುಮಾರ್, ವಿದ್ವತ್ ಕಾವೇರಪ್ಪ, ಅಭಿಲಾಷ್ ಶೆಟ್ಟಿ, ವೆಂಕಟೇಶ್ ಎಂ., ಎಸ್. ಜೆ.ನಿಕಿನ್ ಜೋಸ್, ಅಭಿನವ್ ಮನೋಹರ್, ಕೃತಿಕ್ ಕೃಷ್ಣ (ವಿಕೆಟ್ ಕೀಪರ್), ಅನೀಶ್ ಕೆ.ವಿ., ಮೊಹ್ಸಿನ್ ಖಾನ್, ಶಿಖರ್ ಶೆಟ್ಟಿ. **ಕೋಚ್:** ಯರೇಗೌಡ ಕೆ., **ಬೌಲಿಂಗ್ ಕೋಚ್:** ಮನ್ಸೂರ್ ಅಲಿ ಖಾನ್, **ಫೀಲ್ಡಿಂಗ್ ಕೋಚ್:** ಶಬರೀಶ್ ಮೋಹನ್, **ಮ್ಯಾನೇಜರ್:** ರಮೇಶ್ ರಾವ್.


ಎಡಗೈ ಸ್ಪಿನ್ನರ್ ಶಿಖರ್ ಶೆಟ್ಟಿ

12ರಂದು ಎಐಎಫ್‌ಎಫ್ ವಿಶೇಷ ಮಹಾಸಭೆ

ಇಸಿ ಸದಸ್ಯರಿಗೆ ಉಭಯ ಸಂಕಟ

ನವದೆಹಲಿ (ಪಿಟಿಐ): ಇದೇ 12ರಂದು ನಡೆಯಲಿರುವ ಅಖಿಲ ಭಾರತ ಫುಟ್‌ಬಾಲ್ ಫೆಡರೇಷನ್‌ನ (ಎಐಎಫ್‌ಎಫ್) ವಿಶೇಷ ಮಹಾಸಭೆಯಲ್ಲಿ ಕರಡು ನಿಯಮಾವಳಿ ಅಂಗೀಕಾರಗೊಂಡರೆ ಫೆಡರೇಷನ್‌ನ ಕಾರ್ಯಕಾರಿ ಸಮಿತಿಯ ಬಹುಪಾಲು ಸದಸ್ಯರು ತಮ್ಮ ಸ್ಥಾನಗಳನ್ನು ಕಳೆದುಕೊಳ್ಳುವ ಆತಂಕದಲ್ಲಿದ್ದಾರೆ.

ಸುಪ್ರೀಂ ಕೋರ್ಟ್ ನಿರ್ದೇಶನದಲ್ಲಿ ರೂಪಿಸಲಾಗಿರುವ ಕರಡು ನಿಯಮಾವಳಿಯನ್ನು ಅಂಗೀಕರಿಸಲು ಫೆಡರೇಷನ್ ವಿಶೇಷ ಮಹಾಸಭೆಯನ್ನು ಕರೆಯಲಾಗಿದೆ. ಹೊಸ ನಿಯಮಾವಳಿಯನ್ನು ಅಕ್ಟೋಬರ್ 30ರೊಳಗೆ ಅಂಗೀಕರಿಸುವಂತೆ ಫಿಫಾ, ಅಖಿಲ ಭಾರತ ಫುಟ್‌ಬಾಲ್ ಫೆಡರೇಷನ್‌ಗೆ ಗಡುವು ವಿಧಿಸಿದೆ.

ವಿಶೇಷ ಸಭೆಯಲ್ಲಿ ಕರಡು ನಿಯಮಾವಳಿಯನ್ನು ಅಂಗೀಕರಿಸಿದರೆ ಫೆಡರೇಷನ್‌ನ ಕಾರ್ಯಕಾರಿ ಸಮಿತಿಯ ಹೆಚ್ಚಿನ ಸದಸ್ಯರು ತಮ್ಮ ಸ್ಥಾನಗಳಿಗೆ ರಾಜೀನಾಮೆ ನೀಡಬೇಕಾಗಬಹುದು ಇಲ್ಲವೇ ರಾಜ್ಯ ಘಟಕಗಳಲ್ಲಿನ ತಮ್ಮ ಉನ್ನತ ಹುದ್ದೆಗಳನ್ನು ಕಳೆದುಕೊಳ್ಳಲಿದ್ದಾರೆ.

ಸುಪ್ರೀಂ ಕೋರ್ಟ್ ನಿವೃತ್ತ ನ್ಯಾಯಮೂರ್ತಿ ಎಲ್.ನಾಗೇಶ್ವರ ರಾವ್ ಅವರು ಈ ನಿಯಮಾವಳಿ ರೂಪಿಸಿದ್ದು, ಸುಪ್ರೀಂ ಕೋರ್ಟ್ ಇದಕ್ಕೆ ಕೆಲವು ಮಾರ್ಪಾಡುಗಳೊಂದಿಗೆ ಸೆ.19ರಂದು ಸಮ್ಮತಿ ನೀಡಿತ್ತು. ನಾಲ್ಕು ವಾರಗಳ ಒಳಗೆ ಸರ್ವ ಸದಸ್ಯರ ಸಭೆ ಕರೆದು ಇದನ್ನು ಅಂಗೀಕರಿಸುವಂತೆ ಎಐಎಫ್‌ಎಫ್‌ಗೆ ನಿರ್ದೇಶನವನ್ನೂ ನೀಡಿತ್ತು.

ಆದರೆ ಕರಡು ನಿಯಮಾವಳಿಯಲ್ಲಿನ ಒಂದು ನಿರ್ದಿಷ್ಟ ಷರತ್ತು ಎಐಎಫ್‌ಎಫ್‌ನ ಉನ್ನತ ಅಧಿಕಾರಿಗಳಿಗೆ ತಲೆನೋವು ಉಂಟು ಮಾಡಿದೆ. ಕಾರ್ಯಕಾರಿ ಸಮಿತಿಯ ಹೆಚ್ಚಿನ ಸದಸ್ಯರು ರಾಜ್ಯ ಘಟಕಗಳಲ್ಲಿ ಪ್ರಮುಖ ಸ್ಥಾನಗಳನ್ನು ಹೊಂದಿರುವುದೇ ಇದಕ್ಕೆ ಕಾರಣ.

ಕರಡು ನಿಯಮಾವಳಿಯ 25.3ನೇ (ಸಿ) ವಿಧಿಯ ಪ್ರಕಾರ, 'ಒಬ್ಬ ವ್ಯಕ್ತಿಯು ಎಐಎಫ್‌ಎಫ್‌ನ ಕಾರ್ಯಕಾರಿ ಸಮಿತಿಯಲ್ಲಿ ಮತ್ತು ರಾಜ್ಯ ಸಂಸ್ಥೆಯಲ್ಲಿ ಪದಾಧಿಕಾರಿ ಸ್ಥಾನವನ್ನು ಹೊಂದಿದ್ದರೆ ಅವರು ಸ್ವಯಂಚಾಲಿತವಾಗಿ ರಾಜ್ಯ ಘಟಕದಲ್ಲಿ ತಮ್ಮ ಸ್ಥಾನ ತೆರವು ಮಾಡಿದಂತೆ' ಎಂದು ಪರಿಗಣಿಸಲಾಗುತ್ತದೆ.

ಆದಾಗ್ಯೂ, ಅವರು ವಿಶೇಷ ಮಹಾಸಭೆಗೆ ಮುಂಚಿತವಾಗಿ ಫೆಡರೇಷನ್‌ನ ಕಾರ್ಯಕಾರಿ ಸಮಿತಿಯ ಸದಸ್ಯತ್ವಕ್ಕೆ ರಾಜೀನಾಮೆ ನೀಡಿದರೆ ರಾಜ್ಯ ಘಟಕಗಳಲ್ಲಿನ ತಮ್ಮ ಹುದ್ದೆಗಳಲ್ಲಿ ಮುಂದುವರಿಯುವ ಅವಕಾಶವಿದೆ.

ಆದರೆ, ಈ ನಿರ್ದಿಷ್ಟ ಷರತ್ತು ಎಐಎಫ್‌ಎಫ್ ಅಧ್ಯಕ್ಷ ಕಲ್ಯಾಣ್ ಚೌಬೆ ಅವರ ಮೇಲೆ ಪರಿಣಾಮ ಬೀರುವುದಿಲ್ಲ. ಏಕೆಂದರೆ ಅವರು ಯಾವುದೇ ರಾಜ್ಯ ಘಟಕದ ಪದಾಧಿಕಾರಿಯಾಗಿಲ್ಲ.

ಯುವ ತಂಡಕ್ಕೆ ಅನ್ವಯ್ ನಾಯಕ

ಬೆಂಗಳೂರು: ವಿಕೆಟ್ ಕೀಪರ್– ಬ್ಯಾಟರ್ ಅನ್ವಯ್ ದ್ರಾವಿಡ್ ಅವರನ್ನು ಡೆಹ್ರಾ ಡೂನ್‌ನಲ್ಲಿ ಇದೇ 9 ರಿಂದ 17ರವರೆಗೆ ನಡೆಯಲಿರುವ ವಿನೂ ಮಂಕಡ್ ಟ್ರೋಫಿ (19 ವರ್ಷದೊಳಗಿನವರ) ಕ್ರಿಕೆಟ್ ಟೂರ್ನಿಯಲ್ಲಿ ಆಡಲಿರುವ ಕರ್ನಾಟಕ ತಂಡಕ್ಕೆ ನಾಯಕರನ್ನಾಗಿ ನೇಮಕ ಮಾಡಲಾಗಿದೆ.

15 ಆಟಗಾರರ ತಂಡ ಹೀಗಿದೆ: ಅನ್ವಯ್ ದ್ರಾವಿಡ್ (ನಾಯಕ ಮತ್ತು ವಿಕೆಟ್ ಕೀಪರ್), ನಿತೀಶ್ ಆರ್ಯ, ಆದೇಶ್ ಡಿ. ಅರಸ್, ಮಣಿಕಾಂತ್ ಶಿವಾನಂದ (ಉಪ ನಾಯಕ), ಪ್ರಣೀತ್ ಶೆಟ್ಟಿ, ವಾಸವ್ ವೆಂಕಟೇಶ್, ಅಕ್ಷತ್ ಪ್ರಭಾಕರ್, ವೈಭವ್ ಸಿ., ಕುಲದೀಪ್ ಸಿಂಗ್ ಪುರೋಹಿತ್, ರತನ್ ಬಿ.ಆರ್., ವೈಭವ್ ಶರ್ಮಾ, ತೇಜಸ್ ಕೆ.ಎ., ಅಥರ್ವ ಮಾಳವೀಯ, ಸನ್ನಿ ಕಾಂಚಿ, ರೆಹಾನ್ ಮೊಹಮ್ಮದ್. ಕೋಚ್: ಕೆ.ಬಿ.ಪವನ್, ಬೌಲಿಂಗ್ ಕೋಚ್: ಎಸ್.ಎಲ್.ಅಕ್ಷಯ್, ಮ್ಯಾನೇಜರ್ ಎಸ್.ಎ.ಸತೀಶ್.

ವಿದರ್ಭ ತಂಡದಲ್ಲಿ ಸ್ಥಾನ ಪಡೆದ ಕರ್ನಾಟಕದ ಸಮರ್ಥ್

ನಾಗ್ಪುರ (ಪಿಟಿಐ): ಹಾಲಿ ಚಾಂಪಿಯನ್ ವಿದರ್ಭ ತಂಡವು ರಣಜಿ ಟ್ರೋಫಿ ಟೂರ್ನಿಯ ನಾಗಾಲ್ಯಾಂಡ್ ವಿರುದ್ಧದ ಪಂದ್ಯಕ್ಕೆ 17 ಆಟಗಾರರ ತಂಡವನ್ನು ಸೋಮವಾರ ಪ್ರಕಟಿಸಿದ್ದು, ಕರ್ನಾಟಕದ ರವಿಕುಮಾರ್ ಸಮರ್ಥ್ ಸ್ಥಾನ ಪಡೆದಿದ್ದಾರೆ.

ಇದೇ 15ರಿಂದ ಬೆಂಗಳೂರಿನ ಬಿಸಿಸಿಐನ ಸೆಂಟರ್ ಆಫ್ ಎಕ್ಸಲೆನ್ಸ್ ಮೈದಾನದಲ್ಲಿ ವಿದರ್ಭ ತಂಡವು ರಣಜಿ ಟ್ರೋಫಿ ಅಭಿಯಾನವನ್ನು ಆರಂಭಿಸಲಿದೆ. ತಂಡವನ್ನು ಅಕ್ಷಯ್ ವಾಡ್ಕರ್ ಮುನ್ನಡೆಸಲಿದ್ದಾರೆ. ಕಳೆದ ಆವೃತ್ತಿಯ ಫೈನಲ್‌ನಲ್ಲಿ ವಿದರ್ಭ ತಂಡವು ಕೇರಳ ತಂಡವನ್ನು ಮಣಿಸಿ ಪ್ರಶಸ್ತಿ ಗೆದ್ದಿತ್ತು.

ಅನುಭವಿ ಕರುಣ್ ನಾಯರ್ ಅವರ ಬದಲಿಗೆ ಕರ್ನಾಟಕದ ಮತ್ತೊಬ್ಬ ಬ್ಯಾಟರ್ ಸಮರ್ಥ್ ಅವರನ್ನು ಆಯ್ಕೆ ಮಾಡಲಾಗಿದೆ. ಉಸ್ಮಾನ್ ಘನಿ ತಂಡಕ್ಕೆ ಕೋಚ್ ಆಗಿ ಮುಂದುವರಿಯಲಿದ್ದು, ಧರ್ಮೇಂದರ್ ಅಹ್ಲಾವತ್ ಸಹಾಯಕ ಕೋಚ್ ಆಗಿ ನೇಮಕಗೊಂಡಿದ್ದಾರೆ.

ತಂಡ ಹೀಗಿದೆ: ಅಕ್ಷಯ್ ವಾಡ್ಕರ್ (ನಾಯಕ, ವಿಕೆಟ್ ಕೀಪರ್), ಅಥರ್ವ ತೈಡೆ, ಅಮನ್ ಮೊಖಡೆ, ಡ್ಯಾನಿಶ್ ಮಾಲೆವಾರ್, ಯಶ್ ರಾಥೋಡ್ (ವಿಕೆಟ್ ಕೀಪರ್), ಹರ್ಷ್ ದುಬೆ, ಪಾರ್ಥ್ ರೇಖಾಡೆ, ಯಶ್ ಠಾಕೂರ್, ನಚಿಕೇತ್ ಭೂತೆ, ದರ್ಶನ್ ನಲ್ಕಂಡೆ, ಆದಿತ್ಯ ಠಾಕ್ರೆ, ಯಶ್ ಕದಂ, ಶಿವಂ ದೇಶಮುಖ್ (ವಿಕೆಟ್ ಕೀಪರ್), ಪ್ರಫುಲ್ ಹಿಂಗೆ, ಅಕ್ಷಯ್ ಕರ್ನೇವರ್, ಧ್ರುವ ಶೋರೆ, ಆರ್. ಸಮರ್ಥ್.

ವಾಟರ್ ಪೋಲೊ: ಭಾರತಕ್ಕೆ ಸೋಲು

ಅಹಮದಾಬಾದ್ (ಪಿಟಿಐ): ಭಾರತ ಪುರುಷರ ವಾಟರ್ ಪೋಲೊ ತಂಡವು ಇಲ್ಲಿ ನಡೆಯುತ್ತಿರುವ ಏಷ್ಯನ್ ಅಕ್ವಾಟಿಕ್ಸ್ ಚಾಂಪಿಯನ್‌ಷಿಪ್‌ನಲ್ಲಿ ಸೋಮವಾರ 6-20 ಅಂತರದಿಂದ ಕಜಾಕಸ್ತಾನ ತಂಡಕ್ಕೆ ಮಣಿಯಿತು.

ಪುರುಷರ ವಿಭಾಗದ ಬಿ ಗುಂಪಿನ ಸ್ಪರ್ಧೆಯಲ್ಲಿ ಭಾರತ ಪರ ಭಾಗೇಶ್ ಹ್ಯಾಟ್ರಿಕ್ ಗೋಲು ಗಳಿಸಿದರು. ಕಜಾಕಸ್ತಾನದ ಪರ ಬಾಲ್‌ಟಾಬ್ಕುಲಿ ಆದಿಲ್ ಮತ್ತು ನೆಡೊಕೊಂಟ್ಸೆವ್ ತಲಾ ನಾಲ್ಕು ಗೋಲುಗಳನ್ನು ಗಳಿಸಿದರೆ, ಟೊಸೊಯ್ ಎಡ್ವರ್ಡ್ ಮೂರು ಗೋಲು ತಂದಿತ್ತರು.

'ಕ್ರಿಕೆಟ್ ಸೇರಿ ಕ್ರೀಡಾ ಸಂಬಂಧಿತ ಪ್ರಕರಣಗಳಿಂದ ದೂರವಿರಲು ಸಕಾಲ'

ನವದೆಹಲಿ (ಪಿಟಿಐ): ಕ್ರಿಕೆಟ್ ಸೇರಿದಂತೆ ಕ್ರೀಡೆಗೆ ಸಂಬಂಧಿಸಿದ ಪ್ರಕರಣಗಳಿಂದ ದೂರವಿರಲು ಕೋರ್ಟ್‌ಗೆ ಇದು ಸಕಾಲ ಎಂದು ಸುಪ್ರೀಂ ಕೋರ್ಟ್ ಸೋಮವಾರ ಹೇಳಿತು.

'ಕ್ರಿಕೆಟ್‌ನಲ್ಲಿ ಕ್ರೀಡೆಯಾಗಿ ಉಳಿದಿರುವುದು ಏನೂ ಇಲ್ಲ. ವಾಸ್ತವದಲ್ಲಿ ಇದೆಲ್ಲವೂ ಉದ್ಯಮವಾಗಿದೆ' ಎಂದು ನ್ಯಾಯಮೂರ್ತಿಗಳಾದ ವಿಕ್ರಮ್ ನಾಥ್ ಮತ್ತು ಸಂದೀಪ್ ಮೆಹ್ತಾ ಅವರನ್ನು ಒಳಗೊಂಡ ಪೀಠ ಅಭಿಪ್ರಾಯಪಟ್ಟಿತು.

ಜಬಲ್ಪುರ ವಿಭಾಗವನ್ನು ಕ್ರಿಕೆಟ್ ಸಂಸ್ಥೆ ಮಾಡಬೇಕೆಂಬ ವಿಷಯಕ್ಕೆ ಸಂಬಂಧಿಸಿ ಮಧ್ಯಪ್ರದೇಶ ಹೈಕೋರ್ಟ್ ತೀರ್ಪನ್ನು ಪ್ರಶ್ನಿಸಿ ಸಲ್ಲಿಸಿರುವ ಅರ್ಜಿಯ ವಿಚಾರಣೆ ವೇಳೆ ಪೀಠವು ಹೀಗೆ ಹೇಳಿತು.

'ನಾವೇ ಇವತ್ತು ಕ್ರಿಕೆಟ್ ಆಡುತ್ತಿದ್ದೇವೆ. ಮೂರು- ನಾಲ್ಕು ವಿಷಯ ಇದಕ್ಕೇ ಸಂಬಂಧಿಸಿದೆ. ಈಗಾಗಲೇ ಒಂದು ಪ್ರಕರಣವನ್ನು ಮುಂದಕ್ಕೆ ಹಾಕಲಾಗಿದೆ. ಇದು ಎರಡನೆಯ ಪ್ರಕರಣ. ಇವತ್ತೇ ಎಷ್ಟು ಟೆಸ್ಟ್ ಪಂದ್ಯಗಳನ್ನು ಆಡಬೇಕೆಂದಿದ್ದೀರಿ?' ಎಂದು ನ್ಯಾ. ನಾಥ್ ಅವರು ವಿವಿಧ ಕಕ್ಷಿದಾರರನ್ನು ಪ್ರತಿನಿಧಿಸಿದ್ದ ವಕೀಲರನ್ನು ಕೇಳಿದರು.

'ಕ್ರಿಕೆಟ್, ಬ್ಯಾಡ್ಮಿಂಟನ್, ವಾಲಿಬಾಲ್, ಬ್ಯಾಸ್ಕೆಟ್‌ಬಾಲ್ ಸಹವಾಸದಿಂದ ದೂರವಿರಲು ಇದು ಕೋರ್ಟ್‌ಗೆ ಸಕಾಲ' ಎಂದು ನ್ಯಾ.ನಾಥ್ ಹೇಳಿದರು.

ಪ್ರಕರಣವನ್ನು ಮುಂದುವರಿಸುವುದಕ್ಕೆ ಪೀಠವು ಒಲವು ವ್ಯಕ್ತಪಡಿಸಲಿಲ್ಲ. ಅರ್ಜಿದಾರರ ಪರ ವಕೀಲರು ಪ್ರಕರಣ ಹಿಂಪಡೆಯಲು ಅವಕಾಶ ನೀಡಬೇಕೆಂದು ಮನವಿ ಮಾಡಿದರು. ಪೀಠವು ಇದಕ್ಕೆ ಸಮ್ಮತಿಸಿತು.

ಟೆನಿಸ್ ಪ್ರೀಮಿಯರ್ ಲೀಗ್ ಬೋಪಣ್ಣ, ಮುಟೆ ಕಣಕ್ಕೆ

ನವದೆಹಲಿ (ಪಿಟಿಐ): ಹಿರಿಯ ಆಟಗಾರ ರೋಹನ್ ಬೋಪಣ್ಣ, 29ನೇ ಕ್ರಮಾಂಕದ ಲೂಸಿಯಾನೊ ದರ್ದೇರಿ ಸೇರಿದಂತೆ ಸಿಂಗಲ್ಸ್‌ನಲ್ಲಿ ವಿಶ್ವದ ಅಗ್ರ 50ರೊಳಗಿನ ಕನಿಷ್ಠ ಮೂವರು ಆಟಗಾರರು, ಟೆನಿಸ್ ಪ್ರೀಮಿಯರ್ ಲೀಗ್‌ನ (ಟಿಪಿಎಲ್) ಏಳನೇ ಆವೃತ್ತಿಯಲ್ಲಿ ಭಾಗವಹಿಸಲಿದ್ದಾರೆ. ಟಿಪಿಎಲ್ ಡಿಸೆಂಬರ್ 9 ರಂದು ಅಹಮದಾಬಾದಿನಲ್ಲಿ ಆರಂಭವಾಗಲಿದೆ.

ವಿಶ್ವ ಕ್ರಮಾಂಕದಲ್ಲಿ 38ನೇ ಸ್ಥಾನದಲ್ಲಿರುವ ಫ್ರಾನ್ಸ್‌ನ ಆಟಗಾರ ಕೊರೆಂಟನ್ ಮುಟೆ, 39ನೇ ಕ್ರಮಾಂಕದ ಅಲೆಕ್ಸಾಂಡರ್ ಮುಲರ್ ಅವರು ಭಾರತದ ಅಗ್ರ ಆಟಗಾರರೊಂದಿಗೆ ಭಾಗವಹಿಸಲಿದ್ದಾರೆ. ಮುಂಬೈನಲ್ಲಿ ಇದೇ 9ರಂದು ಆಕ್ಷನ್ ನಡೆಯಲಿದೆ.

2024ರಲ್ಲಿ ಟಿಪಿಎಲ್‌ಗೆ ಪದಾರ್ಪಣೆ ಮಾಡಿದ್ದ ಬೋಪಣ್ಣ ಅವರು ಎಸ್‌ಜಿ ಪೈಪರ್ಸ್ ಬೆಂಗಳೂರು ತಂಡವನ್ನು ಪ್ರತಿನಿಧಿಸಲಿದ್ದಾರೆ. ಇಟಲಿಯ ದರ್ದೇರಿ ಅವರು ರಾಜಸ್ಥಾನ ರೇಂಜರ್ಸ್ ತಂಡಕ್ಕೆ, ಮುಟೆ ಅವರು ಗುರುಗಾಂವ್ ಗ್ರ್ಯಾನ್‌ಸ್ಲಾಮರ್ಸ್ ತಂಡಕ್ಕೆ ಆಡಲಿದ್ದಾರೆ.

ಮುಲರ್ ಮತ್ತು ಆರ್ಥರ್ ರಿಂಡರ್‌ನೆಕ್ (ವಿಶ್ವ ಕ್ರಮಾಂಕದಲ್ಲಿ 54ನೇ ಸ್ಥಾನ) ಅವರು ಕ್ರಮವಾಗಿ ಗುಜರಾತ್ ಪ್ಯಾಂಥರ್ಸ್ ಮತ್ತು ಹೈದರಾಬಾದ್ ಸ್ಟ್ರೈಕರ್ಸ್ ತಂಡವನ್ನು ಪ್ರತಿನಿಧಿಸಲಿದ್ದಾರೆ.


ರೋಹನ್ ಬೋಪಣ್ಣ

ಬಿಟಿಸಿ ಅಧ್ಯಕ್ಷರಾಗಿ ಎಲ್.ಶಿವಶಂಕರ್

ಬೆಂಗಳೂರು: ಎಲ್.ಶಿವಶಂಕರ್ ಅವರು 2025-26ನೇ ಸಾಲಿಗೆ ಬೆಂಗಳೂರು ಟರ್ಫ್ ಕ್ಲಬ್‌ನ ಅಧ್ಯಕ್ಷ ಹಾಗೂ ಹಿರಿಯ ಸ್ಟೀವರ್ಡ್ ಆಗಿ ನೇಮಕಗೊಂಡಿದ್ದಾರೆ.

ಭಾನುವಾರ ನಡೆದ ಬಿಟಿಸಿ ಸಭೆಯಲ್ಲಿ ಆಡಳಿತ ಸಮಿತಿಯನ್ನು ರಚಿಸಲಾಯಿತು. ನೂತನ ಸಮಿತಿ ಹೀಗಿದೆ: ಎಲ್. ಶಿವಶಂಕರ್ (ಅಧ್ಯಕ್ಷ, ಸೀನಿಯರ್ ಸ್ಟೀವರ್ಡ್, ಅರವಿಂದ ಎಸ್.ಕಾತರಕಿ (ಸ್ಟೀವರ್ಡ್), ದಯಾನಂದ ಆರ್. ಮಾಂಡ್ರೆ (ಸಮಿತಿ ಸದಸ್ಯ), ಸಿ.ಮಹೇಶ್ ಮೇದಪ್ಪ, ಆರ್.ಮಂಜುನಾಥ ರಮೇಶ್ (ಸ್ಟೀವರ್ಡ್ಸ್), ಎಂ.ಸಿ.ಮಂಜುನಾಥ ಅರಸ್ (ಸಮಿತಿ ಸದಸ್ಯ), ಡಾ.ನಿತ್ಯಾನಂದ ರಾವ್ (ಸ್ಟೀವರ್ಡ್), ಸಿ.ಎ.ಪ್ರಶಾಂತ್ (ಸಮಿತಿ ಸದಸ್ಯ), ರಿತೇಶ್ ಕುಮಾರ್ ಸಿಂಗ್, ಸೀಮಂತ್ ಕುಮಾರ್ ಸಿಂಗ್, ಶಂಕರ ಬಾಲು (ಸ್ಟೀವರ್ಡ್ಸ್), ಕೆ.ಶಾಶಾ ಬಿಂದು ದಾಸ್ (ಸಮಿತಿ ಸದಸ್ಯ), ಕೆ.ಉದಯ್ ಈಶ್ವರನ್ (ಸ್ಟೀವರ್ಡ್), ವಿಕ್ರಮ್ ಸಿಂಗ್ (ಸಮಿತಿ ಸದಸ್ಯ).

ಶಿವಶಂಕರ್

ಅನಿಸಿಮೋವಾಗೆ ಕಿರೀಟ

ಎಎಫ್‌ಪಿ ಚಿತ್ರ

ಅಮೆರಿಕದ ಅಮಂಡಾ ಅನಿಸಿಮೋವಾ (ಬಲ) ಅವರು ಚೀನಾ ಓಪನ್ ಟೆನಿಸ್ ಟೂರ್ನಿಯ ಮಹಿಳೆಯರ ಸಿಂಗಲ್ಸ್ ಪ್ರಶಸ್ತಿಯನ್ನು ಮುಡಿಗೇರಿಸಿಕೊಂಡರು. ಭಾನುವಾರ ನಡೆದ ಫೈನಲ್‌ನಲ್ಲಿ ಅನಿಸಿಮೋವಾ 6-0, 2-6, 6-2ರಿಂದ ಝೆಕ್ ರಿಪಬ್ಲಿಕ್‌ನ ಲಿಂಡಾ ನೊಸ್ಕೋವಾ ಅವರನ್ನು ಮಣಿಸಿದರು

ಟಿ.ಟಿ: ತಾಂತ್ರಿಕ ಸಿಬ್ಬಂದಿಯಾಗಿ ಆಯ್ಕೆ

ಬೆಂಗಳೂರು: ಕರ್ನಾಟಕದ ಟಿ.ಜಿ. ಉಪಾಧ್ಯ ಹಾಗೂ ಕೆ.ಆರ್. ಮಂಜುನಾಥ (ಅಂಪೈರ್) ಅವರು ಅಂತರರಾಷ್ಟ್ರೀಯ ಟೇಬಲ್ ಟೆನಿಸ್ ಸಂಸ್ಥೆ ಹಾಗೂ ಏಷ್ಯನ್ ಟೇಬಲ್ ಟೆನಿಸ್ ಯೂನಿಯನ್ ಜಂಟಿ ಆಶ್ರಯದಲ್ಲಿ ನಡೆಯಲಿರುವ 28ನೇ ಏಷ್ಯನ್ ಟೇಬಲ್ ಟೆನಿಸ್ ಚಾಂಪಿಯನ್‌ಷಿಪ್‌ಗೆ ತಾಂತ್ರಿಕ ಸಿಬ್ಬಂದಿಯಾಗಿ ಆಯ್ಕೆಯಾಗಿದ್ದಾರೆ.

ಉಪಾಧ್ಯ ಅವರು ಡೆಪ್ಯುಟಿ ರೆಫ್ರಿಯಾಗಿ ಹಾಗೂ ಮಂಜುನಾಥ ಅವರು 'ಬ್ಲ್ಯೂ ಬ್ಯಾಜ್ ಅಂಪೈರ್' ಆಗಿ ಕಾರ್ಯ ನಿರ್ವಹಿಸಲಿದ್ದಾರೆ.

ಮಂಜುನಾಥ

ಟಿ.ಜಿ. ಉಪಾಧ್ಯ

ಚೆಸ್: ನಿವಾನ್, ಪ್ರಮುಖ್ ಮುನ್ನಡೆ

ಮೈಸೂರು: ನಿವಾನ್ ರಾಘವೇಂದ್ರ ಸೇರಿದಂತೆ ಶ್ರೇಯಾಂಕಿತ ಆಟಗಾರರು ಸೋಮವಾರ ಇಲ್ಲಿ ಆರಂಭಗೊಂಡ 'ರೋಟರಿ ಬೃಂದಾವನ 16 ವರ್ಷದೊಳಗಿನವರ ಮುಕ್ತ ರೇಟಿಂಗ್ ಚೆಸ್ ಟೂರ್ನಿ'ಯಲ್ಲಿ ಮುನ್ನಡೆದರು.

ರೋಟರಿ ಮೈಸೂರು ಬೃಂದಾವನ ಹಾಗೂ ಮೈಸೂರು ಚೆಸ್ ಕೇಂದ್ರದ ಸಹಯೋಗದಲ್ಲಿ ರೋಟರಿ ಬೃಂದಾವನ ಶಾಲೆ ಆವರಣದಲ್ಲಿ ನಡೆದ ಟೂರ್ನಿಯ ಮೊದಲ ಸುತ್ತಿನಲ್ಲಿ ಎಂ.ಎಸ್. ಗೌತಮ್ ಕುಮಾರ್ ಎದುರು ಗೆಲುವು ಸಾಧಿಸಿದ ನಿವಾನ್, ಎರಡನೇ ಸುತ್ತಿನಲ್ಲಿ ಎಸ್. ಭವಿಷ್‌ರನ್ನು ಮಣಿಸಿದರು.

ಪ್ರೊ ಕಬಡ್ಡಿ ಲೀಗ್: ಮಿಂಚಿದ ಅಶು ಮಲಿಕ್, ಸಂದೀಪ್ ದೇಶ್ವಾಲ್

ದಬಂಗ್ ಡೆಲ್ಲಿಗೆ 10ನೇ ಗೆಲುವು

ಚೆನ್ನೈ (ಪಿಟಿಐ): ರೇಡರ್ ಅಶು ಮಲಿಕ್ ಮತ್ತು ಡಿಫೆಂಡರ್ ಸಂದೀಪ್ ದೇಶ್ವಾಲ್ ಅವರ ಅಮೋಘ ಆಟದ ನೆರವಿನಿಂದ ಡೆಲ್ಲಿ ದಬಂಗ್ ತಂಡವು ಪ್ರೊ ಕಬಡ್ಡಿ ಲೀಗ್‌ನ ರೋಚಕ ಪಂದ್ಯದಲ್ಲಿ 3 ಅಂಕಗಳಿಂದ ಜೈಪುರ ಪಿಂಕ್ ಪ್ಯಾಂಥರ್ಸ್ ತಂಡವನ್ನು ಮಣಿಸಿತು.

ಇಲ್ಲಿನ ಜವಾಹರಲಾಲ್ ನೆಹರೂ ಕ್ರೀಡಾಂಗಣದಲ್ಲಿ ನಡೆದ ಪಂದ್ಯದಲ್ಲಿ ಡೆಲ್ಲಿ ತಂಡವು 29-26ರಿಂದ ಪಾರಮ್ಯ ಮೆರೆಯಿತು. ಈ ಆವೃತ್ತಿಯ 11 ಪಂದ್ಯಗಳಲ್ಲಿ 10ನೇ ಜಯ ದಾಖಲಿಸಿಕೊಂಡು ಅಗ್ರಸ್ಥಾನದಲ್ಲಿ ಮುಂದುವರಿಯಿತು.

ಪಂದ್ಯದ ಮೊದಲಾರ್ಧದಲ್ಲಿ ಜೈಪುರ ತಂಡವು ಒಂದು ಅಂಕಗಳ (13-12) ಮುನ್ನಡೆ ಪಡೆದಿತ್ತು. ಆದರೆ, ಉತ್ತರಾರ್ಧದಲ್ಲಿ ಸಾಂಘಿಕ ಆಟ ಪ್ರದರ್ಶಿಸಿದ ಡಬಂಗ್ ತಂಡವು 17-13 ಮುನ್ನಡೆಯೊಂದಿಗೆ ಗೆಲುವು ಸಾಧಿಸಿತು.

ದಬಂಗ್ ಪರ ನಾಯಕ ಅಶು ಮತ್ತು ಸಂದೀಪ್ ಕ್ರಮವಾಗಿ 8 ಮತ್ತು 7 ಅಂಕ ಗಳಿಸಿದರು. ಜೈಪುರ ತಂಡದ ರೆಜಾ ಮಿರ್ಬಘೇರಿ ಮತ್ತು ದೀಪಾಂಶು ತಲಾ 5 ಅಂಕ ಕಲೆ ಹಾಕಿದರು. ಜೈಪುರ ತಂಡಕ್ಕೆ 16 ಪಂದ್ಯಗಳಲ್ಲಿ ಇದು ಆರನೇ ಸೋಲಾಗಿದೆ.

ಪೈರೇಟ್ಸ್‌ಗೆ ಗೆಲುವು: ದಿನದ ಎರಡನೇ ಪಂದ್ಯದಲ್ಲಿ ಪಟ್ನಾ ಪೈರೇಟ್ಸ್ ತಂಡವು 36-28 ಯು.ಪಿ. ಯೋಧಾಸ್ ತಂಡವನ್ನು ಮಣಿಸಿತು.

ಪಟ್ನಾ ಗೆಲುವಿನಲ್ಲಿ ರೇಡರ್ ಅಯಾನ್ ಲೋಚಬ್ (15) ಮಿಂಚಿದರು. ಯೋಧಾಸ್ ಪರ ಕನ್ನಡಿಗ ಗಗನ್ ಗೌಡ (10) ಏಕಾಂಗಿ ಹೋರಾಟ ನಡೆಸಿದರು.

ಪಟ್ನಾ ತಂಡಕ್ಕೆ ಇದು 10 ಪಂದ್ಯಗಳಲ್ಲಿ ಮೂರನೇ ಗೆಲುವಾಗಿದೆ. ಯೋಧಾಸ್ ತಂಡಕ್ಕೆ 12 ಪಂದ್ಯಗಳಲ್ಲಿ ಎಂಟನೇ ಸೋಲಾಗಿದೆ.

ಇಂದಿನ ಪಂದ್ಯಗಳು
ಪಟ್ನಾ ಪೈರೇಟ್ಸ್– ತಮಿಳು ತಲೈವಾಸ್ (ರಾತ್ರಿ 8)
ಹರಿಯಾಣ ಸ್ಟೀಲರ್ಸ್– ದಬಂಗ್ ಡೆಲ್ಲಿ (ರಾತ್ರಿ 9)

ಜೈಪುರ ಪಿಂಕ್ ಪ್ಯಾಂಥರ್ಸ್ ತಂಡ ರೇಡರ್‌ನನ್ನು ಹಿಡಿದೆಳೆದ ದಬಂಗ್ ಡೆಲ್ಲಿ ತಂಡದ ಆಟಗಾರರು 'ಎಕ್ಸ್' ಚಿತ್ರ

ಸೌತ್ ಯುನೈಟೆಡ್‌ಗೆ ಮಣಿದ ಪರಿಕ್ರಮ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಸಂಘಟಿತ ಪ್ರದರ್ಶನ ತೋರಿದ ಸೌತ್ ಯುನೈಟೆಡ್ ಫುಟ್ ಬಾಲ್ ಕ್ಲಬ್ ತಂಡವು ಕೆಎಸ್‌ಎಫ್‌ಎ ಸೂಪರ್ ಡಿವಿಷನ್ ಲೀಗ್ ಚಾಂಪಿಯನ್ ಷಿಪ್‌ನ ಪಂದ್ಯದಲ್ಲಿ 4-1ರಿಂದ ಪರಿಕ್ರಮ ಎಫ್‌ಸಿ ತಂಡವನ್ನು ಮಣಿಸಿತು.

ಬೆಂಗಳೂರು ಫುಟ್‌ಬಾಲ್ ಕ್ರೀಡಾಂಗಣದಲ್ಲಿ ಸೋಮವಾರ ನಡೆದ ಪಂದ್ಯದಲ್ಲಿ ಸೌತ್ ಯುನೈಟೆಡ್ ತಂಡದ ಆಟಗಾರರು ಆರಂಭದಿಂದಲೇ ಪ್ರಾಬಲ್ಯ ಸಾಧಿಸಿದರು. ಶೊಗೌಹು (24ನೇ ನಿಮಿಷ) ಆರಂಭಿಕ ಮುನ್ನಡೆ ತಂದುಕೊಟ್ಟರು. ಬಿ.ಅಭಿರಾಮ್ (51ನೇ ನಿ.), ಮಕಕ್ ಮಯೂಮ್ (57ನೇ ನಿ.) ಹಾಗೂ ತರುಣ್ ಕುಮಾರ್ (90 + 3ನೇ ನಿ.) ತಲಾ ಒಂದು ಗೋಲು ಹೊಡೆದು ಮುನ್ನಡೆಯನ್ನು ಹಿಗ್ಗಿಸಿದರು. ಪರಿಕ್ರಮ ತಂಡದ ಮಂಗ್ಲೆನ್‌ಥಾಂಗ್ ಸಿಂಗ್ (56ನೇ ನಿ.) ಏಕೈಕ ಗೋಲು ದಾಖಲಿಸಿದರು.

ಇನ್ನೊಂದು ಪಂದ್ಯದಲ್ಲಿ ಯುನೈಟೆಡ್ ಸ್ಟಾರ್ಸ್ ಎಫ್‌ಸಿ ತಂಡವು 2-1ರಿಂದ ಎಚ್‌ಎಎಲ್ ಎಫ್‌ಸಿ ವಿರುದ್ಧ ಗೆಲುವು ಸಾಧಿಸಿತು. ಸ್ಟಾರ್ಸ್ ತಂಡದ ಕವಿ ಅರಸನ್ ಕೆ. ಅವರು 15ನೇ ನಿ. ಆರಂಭಿಕ ಮುನ್ನಡೆ ತಂದುಕೊಟ್ಟರೆ, ಮುರಳಿ ಶ್ರೀನಿವಾಸ್ (60ನೇ ನಿ.) ಗೆಲುವಿನ ಗೋಲು ಹೊಡೆದರು. ಎಚ್‌ಎಎಲ್‌ನ ಮೊಹಮ್ಮದ್ ಅರ್ಷದ್ (39ನೇ ನಿ.) ಒಂದು ಗೋಲು ಗಳಿಸಿದರು.

ಮತ್ತೊಂದು ಪಂದ್ಯದಲ್ಲಿ ದೀಪಕ್ ರಾಜ್ (34ನೇ ನಿ.) ಅವರ ಗೋಲಿನ ನೆರವಿನಿಂದ ರೂಟ್ಸ್ ಎಫ್‌ಸಿ ತಂಡವು 1-0ಯಿಂದ ಎಫ್‌ಸಿ ಅಗ್ನಿಪುತ್ರ ತಂಡವನ್ನು ಸೋಲಿಸಿತು.

ಸೌತ್ ಯುನೈಟೆಡ್ ಎಫ್‌ಸಿ ತಂಡದ ಕ್ರಿಸ್ ನೊವಾಂಗ್ ಶೆರ್ಪಾ (ಎಡ) ಅವರು ಚೆಂಡಿನ ಮೇಲೆ ನಿಯಂತ್ರಣ ಸಾಧಿಸಲು ಯತ್ನಿಸಿದರು ಚಿತ್ರ: ಬಿ.ಕೆ.ಜನಾರ್ದನ

ನಿಧನ ವಾರ್ತೆ

ಸಚೀಂದ್ರ ರಾವ್

ಬೆಂಗಳೂರು: ರಾಜ್ಯ ಫುಟ್‌ಬಾಲ್ ತಂಡದ ಮಾಜಿ ಆಟಗಾರ ಸಚೀಂದ್ರ ರಾವ್ (71) ಅವರು ಭಾನುವಾರ ನಿಧನರಾದರು.

ಮಿಡ್‌ಫೀಲ್ಡರ್ ಆಗಿದ್ದ ಸಚೀಂದ್ರ ಅವರು 80ರ ದಶಕದಲ್ಲಿ ಪ್ರಮುಖ ಆಟಗಾರನಾಗಿ ಛಾಪು ಮೂಡಿಸಿದ್ದರು.

ಸಚೀಂದ್ರ ಅವರು ರಾಷ್ಟ್ರ ಮಟ್ಟದ ವಿವಿಧ ಟೂರ್ನಿಗಳಲ್ಲಿ ರಾಜ್ಯ ತಂಡದಲ್ಲಿ ಆಡಿದ್ದರು. 1981ರಲ್ಲಿ ರೂರ್ಕೆಲಾದಲ್ಲಿ ನಡೆದ ಸಂತೋಷ್ ಟ್ರೋಫಿ ಟೂರ್ನಿಯಲ್ಲಿ ನಾಯಕರಾಗಿ ತಂಡವನ್ನು ಮುನ್ನಡೆಸಿದ್ದರು. ಬಿಇಎಲ್ ಕ್ಲಬ್ ತಂಡದ ಪರ ದಶಕಕ್ಕೂ ಹೆಚ್ಚು ಅವಧಿಗೆ ಆಡಿದ್ದರು.